ಶುಕ್ರವಾರ, ಜನವರಿ 9, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪಟ್ಟೆತಲೆ ಬಾತು...

ಮೈಸೂರು ಜಿಲ್ಲೆಯ ಹದಿನಾರು ಕೆರೆಯಲ್ಲಿ ಪಟ್ಟೆತಲೆಯ ಬಾತು ಪಕ್ಷಿಗಳು ಆಕರ್ಷಿಸುತ್ತಿವೆ

ದೇವಿ ಜಾತ್ರೆ

ವಿಜಯಪುರ ಜಿಲ್ಲೆಯ ಆಲಮಟ್ಟಿ ಸಮೀಪದ ವಂದಾಲದಲ್ಲಿ ಗುರುವಾರ ಬನಶಂಕರಿ ದೇವಿ ಜಾತ್ರೆ ಅಂಗವಾಗಿ 'ದ್ಯಾಮವ್ವನ ಸೋಗು' ಜರುಗಿತು

ಎಸ್‌ಐಆರ್ ಪೂರ್ವಸಿದ್ಧತೆ ತರಾತುರಿ

ಭಾವಚಿತ್ರ–ಅಕ್ಷರ ದೋಷ ಗುರುತಿಸುವ ಕಾರ್ಯ: ಸಿದ್ಧತೆ ಹಂತದಲ್ಲೇ ತೊಡಕು

• ಜಯಸಿಂಹ ಆರ್.

ಬೆಂಗಳೂರು: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಪೂರ್ವಭಾವಿಯಾಗಿ ಮತಪಟ್ಟಿಯಲ್ಲಿನ ಭಾವಚಿತ್ರ ಮತ್ತು ಅಕ್ಷರ ದೋಷಗಳನ್ನು ಗುರುತಿಸುವ, ದಾಖಲೆಗಳನ್ನು ಪರಿಶೀಲಿಸುವ ಕೆಲಸವನ್ನು ಚುನಾವಣಾ ಆಯೋಗ ಆರಂಭಿಸಿದೆ.

ಆದರೆ, ಈ ಪ್ರಕ್ರಿಯೆಗೆ 10 ದಿನವಷ್ಟೇ ನೀಡಿರುವುದರಿಂದ, ತರಾತುರಿಯಲ್ಲಿ ಪರಿಶೀಲನೆ ಮತ್ತು ಪರಿಷ್ಕರಣೆ ನಡೆಯುತ್ತಿದೆ.

ಮತದಾರರ ಚೀಟಿ ಮತ್ತು ಪಟ್ಟಿಯಲ್ಲಿ ಚಿತ್ರಗಳು ದೋಷ-ಪೂರಿತವಾಗಿದ್ದರೆ ಹಾಗೂ ಅಕ್ಷರ ದೋಷಗಳು ಇದ್ದರೆ ಅವುಗಳನ್ನು ಗುರುತಿಸಬೇಕು ಎಂದು ಭಾರತೀಯ ಚುನಾವಣಾ ಆಯೋಗವು ಡಿಸೆಂಬರ್ 15ರಂದು ಆದೇಶಿಸಿತ್ತು. ಅದರಂತೆ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯು ಡಿಸೆಂಬರ್ 19ರಂದು ಎಲ್ಲ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸೂಚನೆ ನೀಡಿತ್ತು.

ಎಸ್‌ಐಆರ್ ಪೂರ್ವಭಾವಿಯ ಈ ಹಂತದಲ್ಲಿ ಮೊದಲಿಗೆ ಮತದಾರರ ಪಟ್ಟಿಯಲ್ಲಿ ಇರುವ ದೋಷಗಳನ್ನು ಗುರುತಿಸಬೇಕಿದೆ. ಚಿತ್ರಗಳು ಅಗತ್ಯ ಅಳತೆಗಿಂತ ಕಡಿಮೆ ಇದ್ದರೆ, ಸ್ಪಷ್ಟವಾಗಿ ಇಲ್ಲದೇ ಇದ್ದರೆ, ಹೆಸರು ಮತ್ತು ಲಿಂಗ ಸರಿಯಾಗಿ ಇಲ್ಲದಿದ್ದರೆ, ಜನ್ಮ ದಿನಾಂಕ ಮತ್ತು ವಯಸ್ಸು ಹೊಂದಾಣಿಕೆ ಆಗದೇ ಇದ್ದರೆ, ಅಂತಹ ಮತದಾರರ ಚೀಟಿಗಳ ವಿವರವನ್ನು ವರ್ಗೀಕರಿಸಬೇಕು.

ಈ ಉದ್ದೇಶಕ್ಕಾಗಿ ಮತದಾರರ ಪಟ್ಟಿಯನ್ನು ಬಹುಬಣ್ಣದಲ್ಲಿ ಮುದ್ರಿಸಬೇಕು. ಇದಕ್ಕಾಗಿ, ಚುನಾವಣಾ ಆಯೋಗವು ಡಿ.22ರಿಂದ ಜನವರಿ 1ರವರೆಗೆ ಕಾಲಾವಕಾಶ ನೀಡಿತ್ತು. ಆಯ್ದ ಐದು ಕಂಪನಿಗಳ ಮೂಲಕವೇ ಮುದ್ರಿಸಬೇಕು ಎಂದು ಸೂಚಿಸಿತ್ತು. ಆದರೆ, ರಾಜ್ಯದ ಅಷ್ಟೂ ಮತಗಟ್ಟೆಗಳ ಮತದಾರರ ಪಟ್ಟಿಯನ್ನು ಕಾಲಮಿತಿಯಲ್ಲಿ ಮುದ್ರಿಸಿ ಕೊಡಲು ಈ ಕಂಪನಿಗಳಿಗೆ ಸಾಧ್ಯವಾಗಿಲ್ಲ.

‘ನಮ್ಮ ಕ್ಷೇತ್ರಕ್ಕೆ ನಿಗದಿ ಮಾಡಿದ್ದ ಮುದ್ರಕರಿಂದ ಮತದಾರರ ಪಟ್ಟಿಯ ಬಣ್ಣದ ಪ್ರತಿ ಇನ್ನೂ ಬಂದಿಲ್ಲ. ಆದರೆ ಕೆಲಸ ವಿಳಂಬವಾಗಬಾರದು ಎಂಬ ಕಾರಣಕ್ಕೆ, ಇತರೆಡೆ ನಮ್ಮ ಸ್ವಂತ ದುಡ್ಡಿನಲ್ಲಿ ಮತದಾರರ ಪಟ್ಟಿಯನ್ನು ಮುದ್ರಿಸಿಕೊಂಡಿದ್ದೇವೆ’ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಸಹಾಯಕ ಮತದಾರರ ನೋಂದಣಾಧಿಕಾರಿ ಒಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಜನವರಿ 1ಕ್ಕೆ ಮುದ್ರಣ ಪ್ರಕ್ರಿಯೆ ಮುಗಿದು, ಬಣ್ಣದ ಮತದಾರರ ಪಟ್ಟಿಗಳನ್ನು ಮತಗಟ್ಟೆ ಅಧಿಕಾರಿಗಳಿಗೆ (ಬಿಎಲ್‌ಒ) ವಿತರಿಸಬೇಕಿತ್ತು. ಮುದ್ರಣದ ಸಮಸ್ಯೆ ಕಾರಣಕ್ಕೆ ಬಿಎಲ್‌ಒಗಳಿಗೆ ಮತದಾರರ ಪಟ್ಟಿಯ ಬಹುಬಣ್ಣದ ಪ್ರತಿಯನ್ನು ನಿಗದಿತ ದಿನದಂದು ವಿತರಿಸಲು ಸಾಧ್ಯವಾಗಿಲ್ಲ. ಆದರೆ, ಕೆಲಸದ ಪ್ರಗತಿಯ ಬಗ್ಗೆ ವರದಿ ನೀಡಿ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯಿಂದ ಸೂಚನೆ ಬರುತ್ತಲೇ ಇದೆ’ ಎಂದು ಅವರು ವಿವರಿಸಿದರು.

‘ಈಗಾಗಲೇ ಬಹುಬಣ್ಣದ ಪ್ರತಿ ದೊರೆತಿರುವ ಬಿಎಲ್‌ಒಗಳು ದೋಷಪೂರಿತ ಚಿತ್ರಗಳನ್ನು ಗುರುತಿಸುವ ಕೆಲಸ ಆರಂಭಿಸಿದ್ದಾರೆ. ಆದರೆ ಕಡಿಮೆ ಕಾಲಾವಕಾಶದ ಕಾರಣಕ್ಕೆ ಪರಿಷ್ಕರಣೆಯ ನಂತರವೂ ದೋಷಗಳು ಉಳಿಯುತ್ತಿವೆ. ಇನ್ನು ಕೆಲವರು ದಾಖಲೆಗಳನ್ನು ಪರಿಶೀಲಿಸದೆಯೇ ಪರಿಷ್ಕರಣೆ ಮಾಡಿರುವುದು, ಮೇಲ್ವಿಚಾರಕರ ಹಂತದ ಪರಿಶೀಲನೆಯಲ್ಲಿ ಪತ್ತೆಯಾಗಿದೆ’ ಎಂದು ಮತಗಟ್ಟೆ ಅಧಿಕಾರಿಗಳ ಮೇಲ್ವಿಚಾರಕರೊಬ್ಬರು ತಿಳಿಸಿದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಅವರ ಮೊಬೈಲ್‌ಗೆ ಕರೆ ಮಾಡಲಾಗಿತ್ತು. ಅವರು ಕರೆ ಸ್ವೀಕರಿಸಲಿಲ್ಲ.

‘ಪರಿಷ್ಕರಣೆಗೆ ತೊಡಕು’

ಮತದಾರರ ಪಟ್ಟಿಯಲ್ಲಿನ ದೋಷಗಳನ್ನು ಗುರುತಿಸಿದ ನಂತರ ಸಂಬಂಧಿತ ಮತದಾರರ ಮನೆಗೆ ಭೇಟಿ ನೀಡಿ, ದಾಖಲೆ ಪರಿಶೀಲಿಸುವ ಕೆಲಸ ಜನವರಿ 4ರಿಂದ ಆರಂಭವಾಗಬೇಕಿತ್ತು. ಆದರೆ ರಾಜ್ಯದ ಎಲ್ಲೆಡೆ ಆ ಕೆಲಸ ಇನ್ನೂ ಆರಂಭವಾಗಿಲ್ಲ.

ಮತದಾರರ ಪಟ್ಟಿಯೇ ದೊರೆಯದಿರುವ ಕಾರಣಕ್ಕೆ ದೋಷ ಗುರುತಿಸುವ ಕೆಲಸ ಆಗಿಲ್ಲ. ಆದರೆ, ‘ದಾಖಲೆ ಪರಿಶೀಲಿಸಿ, ಪರಿಷ್ಕರಣೆಗೆ ನಮೂನೆ–8ನ್ನು ಸಿದ್ಧಪಡಿಸುವ ಕೆಲಸ ಜನವರಿ 11ರ ಒಳಗೆ ಮುಗಿಯಬೇಕು. ಅಂದೇ ಅಂತಿಮ ವರದಿಯನ್ನೂ ನೀಡಬೇಕು’ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯು ಸೂಚಿಸಿದೆ.

‘ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸದೇ ಇರುವ ಮತ್ತು ಪಾಲಿಸಲು ಸಾಧ್ಯವೇ ಇಲ್ಲದಷ್ಟು ಕಡಿಮೆ ಕಾಲಾವಕಾಶ ನೀಡಿರುವ ಕಾರಣಕ್ಕೆ, ಪರಿಷ್ಕರಣೆಯ ಉದ್ದೇಶವೇ ಈಡೇರುವುದಿಲ್ಲ. ಬಹಳಷ್ಟು ಬಿಎಲ್‌ಒಗಳು ದಾಖಲೆ ಪರಿಶೀಲನೆ ಸಾಧ್ಯವಾಗದೆ, ವರದಿ ಸಲ್ಲಿಸುತ್ತಿದ್ದಾರೆ. ತರಾತುರಿಯಲ್ಲಿ ನಡೆಸುತ್ತಿರುವ ಕಾರಣಕ್ಕೆ, ಪ್ರಕ್ರಿಯೆಯ ಉದ್ದೇಶವೇ ಈಡೇರದಂತಾಗುತ್ತಿದೆ’ ಎಂದು ಮತದಾರರ ನೋಂದಣಿ ಅಧಿಕಾರಿಯೊಬ್ಬರು ಕಳವಳ ವ್ಯಕ್ತಪಡಿಸಿದರು.

ಬೆಂಗಳೂರು–ವಿಜಯಪುರ ನಡುವೆ ವಿಶೇಷ ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಕ್ರಾಂತಿ ಮತ್ತು ಗಣರಾಜ್ಯೋತ್ಸವದ ಸಂದರ್ಭದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಲಿರುವ ಕಾರಣ ನೈರುತ್ಯ ರೈಲ್ವೆಯು ಎಸ್‌ಎಂವಿಟಿ ಬೆಂಗಳೂರು ಮತ್ತು ವಿಜಯಪುರ ನಡುವೆ ವಿಶೇಷ ರೈಲು ಓಡಿಸಲು ನಿರ್ಧರಿಸಿದೆ.

ಜನವರಿ 13 ಮತ್ತು 23ರಂದು ರಾತ್ರಿ 7.15ಕ್ಕೆ ಎಸ್‌ಎಂವಿಟಿಯಿಂದ ಹೊರಡುವ ರೈಲು ಮರುದಿನ ಬೆಳಿಗ್ಗೆ 7ಕ್ಕೆ ವಿಜಯಪುರ ತಲುಪಲಿದೆ. ಜ.18 ಮತ್ತು 26ರಂದು ಸಂಜೆ 5.30ಕ್ಕೆ ವಿಜಯಪುರದಿಂದ ಹೊರಟು ಮರುದಿನ ಬೆಳಿಗ್ಗೆ 6.30ಕ್ಕೆ ಎಸ್‌ಎಂವಿಟಿಗೆ ತಲುಪಲಿದೆ.

ಬಾಣಸವಾಡಿ, ತುಮಕೂರು, ಅರಸೀಕೆರೆ, ಬೀರೂರು, ದಾವಣಗೆರೆ, ಹರಿಹರ, ಹಾವೇರಿ, ಬಾದಾಮಿ, ಬಾಗಲಕೋಟೆ ಮತ್ತು ಆಲಮಟ್ಟಿ ನಿಲ್ದಾಣಗಳಲ್ಲಿ ನಿಲುಗಡೆ ಇರುತ್ತದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ರೈತರಿಗೆ ಹಣ ಬಿಡುಗಡೆಗೆ ಒತ್ತಾಯ

ನವದೆಹಲಿ: ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ-ಕಿಸಾನ್) ಯೋಜನೆಯಡಿ 2025ರ ಆಗಸ್ಟ್-ನವೆಂಬರ್ ಅವಧಿಯಲ್ಲಿ ರಾಜ್ಯದ 31,340 ಅರ್ಹ ರೈತರು ಆರ್ಥಿಕ ನೆರವು ಪಡೆದಿಲ್ಲ ಎಂದು ಕರ್ನಾಟಕ ಸರ್ಕಾರವು ಕೇಂದ್ರಕ್ಕೆ ತಿಳಿಸಿದೆ ಮತ್ತು ಹಣವನ್ನು ಬಿಡುಗಡೆ ಮಾಡಲು ತಕ್ಷಣ ಕ್ರಮ ಕೈಗೊಳ್ಳುವಂತೆ ಕೋರಿದೆ.

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಇಲ್ಲಿ ಭೇಟಿ ಮಾಡಿದ ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ಈ ಕುರಿತು ಮನವಿಪತ್ರ ಸಲ್ಲಿಸಿದರು.

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ: ಈ ಯೋಜನೆ ಅಡಿಯಲ್ಲಿ ರೈತರ ಹೆಚ್ಚುತ್ತಿರುವ ಯಾಂತ್ರೀಕರಣ ಬೇಡಿಕೆ ಗಮನಿಸಿ ಈ ವರ್ಷಕ್ಕೆ ಹೆಚ್ಚುವರಿ ₹250 ಕೋಟಿ ಅನುದಾನ ಕೋರಿದರು. ಅದೇ ರೀತಿ, ಮಳೆಯ ಮೇಲೆ ಅವಲಂಬಿತವಾಗಿರುವ ಕರ್ನಾಟಕದ ಕೃಷಿಯಲ್ಲಿ ಆಗಾಗ ಬೆಳೆ ನಷ್ಟಗಳನ್ನು ತಪ್ಪಿಸಲು ಸೂಕ್ಷ್ಮ ನೀರಾವರಿ ಯೋಜನೆಗೆ ಹೆಚ್ಚುವರಿ ₹250 ಕೋಟಿ ನೀಡಬೇಕು ಎಂದು ಮನವಿ ಮಾಡಿದರು.

ಡಿಜಿಟಲ್ ಬೆಳೆ ಸಮೀಕ್ಷೆಗೆ ಕೇಂದ್ರ ಅನುಮೋದಿಸಿದ ₹25.704 ಕೋಟಿಯಲ್ಲಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅಡಿ ₹3.10 ಕೋಟಿ ಬಿಡುಗಡೆ ಮಾಡಬೇಕು. ರೈತಸಿರಿ ಯೋಜನೆಯನ್ನು ಸಿರಿಧಾನ್ಯ ರೈತರಿಗೆ ಡಿಬಿಟಿ ಮೂಲಕ ಪ್ರೋತ್ಸಾಹ ನೀಡುವ ರೀತಿಯಲ್ಲಿ ಅನುಷ್ಠಾನ ಗೊಳಿಸಲು ಅನುಮೋದನೆ ಮಾಡುವಂತೆ ಮನವಿ ಮಾಡಿದರು.

ವಿವಿಧ ವಿಧಾನಸಭಾ ಚುನಾವಣೆ ಹಿರಿಯ ವೀಕ್ಷಕರಾಗಿ ಡಿಕೆಶಿ, ಜಾರ್ಜ್

ನವದೆಹಲಿ: ಈ ವರ್ಷ ಚುನಾವಣೆ ನಡೆಯಲಿರುವ ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಚುನಾವಣಾ ಪ್ರಚಾರದ ಮೇಲ್ವಿಚಾರಣೆಗೆ ಹಿರಿಯ ವೀಕ್ಷಕರನ್ನು ಕಾಂಗ್ರೆಸ್ ಪಕ್ಷ ನೇಮಿಸಿದೆ.

ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಅಸ್ಸಾಂಗೆ ಹಾಗೂ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರನ್ನು ಕೇರಳಕ್ಕೆ ನಿಯೋಜಿಸಲಾಗಿದೆ.

ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನು ಅಸ್ಸಾಂ ಆಯ್ಕೆ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ ಬೆನ್ನಲ್ಲೇ ಛತ್ತೀಸಗಢದ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್, ಡಿ.ಕೆ. ಶಿವಕುಮಾರ್, ಜಾರ್ಖಂಡ್‌ನ ಮಾಜಿ ಶಾಸಕ ಬಂಧು ಟಿರ್ಕಿ ಅವರಿಗೆ ಪ್ರಮುಖ ಹೊಣೆ ವಹಿಸಲಾಗಿದೆ.

ತಮಿಳುನಾಡಿಗೆ ಹಿರಿಯ ನಾಯಕ ಮುಕುಲ್ ವಾಸ್ನಿಕ್, ತೆಲಂಗಾಣದ ಉತ್ತಮ್ ಕುಮಾರ್ ರೆಡ್ಡಿ ಮತ್ತು ಹಿರಿಯ ನಾಯಕ ಖಾಜಿ ಮೊಹಮ್ಮದ್ ನಿಜಾಮುದ್ದೀನ್ ಅವರನ್ನು ನಿಯೋಜಿಸಲಾಗಿದೆ. ಹರಿಯಾಣ ರಾಜ್ಯ ಉಸ್ತುವಾರಿಯಾಗಿರುವ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು ಪಶ್ಚಿಮ ಬಂಗಾಳದ ಸ್ಕ್ರೀನಿಂಗ್ ಸಮಿತಿಯ ನೇತೃತ್ವ ವಹಿಸಿದ್ದರೆ, ರಾಜ್ಯಸಭಾ ಸದಸ್ಯರಾದ ಸಯ್ಯದ್ ನಾಸೀರ್ ಹುಸೇನ್ ಕೇರಳದ ಹಾಗೂ ಜಿ.ಸಿ.ಚಂದ್ರಶೇಖರ್ ಅವರು ತಮಿಳುನಾಡು ಮತ್ತು ಪುದುಚೇರಿಯ ಸಮಿತಿಯ ಸದಸ್ಯರಾಗಿದ್ದಾರೆ.

ರಥೋತ್ಸವ ಸಂಭ್ರಮ

ಪ್ರಜಾವಾಣಿ ಚಿತ್ರ

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಕೆರೂರ ಪಟ್ಟಣದಲ್ಲಿ ಗುರುವಾರ ಬನಶಂಕರಿದೇವಿಯ ರಥೋತ್ಸವವು ಅಪಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ನಡೆಯಿತು

‘ಕೌಟುಂಬಿಕ ದೌರ್ಜನ್ಯ ನೆರೆಯವರ ಮೇಲೆ ಪ್ರಕರಣ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿವಾಹಿತೆಯ ಮೇಲೆ ಆಕೆಯ ಪತಿ ಅಥವಾ ಅವರ ಸಂಬಂಧಿಕರು ನಡೆಸುವ ಕ್ರೌರ್ಯ ಮತ್ತು ಕಿರುಕುಳವನ್ನು ನಿಷೇಧಿಸುವ ಕಲಂ 498–ಎ ಅಡಿಯಲ್ಲಿ ಪಕ್ಕದ ಮನೆಯವರ ವಿರುದ್ಧ ಪ್ರಕರಣ ದಾಖಲಿಸು-ವಂತಿಲ್ಲ’ ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

‘ವರದಕ್ಷಿಣೆ ಕಿರುಕುಳ ನೀಡುವಂತೆ ನನ್ನ ಪತಿ ಮತ್ತು ಕುಟುಂಬದವರಿಗೆ ನೆರೆಯವರು ಪ್ರಚೋದನೆ ನೀಡಿದ್ದಾರೆ’ ಎಂದು ಆರೋಪಿಸಲಾದ ದೂರಿನಲ್ಲಿ, ‘ನಮ್ಮ ವಿರುದ್ಧವೂ ದಾಖಲಿಸಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಪ್ರಕರಣದ ಪತಿಯ ಮನೆಯ ನೆರೆಯವರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು (ಸಿಆರ್‌ಎಲ್‌ಪಿ 1504/2023) ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

‘ಈ ಪ್ರಕರಣದಲ್ಲಿನ ದೋಷಾರೋಪ ಪಟ್ಟಿಯಲ್ಲಿ ಅರ್ಜಿದಾರರ ವಿರುದ್ಧ ಯಾವುದೇ ಆರೋಪದ ಅಂಶಗಳ ಉಲ್ಲೇಖವಿಲ್ಲ. ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 498–ಎ ಅಡಿಯಲ್ಲಿನ ಪ್ರಕರಣಗಳು ಪತಿ, ಪತ್ನಿ ಸೇರಿದಂತೆ ಕುಟುಂಬಸ್ಥರ ನಡುವಿನ ಪ್ರಕರಣಗಳಾಗಿರು-ತ್ತವೆ. ಇದರಲ್ಲಿ ಇತರರನ್ನು ಸೆಳೆಯುವುದಕ್ಕೆ ಅವಕಾಶವಿಲ್ಲ’ ಎಂದು ನ್ಯಾಯಪೀಠ ಸ್ಪಷ್ಟ-ಪಡಿಸಿದೆ. ಅಂತೆಯೇ, ಅರ್ಜಿದಾರರ ವಿರುದ್ಧ ಬೆಂಗಳೂರಿನ ಸಿಎಂಎಂ ಕೋರ್ಟ್‌ನಲ್ಲಿರುವ ಕ್ರಿಮಿನಲ್ ಪ್ರಕರಣವನ್ನು ನ್ಯಾಯಪೀಠ ರದ್ದುಗೊಳಿಸಿ ಆದೇಶಿಸಿದೆ.

ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಸಿ.ಮಂಜುಳಾ ಆಗ್ರಹ

‘ನ್ಯಾಯಾಂಗ ತನಿಖೆಯಾಗಲಿ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಪ್ರಕರಣವೊಂದಕ್ಕೆ ಸಂಬಂಧಿಸಿ ಸುಜಾತಾ ಹಂಡಿ ಅವರನ್ನು ವಶಕ್ಕೆ ಪಡೆಯುವಾಗ, ವಿವಸ್ತ್ರಗೊಳಿಸಿದ್ದೂ ಅಲ್ಲದೇ ಪೊಲೀಸರು ದೌರ್ಜನ್ಯವನ್ನೂ ನಡೆಸಿದರು. ಇದು ಕಾಂಗ್ರೆಸ್ ಪ್ರಾಯೋಜಿತ ಗೂಂಡಾಗಿರಿ. ಘಟನೆ ಬಗ್ಗೆ ನ್ಯಾಯಮೂರ್ತಿಯಿಂದ ತನಿಖೆ ನಡೆಸಬೇಕು’ ಎಂದು ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಸಿ.ಮಂಜುಳಾ ಆಗ್ರಹಿಸಿದರು.

ಇಲ್ಲಿ ಗುರುವಾರ ಸುಜಾತಾ ಹಂಡಿ ಅವರ ಮನೆಗೆ ಗುರುವಾರ ಭೇಟಿ ನೀಡಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಪುಢಾರಿಗಳು ಮಾಡುವ ಕೆಲಸವನ್ನು ಕೇಶ್ವಾಪುರ ಠಾಣೆ ಇನ್‌ಸ್ಪೆಕ್ಟರ್ ಎಸ್.ಕೆ.ಹಟ್ಟಿ ಪೊಲೀಸ್ ಸಮವಸ್ತ್ರ ಧರಿಸಿ ಮಾಡಿದ್ದಾರೆ. ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಅವರು ಹಟ್ಟಿ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದರು.

ಹುಬ್ಬಳ್ಳಿ ವಿವಸ್ತ್ರ ಪ್ರಕರಣ

‘ಬಡವರ ಮೇಲೆ ದೌರ್ಜನ್ಯ ನಡೆಸುವ ಮಹಾನಗರ ಪಾಲಿಕೆ ಸದಸ್ಯೆ ಸುವರ್ಣಾ ಕಲ್ಲಕುಂಟ್ಲ ಅವರನ್ನು ಕಾಂಗ್ರೆಸ್ ಪಕ್ಷದಿಂದ ಉಚ್ಚಾಟಿಸಬೇಕು. ಸುಜಾತಾ ಹಂಡಿ ಮಹಿಳಾ ಪೊಲೀಸರ ಮೇಲೆ ಹಲ್ಲೆ ಮಾಡಿದ್ದರೆ, ಅದನ್ನು ತನಿಖೆ ನಡೆಸಬೇಕು’ ಎಂದು ಅವರು ಹೇಳಿದರು.

ವಶಕ್ಕೆ ಪಡೆಯುವಾಗ ಅಸ್ವಸ್ಥ: ಬಿಜೆಪಿ ಕಾರ್ಯಕರ್ತೆ ಸುಜಾತಾ ಹಂಡಿ ಅವರ ಮೇಲೆ ಹಲ್ಲೆ ನಡೆಸಿ, ಜೀವ ಬೆದರಿಕೆ ಹಾಕಿದ ಪ್ರಕರಣ ಸಂಬಂಧ ಗುರುವಾರ ಪೊಲೀಸರು ವಶಕ್ಕೆ ಪಡೆಯಲು ಯತ್ನಿಸಿದಾಗ, ಸುವರ್ಣಾ ಕಲ್ಲಕುಂಟ್ಲ ಅವರು ಅಸ್ವಸ್ಥಗೊಂಡರು. ತಕ್ಷಣವೇ ಅವರನ್ನು ಕೆಎಂಸಿಆರ್‌ಐ ಆಸ್ಪತ್ರೆಗೆ ದಾಖಲಿಸಲಾಯಿತು.

‘ಸುವರ್ಣಾ ಕಲ್ಲಕುಂಟ್ಲ ಸೇರಿ 9 ಜನರು ಕ್ಷುಲ್ಲಕ ಕಾರಣಕ್ಕೆ ನನ್ನ ಅಕ್ಕನ ಮೇಲೆ ಹಲ್ಲೆ ನಡೆಸಿ ಜೀವ ಬೆದರಿಕೆ ಹಾಕಿದ್ದಾರೆ’ ಎಂದು ಸುಜಾತಾ ಹಂಡಿ ಅವರ ಸಹೋದರ ಮರಿಯಾದಾಸ್ ಬುಧವಾರ ಕೇಶ್ವಾಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

‘ಸುವರ್ಣಾ ಅವರಿಗೆ ರಕ್ತದೊತ್ತಡ, ಮಧುಮೇಹ ಹೆಚ್ಚಾಗಿದೆ. ಇಸಿಜಿ ಮಾಡಲಾಗಿದ್ದು, ಬೇರೆ ಸಮಸ್ಯೆ ಕಂಡು ಬಂದಿಲ್ಲ. ಚಿಕಿತ್ಸೆ ಮುಂದುವರೆದಿದೆ’ ಎಂದು ಕೆಎಂಸಿಆರ್‌ಐ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಈಶ್ವರ ಹಸಬಿ ಹೇಳಿದರು.

> ಮಹಿಳೆಯೇ ವಿವಸ್ತ್ರಗೊಂಡಿದ್ದಾಳೆ ಎಂದು ಮುಖ್ಯಮಂತ್ರಿ ಹೇಳಿಕೆ ನೀಡಿದ್ದು ಖಂಡನೀಯ. ಮಹಿಳೆಯರ ಬಗ್ಗೆ ಗೌರವ ಇದ್ದರೆ, ತನಿಖೆಗೆ ಆದೇಶಿಸಿ
> **ಸಿ.ಮಂಜುಳಾ,** ಅಧ್ಯಕ್ಷೆ, ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ

> ದಲಿತ ಮಹಿಳೆಯನ್ನು ನಸುಕಿನ 3 ಗಂಟೆಗೆ ಪೊಲೀಸರು ಠಾಣೆಗೆ ಕರೆಯಿಸಿದ್ದರು. ಈ ಹೊತ್ತಿನಲ್ಲಿ ಮಹಿಳೆಯನ್ನು ಕರೆಯಿಸುವ ಅಗತ್ಯ ಏನಿತ್ತು
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

ಅಮಾನತು ಮಾಡಿ: ಅಶೋಕ

ಬೆಂಗಳೂರು: ‘ಹುಬ್ಬಳ್ಳಿಯಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿದ ಘಟನೆಗೆ ಕಾರಣರಾದ ಇನ್‌ಸ್ಪೆಕ್ಟರ್ ಮತ್ತು ಇತರ ಪೊಲೀಸರನ್ನು ಶುಕ್ರವಾರ (ಜ.9) ಬೆಳಿಗ್ಗೆ 10 ಗಂಟೆಯ ಒಳಗೆ ಅಮಾನತು ಮಾಡಬೇಕು’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಗಡುವು ವಿಧಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಈ ಪ್ರಕರಣದ ನ್ಯಾಯಾಂಗ ತನಿಖೆ ನಡೆಸಬೇಕು’ ಎಂದು ಒತ್ತಾಯಿಸಿದರು.

‘ಈ ಘಟನೆಗೆ ಮಹಿಳಾ ಆಯೋಗ ಈಗಾಗಲೇ ಛೀಮಾರಿ ಹಾಕಿದೆ. ಮಾನವ ಹಕ್ಕು ಆಯೋಗ ಹಾಗೂ ಮಹಿಳಾ ಆಯೋಗಕ್ಕೆ ನಾನು ಪತ್ರ ಬರೆದಿದ್ದೇನೆ’ ಎಂದರು.

‘ಮಹಿಳೆಯನ್ನು ವಿವಸ್ತ್ರಗೊಳಿಸಿರುವುದು ಪೂರ್ವ ಯೋಜಿತ, ರಾಜಕೀಯ ಪ್ರೇರಿತ ಕೃತ್ಯ. ದೌರ್ಜನ್ಯಕ್ಕೆ ಒಳಗಾದ ಮಹಿಳೆಯ ಮೇಲೂ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಪೊಲೀಸರೇ ದುಶ್ಯಾಸನರಾಗಿದ್ದಾರೆ’ ಎಂದರು.

‘ಈ ಘಟನೆಯ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕುರುಡಾಗಿದ್ದರೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿದ್ದಾರೆ. ಪೊಲೀಸರು ದುಶ್ಯಾಸನನಂತೆ ವಿವಸ್ತ್ರ ಮಾಡಿದ್ದಾರೆ. ಇದು ಕಾನೂನು ಸುವ್ಯವಸ್ಥೆಗೆ ಹಿಡಿದ ಕೈಗನ್ನಡಿ. ಈ ಪ್ರಕರಣವನ್ನು ಮುಚ್ಚಿ ಹಾಕಲು ಷಡ್ಯಂತ್ರ ನಡೆದಿದೆ’ ಎಂದೂ ಆರೋಪಿಸಿದರು.

ವರದಿ ಕೇಳಿದ ರಾಷ್ಟ್ರೀಯ ಮಹಿಳಾ ಆಯೋಗ

ನವದೆಹಲಿ: ಹುಬ್ಬಳ್ಳಿಯಲ್ಲಿ ಮಹಿಳೆಯ ವಿವಸ್ತ್ರಗೊಳಿಸಿರುವ ಆರೋಪ ಪ್ರಕರಣದ ಬಗ್ಗೆ ಐದು ದಿನಗಳಲ್ಲಿ ವರದಿ ಸಲ್ಲಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ರಾಷ್ಟ್ರೀಯ ಮಹಿಳಾ ಆಯೋಗ ಗುರುವಾರ ನಿರ್ದೇಶಿಸಿದೆ.

ಈ ಪ್ರಕರಣದ ಬಗ್ಗೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಆಯೋಗವು, ಎಫ್‌ಐಆರ್ ದಾಖಲಿಸದಿದ್ದರೆ ಕೂಡಲೇ ದಾಖಲಿಸಿಕೊಳ್ಳಬೇಕು. ವಿಡಿಯೊ ಸಾಕ್ಷ್ಯಗಳ ಪರಿಶೀಲನೆ ಸೇರಿದಂತೆ ನ್ಯಾಯಯುತ, ನಿಷ್ಪಕ್ಷಪಾತ ಮತ್ತು ಕಾಲಮಿತಿಯ ತನಿಖೆ ನಡೆಸಬೇಕು. ತಪ್ಪು ಎಸಗಿದ್ದಲ್ಲಿ ಅಧಿಕಾರಿಗಳ ವಿರುದ್ಧ ಇಲಾಖಾ ಹಾಗೂ ಕ್ರಿಮಿನಲ್ ಕ್ರಮ ಕೈಗೊಳ್ಳಬೇಕು’ ಎಂದು ಸೂಚಿಸಿದೆ.

‘ಬಿಜೆಪಿಯಲ್ಲಿ ಜೆಡಿಎಸ್ ಶೀಘ್ರ ವಿಲೀನ: ನಮಗೂ ಒಳ್ಳೆಯದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ ಪಕ್ಷ ಶೀಘ್ರದಲ್ಲಿ ಬಿಜೆಪಿ ಜತೆ ವಿಲೀನವಾಗುವ ಸಾಧ್ಯತೆಯಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಚಾಮರಾಜಪೇಟೆ ಕ್ಷೇತ್ರದ ಜೆಡಿಎಸ್ ಮುಖಂಡ ಗೋವಿಂದರಾಜ್, ಅವರ ಪತ್ನಿ ಗೌರಮ್ಮ, ಚಂದ್ರಶೇಖರ್, ಜೆಡಿಎಸ್ ಅಧ್ಯಕ್ಷರಾಗಿದ್ದ ಡೇವಿಡ್ ಮುಂತಾದವರನ್ನು ಕೆಪಿಸಿಸಿ ಕಚೇರಿಯಲ್ಲಿ ಗುರುವಾರ ಕಾಂಗ್ರೆಸ್ ಪಕ್ಷಕ್ಕೆ ಸೇರಿಸಿಕೊಂಡ ಬಳಿಕ ಅವರು ಮಾತನಾಡಿದರು.

‘ಬಿಜೆಪಿ ಜೊತೆ ಜೆಡಿಎಸ್ ವಿಲೀನವಾದರೆ ನಮಗೂ ಒಳ್ಳೆಯದೇ. ನಾವೂ ನೇರವಾಗಿ ಬಿಜೆಪಿ ಜೊತೆ ಹೋರಾಟ ಮಾಡಬಹುದು. ಆಟಕ್ಕೆ ಮೂರು ಪಕ್ಷ, ಲೆಕ್ಕಕ್ಕೆ ಮಾತ್ರ ಎರಡು ಪಕ್ಷ ಎಂಬ ಗೊಂದಲವೂ ಇರುವುದಿಲ್ಲ’ ಎಂದರು.

‘ಜೆಡಿಎಸ್ ಪಕ್ಷವನ್ನು ಕುಮಾರಸ್ವಾಮಿ ತಮ್ಮ ವೈಯಕ್ತಿಕ ಆಸ್ತಿಯಂತೆ ಮಾಡಿಕೊಂಡಿದ್ದಾರೆ. ಆ ಪಕ್ಷಕ್ಕೆ ಸಿದ್ಧಾಂತ, ನೀತಿ ಎನ್ನುವುದೇ ಇಲ್ಲ. ಬಿಜೆಪಿ– ಜೆಡಿಎಸ್ ಮೈತ್ರಿ ಒಪ್ಪಿಕೊಳ್ಳಲು ಸಾಧ್ಯವಾಗದಿರುವ, ಇನ್ನೂ ಅನೇಕ ಕ್ಷೇತ್ರಗಳ ನಾಯಕರು ಪಕ್ಷ ಸೇರ್ಪಡೆಯಾಗಲು ಬಯಸಿ ನಮ್ಮ ಸಂಪರ್ಕದಲ್ಲಿದ್ದಾರೆ’ ಎಂದರು.

‘ಪಾಲಿಕೆಗಳಿಗೆ ಚುನಾವಣೆ ನಡೆಸುವ ಕುರಿತು ನ್ಯಾಯಾಲಯಕ್ಕೆ ಸರ್ಕಾರ ಈಗಾಗಲೇ ಪ್ರಮಾಣಪತ್ರ ಸಲ್ಲಿಸಿದೆ. ಈ ವರ್ಷವನ್ನು ಚುನಾವಣಾ ವರ್ಷವೆಂದು ಪರಿಗಣಿಸಿದ್ದು, ಈ ವರ್ಷವೇ ಇತರೆ ಸ್ಥಳೀಯ ಸಂಸ್ಥೆಗಳಿಗೂ ಚುನಾವಣೆ ನಡೆಸಲಾಗುವುದು. ಈ ಬಗ್ಗೆ ಮುಖ್ಯ-ಮಂತ್ರಿಯವರು ಗ್ರಾಮೀಣಾಭಿವೃದ್ಧಿ ಸಚಿವರ ಜೊತೆ ಚರ್ಚಿಸಿದ್ದಾರೆ’ ಎಂದರು.

‘ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸುವ ಆಸಕ್ತಿಯಿಂದ ಟಿಕೆಟ್ ಆಕಾಂಕ್ಷಿಗಳು ಬೆಂಗಳೂರು ಪಶ್ಚಿಮ ಪಾಲಿಕೆಯಲ್ಲಿ 247, ಉತ್ತರದಲ್ಲಿ 199, ದಕ್ಷಿಣದಲ್ಲಿ 129, ಕೇಂದ್ರದಲ್ಲಿ 106, ಪೂರ್ವದಲ್ಲಿ 78 ಅರ್ಜಿಗಳನ್ನು ಪಡೆದುಕೊಂಡಿದ್ದಾರೆ. ಅರ್ಜಿ ಪಡೆದುಕೊಂಡಿರುವ ಒಟ್ಟು 779 ಆಕಾಂಕ್ಷಿಗಳು ಇದೇ 10ರ ಒಳಗೆ ಮರಳಿಸಿದರೆ ಪಕ್ಷದಿಂದ ತಂಡ ಕಳುಹಿಸಿ ವರದಿ ಪಡೆಯಬಹುದು. ವಾರ್ಡ್‌ಗಳಲ್ಲಿ ಯಾರು ಪಕ್ಷಕ್ಕೆ ನಿಷ್ಠರಾಗಿದ್ದಾರೆಂದು ಪರಿಶೀಲಿಸಬಹುದು’ ಎಂದರು.

ಜೆಡಿಎಸ್ ಮುಖಂಡ ಗೋವಿಂದರಾಜ್ ಮತ್ತು ಅವರ ಪತ್ನಿ ಗೌರಮ್ಮ ಅವರಿಗೆ ಪಕ್ಷದ ಬಾವುಟ ನೀಡಿ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಪಕ್ಷಕ್ಕೆ ಬರಮಾಡಿಕೊಂಡರು. ಸಚಿವ ಜಮೀರ್ ಅಹ್ಮದ್ ಖಾನ್ ಇದ್ದರು

‘ಕುಮಾರಸ್ವಾಮಿಯಿಂದ ಕಲಿಯಬೇಕಿಲ್ಲ’

‘ರಾಜಕೀಯದಲ್ಲಿ ಕುಮಾರಸ್ವಾಮಿಗಿಂತ ಹೆಚ್ಚಿನ ಅನುಭವವಿದೆ. ನಾನು ಮುಖ್ಯಮಂತ್ರಿ ಆಗದೇ ಇರಬಹುದು. ಆದರೆ, ಆಡಳಿತ ವಿಚಾರದಲ್ಲಿ ಅವರಿಗಿಂತ ಅನುಭವ ಹೊಂದಿದ್ದೇನೆ. ಅವರಿಂದ ಕಲಿಯುವ ಅಗತ್ಯ ನನಗಿಲ್ಲ’ ಎಂದು ಡಿ.ಕೆ. ಶಿವಕುಮಾರ್ ಗರಂ ಆದರು.

ಬಳ್ಳಾರಿಯಲ್ಲಿ ಪೊಲೀಸ್ ಅಧಿಕಾರಿಗಳ ಜೊತೆ ನಡೆಸಿದ ಸಭೆಗೆ ಕುಮಾರಸ್ವಾಮಿ ಆಕ್ಷೇಪ ವ್ಯಕ್ತಪಡಿಸಿರುವ ಬಗ್ಗೆ ಸುದ್ದಿಗಾರರು ಪ್ರಸ್ತಾಪಿಸಿದಾಗ, ‘ನಾನು ಬಹಳ ಕಾಲ ಸಚಿವನಾಗಿ ಕೆಲಸ ಮಾಡಿದ್ದೇನೆ. ಆಡಳಿತ ಹೇಗೆ ಮಾಡಬೇಕು, ಯಾರ ಜೊತೆ ಸಭೆ ಮಾಡಬೇಕು, ಮಾಡಬಾರದು ಎಂಬುದು ಚೆನ್ನಾಗಿ ಗೊತ್ತಿದೆ’ ಎಂದು ತಿರುಗೇಟು ನೀಡಿದರು.

ಕೋಗಿಲು: 26 ಮಂದಿಯಷ್ಟೇ ಅರ್ಹರು–ಜಮೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಗಿಲು ಬಡಾವಣೆಯ ತೆರವು ಕಾರ್ಯಾಚರಣೆಯಲ್ಲಿ ಮನೆ ಕಳೆದುಕೊಂಡವರ ಪೈಕಿ 26 ಮಂದಿಯಷ್ಟೇ ಸರ್ಕಾರದ ವಸತಿ ಸೌಲಭ್ಯ ಪಡೆಯಲು ಅರ್ಹತೆ ಪಡೆದಿದ್ದಾರೆ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಬುಧವಾರ ಭೇಟಿಯಾಗಿ ಚರ್ಚಿಸಿದ ಬಳಿಕ ಸುದ್ದಿಗಾರರ ಜತೆ ಅವರು ಮಾತನಾಡಿದರು. ಕಾರ್ಯಾಚರಣೆಯ ವೇಳೆ 161 ಮನೆಗಳನ್ನು ತೆರವುಗೊಳಿಸಲಾಗಿದೆ. ಮನೆ ಕಳೆದುಕೊಂಡವರ ದಾಖಲೆಗಳನ್ನು ಪರಿಶೀಲಿಸಲಾಗಿದೆ. 26 ನಿವಾಸಿಗಳ ದಾಖಲೆಗಳು ಕ್ರಮಬದ್ಧ-ವಾಗಿವೆ. ಇನ್ನೂ ಕೆಲವರ ದಾಖಲೆಗಳ ಪರಿಶೀಲನಾ ಕಾರ್ಯ ನಡೆಯುತ್ತಿದೆ ಎಂದು ಅವರು ಮಾಹಿತಿ ನೀಡಿದರು.

‘ಹೊರಗಿನಿಂದ ಬಂದು ಅನಧಿಕೃತವಾಗಿ ನೆಲಸಿದ್ದ ಯಾರಿಗೂ ಮನೆಗಳನ್ನು ನೀಡುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಭೆ ಕರೆದು ಚರ್ಚಿಸಿದ್ದಾರೆ. ಅರ್ಹರಿಗೆ ಮನೆಗಳನ್ನು ನೀಡಲು ಸೂಚಿಸಿದ್ದಾರೆ. ಕರ್ನಾಟಕದ ಬೇರೆ ಭಾಗದಿಂದ ಬಂದು ಕೋಗಿಲು ಬಡಾವಣೆಯಲ್ಲಿ ಐದು ವರ್ಷದಿಂದ ವಾಸವಿದ್ದವರು, ಅದೇ ಬಡಾವಣೆಯ ವಿಳಾಸದಲ್ಲಿ ರೇಷನ್ ಕಾರ್ಡ್, ಮತದಾರರ ಗುರುತಿನ ಪತ್ರ, ಮಕ್ಕಳ ಶಾಲಾ ದಾಖಲಾತಿಗಳನ್ನು ಹೊಂದಿದ್ದವರಿಗೆ ಆದ್ಯತೆ ನೀಡಲಾಗಿದೆ’ ಎಂದರು.

ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ಕೈದಿಯಿಂದ ‘ದಾಂಪತ್ಯ ಸಾಂಗತ್ಯ’ಕ್ಕಾಗಿ ಬೇಡಿಕೆ

ಮದುವೆಗೆ ಸಿಕ್ಕ ಪೆರೋಲ್ ‘ಮಧುಚಂದ್ರ’ಕ್ಕಿಲ್ಲ..!

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕೈದಿ ಪರ ಅವ್ವ–ಹೆಂಡತಿ ಸಲ್ಲಿಸಿದ್ದ ಅರ್ಜಿಗಳು
- ಕಾನೂನಿನ ಅನ್ವಯ ಕಾಯುವಿಕೆ ಅನಿವಾರ್ಯ..!

ಬೆಂಗಳೂರು: ಕೊಲೆ ಆರೋಪದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ತರುಣ ಕೈದಿಯೊಬ್ಬನ ಮದುವೆಗೆ ಪೆರೋಲ್ ಮಂಜೂರು ಮಾಡಿದ್ದ ಹೈಕೋರ್ಟ್, ಈಗ ಆತನ ‘ಮಧುಚಂದ್ರ’ಕ್ಕೆ ಪೆರೋಲ್ ಅನುಮತಿಸಲು ‘ಇನ್ನಷ್ಟು ಸಮಯ ಕಾಯಬೇಕು’ ಎಂದು ಹೇಳಿದೆ.

ಕೋಮಲೆಯೊಬ್ಬಳ ಕೊಲೆ ಆರೋಪ ಹೊತ್ತಿದ್ದ ಯುವಕನಿಗೆ ಸಿಟಿ ಸಿವಿಲ್ ಮತ್ತು ಸೆಷನ್ಸ್‌ನ 51ನೇ ಕೋರ್ಟ್ ನ್ಯಾಯಾಧೀಶ ಸಿ.ಬಿ. ಸಂತೋಷ್ ಅವರು 2024ರ ನವೆಂಬರ್ 26ರಂದು ಜೀವಾವಧಿ ಶಿಕ್ಷೆ ವಿಧಿಸಿದ್ದರು. ಅಂದಿನಿಂದಿಲೂ ಜೈಲಿನಲ್ಲಿ ದಿನ ಕಳೆಯುತ್ತಾ ಪ್ರಾಯಶ್ಚಿತ್ತದ ಪಠಣ ಮಾಡುತ್ತಿರುವ ಕೈದಿಗೀಗ 28ರ ತುಂಬು ಪ್ರಾಯ.

ಸದ್ಯ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಈತ ಪೆರೋಲ್‌ಗೆ ಅರ್ಜಿ ಹಾಕಿದ್ದ. ಈ ಅರ್ಜಿಯನ್ನು ಜೈಲಿನ ಅಧಿಕಾರಿಗಳು 2025ರ ಜನವರಿ 16ರಂದು ತಿರಸ್ಕರಿಸಿ ಹಿಂಬರಹ ನೀಡಿದ್ದರು.

‘ಈ ಪ್ರಕರಣದಲ್ಲಿ ಅಪರಾಧಿ ಸ್ವತಃ ತನ್ನ ಮದುವೆಗೇ ಪೆರೋಲ್ ಕೇಳುತ್ತಿದ್ದಾನೆ. ಕೈದಿಯ ಮಗ, ಮಗಳು, ತಂಗಿ ಅಥವಾ ಅಕ್ಕನ ಮದುವೆಗೆ ಮಾತ್ರ ಪೆರೋಲ್ ನೀಡಲಾಗುತ್ತದೆ. ಅದೂ ತುರ್ತು ಪೆರೋಲ್ ನೀಡುವುದು ಏನಿದ್ದರೂ ನಿರ್ದಿಷ್ಟ ಸನ್ನಿವೇಶಗಳಲ್ಲಿ ಮಾತ್ರವೇ’ ಎಂದು ಸ್ಪಷ್ಟನೆ ನೀಡಿದ್ದರು.

ಇದನ್ನು ಪ್ರಶ್ನಿಸಿ ಕೈದಿಯ ತಾಯಿ ಹೈಕೋರ್ಟ್ ಮೆಟ್ಟಿ-ಲೇರಿದ್ದರು. ‘ವಯಸ್ಸಿಗೆ ಬಂದಿರುವ ನನ್ನ ಮಗ, ಮದುವೆ ಮಾಡಿಕೊಳ್ಳಬೇಕೆಂದು ಹಂಬಲಿಸುತ್ತಿರುವುದನ್ನು ಪರಿಗಣಿಸಬೇಕು. ಅದಕ್ಕಾಗಿ ಆತನಿಗೆ 15 ದಿನಗಳ ತುರ್ತು ಪೆರೋಲ್ ನೀಡಲು ಜೈಲಿನ ಅಧಿಕಾರಿಗಳಿಗೆ ನಿರ್ದೇಶಿಸಬೇಕು’ ಎಂದು ಕೋರಿದ್ದರು.

ಈ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ 2025ರ ಸೆಪ್ಟೆಂಬರ್ 24ರಂದು ಪುರಸ್ಕರಿಸಿತ್ತು. ಕರ್ನಾಟಕ ಕಾರಾಗೃಹಗಳು ಮತ್ತು ಸುಧಾರಣಾ ಸೇವಾ ಕೈಪಿಡಿ–2021ರ ಅನುಸಾರ ಪೆರೋಲ್ ನೀಡುವಂತೆ ಆದೇಶಿಸಿತ್ತು.

ಹೈಕೋರ್ಟ್ ಸುದ್ದಿ

‘ಪ್ರತಿ ಮೂರು ದಿನಗಳಿಗೆ ಒಮ್ಮೆ ಸ್ಟೇಷನ್‌ಗೆ ಹೋಗಿ ಸಹಿ ಮಾಡಬೇಕು. ವ್ಯಾಪ್ತಿ ಪ್ರದೇಶ ಬಿಟ್ಟು ಹೊರಗೆ ಹೋಗುವಂತಿಲ್ಲ ಎಂಬುದೂ ಸೇರಿದಂತೆ ಅಗತ್ಯ ಷರತ್ತುಗಳೊಂದಿಗೆ ಪೆರೋಲ್ ನೀಡಿ’ ಎಂದು ಪರಪ್ಪನ ಅಗ್ರಹಾರ ಜೈಲಿನ ಮುಖ್ಯ ಸೂಪರಿಂಟೆಂಡೆಂಟ್ ಅವರಿಗೆ ನಿರ್ದೇಶಿಸಿತ್ತು.

ಇದರ ಅನುಸಾರ ಹೊರಗೆ ಬಂದ ಕೈದಿ ಷರತ್ತುಗಳನ್ನು ಪೂರೈಸಿ, ಮದುವೆ ಬಳಿಕ ಜೈಲಿಗೆ ಮರಳಿದ್ದ. ಇತ್ತೀಚೆಗೆ ಈತ ಮತ್ತೊಂದು ಅರ್ಜಿ ಹಾಕಿ ‘ದಾಂಪತ್ಯ ಸಾಂಗತ್ಯ’ದ ಆಧಾರದಲ್ಲಿ ಪೆರೋಲ್ ನೀಡಲು ನಿರ್ದೇಶಿಸುವಂತೆ ಜೈಲಿನ ಅಧಿಕಾರಿಗಳಿಗೆ ಕೋರಿದ್ದ. ಆದರೆ, ಈ ಅರ್ಜಿಯನ್ನು ಅಧಿಕಾರಿಗಳು ತಿರಸ್ಕರಿಸಿದ್ದರು. ಇದನ್ನು ಪ್ರಶ್ನಿಸಿ ಈತನ ಪತ್ನಿ ಹೈಕೋರ್ಟ್ ಮೆಟ್ಟಿಲೇರಿದ್ದಳು.

ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಕೈದಿಯು ಕಾನೂನಿಗೆ ಅನುಗುಣವಾಗಿ ಆರು ತಿಂಗಳ ನಂತರ ಪುನಃ ಅರ್ಜಿ ಸಲ್ಲಿಸಬಹುದು’ ಎಂದು ಸೂಚಿಸಿದೆ.

ಪ್ರೇಮ ಪಾಶದಲ್ಲಿ ರಕ್ತದ ಓಕುಳಿ...

ತರುಣಿಯೊಬ್ಬಳ ಬೆನ್ನು ಬಿದ್ದಿದ್ದ ಯುವಕನ ಪ್ರೇಮಕ್ಕೆ ತರುಣಿಯ ಅಣ್ಣ ಅಡ್ಡಿಪಡಿಸಿದ್ದ. ಬೇಸತ್ತ ಯುವಕ, 2020ರ ಜೂನ್ 14ರಂದು ತರುಣಿಯನ್ನು ಇರಿದು ಕೊಲೆ ಮಾಡಿದ್ದ. ಆರೋಪ ಸಾಬೀತಾದ ಕಾರಣ ಐಪಿಸಿ–1860ರ ಕಲಂ 302ರ ಅಡಿಯಲ್ಲಿ ಈಗ ಕಂಬಿಗಳ ನಡುವೆ ಇದ್ದಾನೆ.

ಬಳ್ಳಾರಿ: 67 ಮಂದಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿಯಲ್ಲಿ ಜ. 1ರಂದು ನಡೆದ ಘರ್ಷಣೆ ಮತ್ತು ಕಾಂಗ್ರೆಸ್ ಕಾರ್ಯಕರ್ತನ ಸಾವಿಗೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆಯು ಕಾಂಗ್ರೆಸ್ ಮತ್ತು ಬಿಜೆಪಿಯ 67 ಜನರಿಗೆ ಸೆಕ್ಷನ್ 107ರಡಿ ನೋಟಿಸ್ ಜಾರಿ ಮಾಡಿದೆ.

‘ಶಾಂತಿಗೆ ಭಂಗ ತಂದ ಆರೋಪದ ಮೇಲೆ ನೋಟಿಸ್ ಜಾರಿ ಮಾಡಿ, ವಿಚಾರಣೆಗೆ ಕರೆಯಲಾಗಿದೆ. ಜನಾರ್ದನ ರೆಡ್ಡಿ, ಸೋಮಶೇಖರ ರೆಡ್ಡಿ, ಶ್ರೀರಾಮುಲು ಸೇರಿ ಬಿಜೆಪಿಯ 33 ಮಂದಿ, ಸತೀಶ್ ರೆಡ್ಡಿ, ಚಾನಾಳ್ ಶೇಖರ್, ನಾರಾ ಭರತ್ ರೆಡ್ಡಿ, ನಾರಾ ಪ್ರತಾಪ ರೆಡ್ಡಿ, ನಾರಾ ಸೂರ್ಯನಾರಾಯಣ ರೆಡ್ಡಿ ಸೇರಿ ಕಾಂಗ್ರೆಸ್‌ನ 34 ಮಂದಿಗೆ ನೋಟಿಸ್ ನೀಡಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಶಸ್ತ್ರಾಸ್ತ್ರ ಪರವಾನಗಿ ಸಮೀಕ್ಷೆ: ಜಿಲ್ಲಾಡಳಿತವು ಶಸ್ತ್ರಾಸ್ತ್ರ ಪರವಾನಗಿ ಸಮೀಕ್ಷೆಗೆ ಮುಂದಾಗಿದ್ದು, ಪೊಲೀಸ್ ಇಲಾಖೆಗೆ ಜ.5ರಂದು ಪತ್ರ ಬರೆದಿದೆ.

‘ಬಳ್ಳಾರಿ ಜಿಲ್ಲೆಯಲ್ಲಿ ಈವರೆಗೆ ಸ್ವಯಂ ರಕ್ಷಣೆಗಾಗಿ ಮಂಜೂರು ಮಾಡಿರುವ ಶಸ್ತ್ರಾಸ್ತ್ರ, ಪರವಾನಗಿ ಅಗತ್ಯದ ಬಗ್ಗೆ ಮರು ಸಮೀಕ್ಷೆ ನಡೆಸುವುದು ಅಗತ್ಯವಿದೆ. ಆತ್ಮರಕ್ಷಣೆಗಾಗಿ ಶಸ್ತ್ರಾಸ್ತ್ರ ಹೊಂದುವ ಅಗತ್ಯವಿರುವ ಬಗ್ಗೆ ವೈಯಕ್ತಿಕ ಸಮೀಕ್ಷೆ ಮಾಡಬೇಕು. ಮುಂದಿನ ಕ್ರಮ ಕೈಗೊಂಡು ವರದಿ ಸಲ್ಲಿಸಬೇಕು’ ಎಂದು ಜಿಲ್ಲಾಧಿಕಾರಿ ಕೆ.ನಾಗೇಂದ್ರ ಪ್ರಸಾದ್ ಪತ್ರ ಬರೆದಿದ್ದಾರೆ.

> ಗೃಹಸಚಿವರೇ ಅಸಮರ್ಥರಿದ್ದಾರೆ. ಪೊಲೀಸರು ಹೇಗೆ ಸಮರ್ಥವಾಗಿ ತನಿಖೆ ನಡೆಸಲು ಸಾಧ್ಯ? ಒಬ್ಬ ಶಾಸಕನ ಮೇಲೆ ಮತ್ತೊಬ್ಬ ಶಾಸಕನ ಖಾಸಗಿ ಅಂಗರಕ್ಷಕ ಗುಂಡಿನ ದಾಳಿ ನಡೆಸುವುದೆಂದರೆ ಏನರ್ಥ?
> **ಜನಾರ್ದನ ರೆಡ್ಡಿ,** ಶಾಸಕ

‘ಸಿಬಿಐಗೆ ವಹಿಸುವ ಅಗತ್ಯ ಇಲ್ಲ’

ಬೆಂಗಳೂರು: ‘ಬಳ್ಳಾರಿ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವ ಅಗತ್ಯವಿಲ್ಲ. ತನಿಖೆ ನಡೆಸುವ ಸಾಮರ್ಥ್ಯ ನಮ್ಮ ಪೊಲೀಸರಿಗಿದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಪರಮೇಶ್ವರ

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, ‘ನಮ್ಮ ಪೊಲೀಸರಿಗೆ ತನಿಖೆ ಮಾಡಲು ಆಗುವುದಿಲ್ಲವೆಂಬ ಸಂದರ್ಭ ಬಂದರೆ ಸಿಬಿಐಗೆ ವಹಿಸುವ ಬಗ್ಗೆ ಮಾತನಾಡಬಹುದು. ಯಾವುದೇ ಪ್ರಕರಣಗಳನ್ನು ಸಿಬಿಐಗೆ ನೀಡುವುದಿಲ್ಲವೆಂದು ಸಚಿವ ಸಂಪುಟ ಸಭೆಯಲ್ಲಿ ಈಗಾಗಲೇ ತೀರ್ಮಾನಿಸಲಾಗಿದೆ’ ಎಂದರು.

‘ರಾಜ್ಯದಲ್ಲಿ ಇರುವುದು ಹೆಬ್ಬೆಟ್ಟು ಗೃಹ ಸಚಿವರಾ’ ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದರು. ಅದಕ್ಕೆ ಪ್ರತಿಕ್ರಿಯಿಸಿದ ಪರಮೇಶ್ವರ, ‘ರಾಜ್ಯದಲ್ಲಿ ಕಾನೂನು ವ್ಯವಸ್ಥೆ ನಿಭಾಯಿಸಲು ಯಾವ ರೀತಿ ಆಡಳಿತ ಮಾಡಬೇಕೆಂಬ ಅರಿವು ನನಗಿದೆ. 38 ವರ್ಷಗಳಿಂದ ರಾಜಕಾರಣದಲ್ಲಿರುವ ನಾನು, ಅನೇಕ ಹುದ್ದೆಗಳಲ್ಲಿ ಕೆಲಸ ಮಾಡಿದ್ದೇನೆ’ ಎಂದರು.

ಶುಕ್ರವಾರ, ಜನವರಿ 9, 2026 | ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಹುನ್ನಾರ...

‘ವಿಬಿ–ಜಿ ರಾಮ್ ಜಿ’ ಎನ್ನುವುದು ಕಾರ್ಪೊರೇಟ್ ಕುಳಗಳಿಗೆ ಅಗ್ಗದ ಕೂಲಿಗೆ ಬಡ ಕಾರ್ಮಿಕರು ಸಿಗುವಂತೆ ಮಾಡುವ ಹುನ್ನಾರವಾಗಿದೆ ಎಂದು ತೆಲಂಗಾಣ ಸಿ.ಎಂ ರೇವಂತ ರೆಡ್ಡಿ ಹೇಳಿದ್ದಾರೆ

ಬೆಳ್ಳಿ ಬೆಲೆ ಕುಸಿತ

ದೆಹಲಿಯ ಚಿನಿವಾರ ಪೇಟೆಯಲ್ಲಿ ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹12,500ರಷ್ಟು ಕುಸಿದಿದೆ

ಶ್ರೀ ಕುಮರನ್ ಜ್ಯುವೆಲರ್ಸ್

ಚೈನ್ ಮತ್ತು ವಜ್ರಗಳ ಮೇಳ

64 YEARS OF EXCELLENCE SINCE 1962

A UNIT OF The Chennai Silks

ಅತ್ಯಾಕರ್ಷಕ ಆಭರಣಗಳ ಮೇಲಿನ ಆಫರ್‌ಗಳ ಜೊತೆಗೆ ಈ ಹಬ್ಬದ ಋತುವನ್ನು ಸಂಭ್ರಮಿಸಿರಿ

20%* OFF

ವಜ್ರದ ಹರಳುಗಳ ಮೇಲೆ

ಈ ಕೊಡುಗೆಯು 18.01.2026 ರವರೆಗೆ ಮಾತ್ರ ಲಭ್ಯ
ಕೇವಲ @
ಹೊಸೂರ್, ಮೈಸೂರು ಮತ್ತು ಕಾಂಚೀಪುರಂ ಶಾಖೆಗಳಲ್ಲಿ

ಪಡೆಯಿರಿ ₹200*

ಅಧಿಕ ನಿಮ್ಮ ಹಳೆಯ ಚಿನ್ನಾಭರಣಗಳ ವಿನಿಮಯದಲ್ಲಿ ಪ್ರತಿ ಗ್ರಾಮ್ ಮೇಲೆ

*Conditions Apply

ನಿಮ್ಮ ವಿವಾಹದ ಮತ್ತು ವಿಶೇಷ ಸಂದರ್ಭಗಳ ರೇಷ್ಮೆ ಸೀರೆಗಳನ್ನು ನೇರವಾಗಿ ನಮ್ಮ ಸಗಟು ದರಗಳಲ್ಲಿ ಖರೀದಿಸಿರಿ

ದಿ ಚೆನ್ನೈ ಸಿಲ್ಕ್ಸ್

ರೇಷ್ಮೆ ಉತ್ಪಾದನೆ ಮತ್ತು ಮಾರಾಟ ಕೇಂದ್ರಗಳು ಈಗ @ ಕಾಂಚೀಪುರಂನಲ್ಲಿ

SCAN TO LOCATE VENUE

India’s Most Trusted Jeweller

ಶ್ರೀ ಕುಮರನ್ ಜ್ಯುವೆಲರ್ಸ್

ಚಿನ್ನ • ವಜ್ರ • ಪ್ಲಾಟಿನಂ • ಬೆಳ್ಳಿ

Sree Kumaran JEWELLERS

Gold • Diamond • Platinum • Silver

ಹೊಸೂರ್ (ಜವಳಿ ಮತ್ತು ಆಭರಣ)	:	ಬೆಂಗಳೂರು ಹೆದ್ದಾರಿ. ☎: 96777 61978 – 91675 27777
ಗ್ರಾಹಕ ಸೇವಾ ಕೇಂದ್ರ	:	ಎಎಸ್‌ಎಲ್ ಪ್ಲಾಜಾ, ಬಸ್ ನಿಲ್ದಾಣದ ಎದುರು, ಹೊಸೂರ್. ☎: 7845750888
ಮೈಸೂರು (ಆಭರಣಗಳು)	:	ಬಿ ಎನ್ ರೋಡ್, ಲಷ್ಕರ್ ಮೊಹಲ್ಲಾ (ಉಪನಗರ ಬಸ್ ನಿಲ್ದಾಣದ ಸಮೀಪ). ☎: 0821–2418916, 94916 85000
ಕಾಂಚೀಪುರಂ (ಆಭರಣ ಮತ್ತು ರೇಷ್ಮೆ)	:	ವೆಸ್ಟ್ ರಾಜಾ ಸ್ಟ್ರೀಟ್. ☎: 044 27234916, 95667 43916, 90037 96888

ಕರ್ನಾಟಕ • ತಮಿಳುನಾಡು • ತೆಲಂಗಾಣ • ಪುದುಚೆರಿ – 4 ರಾಜ್ಯಗಳು 51 ಮಳಿಗೆಗಳು

ಬೆಟ್ಟದೆತ್ತರ ಬೆಳೆದ 'ಘಟ್ಟದ ಜೀವ'

• ಶಾರದಾ ಗೋಪಾಲ

ಪಶ್ಚಿಮಘಟ್ಟಗಳ ಮೇಲೆ ಅವ್ಯಾಹತವಾಗಿ ಪ್ರಹಾರಗಳು ನಡೆಯುತ್ತಿರುವ ಈ ದಿನಗಳಲ್ಲಿ ಪಶ್ಚಿಮಘಟ್ಟಗಳ ಅಧ್ಯಯನಕ್ಕಾಗಿ ತಮ್ಮ ಜೀವನವನ್ನೇ ಮೀಸಲಿಟ್ಟಿದ್ದ ದೇಶದ ಅತಿ ಮುಖ್ಯ ಪರಿಸರ ವಿಜ್ಞಾನಿಯನ್ನು ಕಳೆದುಕೊಂಡಿದ್ದು ಪರಿಸರ ಮತ್ತು ಪಶ್ಚಿಮಘಟ್ಟಗಳ ಕುರಿತು ಚಿಂತನೆ ಮಾಡುತ್ತಿರುವ ಜನರಿಗೆ ಬಲು ದೊಡ್ಡ ಆಘಾತ.

'ಇಡೀ ಪಶ್ಚಿಮ ಘಟ್ಟಗಳೇ ಗಾಡ್ಗೀಳ್ ಬದುಕಿದ್ದ ಜೀವವಾದ. ಅದು ಕೇವಲ ಕುರುಡು ಪ್ರೀತಿಯಾಗಿರಲಿಲ್ಲ. ಬದಲಿಗೆ ಇಡೀ ಪಶ್ಚಿಮ ಘಟ್ಟಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ, ಘಟ್ಟಗಳು ತಮ್ಮೊಡಲಲ್ಲಿ ಸಲಹುತ್ತಿದ್ದ ಅಪಾರ ಜೀವರಾಶಿಯನ್ನು ಅಧ್ಯಯನ ಮಾಡಿ ಇದರ ಉಳಿವಿಲ್ಲದೆಯೇ ಭಾರತಕ್ಕೆ ಉಳಿವಿಲ್ಲ, ಈ ಘಟ್ಟಗಳನ್ನು ಉಳಿಸಲೇಬೇಕು ಎಂದು ಸ್ಪಷ್ಟವಾದ ನಿಲುವಿಟ್ಟು ಬಂದ ನಂತರ ತಾಳಿದ ನಿಲುವಾಗಿತ್ತು.

ಅಮೆರಿಕದಿಂದ ಜೀವವಿಜ್ಞಾನ, ಪರಿಸರ ವಿಕಾಸವಾದಗಳಲ್ಲಿ ಉನ್ನತ ವ್ಯಾಸಂಗ ಮುಗಿಸಿ ಭಾರತಕ್ಕೆ ಅವರು ಮರಳುವಾಗ ಮಿತ್ರರನೇಕರು ಹಿಂದೆಯೇ ಉಳಿಯಲು ಪ್ರಯತ್ನಿಸಿದರು. 'ಅಲ್ಲೇನಿದೆ ಭಾರತದಲ್ಲಿ? ಒಂದು ಒಳ್ಳೆಯ ನೌಕರಿಯೂ ಸಿಗಲಿಕ್ಕಿಲ್ಲ, ಅಧ್ಯಯನಕ್ಕೆ ಅವಕಾಶವೂ ಸಿಗಲಿಕ್ಕಿಲ್ಲ' ಎಂದು. ಆದರೆ ತನಗೇನು ಸಿಗುತ್ತದೆ ಎನ್ನುವುದಕ್ಕಿಂತ ತಾನೇನು ಮಾಡಬೇಕು ಎಂಬುದನ್ನೇ ಮುಖ್ಯವಾಗಿರಿಸಿಕೊಂಡು ಪತ್ನಿ ಸುಲೋಚನಾರೊಂದಿಗೆ ಭಾರತಕ್ಕೆ ಮರಳಿದರು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ಸುಲೋಚನಾ ಅವರಿಗೆ ಸಂದರ್ಶನಕ್ಕೆ ಕರೆ ಬಂದಾಗ ಅವರು ಮ್ಯಾಥಮ್ಯಾಟಿಕ್ ಬಯೋಲಾಜಿ ತಜ್ಞ ತಮ್ಮ ಪತಿಗೂ ಅವಕಾಶವಿದೆಯೇ ಎಂದು ಕೇಳಿದಾಗ ನಿರ್ದೇಶಕರಾಗಿದ್ದ ಸತೀಶ್ ಧವನ್ 'ಇಬ್ಬರನ್ನೂ ಒಟ್ಟಿಗೆ ಕೆಲಸಕ್ಕೆ ತೆಗೆದುಕೊಂಡರು.

ಐಐಎಸ್‌ಸಿಗೆ ಬಂದ ಗಾಡ್ಗೀಳರು ಮತ್ತೆ ಹಿಂದಿರುಗಿ ನೋಡಲಿಲ್ಲ. ಇಲ್ಲಿ ತಮ್ಮ ಕೆಲಸ ಮಾಡುತ್ತಲೇ ತಮ್ಮ ಪ್ರೀತಿಯ ಪಶ್ಚಿಮಘಟ್ಟಗಳ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತ ನಡೆದರು. ಪರಿಸರ ಕ್ಷೇತ್ರಕ್ಕೆ ಅವರ ಕೊಡುಗೆ ಒಂದೇ, ಎರಡೇ? ಐಐಎಸ್‌ಸಿಗೆ ಬಂದ ಪ್ರಾರಂಭದ ಹಿಂದಿನಿಂದ ಆರಂಭವಾದ ಅಧ್ಯಯನ, ಹಾಗೆಯೇ ಕೇರಳದ ಶಾಂತಕಣಿವೆ, ದಾಂಡೇಲಿಯ ಬಿದಿರು, ಕಾಡನ್ನೇ ನಂಬಿ ಬದುಕುತ್ತಿದ್ದ ಗೌಳಿ, ಕುಣಬಿ ಜನಾಂಗ, ಗೋವಾ ಮಹಾರಾಷ್ಟ್ರದಲ್ಲಿ ಹಬ್ಬಿದ ಸಹ್ಯಾದ್ರಿಯನ್ನು ದಾಟಿ, ಗುಜರಾತಿನ ತುದಿಯವರೆಗೂ ಹೋಗುತ್ತದೆ. ಅತ್ತಿ, ಆಲ, ಬಿದಿರು, ಬಸರಿ, ಆನೆಯಿಂದ ಆರಂಭವಾಗಿ ಮೀನು ಕೀಟಗಳವರೆಗೂ ಅವರ ಅಧ್ಯಯನ ಹಬ್ಬಿತ್ತು. ಅನೇಕ ಜೀವಿಗಳ ಮೇಲೆ ಮುಖ್ಯ ಅಧ್ಯಯನ ಮಾಡಿದ್ದಾರೆ. ಈ ವೈವಿಧ್ಯಮಯ ಪ್ರಪಂಚದ ಅಧ್ಯಯನದಿಂದ ಜೀವಿಗಳಿಗೆ ತನ್ನದೇ ಆದ ಸ್ಥಾನ ಮತ್ತು ಮಾನ ಎಂದೂ ಉಳಿಯಬೇಕೆಂದು ಪ್ರತಿಪಾದಿಸಿದವರು ಪ್ರೊ. ಗಾಡ್ಗೀಳ್.

ಬುಟ್ಟಿ ಹೆಣೆಯುವ ಮೇದಾರರು ತಮ್ಮ

ಮಾಧವ ಗಾಡ್ಗೀಳ್ ನಿಧನ

ಪುಣೆ (ಪಿಟಿಐ): ಪಶ್ಚಿಮ ಘಟ್ಟಗಳ ಸಂರಕ್ಷಣೆಗಾಗಿ ಅವಿರತವಾಗಿ ಶ್ರಮಿಸಿದ, ದೇಶದ ಹೆಸರಾಂತ ಪರಿಸರ ವಿಜ್ಞಾನಿ ಮಾಧವ ಧನಂಜಯ ಗಾಡ್ಗೀಳ್ (83) ಬುಧವಾರ ರಾತ್ರಿ ಪುಣೆಯಲ್ಲಿ ನಿಧನರಾದರು.

'ಅಲ್ಪಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆಸ್ಪತ್ರೆಯಲ್ಲೇ ಕೊನೆಯುಸಿರೆಳೆದಿದ್ದಾರೆ' ಎಂದು ಕುಟುಂಬ ಮೂಲಗಳು ತಿಳಿಸಿವೆ. ಅವರಿಗೆ ಪುತ್ರ, ಪುತ್ರಿ ಇದ್ದಾರೆ. ಹವಾಮಾನ ವಿಜ್ಞಾನಿಯಾಗಿದ್ದ ಪತ್ನಿ ಸುಲೋಚನಾ ಗಾಡ್ಗೀಳ್ 2025ರ ಜುಲೈನಲ್ಲಿ ಮೃತಪಟ್ಟಿದ್ದರು.

'ಭಾರತದ ಪರಿಸರ ಸಂಶೋಧನೆ ಮತ್ತು ಸಂರಕ್ಷಣಾ ನೀತಿ' ರೂಪಿಸುವಲ್ಲಿ ಗಾಡ್ಗೀಳ್ ಮಹತ್ವದ ಪಾತ್ರ ವಹಿಸಿದ್ದರು. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿರುವ (ಐಐಎಸ್‌ಸಿ) ಪರಿಸರ ವಿಜ್ಞಾನ ಕೇಂದ್ರದ ಸ್ಥಾಪಕರು, 'ಗಾಡ್ಗೀಳ್ ಆಯೋಗ' ಎಂದೇ ಹೆಸರಾಗಿದ್ದ 'ಪಶ್ಚಿಮ ಘಟ್ಟಗಳ ಪರಿಸರ ವಿಜ್ಞಾನ ತಜ್ಞರ ಸಮಿತಿಯ (ಡಬ್ಲ್ಯುಜಿಇಇಪಿ) ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಗಾಡ್ಗೀಳ್ ಅವರು ಜೀವವೈವಿಧ್ಯ ಸಂರಕ್ಷಣೆಯಲ್ಲಿ ಸಾಂಪ್ರದಾಯಿಕ ಜ್ಞಾನ ವ್ಯವಸ್ಥೆಯ ಚಾಂಪಿಯನ್ ಆಗಿದ್ದರು. ಕೇರಳದ ಸೈಲೆಂಟ್ ವ್ಯಾಲಿ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು
ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಎಕ್ಸ್ ಪೋಸ್ಟ್‌ನಲ್ಲಿ)

ಕೇರಳದ ಮಳೆಕಾಡು ಆಂದೋಲನ ಸೇರಿದಂತೆ ಸುಸ್ಥಿರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯಲ್ಲಿ ಗಾಡ್ಗೀಳ್ ಅವರ ಕೊಡುಗೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ
ಪಿಣರಾಯಿ ವಿಜಯನ್, ಕೇರಳ ಮುಖ್ಯಮಂತ್ರಿ

'ಜನರ ವಿಜ್ಞಾನಿ' ಎಂದೇ ಹೆಸರಾಗಿದ್ದ ಗಾಡ್ಗೀಳ್ ಅವರು ಪರಿಸರ ಸಮತೋಲನಕ್ಕಾಗಿ ಇಡೀ ಬದುಕನ್ನೇ ಮುಡಿಪಾಗಿಟ್ಟಿದ್ದರು. ಅವರ ಮಹತ್ವಾಕಾಂಕ್ಷೆಗಳು ಹಲವು ತಲೆಮಾರುಗಳಿಗೆ ಸ್ಫೂರ್ತಿದಾಯಕ.
ದೇವೇಂದ್ರ ಫಡಣವೀಸ್, ಮಹಾರಾಷ್ಟ್ರ ಮುಖ್ಯಮಂತ್ರಿ

ಜೀವಜಾಲವೇ ನಾಶವಾಗುತ್ತಿದೆಯೆಂದು ಅಂದಿನ ಹಣಕಾಸು ಮಂತ್ರಿಗಳಾಗಿದ್ದ ಎ.ವಿ.ಫೋಪಡೆ ಯವರಿಗೆ ಮುತ್ತಿಗೆ ಹಾಕಿದಾಗ ಅವರು ಪರಿಸರದ ಸ್ಥಿತಿಗತಿಯನ್ನು ಅಧ್ಯಯನ ಮಾಡಲು ಪ್ರೊ. ಗಾಡ್ಗೀಳರನ್ನೇ ನೇಮಿಸುತ್ತಾರೆ. ದಾಂಡೇಲಿ ಕಾಗದ ಕಾರ್ಖಾನೆ, ಸುತ್ತಲಿನ ಬಿದಿರಿನ ಕಾಡನ್ನು ನೋಡುತ್ತ ಹೋಗುವ ಗಾಡ್ಗೀಳ್ ಕಾರ್ಖಾನೆ ಮಾಡುತ್ತಿದ್ದ ಬಿದಿರಿನ ನಾಶವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾರೆ. ಅಗ್ಗದ ಬೆಲೆಗೆ ಸಿಕ್ಕ ಅಮೂಲ್ಯ ಸಂಪತ್ತನ್ನು ಕಾರ್ಖಾನೆ ಮನಬಂದಂತೆ ಕೊಳ್ಳೆಹೊಡೆಯುತ್ತಿದ್ದ ಪರಿಯನ್ನು ಬಹಳ ನೋವಿನಿಂದ ಬರೆಯುತ್ತಾರೆ. 'ಬಿದಿರೆಲ್ಲ ಖರ್ಚಾದ ನಂತರ ಏನು ಮಾಡುತ್ತೀರಿ?' ಗಾಡ್ಗೀಳರ ಪ್ರಶ್ನೆಗೆ, 'ಇನ್ನೊಂದು ಕಾಡಿಗೆ ಹೋಗುತ್ತೇವೆ' ಎಂದು ಅಲಕ್ಷ್ಯದಿಂದ ಕಾರ್ಖಾನೆಯ ವ್ಯವಸ್ಥಾಪಕರು ಉತ್ತರಿಸುವ ಪರಿ ನಮ್ಮನ್ನು ಕೂಡ ದಂಗಾಗಿಸುತ್ತದೆ.

ಜೀವ ವಿಜ್ಞಾನದ ಅಧ್ಯಯನ ಮಾಡುತ್ತ ಮಾಡುತ್ತ ಗಾಡ್ಗೀಳರು ಇಂದಿನ ಅಭಿವೃದ್ಧಿಯ ನೀತಿ ಸುತ್ತಲಿನ ಜನರನ್ನು ಒಕ್ಕಲೆಬ್ಬಿಸುತ್ತಿದೆ, ಜನರನ್ನು ಬಿಟ್ಟ ಅಭಿವೃದ್ಧಿ ಹೇಗೆ ಎಂದು ಪ್ರಶ್ನಿಸಿಕೊಳ್ಳತೊಡಗಿದರು. ಸುಸ್ಥಿರ ಅಭಿವೃದ್ಧಿ ಆಗಬೇಕೆಂದರೆ ಅದರಲ್ಲಿ ಜನರೂ ಇರಬೇಕೆಂದು ನಿರ್ಧಾರಕ್ಕೆ ಬಂದು ಅದನ್ನೇ ಪ್ರತಿಪಾದಿಸತೊಡಗಿದರು. ಕೇರಳದ ಶಾಂತಕಣಿವೆಯಲ್ಲಿ ವಿದ್ಯುತ್ ಉತ್ಪಾದನೆಗೆ ಸರಕಾರ ಹೊರಟಾಗ ಅದಕ್ಕೆ ಬಂದ ಪ್ರತಿರೋಧವನ್ನು ನೋಡಿ ಶಾಂತಕಣಿವೆಯ ಅಧ್ಯಯನ ಕೈಗೊಳ್ಳುತ್ತಾರೆ ಪ್ರೊ. ಗಾಡ್ಗೀಳ್. ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತು ಮತ್ತು ಪ್ರೊ. ಗಾಡ್ಗೀಳರ ವರದಿಗಳ ಆಧಾರದ ಮೇಲೆ ಅಂದಿನ ಪ್ರಧಾನಿ ಇಂದಿರಾಗಾಂಧಿಯವರು ಯೋಜನೆಯನ್ನು ತಡೆಹಿಡಿಯುತ್ತಾರೆ.

ಕೊಂಕಣ ರೈಲಿನ ಬಗ್ಗೆ, ಭೋಪಾಲ್ ದುರಂತದ ಬಗ್ಗೆ ಕೂಡ ನಿಜವಾದ ಸ್ಥಿತಿಯೇನೆಂದು ಗಾಡ್ಗೀಳರು ಸಶಕ್ತವಾದ ವರದಿಗಳನ್ನು ಸಲ್ಲಿಸಿದರೂ ಅಲ್ಲೆಲ್ಲೂ ವರದಿಗಳಿಗೆ ಮಾನ್ಯತೆ ಸಿಗಲಿಲ್ಲ. ಅದೇ ರೀತಿ ಪಶ್ಚಿಮಘಟ್ಟಗಳ ಪರಿಸರ ಪರಿಣತರ ವರದಿಗೂ ಯಾವುದೇ ಮಾನ್ಯತೆ ಸಿಗಲಿಲ್ಲ. ಜನಪರವಾದ ಮತ್ತು ಪರಿಸರ ವಿರೋಧಿ ಕಾರ್ಖಾನೆಗಳ ವಿರುದ್ಧ ಸಲ್ಲಿಸಿದ್ದ ಆ ವರದಿಗಳು ಸಹಜವಾಗಿಯೇ ಉನ್ನತ ಅಧಿಕಾರಿಗಳು, ರಾಜಕಾರಣಿಗಳು ಮತ್ತು ಸಹಿಕಾರಸ್ಥರ ಕೈಯಲ್ಲಿ ಸಿಕ್ಕು ಮೂಲೆ ಸೇರಿದ್ದು ಈಗ ಇತಿಹಾಸ. ಗಾಡ್ಗೀಳ್ ವರದಿ ಇಡೀ ದೇಶದಲ್ಲಿಯೇ ಚರ್ಚಿತವಾದರೂ ಸರ್ಕಾರ ಅದನ್ನು ಬಿಡುಗಡೆ ಮಾಡದಂತಲ್ಲಿ, ಯಾರ ಕೈಗೂ ಅದು ತಲುಪದಂತೆ, ಅದರೊಳಗೆ ಏನು ಬರೆದಿದೆ ಎಂದು ತಿಳಿಯದಂತೆ ನೋಡಿಕೊಂಡಿತು. ಅಲ್ಲದೇ, ಕಸ್ತೂರಿರಂಗನ್ ಅವರಿಂದ ಇನ್ನೊಂದು ವರದಿ ಮಾಡಿಸಿತು. ಆದರೆ ಆಗಲೇ ಬಹುಚರ್ಚಿತ ವಿಷಯವಾಗಿದ್ದ ಪಶ್ಚಿಮಘಟ್ಟಗಳು, ಅಲ್ಲಿ ಪ್ರಹಾರ ಮಾಡುತ್ತಿರುವ ಬಲಿಷ್ಠ ಬಹುರಾಷ್ಟ್ರೀಯ ಕಾರಣದಿಂದಾಗಿ ಘಟ್ಟಗಳ ಉಳಿವಿಗಾಗಿ ಬರೆಯುವುದೇ ವರದಿಯನ್ನು ಸ್ವೀಕರಿಸಲೇ ಇಲ್ಲ.

ಅಂದು ಪಶ್ಚಿಮ ಘಟ್ಟ ಉಳಿಸಿ ಎಂಬ ಪಾದಯಾತ್ರೆಗೆ ಪ್ರೊ. ಗಾಡ್ಗೀಳರ ಅಧ್ಯಯನಗಳು ಬೆಂಬಲವಾಗಿದ್ದವು. ಇಂದು ಮತ್ತೆ ಪಶ್ಚಿಮ ಘಟ್ಟ ಉಳಿಸಿ ಎಂದು ಪಾದಯಾತ್ರೆ, ಜನಜಾಗೃತಿ ಮಾಡುವ ಅವಶ್ಯಕತೆ ಇರುವಾಗಲೇ ಪ್ರೊಫೆಸರ್ ಅವರು ಜೀವನದ ವಿದಾಯ ಹೇಳಿದ್ದು ಮಾತ್ರ ತುಂಬಲಾರದ ನಷ್ಟ. ಕೆಲವು ತಿಂಗಳ ಹಿಂದೆಯಷ್ಟೇ ತೀರಿಕೊಂಡ ಪತ್ನಿ ಪ್ರೊ. ಸುಲೋಚನಾರನ್ನು ಇಷ್ಟು ಬೇಗ ಸೇರಿಕೊಳ್ಳುವುದರ ಮೂಲಕ ಗಾಡ್ಗೀಳರು ಜೊತೆಗಾರಿಕೆಯ ಪ್ರೇಮವನ್ನು ಕೂಡ ಜಗತ್ತಿಗೆ ಸಾರಿದ್ದಾರೆ. ಪಶ್ಚಿಮ ಘಟ್ಟಗಳ ಉಳಿವಿಗೆ ಶ್ರಮಿಸುವುದೊಂದೇ ಅವರಿಗೆ ನಾವೆಲ್ಲ ಸಲ್ಲಿಸಬಹುದಾದ ದೊಡ್ಡ ನಮನ.



ಬದುಕಿನ ಪ್ರಮುಖ ಘಟ್ಟಗಳು

- ಪುಣೆಯ ಪ್ರಸಿದ್ಧ ಕುಟುಂಬದಲ್ಲಿ ಗಾಡ್ಗೀಳ್ ಅವರು 1942ರ ಮೇ 24ರಂದು ಜನಿಸಿದರು. ಹೆಸರಾಂತ ಅರ್ಥಶಾಸ್ತ್ರಜ್ಞ, ಗೋಖಲೆ ಇನ್‌ಸ್ಟಿಟ್ಯೂಟ್‌ನ ಮಾಜಿ ನಿರ್ದೇಶಕ ಧನಂಜಯ ರಾಮಚಂದ್ರ ಗಾಡ್ಗೀಳ್ ಅವರ ತಂದೆ. ತಾಯಿ ಪ್ರಮೀಳಾ ಗಾಡ್ಗೀಳ್.
- 1963ರಲ್ಲಿ ಫರ್ಗ್ಯೂಸನ್ ಕಾಲೇಜಿನಿಂದ ಜೀವಶಾಸ್ತ್ರದಲ್ಲಿ ಪದವಿ, 1965ರಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದ ಪ್ರಾಣಿಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1969ರಲ್ಲಿ ಪಿಎಚ್‌.ಡಿ ಅಧ್ಯಯನಕ್ಕಾಗಿ ಹಾರ್ವರ್ಡ್‌ ವಿಶ್ವದ್ಯಾಲಯ ಸೇರಿದ ಅವರು, ಅಲ್ಲಿ ಗಣಿತ, ಪರಿಸರ ವಿಜ್ಞಾನ ಮತ್ತು ಪ್ರಾಣಿಗಳ ನಡವಳಿಕೆ ಕುರಿತು ಅಧ್ಯಯನ ನಡೆಸಿದರು.
- ಹಾರ್ವರ್ಡ್‌ ವಿಶ್ವದ್ಯಾಲಯದಿಂದ ಪಿಎಚ್‌.ಡಿ ಪಡೆದು, 1971ರಲ್ಲಿ ಭಾರತಕ್ಕೆ ಮರಳಿದ ಗಾಡ್ಗೀಳ್, ಪುಣೆಯ ಅಗರ್ಕರ್ ಸಂಶೋಧನಾ ಸಂಸ್ಥೆಯಲ್ಲಿ ವಿಜ್ಞಾನ ಅಧಿಕಾರಿಯಾಗಿ ಸೇರಿದರು. ಅಲ್ಲಿ ಎರಡು ವರ್ಷ ಕಾರ್ಯನಿರ್ವಹಿಸಿದರು.
- 1973ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯನ್ನುಸೇರಿದರು. ಬಳಿಕ ಪರಿಸರ ವಿಜ್ಞಾನಗಳ ಕೇಂದ್ರ, ಸೆಂಟರ್ ಫಾರ್ ಥಿಯರಿಟಿಕಲ್ ಸ್ಟಡೀಸ್ ಸ್ಥಾಪಿಸುವ ಮೂಲಕ ಭಾರತದಲ್ಲಿ ಆಧುನಿಕ ಪರಿಸರ ವಿಜ್ಞಾನ ಸಂಶೋಧನೆಗಳಿಗೆ ಅಡಿಗಲ್ಲು ಹಾಕಿದರು.
- ಜೀವವೈವಿಧ್ಯದ ದೃಷ್ಟಿಯಿಂದ ದುರ್ಬಲವಾದ ಭಾರತದ ವಿವಿಧ ಪ್ರದೇಶಗಳ ಅಧ್ಯಯನಕ್ಕಾಗಿ ಸರ್ಕಾರ ರಚಿಸಿದ್ದ ತಜ್ಞರ ಸಮಿತಿಯ ಅಧ್ಯಕ್ಷರಾಗಿ ಗಾಡ್ಗೀಳ್ ಕಾರ್ಯನಿರ್ವಹಿಸಿದ್ದರು.
- ಜನಸಂಖ್ಯೆ ಹೆಚ್ಚಳ, ಹವಾಮಾನ ವೈಪರೀತ್ಯ, ಮಾನವ ಹಸ್ತಕ್ಷೇಪ, ಅವೈಜ್ಞಾನಿಕ ಅಭಿವೃದ್ಧಿ ಚಟುವಟಿಕೆಗಳಿಂದ ಪಶ್ಚಿಮ ಘಟ್ಟಗಳ ಮೇಲಾಗುತ್ತಿರುವ ಪರಿಣಾಮ ಕುರಿತು ಅವರು ಅಧ್ಯಯನ ನಡೆಸಿದ್ದರು.
- ಡಬ್ಲ್ಯುಜಿಇಇಪಿ ಅಧ್ಯಕ್ಷರಾಗಿದ್ದ ಗಾಡ್ಗೀಳ್, 2010ರಲ್ಲಿ ಪಶ್ಚಿಮ ಘಟ್ಟದ ಬಹು ದೊಡ್ಡ ಭಾಗವನ್ನು 'ಪರಿಸರ ಸೂಕ್ಷ್ಮ ಪ್ರದೇಶ' ಎಂದು ಘೋಷಿಸುವಂತೆ ಶಿಫಾರಸು ಮಾಡಿ ಮಹತ್ವದ ವರದಿ ಸಲ್ಲಿಸಿದ್ದರು.
- ಗಾಡ್ಗೀಳ್ ವರದಿಯು ತೀವ್ರ ಚರ್ಚೆಗೆ ಕಾರಣವಾದರೂ ಇದನ್ನು ಭಾರತದ ಪರಿಸರ ಸಂರಕ್ಷಣೆಯಲ್ಲಿ ಮಹತ್ವದ ಮೈಲಿಗಲ್ಲು ಎಂದೇ ಗುರುತಿಸಲಾಗಿದೆ.
- ಗಾಡ್ಗೀಳ್ ಅವರು ಪ್ರಧಾನಿಯವರ ವೈಜ್ಞಾನಿಕ ಸಲಹಾ ಮಂಡಳಿ, ರಾಷ್ಟ್ರೀಯ ಸಲಹಾ ಸಮಿತಿ, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಸೇರಿದಂತೆ ಹಲವು ರಾಷ್ಟ್ರೀಯ, ಅಂತರರಾಷ್ಟ್ರೀಯ ಉನ್ನತ ಮಟ್ಟದ ಸಮಿತಿಗಳಲ್ಲೂ ಕಾರ್ಯನಿರ್ವಹಿಸಿದ್ದರು.
- ಐಐಎಸ್‌ಸಿಯಿಂದ 2004ರಲ್ಲಿ ನಿವೃತ್ತರಾದ ಗಾಡ್ಗೀಳ್ ಅವರು ಬಳಿಕ ಪುಣೆಯ ಅಗರ್ಕರ್ ಸಂಶೋಧನಾ ಕೇಂದ್ರ ಮತ್ತು ಗೋವಾ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ, ಶೈಕ್ಷಣಿಕ ಕಾರ್ಯ ಮುಂದುವರಿಸಿದರು.
- ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಗಾಡ್ಗೀಳ್ ಅವರು ನಡೆಸಿದ ಪ್ರಯತ್ನಗಳಿಗಾಗಿ 2024ರಲ್ಲಿ ವಿಶ್ವಸಂಸ್ಥೆಯು ಅವರಿಗೆ 'ಚಾಂಪಿಯನ್ ಆಫ್ ದ ಅರ್ಥ್' ಪುರಸ್ಕಾರ ನೀಡಿ ಗೌರವಿಸಿತ್ತು.
- 1981ರಲ್ಲಿ ಪದ್ಮಶ್ರೀ, 2006ರಲ್ಲಿ ಪದ್ಮವಿಭೂಷಣ, ಶಾಂತಿ ಸ್ವರೂಪ ಭಟ್ನಾಗರ್ ಪುರಸ್ಕಾರ, ವೋಲ್ವೊ ಪರಿಸರ ಪ್ರಶಸ್ತಿ, ಟೇಲರ್ ಪರಿಸರ ಸಾಧಕ ಪ್ರಶಸ್ತಿ ಸೇರಿದಂತೆ ಗಾಡ್ಗೀಳ್ ಅವರಿಗೆ ಹಲವು ರಾಷ್ಟ್ರೀಯ, ಅಂತರರಾಷ್ಟ್ರೀಯ ಪುರಸ್ಕಾರಗಳು ಲಭಿಸಿವೆ.
- ಸಂಶೋಧಕ ಹಾಗೂ ಬರಹಗಾರರೂ ಆಗಿದ್ದ ಗಾಡ್ಗೀಳ್ ಅವರು, 'ದಿಸ್ ಫಿಶರ್ಡ್‌ ಲ್ಯಾಂಡ್' ಮತ್ತು 'ಎಕಾಲಜಿ ಆ್ಯಂಡ್ ಈಕ್ವಿಟಿ' ಸೇರಿದಂತೆ ಹಲವು ಕೃತಿಗಳಿಗೆ ಸಹ ಲೇಖಕರಾಗಿದ್ದಾರೆ. 250ಕ್ಕೂ ಹೆಚ್ಚು ವೈಜ್ಞಾನಿಕ ಪ್ರಬಂಧಗಳನ್ನು ಅವರು ಮಂಡಿಸಿದ್ದರು.
- ಪರಿಸರ ಸಂರಕ್ಷಣೆ ಕುರಿತು ಇಂಗ್ಲಿಷ್ ಮತ್ತು ಮರಾಠಿ ಪತ್ರಿಕೆಗಳಲ್ಲಿ ಅವರು ನಿಯಮಿತವಾಗಿ ಅಂಕಣಗಳನ್ನು ಬರೆದಿದ್ದರು.

ಚಿಟಿಕೆ ಸುದ್ದಿ

ಸಿಯುಕೆ ಪ್ರವೇಶ: ಅರ್ಜಿ ಆಹ್ವಾನ

ಕಲಬುರಗಿ: ಇಲ್ಲಿಗೆ ಸಮೀಪದ ಕಡಗಂಚಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ 15 ಸ್ನಾತಕ ಪದವಿ ಕೋರ್ಸ್‌ಗಳಿಗೆ 2026ನೇ ಸಾಲಿನ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

'ಜನವರಿ 31ರ ತನಕ ಅರ್ಜಿಗಳ ಸಲ್ಲಿಕೆಗೆ ಅವಕಾಶವಿದೆ. ಪಿಯು ಮುಗಿಸಿದ ಹಾಗೂ ದ್ವಿತೀಯ ಪಿಯು ಓದುತ್ತಿರುವ ಆಸಕ್ತ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ (https://cuet.nta.nic.in/) ಅರ್ಜಿ ಸಲ್ಲಿಸಬಹುದು' ಎಂದು ವಿವಿಯ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಸಾಮಾನ್ಯ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆ ಮೂಲಕ ಕೋರ್ಸ್‌ಗಳಿಗೆ ಪ್ರವೇಶಾತಿ ನೀಡಲಾಗುವುದು ಎಂದರು. ಹೆಚ್ಚಿನ ಮಾಹಿತಿಗೆ https://nta.ac.in ಹಾಗೂ http://cuet.nta.nic.in/ ಜಾಲತಾಣ ನೋಡಬಹುದು.

ಗಾಯಕ ಶ್ರೀಪಾದ ಹೆಗಡೆಗೆ ಪ್ರಶಸ್ತಿ

ಶ್ರೀಪಾದ ಹೆಗಡೆ

ಧಾರವಾಡ: ನಗರದ ಭಾರತೀಯ ಸಂಗೀತ ವಿದ್ಯಾಲಯದ 'ಸ್ವರ ಗಂಧರ್ವ' ಪ್ರಶಸ್ತಿಗೆ ಧಾರವಾಡದ ಹಿಂದೂಸ್ತಾನಿ ಗಾಯಕ ಶ್ರೀಪಾದ ಹೆಗಡೆ ಕಂಪ್ಲಿ ಆಯ್ಕೆ ಆಗಿದ್ದಾರೆ.

ಪ್ರಶಸ್ತಿಯು ₹ 1 ಲಕ್ಷ ನಗದು, ಸ್ಮರಣಿಕೆ ಒಳಗೊಂಡಿದೆ. ಜನವರಿ 11ರಂದು ಧಾರವಾಡದಲ್ಲಿ ನಡೆಯುವ ಪಂಡಿತ ಭೀಮಸೇನ ಜೋಶಿ ಸ್ಮರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮದುವೆ ಮಾಡದ್ದಕ್ಕೆ ತಂದೆಯನ್ನು ಕೊಂದ ಮಗ!

ಹೊಸದುರ್ಗ (ಚಿತ್ರದುರ್ಗ ಜಿಲ್ಲೆ): ವಯಸ್ಸು ಮೀರುತ್ತಿದ್ದರೂ ಮದುವೆ ಮಾಡುತ್ತಿಲ್ಲ ಎಂದು ಆಕ್ರೋಶಗೊಂಡ ಪುತ್ರನೊಬ್ಬ ತನ್ನ ತಂದೆಯನ್ನು ಕೊಲೆ ಮಾಡಿರುವ ಘಟನೆ ತಾಲ್ಲೂಕಿನ ಅತ್ತಿಘಟ್ಟದಲ್ಲಿ ಬುಧವಾರ ತಡರಾತ್ರಿ ನಡೆದಿದೆ.

ಸಣ್ಣನಿಂಗಪ್ಪ (65) ಕೊಲೆಯಾದ ವ್ಯಕ್ತಿ. ಅವರ ಪುತ್ರ ನಿಂಗರಾಜು (35) ಆರೋಪಿ. ಮೊದಲ ಹೆಂಡತಿ ನಿಧನದ ನಂತರ ಸಣ್ಣನಿಂಗಪ್ಪ ಎರಡನೇ ಮದುವೆಯಾಗಿದ್ದರು. ಮೊದಲ ಪತ್ನಿಗೆ ಒಬ್ಬ ಮಗ, ಮಗಳು ಇದ್ದು, ಇಬ್ಬರಿಗೂ ವಿವಾಹವಾಗಿದೆ. ನಿಂಗರಾಜು ಎರಡನೇ ಪತ್ನಿಯ ಪುತ್ರ.

ಕೃಷಿಕ ನಿಂಗರಾಜು ಮದುವೆ ಮಾಡುವಂತೆ ತಂದೆಗೆ ಕೇಳುತ್ತಿದ್ದ. ಈ ವಿಚಾರವಾಗಿ ತಂದೆ– ಮಗನ ನಡುವೆ ಬುಧವಾರ ರಾತ್ರಿ ಜಗಳವಾಗಿತ್ತು. ರಾತ್ರಿ ಸಣ್ಣನಿಂಗಪ್ಪ ಮಲಗಿದ್ದಾಗ, ನಿಂಗರಾಜು ಕಬ್ಬಿಣದ ರಾಡ್‌ನಿಂದ ಹೊಡೆದಿದ್ದಾನೆ. ಗಾಯಗೊಂಡ ಸಣ್ಣನಿಂಗಪ್ಪರನ್ನು ಪತ್ನಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಚಿಕಿತ್ಸೆಗೆ ಸ್ಪಂದಿಸದೇ ಸಣ್ಣಲಿಂಗಪ್ಪ ಮೃತಪಟ್ಟರು. ಹೊಸದುರ್ಗ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೇರಳ ಸರ್ಕಾರದ ನಡೆಗೆ ಕನ್ನಡಿಗರ ಒಕ್ಕೊರಲ ವಿರೋಧ

'ಮಲಯಾಳ ಕಡ್ಡಾಯಕ್ಕೆ ಆಕ್ಷೇಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇರಳದ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಪ್ರಥಮ ಭಾಷೆಯಾಗಿ ಮಲಯಾಳ ಕಲಿಕೆ ಕಡ್ಡಾಯಗೊಳಿಸುವ ಅಲ್ಲಿನ ಸರ್ಕಾರದ ಪ್ರಸ್ತಾಪಿತ 'ಮಲಯಾಳಿ ಭಾಷಾ ಮಸೂದೆ-2025' ಸಂವಿಧಾನ ಖಾತರಿ ಮಾಡಿರುವ ಭಾಷಾ ಸ್ವಾತಂತ್ರ್ಯದ ಮೇಲಿನ ಪ್ರಹಾರ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಈ ಕುರಿತು 'ಎಕ್ಸ್' ಮಾಡಿರುವ ಅವರು, 'ಕೇರಳ ವಿಧಾನಸಭೆ ಅಂಗೀಕರಿಸಿರುವ ಈ ಮಸೂದೆಯನ್ನು ತಕ್ಷಣ ಹಿಂದೆಗೆದುಕೊಳ್ಳಬೇಕು' ಎಂದು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ಆಗ್ರಹಿಸಿದ್ದಾರೆ.

'ಈ ಮಸೂದೆಯನ್ನು ಕೇರಳ ಸರ್ಕಾರ ಜಾರಿಗೊಳಿಸಲು ಹೊರಟರೆ ಕನ್ನಡಿಗರು ಒಕ್ಕೊರಲಿನಿಂದ ವಿರೋಧಿಸಲಿದ್ದಾರೆ. ಕಾಸರಗೋಡಿನ ಕನ್ನಡಿಗರ ಜೊತೆ ನಿಂತು ಅವರ ಭಾಷಾ ಸ್ವಾತಂತ್ರ್ಯದ ರಕ್ಷಣೆಗೆ ಬೆಂಬಲ ನೀಡಲಿದ್ದಾರೆ' ಎಂದಿದ್ದಾರೆ.

'ಇಂತಹದ್ದೊಂದು ಕಾನೂನು ಜಾರಿಗೆ ಬಂದರೆ ಕೇರಳದ ಗಡಿಜಿಲ್ಲೆಗಳಲ್ಲಿ ಮುಖ್ಯವಾಗಿ ಕಾಸರಗೋಡಿನಲ್ಲಿ ವಾಸಿಸುತ್ತಿರುವ ಕನ್ನಡಿಗರು ಮಾತೃಭಾಷೆಯನ್ನು ಕಲಿಯುವ ಅವಕಾಶದಿಂದ ವಂಚಿತರಾಗಲಿದ್ದಾರೆ. ಭಾಷಾ ಅಲ್ಪಸಂಖ್ಯಾತರ ಮೂಲಭೂತ ಹಕ್ಕನ್ನು ದಮನ ಮಾಡುವ ಇಂತಹ ನಡೆಯನ್ನು ಕೇರಳದ ಕಮ್ಯುನಿಸ್ಟ್ ಸರ್ಕಾರದಿಂದ ನಿರೀಕ್ಷಿಸಿರಲಿಲ್ಲ' ಎಂದಿದ್ದಾರೆ.

'ಕಾಸರಗೋಡು ಆಡಳಿತಾತ್ಮಕವಾಗಿ ಕೇರಳಕ್ಕೆ ಸೇರಿದ್ದರೂ ಭಾವನಾತ್ಮಕವಾಗಿ ಕರ್ನಾಟಕ ರಾಜ್ಯಕ್ಕೆ ಸೇರಿದೆ. ಅಲ್ಲಿನ ಜನ ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯದ ಜೊತೆ ಮಿಳಿತವಾಗಿದ್ದಾರೆ. ಅವರು ಕರ್ನಾಟಕದ ಕನ್ನಡಿಗರಿಗಿಂತ ಕಡಿಮೆ ಕನ್ನಡಿಗರೇನಲ್ಲ. ಅವರ ಹಿತ ರಕ್ಷಿಸುವುದು ನಮ್ಮ ಸರ್ಕಾರದ ಕರ್ತವ್ಯ. ವೈವಿಧ್ಯತೆಯಲ್ಲಿ ಏಕತೆ ಕಾಣುವ ಭಾರತದ ಪ್ರತಿಯೊಬ್ಬ ಪ್ರಜೆಗೂ ಅವರ ಮಾತೃಭಾಷೆಯಲ್ಲಿ ಕಲಿಯುವ ಸ್ವಾತಂತ್ರ್ಯ ಇದೆ' ಎಂದೂ ಹೇಳಿದ್ದಾರೆ.

'ಭಾಷಾ ಅಲ್ಪಸಂಖ್ಯಾತರಿಗೆ ಮಾತೃಭಾಷೆ ಎನ್ನುವುದು ಕೇವಲ ಭಾಷೆಯಲ್ಲ. ಅದು ಘನತೆಯ ಬದುಕು ನೀಡುವ ಅಸ್ಮಿತೆ. ಮಾತೃಭಾಷೆಯಲ್ಲಿ ಕಲಿಯುವ ಮಕ್ಕಳು ಸುಲಭದಲ್ಲಿ ವಿಷಯಗಳನ್ನು ಗ್ರಹಿಸುತ್ತಾರೆ ಎನ್ನುವುದು ವೈಜ್ಞಾನಿಕವಾಗಿ ಸಾಬೀತಾಗಿದೆ. ಅವರ ಮೇಲೆ ಅನ್ಯಭಾಷೆ ಹೇರುವುದರಿಂದ ಕಲಿಕಾ ಸಾಮರ್ಥ್ಯವನ್ನು ಕುಂದಿಸುವುದು ಮಾತ್ರವಲ್ಲ, ಒಂದು ಸ್ವತಂತ್ರ ಭಾಷೆಯ ಅವಸಾನಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

'ಕಾಸರಗೋಡು ಜಿಲ್ಲೆಯ ಶೇ 70ರಷ್ಟು ವಿದ್ಯಾರ್ಥಿಗಳು ಕನ್ನಡ ಭಾಷೆ, ಕನ್ನಡ ಮಾಧ್ಯಮದಲ್ಲಿಯೇ ಕಲಿಯಲು ಬಯಸುತ್ತಾರೆ ಎಂಬುದು ಅಲ್ಲಿನ ಕನ್ನಡಿಗರ ಒಕ್ಕೊರಲ ಅಭಿಪ್ರಾಯ. ಯಾವುದೇ ಒಂದು ಭಾಷೆ ಮತ್ತೊಂದು ಭಾಷೆಯ ವಿರುದ್ಧವಾಗಿ ಇರುವುದಿಲ್ಲ. ಭಾರತ ಬಹುಭಾಷೆ, ಬಹುಸಂಸ್ಕೃತಿ, ಬಹುಧರ್ಮದ ತೊಟ್ಟಿಲು. ಈ ಬಹುತ್ವದ ವಾತಾವರಣಕ್ಕೆ ಧಕ್ಕೆ ಉಂಟು ಮಾಡುವ ಪ್ರಯತ್ನ ಅಪಾಯಕಾರಿ' ಎಂದಿದ್ದಾರೆ.

'ಜೋಶಿ ವಿರುದ್ಧ ನ್ಯಾಯಾಂಗ ತನಿಖೆ, ಪರಿಶೀಲಿಸಿ'

ಪ್ರಜಾವಾಣಿ ವಾರ್ತೆ

ಮಹೇಶ ಜೋಶಿ

ಬೆಂಗಳೂರು: ಮಹೇಶ ಜೋಶಿ ಅವರು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷರಾಗಿದ್ದ ಅವಧಿಯ ವ್ಯವಹಾರಗಳ ಬಗೆಗಿನ ತನಿಖೆಗೆ, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಆಯೋಗ ರಚಿಸುವ ಬಗ್ಗೆ ವರದಿ ನೀಡಿ ಎಂದು ಮುಖ್ಯ ಕಾರ್ಯದರ್ಶಿಗೆ ರಾಜ್ಯಪಾಲರು ಸೂಚಿಸಿದ್ದಾರೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಬುಧವಾರವಷ್ಟೇ ಭೇಟಿ ಮಾಡಿದ್ದ ಮಹೇಶ ಜೋಶಿ ಅವರು ಈ ಸಂಬಂಧ ಮನವಿ ಸಲ್ಲಿಸಿದ್ದರು.

'ಕೆಲವರು ದುರುದ್ದೇಶದಿಂದ ಕಸಾಪ, ನನ್ನ ಮೇಲೆ ಮತ್ತು ಕಾರ್ಯಕಾರಿ ಸಮಿತಿಯ ವಿರುದ್ಧ ಅಪಪ್ರಚಾರ ಮಾಡಿಸುತ್ತಾ, ನಿರಂತರ ದೂರು ನೀಡುತ್ತಿದ್ದಾರೆ. ಕಸಾಪ ಹಾಗೂ ನನ್ನನ್ನು ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಿಸಲು ಭಗೀರಥ ಪ್ರಯತ್ನ ಮಾಡುತ್ತಿದ್ದಾರೆ. ಅಂತಹವರು ನೀಡಿರುವ ದೂರು ಆಧರಿಸಿ ವಿಚಾರಣಾಧಿಕಾರಿಗಳನ್ನು ನೇಮಿಸಲಾಗಿದೆ. ವಿಚಾರಣಾಧಿಕಾರಿಯು ವಿಚಾರಣೆ ನಡೆಸದೆ ವರದಿ ನೀಡುವ ಬಗ್ಗೆ ಅನುಮಾನವಿದೆ. ಹೀಗಾಗಿ, ನ್ಯಾಯಾಂಗ ತನಿಖೆ ನಡೆಸಬೇಕು' ಎಂದು ಮಹೇಶ ಜೋಶಿ ಕೋರಿದ್ದರು.

ಈ ಬಗ್ಗೆ ಮುಖ್ಯ ಕಾರ್ಯದರ್ಶಿಗೆ ರಾಜ್ಯಪಾಲರು ಪತ್ರ ಬರೆದಿದ್ದು, ಮಹೇಶ ಜೋಶಿ ಅವರ ಮನವಿ ಬಗ್ಗೆ ವಿವರಿಸಿದ್ದಾರೆ.

ಕಸಾಪ ಅಧ್ಯಕ್ಷ ಸ್ಥಾನದಿಂದ ಅಮಾನತುಗೊಂಡಿರುವ ಮಹೇಶ ಜೋಶಿ ಅವರು ತಮ್ಮ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ನ್ಯಾಯಾಂಗ ತನಿಖೆಗೆ ಆಗ್ರಹಿಸಿರುವುದು ಹಾಸ್ಯಾಸ್ಪದ
ನೇ.ಭ. ರಾಮಲಿಂಗಶೆಟ್ಟಿ, ಪರಿಷತ್ತಿನ ನಿಕಟಪೂರ್ವ ಗೌರವ ಕಾರ್ಯದರ್ಶಿ

---

31 ಜಿಲ್ಲೆಗಳಲ್ಲೂ 'ಅಕ್ಕ ಪಡೆ' ನಿಯೋಜನೆ

5 ಪೊಲೀಸ್ ಕಮಿಷನರೇಟ್‌ಗಳಲ್ಲೂ ಸ್ಥಾಪನೆ: ಸಚಿವ ಸಂಪುಟ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 31 ಜಿಲ್ಲೆ ಮತ್ತು 5 ಪೊಲೀಸ್ ಕಮಿಷನರೇಟ್‌ಗಳ ವ್ಯಾಪ್ತಿಯಲ್ಲಿ ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗಾಗಿ 'ಅಕ್ಕ ಪಡೆ'ಗಳನ್ನು ನಿಯೋಜಿಸಲು ಸರ್ಕಾರ ತೀರ್ಮಾನಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಗಿದೆ. ಸಭೆ ಬಳಿಕ, ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದರು. ಕೆಲವು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗಿದ್ದು, ಈಗ ಎಲ್ಲ ಜಿಲ್ಲೆ ಮತ್ತು ಕಮಿಷನರೇಟ್‌ಗಳ ವ್ಯಾಪ್ತಿಗೂ ವಿಸ್ತರಿಸಲು ನಿರ್ಧರಿಸಲಾಗಿದೆ ಎಂದರು.

ದೌರ್ಜನ್ಯ, ಹಿಂಸೆ, ನಿರ್ಲಕ್ಷ್ಯ ಅಥವಾ ಶೋಷಣೆ ಎದುರಿಸುತ್ತಿರುವ ಮಹಿಳೆಯರು ಮಕ್ಕಳಿಗೆ ಸಕಾಲದಲ್ಲಿ ನೆರವಿನ ಹಸ್ತ ಚಾಚುವುದರ ಜತೆಗೆ ಭಯಮುಕ್ತ ವಾತಾವರಣ ಸೃಷ್ಟಿಸುವುದೂ ಈ ಪಡೆಯ ಮುಖ್ಯ ಉದ್ದೇಶ. ಅಲ್ಲದೇ, ಶಿಕ್ಷಣದ ಮೂಲಕ ಹಕ್ಕುಗಳು, ಕಾನೂನುಗಳು, ಸುರಕ್ಷತಾ ಕ್ರಮಗಳ ಬಗ್ಗೆ ಅರಿವು ಮೂಡಿಸಲಾಗುವುದು ಎಂದು ಅವರು ವಿವರಿಸಿದರು.

ಪ್ರಮುಖ ತೀರ್ಮಾನಗಳು:

- ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ಬೆಂಗಳೂರು ಸಂಕೀರ್ಣಕ್ಕೆ ₹17.70 ಕೋಟಿ ಮೊತ್ತದ ಹೊಸ ಸಾಬೂನು ತಯಾರಿಸುವ ಯಂತ್ರ ಖರೀದಿ
- ಕೆಕೆಆರ್‌ಡಿಬಿ ಅನುದಾನದಲ್ಲಿ ಕಲಬುರಗಿಯಲ್ಲಿ ₹50 ಕೋಟಿ ವೆಚ್ಚದಲ್ಲಿ ಮೆಗಾ ಡೇರಿ ನಿರ್ಮಾಣ ಮತ್ತು ₹10 ಕೋಟಿ ವೆಚ್ಚದಲ್ಲಿ ಪ್ರಾದೇಶಿಕ ಸಹಕಾರ ಭವನ ಸ್ಥಾಪನೆ
- ರಾಜ್ಯದಾದ್ಯಂತ ₹127.40 ಕೋಟಿ ವೆಚ್ಚದಲ್ಲಿ 196 ಗ್ರಾಮೀಣ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಸ್ಥಾಪನೆಯ ಆದೇಶಕ್ಕೆ ಘಟನೋತ್ತರ ಅನುಮೋದನೆ
- ವಿವಿಧ ಕಾರಾಗೃಹಗಳಲ್ಲಿರುವ 33 ಜೀವಾವಧಿ ಶಿಕ್ಷಾ ಬಂದಿಗಳನ್ನು ಸನ್ನಡತೆ ಆಧಾರದ ಮೇಲೆ ಅವಧಿಪೂರ್ವ ಬಿಡುಗಡೆ ಮಾಡಲು ಒಪ್ಪಿಗೆ. ಇವರಲ್ಲಿ ಇಬ್ಬರು ಶಿಕ್ಷಾ ಬಂದಿಗಳನ್ನು ಕೇಂದ್ರ ಗೃಹ ಸಚಿವಾಲಯ ಅನುಮತಿ ನೀಡಿದ ನಂತರ ಬಿಡುಗಡೆಗೆ ತೀರ್ಮಾನ
- ಬೆಂಗಳೂರಿನ ಜಯನಗರದಲ್ಲಿ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ 2ನೇ ಹಂತದ ಕಟ್ಟಡ ಕಾಮಗಾರಿಗೆ ₹24 ಕೋಟಿ
- ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕಿನ 166 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ 3 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಗೆ ₹33.04 ಕೋಟಿ
- ಗುಂಡ್ಲುಪೇಟೆ ತಾಲ್ಲೂಕಿನ 131 ಗ್ರಾಮಗಳು ಮತ್ತು ಮಾರ್ಗ ಮಧ್ಯದ 32 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ 3 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಗೆ ₹27.28 ಕೋಟಿ
- ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಸರಪಾಡಿ ಮತ್ತು ಇತರೆ 95 ಜನವಸತಿ ಪ್ರದೇಶಗಳಿಗೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಗೆ ₹16.70 ಕೋಟಿ
- ಕಲಬುರಗಿ ವಿಶ್ವವಿದ್ಯಾಲಯ ಆವರಣದಲ್ಲಿ ಕೆಕೆಆರ್‌ಡಿಬಿ ಅನುದಾನದಿಂದ ಎರಡನೇ ಹಂತದಲ್ಲಿ ₹66.75 ಕೋಟಿ ವೆಚ್ಚದಲ್ಲಿ ಜಿಟಿಟಿಸಿ ಕೇಂದ್ರ ಸ್ಥಾಪನೆ
- ಮೈಸೂರು ಮತ್ತು ಸುತ್ತಮುತ್ತಲಿನ ಭಾಗದ ರೇಷ್ಮೆ ಬೆಳೆಗಾರರಿಗೆ ಅನುಕೂಲವಾಗುವಂತೆ ₹20 ಕೋಟಿ ವೆಚ್ಚದಲ್ಲಿ ನಬಾರ್ಡ್‌ ಸಹಯೋಗದಲ್ಲಿ ಮೈಸೂರಿನಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆ ಸ್ಥಾಪನೆ
- ಕಲಬುರಗಿ ಮಹಾನಗರ ಪಾಲಿಕೆ ವ್ಯಾಪ್ತಿಯ ವಿವಿಧ ಸ್ಥಳಗಳಲ್ಲಿ ಮಹಾತ್ಮಗಾಂಧಿ, ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ, ರಾಜೀವ್‌ಗಾಂಧಿ ಪುತ್ಥಳಿಗಳನ್ನು ಸ್ಥಾಪಿಸಲು ಒಪ್ಪಿಗೆ

11 ಮಸೂದೆಗಳಿಗೆ ರಾಜ್ಯಪಾಲರ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗಳ ಒಳ ಮೀಸಲಾತಿಯ ಪ್ರಮಾಣ ಮಾರ್ಪಡಿಸುವಂತೆ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಲು, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಆಯೋಗಕ್ಕೆ ಅಧಿಕಾರ ನೀಡುವ ತಿದ್ದುಪಡಿ ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಸರ್ಕಾರದಿಂದ ಹೊಸ ದತ್ತಾಂಶ ಅಥವಾ ಮಾಹಿತಿ ಸ್ವೀಕರಿಸಿದ ಬಳಿಕ, ಪರಿಶಿಷ್ಟ ಜಾತಿಯ ವಿವಿಧ ಪ್ರವರ್ಗಗಳಿಗೆ ಒಳ ಮೀಸಲಾತಿ ಹಂಚಿಕೆ ಪ್ರಮಾಣದಲ್ಲಿ ಬದಲಾವಣೆ ಮಾಡಿ ಎಂದು ಆಯೋಗವು ಶಿಫಾರಸು ಮಾಡಬಹುದಾಗಿದೆ.

ಇತರ ಮಸೂದೆಗಳು: ಕರ್ನಾಟಕ ಬಾಡಿಗೆ ತಿದ್ದುಪಡಿ ಮಸೂದೆ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ತಿದ್ದುಪಡಿ ಮಸೂದೆ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ತಿದ್ದುಪಡಿ ಮಸೂದೆ, ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ತಿದ್ದುಪಡಿ ಮಸೂದೆ, ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ತಿದ್ದುಪಡಿ ಮಸೂದೆ.

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ತಿದ್ದುಪಡಿ ಮಸೂದೆ, ಕರ್ನಾಟಕ ಭೂ ಕಂದಾಯ 2ನೇ ತಿದ್ದುಪಡಿ ಮಸೂದೆ, ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮಸೂದೆ, ಕರ್ನಾಟಕ ವಿಶ್ವವಿದ್ಯಾಲಯ ಎರಡನೇ ತಿದ್ದುಪಡಿ ಮಸೂದೆ, ಚಂದ್ರಗುತ್ತಿ ಶ್ರೀರೇಣುಕಾಂಬ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ.

ಡಿಸಿಎಂಗೆ ಮಸೂದೆ: ರಾಜ್ಯಪಾಲರು ಹಿಂತಿರುಗಿಸಿದ್ದ ಎರಡು ಮಸೂದೆಗಳ ಪೈಕಿ 'ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಮಸೂದೆ'ಯನ್ನು ಉಪ ಮುಖ್ಯಮಂತ್ರಿಯವರಿಗೆ ಕಳುಹಿಸಲಾಗಿದೆ. 'ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆ'ಯನ್ನು ಹೆಚ್ಚಿನ ವಿವರಣೆ ಪಡೆಯಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಕಳುಹಿಸಲಾಗಿದೆ.

ವಿವಿಧ ಕ್ಷೇತ್ರಗಳ ಪ್ರತಿನಿಧಿಗಳಿಂದ ವಿಶಿಷ್ಟ ಪ್ರಯತ್ನ- ಧ್ವಜ ಮಾರಾಟದ ಕುರಿತು ವಿವಿಧ ಚಟುವಟಿಕೆ

ಖಾದಿ ರಾಷ್ಟ್ರಧ್ವಜ ಖರೀದಿಗೆ ವಾಟ್ಸ್‌ಆ್ಯಪ್ ಜಾಗೃತಿ

• ನಾಗರಾಜ್ ಬಿ.ಎನ್

ಹುಬ್ಬಳ್ಳಿ: ಖಾದಿ ರಾಷ್ಟ್ರಧ್ವಜ ಖರೀದಿಗೆ ಬೇಡಿಕೆ ಕುಸಿದ ಹಿನ್ನೆಲೆಯಲ್ಲಿ ಬೆಂಗೇರಿಯಲ್ಲಿ ಇರುವ ದೇಶದ ಏಕೈಕ ಅಧಿಕೃತ ರಾಷ್ಟ್ರಧ್ವಜ ಉತ್ಪಾದನಾ ಘಟಕವು ಅದರ ಉತ್ಪಾದನೆ ಸ್ಥಗಿತಗೊಳಿಸಿದೆ. ಆದರೆ, ಸಮಾನ ಮನಸ್ಕರ ತಂಡವೊಂದು ವಾಟ್ಸ್‌ಆ್ಯಪ್ ಗ್ರೂಪ್ ರಚಿಸಿಕೊಂಡು, ಖಾದಿ ರಾಷ್ಟ್ರಧ್ವಜ ಖರೀದಿಸಲು ಪ್ರೇರೇಪಿಸುತ್ತಿದೆ.

ವಾಟ್ಸ್‌ಆ್ಯಪ್ ಗ್ರೂಪ್‌ಗೆ 'ಖಾದಿ ರಾಷ್ಟ್ರಧ್ವಜ ಉತ್ತೇಜನಾ ಅಭಿಯಾನ' ಎಂದು ಹೆಸರಿಡಲಾಗಿದೆ. ರಾಜ್ಯದ ವಿವಿಧೆಡೆಯ 220ಕ್ಕೂ ಹೆಚ್ಚು ಮಂದಿ ಇದರಲ್ಲಿ ಇದ್ದಾರೆ. ಅವರಲ್ಲಿ ವೈದ್ಯರು, ಉದ್ಯಮಿಗಳು, ಸಾಹಿತಿಗಳು, ಚಿಂತಕರು ವಿವಿಧ ಸಂಘಸಂಸ್ಥೆಗಳ ಪದಾಧಿಕಾರಿಗಳು ಇದ್ದಾರೆ. ಖಾದಿ ರಾಷ್ಟ್ರಧ್ವಜ ಖರೀದಿಗೆ ಏನೆಲ್ಲ ಮಾಡಬಹುದು ಎಂಬ ಬಗ್ಗೆ ಗ್ರೂಪ್‌ನಲ್ಲಿ ಚರ್ಚೆ ಆಗುತ್ತದೆ.

ತಿರಂಗಾ ಮೆರವಣಿಗೆ, ಜನಪ್ರಿಯ ವ್ಯಕ್ತಿಗಳಿಂದ ಇನ್‌ಸ್ಟಾಗ್ರಾಮ್, ಫೇಸ್‌ಬುಕ್, ಎಕ್ಸ್‌ನಲ್ಲಿ ರೀಲ್ಸ್ ಮತ್ತು ಜಾಗೃತಿ ಸಂದೇಶ, ಧ್ವಜ ಖರೀದಿಸಿ ಶಾಲಾ–ಕಾಲೇಜುಗಳಿಗೆ ವಿತರಿಸುವುದು, ಕರಪತ್ರ ಮುದ್ರಿಸಿ ಹಂಚುವುದು, ಸಾಕ್ಷ್ಯಚಿತ್ರ ತಯಾರಿ, ಜಾಲತಾಣದಲ್ಲಿ ಅಭಿಪ್ರಾಯ ಸಂಗ್ರಹ, ಸರ್ಕಾರಿ ನೌಕರರಿಗೆ ಧ್ವಜ ಮಾರಾಟ ಹೀಗೆ ಬಗೆಬಗೆಯ ಚಟುವಟಿಕೆ ನಡೆಸಲು ಸಿದ್ಧತೆ ನಡೆದಿದೆ.

'ಧ್ವಜ ಸಂಹಿತೆಗೆ ತಿದ್ದುಪಡಿ ಮಾಡಿದ ಬಳಿಕ ಖಾದಿ ಧ್ವಜ ಖರೀದಿ ಕುಸಿದಿದೆ. ₹2 ಕೋಟಿ ಮೌಲ್ಯದ ರಾಷ್ಟ್ರಧ್ವಜಗಳು ಮಾರಾಟವಾಗಿಲ್ಲ. ಧ್ವಜ ತಯಾರಿಕಾ ಕೇಂದ್ರ ಮುಚ್ಚುವ ಸ್ಥಿತಿಗೆ ಬಂದಿದೆ. ಅದಕ್ಕಾಗಿ ಜನರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನ ನಡೆಸಿದ್ದೇವೆ' ಎಂದು 'ಖಾದಿ ರಾಷ್ಟ್ರಧ್ವಜ ಉತ್ತೇಜನಾ ಅಭಿಯಾನ' ವಾಟ್ಸ್‌ಆ್ಯಪ್ ಗ್ರೂಪ್‌ನ ಅಡ್ಮಿನ್ ಮತ್ತು ಖಾದಿ ರಾಷ್ಟ್ರಧ್ವಜ ಉತ್ತೇಜನಾ ಅಭಿಯಾನದ ಸಂಯೋಜಕ ಸಂತೋಷ ನಗರಗುಂದ ತಿಳಿಸಿದರು.

ಖಾದಿ ರಾಷ್ಟ್ರಧ್ವಜದ ಮಹತ್ವ ತಿಳಿಯಪಡಿಸುವುದು ಅಭಿಯಾನದ ಮುಖ್ಯ ಉದ್ದೇಶ. ಇದಕ್ಕೆ ಜನರು ಸಹಕರಿಸಿದರೆ ಉಪಯುಕ್ತವಾಗುತ್ತದೆ.
ಸಂತೋಷ ನಗರಗುಂದ, ಸಂಯೋಜಕ, ಖಾದಿ ರಾಷ್ಟ್ರಧ್ವಜ ಉತ್ತೇಜನಾ ಅಭಿಯಾನ

ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮುಖ್ಯಾಂಶಗಳು

- ಮಾರಾಟವಾಗದ ₹ 2 ಕೋಟಿ ಮೌಲ್ಯದ ರಾಷ್ಟ್ರಧ್ವಜಗಳು
- ರೀಲ್ಸ್, ಇನ್‌ಸ್ಟಾಗ್ರಾಮ್ ಮೂಲಕ ಮಾಹಿತಿ

ಖರೀದಿಗೆ ವೆಬ್‌ಸೈಟ್, ಕ್ಯುಆರ್ ಕೋಡ್

ದಿ ಗ್ರಾಮೋದ್ಯೋಗ ಘಟಕದ ಸಿಬ್ಬಂದಿ ರಾಷ್ಟ್ರಧ್ವಜಗಳನ್ನು ಪ್ರದರ್ಶಿಸಿದರು.

ಬೆಂಗೇರಿಯ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘದ ಆವರಣದಲ್ಲಿ ಖಾದಿ ರಾಷ್ಟ್ರಧ್ವಜ ಉತ್ತೇಜನ ಅಭಿಯಾನದ ಮುಖಂಡರು ಹಾಗೂ ಖಾದಿ ಗ್ರಾಮೋದ್ಯೋಗ ಸಂಘದ ಪದಾಧಿಕಾರಿಗಳು ಸೇರಿ 'ಖಾದಿ ತ್ರಿವರ್ಣ ಧ್ವಜ ಹಾರಿಸಿ, ಖಾದಿ ತ್ರಿವರ್ಣ ಧ್ವಜ ಖರೀದಿಸಿ' ಎಂಬ ಅಭಿಯಾನಕ್ಕೆ ಗುರುವಾರ ಚಾಲನೆ ನೀಡಿದರು. ವೆಬ್‌ಸೈಟ್ ಆರಂಭಿಸಿ, ಕ್ಯುಆರ್ ಕೋಡ್ ಕೂಡ ರೂಪಿಸಲಾಯಿತು.

ಈ ಅಭಿಯಾನದ ಮೊದಲನೇ ಹಂತವಾಗಿ ಖಾದಿ ರಾಷ್ಟ್ರಧ್ವಜಗಳಿಗೆ ಬೇಡಿಕೆ ಹೆಚ್ಚಿಸುವ ಕ್ರಮಗಳನ್ನು ಅನುಷ್ಠಾನ ಮಾಡಲು ನಿರ್ಧರಿಸಲಾಗಿದೆ. ಖಾದಿ ರಾಷ್ಟ್ರಧ್ವಜಗಳಿಗೆ ಈ-ಕಾಮರ್ಸ್ ಮೂಲಕ ದೇಶ ಮತ್ತು ಜಗತ್ತಿನಾದ್ಯಂತ ಮಾರಲು ಅಂತರ್ಜಾಲದ ಮೂಲಕ ಧ್ವಜಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಗಿದೆ.ವೆಬ್‌ಸೈಟ್ ವಿಳಾಸ: tinyurl.com/flykhaditricolour

---

ಜಯಮಾಲಾಗೆ ಡಾ.ರಾಜ್, ಸತ್ಯುಗೆ ಕಣಗಾಲ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಚಲನಚಿತ್ರ ಕ್ಷೇತ್ರದಲ್ಲಿನ 2020ನೇ ಹಾಗೂ 2021ನೇ ಸಾಲಿನ ಜೀವಮಾನ ಸಾಧನೆ ಪ್ರಶಸ್ತಿಗಳನ್ನು ಗುರುವಾರ ಘೋಷಿಸಿದೆ.

2020ನೇ ಸಾಲಿನ 'ಡಾ. ರಾಜಕುಮಾರ್ ಪ್ರಶಸ್ತಿ'ಗೆ ನಟಿ ಜಯಮಾಲಾ, 'ಪುಟ್ಟಣ್ಣ ಕಣಗಾಲ್ ಪ್ರಶಸ್ತಿ'ಗೆ ನಿರ್ದೇಶಕ ಎಂ.ಎಸ್. ಸತ್ಯು, 'ಡಾ.ವಿಷ್ಣುವರ್ಧನ್ ಪ್ರಶಸ್ತಿ'ಗೆ ಸ್ಥಿರ ಛಾಯಾಗ್ರಾಹಕ 'ಪ್ರಗತಿ' ಅಶ್ವತ್ಥನಾರಾಯಣ ಅವರನ್ನು ಆಯ್ಕೆ ಮಾಡಲಾಗಿದೆ.

2021ನೇ ಸಾಲಿನ 'ಡಾ. ರಾಜಕುಮಾರ್ ಪ್ರಶಸ್ತಿ'ಗೆ ನಿರ್ಮಾಪಕ ಸಾ.ರಾ. ಗೋವಿಂದು, 'ಪುಟ್ಟಣ್ಣ ಕಣಗಾಲ್ ಪ್ರಶಸ್ತಿ'ಗೆ ನಿರ್ದೇಶಕ ಕೆ. ಶಿವರುದ್ರಯ್ಯ, 'ಡಾ.ವಿಷ್ಣುವರ್ಧನ್ ಪ್ರಶಸ್ತಿ'ಗೆ ನಟ– ನಿರ್ಮಾಪಕ ಎಂ.ಕೆ. ಸುಂದರ್ ರಾಜ್ ಅವರನ್ನು ಆಯ್ಕೆ ಮಾಡಲಾಗಿದೆ.

ಈ ಮೂರೂ ಪ್ರಶಸ್ತಿಗಳು ತಲಾ ₹ 5 ಲಕ್ಷ ನಗದು ಮತ್ತು 50 ಗ್ರಾಂ ಚಿನ್ನದ ಪದಕವನ್ನು ಒಳಗೊಂಡಿದೆ.

ಜಯಮಾಲಾ

ಸುಂದರ್ ರಾಜ್

ಸಾ. ರಾ. ಗೋವಿಂದು

ಎಂ.ಎಸ್. ಸತ್ಯು

ಪ್ರಗತಿ ಅಶ್ವತ್ಥ ನಾರಾಯಣ


ಶಿವರುದ್ರಯ್ಯ

ಶುಕ್ರವಾರ, ಜನವರಿ 9, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 9 | ಪುಟ 16

prajavani.net prajavani • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 84,180 | ನಿಫ್ಟಿ 25,876 | $/₹ 89.90 | ಚಿನ್ನ (Std. 10g) ₹1,42,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,55,900 (ಬೆಂಗಳೂರು)

ಕ್ವಾರ್ಟರ್‌ಫೈನಲ್‌ಗೆ ಸಿಂಧು

ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಪಿ.ವಿ.ಸಿಂಧು ಅವರು ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಗುರುವಾರ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು

ಚಿನಕುರುಳಿ ಪ್ರಕಾಶ್ ಶೆಟ್ಟಿ

ಎಲ್ಲೆಡೆಯೂ 'ಎ' ಖಾತೆ

ನಗರ, ಪಟ್ಟಣ ವ್ಯಾಪ್ತಿಯಲ್ಲಿಯೂ 'ಬಿ' ಖಾತಾದಿಂದ ಬದಲಾವಣೆ: ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ರಚಿಸಿರುವ ಬಡಾವಣೆಗಳಲ್ಲಿನ 'ಬಿ'-ಖಾತಾ ನಿವೇಶನ, ಕಟ್ಟಡ, ಅಪಾರ್ಟ್‌ಮೆಂಟ್‌ಗಳಲ್ಲಿನ ಫ್ಲಾಟ್‌ಗಳಿಗೆ 'ಎ-ಖಾತಾ' ಸೌಲಭ್ಯ ಸಿಗಲಿದೆ.

ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ಈ ಎಲ್ಲ ಆಸ್ತಿಗಳಿಗೆ 'ಎ'-ಖಾತಾ ನೀಡಲು ಗುರುವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನ ತೆಗೆದುಕೊಂಡಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಈ ಸೌಲಭ್ಯವನ್ನು ಈಗಾಗಲೇ ನೀಡಲಾಗಿತ್ತು. ಈಗ, ರಾಜ್ಯದ ಎಲ್ಲ ನಗರ ಮತ್ತು ಪಟ್ಟಣಗಳ ವ್ಯಾಪ್ತಿಗೂ ಈ ಸವಲತ್ತು ವಿಸ್ತರಿಸಿದಂತಾಗಿದೆ.

ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು, 'ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961' ಅನ್ನು ಉಲ್ಲಂಘಿಸಿ ನಿರ್ಮಿಸಿರುವ ಅನಧಿಕೃತ ನಿವೇಶನ, ಕಟ್ಟಡ, ಅಪಾರ್ಟ್‌ಮೆಂಟ್‌ಗಳಲ್ಲಿನ ಫ್ಲಾಟ್‌ಗಳಿಗೆ ಮಾತ್ರ ಖಾತಾ ಪರಿವರ್ತನೆಗೆ ಅವಕಾಶ ನೀಡಲಾಗಿದೆ ಎಂದರು.

ಕಳೆದ ನವೆಂಬರ್‌ನಲ್ಲಿ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಖಾತಾ ಪರಿವರ್ತನೆಗೆ ಅವಕಾಶ ನೀಡಲಾಗಿತ್ತು. ಈಗ ಇತರ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೂ ವಿಸ್ತರಿಸಲಾಗಿದೆ. ಸುಮಾರು 10 ಲಕ್ಷ 'ಬಿ' ಖಾತಾ ಆಸ್ತಿಗಳಿವೆ. ಜಿಬಿಎ ವ್ಯಾಪ್ತಿಯಲ್ಲಿ ವಿಧಿಸಲಾಗಿದ್ದ ನಿಯಮಗಳನ್ನೇ ಉಳಿದ ಕಡೆಗಳಿಗೂ ಅನ್ವಯಿಸಲಾಗುವುದು. ಒತ್ತುವರಿ ಮತ್ತು ಉಲ್ಲಂಘನೆಯ ಪ್ರಮಾಣಕ್ಕೆ ಅನುಗುಣವಾಗಿ ದಂಡದ ಪ್ರಮಾಣವನ್ನು ತೀರ್ಮಾನಿಸಲಾಗುತ್ತದೆ. ಆ ಪ್ರಮಾಣ ಶೇ 5ರಿಂದ ಶೇ 30ರವರೆಗೂ ಆಗಬಹುದು. ಈ ಅಂಶಗಳನ್ನು ನಿಯಮದಲ್ಲಿ ಸ್ಪಷ್ಟಪಡಿಸಲಾಗುವುದು ಎಂದು ಅವರು ಹೇಳಿದರು.

▶10

'ಜಿ ರಾಮ್ ಜಿ' ಪ್ರಶ್ನಿಸಿ 'ಸುಪ್ರೀಂ' ಮೊರೆ

ನರೇಗಾ ಕಾಯ್ದೆ ರದ್ದುಪಡಿಸಿ 'ವಿಬಿ ಜಿ ರಾಮ್ ಜಿ' ಕಾಯ್ದೆಯನ್ನು ಅನುಷ್ಠಾನಗೊಳಿಸಲು ಮುಂದಾಗಿರುವ ಕೇಂದ್ರ ಸರ್ಕಾರದ ನಡೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಕಳೆದ ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ, ನರೇಗಾ ರದ್ದತಿಯ ಬಗ್ಗೆ ಸುದೀರ್ಘ ಚರ್ಚೆ ನಡೆದಿತ್ತು. ಕಾಯ್ದೆಯನ್ನು ವಿರೋಧಿಸುವ ನಿರ್ಣಯವನ್ನು ಕೈಗೊಳ್ಳಲಾಗಿತ್ತು.

ಗುರುವಾರ ಮಾತನಾಡಿದ ಸಚಿವ ಎಚ್.ಕೆ. ಪಾಟೀಲ, 'ಈ ಕುರಿತು ಅಡ್ವೊಕೇಟ್ ಜನರಲ್ ಜತೆ ಚರ್ಚಿಸಲಾಗಿದೆ. ಕಾನೂನು ಹೋರಾಟದ ಜತೆಗೆ ಜನತಾ ನ್ಯಾಯಾಲಯದಲ್ಲೂ ನಮ್ಮ ಹೋರಾಟ ಮುಂದುವರಿಸುತ್ತೇವೆ' ಎಂದು ಹೇಳಿದರು. ಈ ಕಾಯ್ದೆ ಅನುಷ್ಠಾನಗೊಳಿಸುವುದರಿಂದ ರಾಜ್ಯ ಮತ್ತು ರಾಜ್ಯದ ಜನರ ಮೇಲಾಗುವ ಪರಿಣಾಮಗಳ ಕುರಿತೂ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು ಎಂದರು.

ಸಭೆಯ ಪ್ರತಿಪಾದನೆ

- ಕಾಯ್ದೆಯು ಭಾರತದ ಸಂವಿಧಾನದ 21ನೇ ವಿಧಿಯಡಿ ಪ್ರತಿಪಾದಿಸಿರುವಂತೆ ಉದ್ಯೋಗ ಮತ್ತು ನಾಗರಿಕರ ಜೀವನೋಪಾಯದ ಹಕ್ಕು ಉಲ್ಲಂಘನೆ
- ಹೊಸ ಕಾಯ್ದೆಯು ಪಂಚಾಯತ್‌ಗಳ ನ್ಯಾಯ ಸಮ್ಮತ ಹಕ್ಕುಗಳನ್ನು ಕಸಿದುಕೊಳ್ಳುತ್ತದೆ. ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯ ಮನೋಭಾವಕ್ಕೆ ವಿರುದ್ಧವಾಗಿದೆ. ಸ್ಥಳೀಯ ಅಗತ್ಯಗಳ ಅನುಸಾರ ಕಾಮಗಾರಿ ಕೈಗೊಳ್ಳುವುದು ಸಾಧ್ಯವಾಗುವುದಿಲ್ಲ. ತಳಮಟ್ಟದ ಯೋಜನಾ ವಿಧಾನದಲ್ಲಿ ರಾಜಿ ಮಾಡಿಕೊಳ್ಳಬೇಕಾಗುತ್ತದೆ
- ರಾಜ್ಯಗಳ ಜತೆ ಸಮಾಲೋಚನೆ ನಡೆಸಿಲ್ಲ. ಶೇ 40ರಷ್ಟು ಮೊತ್ತವನ್ನು ರಾಜ್ಯಗಳು ಭರಿಸಬೇಕು ಎಂದು ಹೇಳಿದೆ. ಹೀಗಾಗಿ, ಈ ಕಾಯ್ದೆ ಒಕ್ಕೂಟ ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ
- ಗ್ರಾಮ ಪಂಚಾಯತ್‌ಗಳಿಗೆ ಸ್ಥಳೀಯ ಕಾಮಗಾರಿಗಳ ಆದ್ಯತೆಗೆ ಅನುಗುಣವಾಗಿ ಕೆಲಸ ಆಯ್ಕೆ ಮಾಡುವ ಸ್ವಾತಂತ್ರ್ಯವಿಲ್ಲ

ಗರ್ಭಾವಸ್ಥೆ ಮುಂದುವರಿಸಲು ಒತ್ತಡ ಸಲ್ಲ: ದೆಹಲಿ ಹೈಕೋರ್ಟ್ ಅಭಿಪ್ರಾಯ

ವಿವರ ಪುಟ ▶7

ಭಾರತದ ಮೇಲೆ ಶೇ 500 ಸುಂಕ ಮಸೂದೆಗೆ ಅಸ್ತು

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): ರಷ್ಯಾದಿಂದ ತೈಲ ಖರೀಸುವ ದೇಶಗಳ ಮೇಲೆ ಶೇ 500ರಷ್ಟು ಸುಂಕ ವಿಧಿಸಲು ಅವಕಾಶ ನೀಡುವ ಮಸೂದೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಪ್ಪಿಗೆ ಸೂಚಿಸಿದ್ದಾರೆ.

ರಷ್ಯಾ ಮೇಲೆ ಹೆಚ್ಚಿನ ನಿರ್ಬಂಧಗಳನ್ನು ಹೇರುವ ಈ ಮಸೂದೆಯು ರಷ್ಯಾದಿಂದ ಕಡಿಮೆ ಬೆಲೆಗೆ ಕಚ್ಚಾತೈಲ ಖರೀದಿಸುತ್ತಿರುವ ಭಾರತ, ಚೀನಾ ಮತ್ತು ಇತರ ದೇಶಗಳ ಮೇಲೆ ಅತ್ಯಧಿಕ ಸುಂಕ ವಿಧಿಸಲು ಶ್ವೇತಭವನಕ್ಕೆ ಅವಕಾಶ ನೀಡುತ್ತದೆ.



ಈ ಕುರಿತು ಮಾಹಿತಿ ನೀಡಿದ ಅಮೆರಿಕದ ಸೆನೆಟರ್ ಲಿಂಡ್ಸೆ ಗ್ರಹಾಂ, 'ಭಾರತ, ಚೀನಾ ಮತ್ತು ಬ್ರೆಜಿಲ್‌ನಂತಹ ದೇಶಗಳು ರಷ್ಯಾದಿಂದ ಅಗ್ಗದ ಬೆಲೆಗೆ ತೈಲ ಖರೀದಿಸುತ್ತಿವೆ. ಅದನ್ನು ತಡೆಯುವುದಕ್ಕೆ ಈ ಮಸೂದೆಯು ಶ್ವೇತಭವನಕ್ಕೆ ಅಪರಿಮಿತ ಅಧಿಕಾರ ನೀಡುತ್ತದೆ' ಎಂದರು. 'ರಷ್ಯಾ ವಿರುದ್ಧದ ದ್ವಿಪಕ್ಷೀಯ ನಿರ್ಬಂಧ ಮಸೂದೆ ಬಗ್ಗೆ ನಾನು, ಸೆನೆಟರ್ ಬ್ಲೂಮೆಂಥಾಲ್ ಮತ್ತು ಇತರರ ಜತೆಗೆ ಹಲವು ತಿಂಗಳು ಕೆಲಸ ಮಾಡಿದ್ದೇನೆ. ಅಧ್ಯಕ್ಷ ಟ್ರಂಪ್ ಅವರ ಜತೆ ಈ ಕುರಿತು ಇಂದು ಮಹತ್ವದ ಸಭೆ ನಡೆಯಿತು. ಅವರು ಈ ಮಸೂದೆಗೆ ಹಸಿರು ನಿಶಾನೆ ತೋರಿದ್ದಾರೆ' ಎಂದು ಗ್ರಹಾಂ ತಿಳಿಸಿದರು.

'ಇದು ಸಂದರ್ಭೋಚಿತ ನಿರ್ಧಾರ. ಉಕ್ರೇನ್–ರಷ್ಯಾ ಯುದ್ಧ ನಿಲ್ಲಿಸಲು ಅಮೆರಿಕ ಸರ್ವ ಪ್ರಯತ್ನ ಮಾಡುತ್ತಿದೆ. ಆದರೆ, ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಮುಗ್ಧರ ಹತ್ಯೆಯನ್ನು ಮುಂದುವರಿಸಿದ್ದಾರೆ. ರಷ್ಯಾದಿಂದ ಕಡಿಮೆ ಬೆಲೆಗೆ ತೈಲ ಖರೀದಿಸುವ ಮೂಲಕ ಕೆಲ ದೇಶಗಳು ಯುದ್ಧವನ್ನು ಉತ್ತೇಜಿಸುತ್ತಿವೆ' ಎಂದಿದ್ದಾರೆ.

▶10

ಜಾಗತಿಕ 60 ಸಂಸ್ಥೆಗಳಿಂದ ಹಿಂದೆ ಸರಿದ ಅಮೆರಿಕ

ವಿಶ್ವಸಂಸ್ಥೆ/ವಾಷಿಂಗ್ಟನ್ (ಪಿಟಿಐ): 'ವಿಶ್ವಸಂಸ್ಥೆಗೆ ಸೇರಿದ ವಿವಿಧ ಅಂಗಸಂಸ್ಥೆಗಳು, ಭಾರತ–ಫ್ರಾನ್ಸ್ ನೇತೃತ್ವದಲ್ಲಿರುವ ಅಂತರರಾಷ್ಟ್ರೀಯ ಸೌರ ಒಕ್ಕೂಟ ಸೇರಿದಂತೆ 60 ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಅಮೆರಿಕ ಹೊರನಡೆದಿದೆ' ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

'ಈ ಸಂಸ್ಥೆಗಳು 'ಅನಗತ್ಯ'ವಾಗಿದ್ದು, ಅಮೆರಿಕದ ಹಿತಾಸಕ್ತಿಗೆ ವಿರುದ್ಧವಾಗಿವೆ' ಎಂದು ಅವರು ಹೇಳಿದ್ದಾರೆ. 'ದೇಶದ ಹಿತಾಸಕ್ತಿಗೆ ವಿರುದ್ಧವಾದ ಅಂತರರಾಷ್ಟ್ರೀಯ ಸಂಸ್ಥೆಗಳು, ಒಡಂಬಡಿಕೆಗಳು ಹಾಗೂ ಒಪ್ಪಂದಗಳಿಂದ ಅಮೆರಿಕವು ಹಿಂದೆ ಸರಿದಿದೆ' ಎಂಬ ಜ್ಞಾಪನಾಪತ್ರಕ್ಕೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಸಹಿ ಹಾಕಿದ್ದಾರೆ.

▶10

ಕೋಲ್ಕತ್ತ: 'ಐ–ಪ್ಯಾಕ್' ಕಚೇರಿ ಶೋಧದ ವೇಳೆ ಬೆಳವಣಿಗೆ

ಇ.ಡಿ ದಾಳಿ: ಧಾವಿಸಿ ಬಂದ ಮಮತಾ

ನವದೆಹಲಿ/ ಕೋಲ್ಕತ್ತ (ಪಿಟಿಐ): ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಗುರುವಾರ ರಾಜಕೀಯ ಸಲಹಾ ಸಂಸ್ಥೆ 'ಐ-ಪ್ಯಾಕ್'ನ ಕಚೇರಿ ಮತ್ತು ಅದರ ನಿರ್ದೇಶಕ ಪ್ರತೀಕ್ ಜೈನ್ ಅವರ ಮನೆಯಲ್ಲಿ ಶೋಧ ನಡೆಸುತ್ತಿದ್ದಾಗ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ದಿಢೀರ್ ಧಾವಿಸಿ ಬಂದಿದ್ದಾರೆ.

ಈ ಬೆಳವಣಿಗೆ ಪಶ್ಚಿಮ ಬಂಗಾಳದ ರಾಜಕೀಯದಲ್ಲಿ ಭಾರಿ ಸದ್ದು ಮಾಡಿದೆ. ಜೈನ್ ಅವರು ಪಶ್ಚಿಮ ಬಂಗಾಳದ ಆಡಳಿತ ಪಕ್ಷ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಐ.ಟಿ ಸೆಲ್‌ನ ಮುಖ್ಯಸ್ಥರೂ ಹೌದು.

ಇ.ಡಿ ಕ್ರಮವನ್ನು 'ರಾಜಕೀಯ ಪ್ರೇರಿತ' ಮತ್ತು 'ಅಸಾಂವಿಧಾನಿಕ' ಎಂದು ಟೀಕಿಸಿದ ಮಮತಾ, 'ಟಿಎಂಸಿಯ ರಹಸ್ಯ ದಾಖಲೆಗಳನ್ನು ಸಂಗ್ರಹಿಸಲು ಈ ದಾಳಿ ನಡೆಸಲಾಗಿದೆ' ಎಂದು ಆರೋಪಿಸಿದ್ದಾರೆ.

ಕಡತ ಹೊರತಂದ ಮಮತಾ: ಇ.ಡಿ ಅಧಿಕಾರಿಗಳು ಬೆಳಿಗ್ಗೆ 7ರಿಂದಲೇ ಶೋಧ ಆರಂಭಿಸಿದ್ದಾರೆ. ಮಮತಾ ಅವರು ಮಧ್ಯಾಹ್ನದ ವೇಳೆ ಪ್ರತೀಕ್ ನಿವಾಸಕ್ಕೆ ಬಂದಿದ್ದಾರೆ. ಕೋಲ್ಕತ್ತ ಪೊಲೀಸ್ ಆಯುಕ್ತ ಮನೋಜ್ ವರ್ಮಾ ಸ್ಥಳಕ್ಕೆ ತಲುಪಿದ ಕೆಲವೇ ನಿಮಿಷಗಳಲ್ಲಿ ಮಮತಾ ಆಗಮಿಸಿದ್ದಾರೆ. ಜೈನ್ ಮನೆಯಲ್ಲಿ 20–25 ನಿಮಿಷ ಇದ್ದ ಅವರು ನಿವಾಸದಿಂದ ಹೊರಬರುವಾಗ ಹಸಿರು ಬಣ್ಣದ ಕಡತ ಹಿಡಿದುಕೊಂಡಿದ್ದರು.

ಪ್ರತೀಕ್ ಜೈನ್ ನಿವಾಸದಿಂದ ಕಡತದೊಂದಿಗೆ ಹೊರಬಂದ ಮಮತಾ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು –ಪಿಟಿಐ ಚಿತ್ರ

'ಇ.ಡಿ ಅಧಿಕಾರಿಗಳು ನಮ್ಮ ಐ.ಟಿ ಸೆಲ್ ಉಸ್ತುವಾರಿಯ ನಿವಾಸ ಮತ್ತು ಕಚೇರಿ ಮೇಲೆ ದಾಳಿ ನಡೆಸಿದ್ದಾರೆ. ಅವರು ನನ್ನ ಪಕ್ಷಕ್ಕೆ ಸಂಬಂಧಿಸಿದ ರಹಸ್ಯ ದಾಖಲೆಗಳು ಮತ್ತು ಹಾರ್ಡ್ ಡಿಸ್ಕ್‌ಗಳನ್ನು ವಶಕ್ಕೆ ತೆಗೆದುಕೊಳ್ಳುತ್ತಿದ್ದರು. ಮುಂಬರುವ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಪಕ್ಷದ ಕಾರ್ಯತಂತ್ರ, ಅಭ್ಯರ್ಥಿಗಳ ವಿವರಗಳು ಅದರಲ್ಲಿದ್ದವು. ನಾನು ಅವುಗಳನ್ನು ಮರಳಿ ತಂದಿದ್ದೇನೆ' ಎಂದು ಮಮತಾ ಅವರು ಸುದ್ದಿಗಾರರಿಗೆ ತಿಳಿಸಿದರು.

ಕಚೇರಿಗೂ ಬಂದ ಮಮತಾ: ಇ.ಡಿ ಅಧಿಕಾರಿಗಳು 'ಐ–ಪ್ಯಾಕ್' ಕಚೇರಿಯಲ್ಲಿ ಶೋಧ ನಡೆಸುತ್ತಿದ್ದಾಗ ಮಮತಾ ಮಧ್ಯಾಹ್ನ 1ರ ಸುಮಾರಿಗೆ ಅಲ್ಲಿಗೂ ಬಂದಿದ್ದಾರೆ.

ವಿಐಪಿಗಳಿಗೆ ಪ್ರತ್ಯೇಕ ಲಿಫ್ಟ್ ಇದ್ದರೂ, ಅವರು ಸಾಮಾನ್ಯ ಲಿಫ್ಟ್ ಬಳಸಿ 'ಐ–ಪ್ಯಾಕ್' ಕಚೇರಿಯಿರುವ 11ನೇ ಮಹಡಿಗೆ ಬಂದಿದ್ದಾರೆ. ದಾಳಿಯ ಸಂದರ್ಭದಲ್ಲಿ ಕೇಂದ್ರೀಯ ಭದ್ರತಾ ಪಡೆಯ ಸಿಬ್ಬಂದಿ ಕಟ್ಟಡದ ಪ್ರವೇಶ ಮತ್ತು ನಿರ್ಗಮನ ದ್ವಾರವನ್ನು ಮುಚ್ಚಿದ್ದರು.

ಪ್ರತೀಕ್ ಜೈನ್ ಬರುವವರೆಗೂ ಸ್ಥಳದಿಂದ ತೆರಳುವುದಿಲ್ಲ ಎಂದು ಮಮತಾ ಹೇಳಿದರು. ಪ್ರತೀಕ್ ಅವರು ಕಚೇರಿಗೆ ಬಂದ ಬಳಿಕ ಸಂಜೆ 4.14ರ ಸುಮಾರಿಗೆ ಅವರು ಅಲ್ಲಿಂದ ತೆರಳಿದರು.

ಇನ್ನೊಂದು ಸುದ್ದಿ ▶7

ಹೈಕೋರ್ಟ್ ಮೊರೆ

ಈ ಎಲ್ಲಾ ಬೆಳವಣಿಗೆಗಳ ಬೆನ್ನಲ್ಲೇ ಇ.ಡಿ ಮತ್ತು 'ಐ-ಪ್ಯಾಕ್' ಗುರುವಾರ ಕಲ್ಕತ್ತಾ ಹೈಕೋರ್ಟ್ ಮೊರೆಹೋಗಿವೆ. ತನಿಖೆಯಲ್ಲಿ ಹಸ್ತಕ್ಷೇಪ ನಡೆಸಲಾಗಿದೆ ಎಂದು ಆರೋಪಿಸಿ ಇ.ಡಿ ನ್ಯಾಯಾಲಯದ ಮೆಟ್ಟಿಲೇರಿದರೆ, 'ಐ-ಪ್ಯಾಕ್' ಇ.ಡಿ ಶೋಧದ ಕಾನೂನುಬದ್ಧತೆಯನ್ನು ಪ್ರಶ್ನಿಸಿದೆ. ನ್ಯಾಯಮೂರ್ತಿ ಸುವ್ರಾ ಘೋಷ್ ಅವರು ಎರಡೂ ಕಡೆಯವರು ಸಲ್ಲಿಸಿರುವ ಅರ್ಜಿಗಳನ್ನು ಶುಕ್ರವಾರ ವಿಚಾರಣೆಗೆ ಕೈಗೆತ್ತಿಕೊಳ್ಳುವ ಸಾಧ್ಯತೆಯಿದೆ.

> **ಮಮತಾ ಬ್ಯಾನರ್ಜಿ ನಡೆ ಸಂವಿಧಾನಬಾಹಿರ. ಇ.ಡಿ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು**
>
> **ಸುವೇಂದು ಅಧಿಕಾರಿ,** ಪಶ್ಚಿಮ ಬಂಗಾಳದ ವಿರೋಧ ಪಕ್ಷದ ನಾಯಕ

ಪದವಿ ಪೂರ್ಯೆಸಿದರೂ ಕೆಲಸ ಸಿಗದ ಅಭ್ಯರ್ಥಿಗಳಲ್ಲಿ ಶೇ 13ರಷ್ಟು ಎಂಜಿನಿಯರ್‌ಗಳು

ಎಂಜಿನಿಯರ್‌ಗಳಿಗೂ ಸಿಗದ ಉದ್ಯೋಗ

ಪ್ರಜಾವಾಣಿ ವಾರ್ತೆ

43,529 ನಿರುದ್ಯೋಗಿ ಎಂಜನಿಯರ್‌ಗಳು	**3** ಲಕ್ಷ ಇತರೆ ನಿರುದ್ಯೋಗಿ ಪದವೀಧರರು	**3.79** ಲಕ್ಷ ನಿರುದ್ಯೋಗ ಭತ್ಯೆಗಾಗಿ ನೋಂದಾಯಿಸಿದವರು	**2.98** ಲಕ್ಷ ನಿರುದ್ಯೋಗ ಭತ್ಯೆ ಪಡೆದವರು

ಬೆಂಗಳೂರು: ನಿರುದ್ಯೋಗಿ ಎಂಜಿನಿಯರ್‌ಗಳ ಸಂಖ್ಯೆಯಲ್ಲಿ ಭಾರಿ ಏರಿಕೆಯಾಗಿದ್ದು, 43 ಸಾವಿರ ತಾಂತ್ರಿಕ ಪದವೀಧರರಿಗೆ ಖಾಸಗಿ ಕಂಪನಿ, ಸರ್ಕಾರದ ಇಲಾಖೆಗಳಲ್ಲಿ ಕೆಲಸ ಸಿಕ್ಕಿಲ್ಲ.

ಪದವಿ, ಡಿಪ್ಲೊಮಾ ಪೂರೈಸಿದರೂ ಕೆಲಸ ಸಿಗದ 3.79 ಲಕ್ಷ ಮಂದಿ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಯುವನಿಧಿ ನೆರವಿಗೆ ಅರ್ಜಿ ಸಲ್ಲಿಸಿದ್ದಾರೆ. ಅವರಲ್ಲಿ 43,529 ಎಂಜಿನಿಯರಿಂಗ್, 4,250 ಡಿಪ್ಲೊಮಾ ಪೂರೈಸಿದವರು. ಅಂದರೆ, ಪದವಿ ಪೂರೈಸಿದ ನಿರುದ್ಯೋಗಿಗಳಲ್ಲಿ ಶೇ 13ರಷ್ಟು ಎಂಜಿನಿಯರ್‌ಗಳು ಇದ್ದಾರೆ.

ಯುವನಿಧಿ ಯೋಜನೆ ಅಡಿ ಅರ್ಜಿ ಸಲ್ಲಿಸಿದವರಿಗೆ 2025–26ನೇ ಸಾಲಿನಲ್ಲಿ ₹2.98 ಕೋಟಿ ಆರ್ಥಿಕ ನೆರವು ಸಿಕ್ಕಿದೆ. ಎಂಜಿನಿಯರಿಂಗ್ ಹೊರತುಪಡಿಸಿ ಇತರೆ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದ 27,843, ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದ 374 ಅಭ್ಯರ್ಥಿಗಳು ಯುವನಿಧಿಯ ನೆರವು ಪಡೆದಿದ್ದಾರೆ.

'ಪ್ರತಿ ವರ್ಷ ಕನಿಷ್ಠ 1 ಲಕ್ಷ ಎಂಜಿನಿಯರಿಂಗ್ ಪದವೀಧರರು ಹೊರಬರುತ್ತಿದ್ದಾರೆ. ಕ್ಯಾಂಪಸ್ ಆಯ್ಕೆ, ವೈಯಕ್ತಿಕ ಪ್ರತಿಭೆ ಆಧಾರದ ಮೇಲೆ ಒಂದಷ್ಟು ಅಭ್ಯರ್ಥಿಗಳು ವಿವಿಧ ಕಂಪನಿಗಳಲ್ಲಿ ಕೆಲಸ ಪಡೆಯುತ್ತಿದ್ದಾರೆ. ಹಲವರಿಗೆ ಉದ್ಯೋಗ ಸಿಗುತ್ತಿಲ್ಲ. ಕೌಶಲದ ಕೊರತೆಯ ಕಾರಣ ಹೆಚ್ಚಿನವರು ನಿರುದ್ಯೋಗದ ಸಮಸ್ಯೆ ಎದುರಿಸುತ್ತಿದ್ದಾರೆ' ಎಂದು ವೈದ್ಯಕೀಯ ಮತ್ತು ಕೌಶಲಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ ಪಾಟೀಲ ವಿವರಿಸಿದರು.

'ಕಂಪನಿಗಳು ಎಂಜಿನಿಯರಿಂಗ್ ಕಾಲೇಜುಗಳಲ್ಲೇ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಕೋರಲಾಗಿದೆ. ತರಬೇತಿಗೆ ತಗಲುವ ವೆಚ್ಚವನ್ನು ಸರ್ಕಾರ ಭರಿಸಲಿದೆ' ಎಂದರು.

ಯುವನಿಧಿ ಪ್ಲಸ್: ಶೇ 90 ಗೈರು

ಶರಣ ಪ್ರಕಾಶ ಪಾಟೀಲ

'ಉದ್ಯೋಗ ಸಿಗದೆ ಇರುವುದಕ್ಕೆ ಆಯಾ ವಿಷಯಗಳಲ್ಲಿ ಕೌಶಲದ ಕೊರತೆ ಕಾರಣ ಎಂಬುದನ್ನು ಮನಗಂಡು ಯುವನಿಧಿ ಪ್ಲಸ್ ಯೋಜನೆ ರೂಪಿಸಲಾಗಿದೆ. ಉಚಿತ ಕೌಶಲ ತರಬೇತಿ ನೀಡಿ, ಅವರು ಉದ್ಯೋಗ ಪಡೆಯುವಂತೆ ಮಾಡುವುದು ಯೋಜನೆಯ ಉದ್ದೇಶ. ಆದರೆ, ತರಬೇತಿಗೆ ಶೇ 90ರಷ್ಟು ಅಭ್ಯರ್ಥಿಗಳು ಬರುತ್ತಿಲ್ಲ' ಎಂದು ಸಚಿವ ಶರಣ ಪ್ರಕಾಶ ಪಾಟೀಲ ಹೇಳಿದರು.

'ಪದವೀಧರರಿಗೆ ಪ್ರಾಯೋಗಿಕ ತರಬೇತಿಯನ್ನು ಬಲಪಡಿಸುವ ಅಗತ್ಯವಿದೆ. ಯುವನಿಧಿಗೆ 3.79 ಲಕ್ಷ ಅರ್ಜಿ ಸಲ್ಲಿಕೆಯಾಗಿದ್ದರೂ ತರಬೇತಿಗೆ 27,843 ಮಂದಿ ನೋಂದಾಯಿಸಿಕೊಂಡಿದ್ದಾರೆ. ತರಬೇತಿಗೆ ಮೀಸಲಿಟ್ಟ ₹27 ಕೋಟಿ ಅನುದಾನವೂ ಬಳಕೆಯಾಗಿಲ್ಲ' ಎಂದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಕವಿದ ವಾತಾವರಣ ಇರಲಿದೆ.

ಸಿಬ್ಬಂದಿಗೆ ಡಿಜಿಟಲ್ ಇ–ಸ್ಟ್ಯಾಂಪ್ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೋಂದಣಿ ಮತ್ತು ಮುದ್ರಾಂಕ ಇಲಾಖೆ ವತಿಯಿಂದ ರಾಜ್ಯದಾದ್ಯಂತ ಜಾರಿಗೊಳಿಸಿರುವ ಡಿಜಿಟಲ್ ಇ ಸ್ಟ್ಯಾಂಪ್ ಕುರಿತ ತರಬೇತಿಯನ್ನು ಶಿವಾಜಿನಗರ ನೋಂದಣಿ ಜಿಲ್ಲಾ ವ್ಯಾಪ್ತಿಯ ಎಲ್ಲ ಉಪ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ಜ.9 ರಂದು ಬೆಳಿಗ್ಗೆ 11.30 ರಿಂದ ಶಿವಾಜಿನಗರ ಹಾಗೂ ಮಧ್ಯಾಹ್ನ 3ರಿಂದ ಹಲಸೂರು ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ತರಬೇತಿ ನಡೆಯಲಿದೆ. ಜ.12ರಂದು ಬೆಳಿಗ್ಗೆ 11.30 ರಿಂದ ಕೆ.ಆರ್.ಪುರ, ಮಧ್ಯಾಹ್ನ 3ರಿಂದ ವರ್ತೂರು ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ತರಬೇತಿ ಇರಲಿದೆ.

ಜನವರಿ 13ರಂದು ಬೆಳಿಗ್ಗೆ 11.30ರಿಂದ ಮಹದೇವಪುರ, ಮಧ್ಯಾಹ್ನ 3ರಿಂದ ಬಿದರಹಳ್ಳಿ ಉಪ ನೋಂದಣಾಧಿಕಾರಿ ಕಚೇರಿ, ಜ.14ರಂದು ಬೆಳಿಗ್ಗೆ 11.30ರಿಂದ ಇಂದಿರಾನಗರ ಹಾಗೂ ಮಧ್ಯಾಹ್ನ 3ರಿಂದ ಬಾಣಸವಾಡಿ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ತರಬೇತಿ ಹಮ್ಮಿಕೊಳ್ಳಲಾಗಿದೆ.

ದಸ್ತಾವೇಜು ಬರಹಗಾರರು, ವಕೀಲರು, ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್ ಮತ್ತು ಬಾಪೂಜಿ ಸೇವಾ ಕೇಂದ್ರ ಹಾಗೂ ಎಸ್‌ಎಚ್‌ಐಎಲ್‌ಎಲ್ ಮೂಲಕ ಇ-ಸ್ಟ್ಯಾಂಪ್ ವಿತರಿಸುವ ಸಹಕಾರಿ ಸೌಹಾರ್ದ ಸಂಘಗಳ ಸಿಬ್ಬಂದಿ ಮತ್ತು ಆಸಕ್ತರು ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಥಣಿಸಂದ್ರ: 22 ಕಟ್ಟಡ ನೆಲಸಮ

ತೆರವು ಕಾರ್ಯಾಚರಣೆ ನಡೆಸಿದ ಬಿಡಿಎ

• ₹ 80 ಕೋಟಿ ಮೌಲ್ಯದ ಸ್ವತ್ತು ವಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನೋಟಿಸ್ ಕೊಟ್ಟಿಲ್ಲ ಸ್ಥಳೀಯರ ಆರೋಪ
- ಸ್ಥಳೀಯರಿಗೆ ತಿಳಿಸಿಯೇ ಕಾರ್ಯಾಚರಣೆ: ಬಿಡಿಎ

ಬೆಂಗಳೂರು: ಕೆ.ಆರ್.ಪುರ ಹೋಬಳಿಯ ಥಣಿಸಂದ್ರ ಗ್ರಾಮದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ 22 ಕಟ್ಟಡಗಳನ್ನು ಗುರುವಾರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನೆಲಸಮಗೊಳಿಸಿದೆ.

ಬೆಂಗಳೂರು ಪೂರ್ವ ತಾಲ್ಲೂಕಿನ ಥಣಿಸಂದ್ರ ಗ್ರಾಮದ ಸರ್ವೆ ನಂ. 28/1 ಮತ್ತು 28/2ರಲ್ಲಿ ಎರಡು ಎಕರೆ ಪ್ರದೇಶದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಮನೆ, ಗೋದಾಮು ಹಾಗೂ ಗ್ಯಾರೇಜ್‌ಗಳನ್ನು ಜೆಸಿಬಿ ಯಂತ್ರದ ಮೂಲಕ ತೆರವುಗೊಳಿಸಲಾಗಿದೆ. ಸುಮಾರು ₹80 ಕೋಟಿ ಬೆಲೆ ಬಾಳುವ ಪ್ರದೇಶವನ್ನು ಪ್ರಾಧಿಕಾರ ವಶಪಡಿಸಿಕೊಂಡಿದೆ.

‘ಯಾವುದೇ ನೋಟಿಸ್ ನೀಡದೆ ಮನೆಗಳನ್ನು ನೆಲಸಮ ಮಾಡಿ, ವಸ್ತುಗಳನ್ನು ರಸ್ತೆಗೆ ಹಾಕಲಾಗಿದೆ. ಮಕ್ಕಳು, ಹಿರಿಯರು ಏನು ಮಾಡಬೇಕು? ಮಲಗಲು ಜಾಗವಿಲ್ಲ. ರಸ್ತೆಯಲ್ಲಿ ಮಲಗಬೇಕೇ?. ಮನೆಗೆ ಸಂಬಂಧಿಸಿದ ದಾಖಲೆಗಳು ಇವೆ. ಇ-ಖಾತಾ ಇದೆ. ನೀರು, ವಿದ್ಯುತ್ ಸಂಪರ್ಕ ನೀಡಲಾಗಿದೆ. ಇಪ್ಪತ್ತು ವರ್ಷಗಳಿಂದ ಇದೇ ಜಾಗದಲ್ಲಿ ವಾಸಿಸುತ್ತಿದ್ದೇವೆ’ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

‘ಅರ್ಕಾವತಿ ಬಡಾವಣೆಗಾಗಿ 2004ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಭೂ ಮಾಲೀಕರೊಬ್ಬರು ಈ ಜಾಗದಲ್ಲಿ ನಿವೇಶನಗಳನ್ನು ನಿರ್ಮಿಸಿ ಮಾರಾಟ ಮಾಡಿದ್ದರು. ಜತೆಗೆ ಪ್ರಾಧಿಕಾರದಿಂದ ಪರಿಹಾರವನ್ನು ಪಡೆದುಕೊಂಡಿದ್ದರು. ಈ ವಿಚಾರಕ್ಕೆ ಸಂಬಂಧಿಸಿದಂತೆ ಹಲವರು ನ್ಯಾಯಾಲಯದ ಮೆಟ್ಟಿಲೇರಿದರು. ವಿಚಾರಣೆ ನಡೆದು, ಪ್ರಾಧಿಕಾರದ ಪರವಾಗಿ ನ್ಯಾಯಾಲಯ ಆದೇಶ ನೀಡಿತು. ಹಾಗಾಗಿ ಕಾರ್ಯಾಚರಣೆ ನಡೆಸಿ, ಅಕ್ರಮವಾಗಿ ನಿರ್ಮಿಸಿದ್ದ ಕಟ್ಟಡಗಳನ್ನು ತೆರವು ಮಾಡಲಾಗಿದೆ’ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

ಥಣಿಸಂದ್ರ ಗ್ರಾಮದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಮನೆಗಳನ್ನು ನೆಲಸಮ ಮಾಡಲಾಯಿತು

‘ಅರ್ಕಾವತಿ ಬಡಾವಣೆಗೆ ಹೊಂದಿಕೊಂಡಂತೆ ಎರಡೂವರೆ ಎಕರೆ ಜಾಗ ಇದ್ದು, ಇದನ್ನು ನಿವೇಶನವಾಗಿ ಅಭಿವೃದ್ಧಿ ಪಡಿಸಲಾಗುವುದು. ಸದ್ಯಕ್ಕೆ ಎರಡು ಎಕರೆ ಜಾಗದಲ್ಲಿದ್ದ ಅಕ್ರಮ ಕಟ್ಟಡಗಳನ್ನು ತೆರವು ಮಾಡಲಾಗಿದೆ. ಉಳಿದ ಅರ್ಧ ಎಕರೆ ಜಾಗದಲ್ಲೂ ಆರು ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ಅವುಗಳನ್ನು ತೆರವು ಮಾಡಲಾಗುವುದು. ಕೋರ್ಟ್ ಆದೇಶವನ್ನು ಸ್ಥಳೀಯರಿಗೆ ತಿಳಿಸಿದ ಬಳಿಕವೇ ಕಾರ್ಯಾಚರಣೆ ನಡೆಸಲಾಗಿದೆ’ ಎಂದು ಸ್ಪಷ್ಟಪಡಿಸಿದರು.

ಪ್ರಾಧಿಕಾರದ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕ, ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹಾಗೂ ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಕಾರ್ಯಾಚರಣೆ ನೆರವೇರಿತು.

ಭಾರತ ಸರ್ಕಾರ
ಬಾಹ್ಯಕಾಶ ಇಲಾಖೆ
ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ
ಇಸ್ರೋ ಟೆಲಿಮಿಟ್ರಿ ಟ್ರ್ಯಾಕಿಂಗ್ & ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಎಸಿ) ನಿರ್ಮಾಣ & ನಿರ್ವಹಣೆ ಸಮೂಹ
ಪ್ಲಾಟ್ ನಂ. 12 & 13, 3ನೇ ಮುಖ್ಯ ರಸ್ತೆ, 2ನೇ ಫೇಸ್, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು–58,
ಫ್ಯಾಕ್ಸ್: 080–28094180 ದೂರವಾಣಿ: 080–280904196, 4184, 4541, 4542

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕಾಮಗಾರಿಗೆ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಐಟಂ ದರದ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಎನ್‌ಐಟಿ ಸಂ.	ಐಎಸ್‌ಟಿಆರ್‌ಎಸಿ/ಸಿಎಂಜಿ/ಸಿಓಎನ್/ಸಿ/ಇಟಿಎನ್–101/2025–26 ದಿನಾಂಕ: 08.01.2026
ಕಾಮಗಾರಿ ಹೆಸರು	ಎಸ್‌ಸಿಸಿ ಕ್ಯಾಂಪಸ್, ಐಎಸ್‌ಟಿಆರ್‌ಎಸಿ, ಬೆಂಗಳೂರು ಇಲ್ಲಿ ಬಹುಪಯೋಗಿ ಕ್ರೀಡಾಂಗಣದ ಪ್ರಸ್ತಾವನೆ (ಪಿಇಬಿ ಕಾಮಗಾರಿಗಳು)
ಟೆಂಡರ್‌ಗಿಟ್ಟ ಅಂದಾಜು ಮೊತ್ತ	ರೂ. 77.65 ಲಕ್ಷಗಳು
ಟೆಂಡರ್ ದಸ್ತಾವೇಜು ವಿವರಗಳು	ಇ–ಟೆಂಡರ್
ಪೂರ್ಣಗೊಳಿಸುವ ಕಾಲಾವಧಿ	40 (ನಲ್ವತ್ತು) ದಿನಗಳು
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್‌ಮಾಡಿಕೊಳ್ಳುವ ಅವಧಿ	09.01.2026 ರ 14.30 ಗಂಟೆಯಿಂದ 18.01.2026 ರ 14.30 ಗಂಟೆಯವರೆಗೆ
ಬಿಡ್ ಸ್ಪಷ್ಟೀಕರಣ	09.01.2026 ರ 15.30 ಗಂಟೆಯಿಂದ 18.01.2026 ರ 16.30 ಗಂಟೆಯವರೆಗೆ
ಬಿಡ್ ಸ್ಪಷ್ಟೀಕರಣಕ್ಕೆ ಪ್ರತ್ಯುತ್ತರ ನೀಡಲು ಕೊನೆಯ ದಿನಾಂಕ	19.01.2026 ರ 16.30 ಗಂಟೆಯವರೆಗೆ
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	20.01.2026 ರ 14.30 ಗಂಟೆಯವರೆಗೆ
ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	20.01.2026 ರ 16.30 ಗಂಟೆಯ ನಂತರ
ಇಎಂಡಿ	ರೂ. 1,55,300/–

ಆಸಕ್ತಿಯುಳ್ಳ ಟೆಂಡರ್‌ದಾರರು ವೆಬ್‌ಸೈಟ್: www.isro.gov.in/Tenders.html ನಲ್ಲಿ ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗೆ ವಿವರವಾದ ದ್ವಿಭಾಷಾ (ಹಿಂದಿ–ಇಂಗ್ಲಿಷ್) ಇ–ಟೆಂಡರ್ ಆಹ್ವಾನ ಪ್ರಕಟಣೆಯನ್ನು ಪರಿವೀಕ್ಷಿಸಬಹುದು ಮತ್ತು ಟೆಂಡರ್ ಶುಲ್ಕವನ್ನು www.tenderwizard.com/ISRO ರಲ್ಲಿ ನೋಡಬಹುದು.

ಸಹಿ/– ಸಮೂಹ ಮುಖ್ಯಸ್ಥರು, ಸಿಎಂಜಿ.

IN THE COURT OF THE HON'BLE X ADDITIONAL FIRST CIVIL JUDGE, AT MYSORE.

In the matter of:
O.S. No.: 332 of 2025
Between:
PLAINTIFF: **RIMCO POLYMERS**
Having its registered office at No.91/ B, 91/C, Koorgally Industrial Area, Mysuru Karnataka - 571 130.
Represented by Authorized Signatory
Mr. DIXIT SALECHA.
AND
DEFENDANT: **JALADHARA TECHNOLOGIES (BENGALURU),**
Having its business at No. 24, Ground Floor, 1st B Main Road, 2nd Cross, Cholurapalya, Bengaluru.
Represented by its Proprietor, **Susheela Parthasarathi.**

PAPER PUBLICATION

It is hereby notified to you, the Defendant in the above case, that the Plaintiff has filed the above suit against you before the Hon'ble X Additional First Civil Judge, Mysuru seeking the relief of Recovery of Money relating. The said case now stands posted to 20/01/2026 for your personal appearance at 11 am. If you do not appear on the said date at that time, you will be placed exparte and further proceedings will be proceeded with, in your absence.

Given under my hand and seal

By the Order of the Court
Chief Ministerial Officer
Civil Judge and JMFC
Mysore

Advocate for the Plaintiff
Mysuru
Date: 18-12-2025.

ನಿಧನ



ಎಂ.ಆರ್. ಶ್ರೀನಿವಾಸನ್
ಮಾಲೀಕರು - ಕೈಸರ್-ಐ-ಹಿಂದ್ ಸಿಲ್ಕ್ಸ್
ಇವರು ದಿನಾಂಕ: 08–01–2026ರಂದು ನಿಧನರಾದರು. ಅಂತ್ಯಕ್ರಿಯೆ: ದಿನಾಂಕ: 09–01–2026 ರಂದು ಬೆಳಿಗ್ಗೆ 11 ಗಂಟೆಗೆ
ಮನೆ ವಿಳಾಸ: 191/2, ಶಂಕರಮಠ ರಸ್ತೆ, 5ನೇ ಮೇನ್, ಚಾಮರಾಜಪೇಟೆ, ಬೆಂಗಳೂರು.
ದುಃಖತಪ್ತರು: ಪತ್ನಿ–ಎಂ.ಸಿ. ರುಕ್ಮಿಣಿ
ಮಕ್ಕಳು: ಎಂ.ಆರ್.ರಕ್ಷಿತ್, ಎಂ.ಆರ್. ರೋಹಿತ್
ಕುಟುಂಬದವರು, ಬಂಧುಗಳು-ಸ್ನೇಹಿತರು.
ಮೊ:+91 9845408707

ಜಿಲ್ಲಾ ತರಬೇತಿ ಸಂಸ್ಥೆ ಚಿಕ್ಕಬಳ್ಳಾಪುರ
ಅಣಕನೂರು ಗ್ರಾಮ, ಪಟ್ರೇನಹಳ್ಳಿ, ಚಿಕ್ಕಬಳ್ಳಾಪುರ–562101,
Tel No. 08156-200231, Email Id: dtichikkaballapur@gmail.com
ಸಂಖ್ಯೆ:ಜಿತಸಂ/ಟೆಂಡರ್/01/2026–27 ದಿನಾಂಕ: 02.01.2026

ಇ–ಟೆಂಡರ್ ಪ್ರಕಟಣೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2025–26ನೇ ಸಾಲಿಗೆ ಜಿಲ್ಲಾ ತರಬೇತಿ ಸಂಸ್ಥೆ ಚಿಕ್ಕಬಳ್ಳಾಪುರ ಜಿಲ್ಲೆಯ ಪ್ರಾಚಾರ್ಯರ ಕಛೇರಿಯಲ್ಲಿ ಕಂಪ್ಯೂಟರ್ ಆಪರೇಟರ್ (Tally assistant) ನೌಕರರ ಹುದ್ದೆ ಖಾಲಿ ಇದ್ದು, ಸದರಿ ಖಾಲಿ ಇರುವ ಹುದ್ದೆಗೆ ಮಾನವ ಸಂಪನ್ಮೂಲ ಅರ್ಹ ಸಂಸ್ಥೆಗಳ ಮೂಲಕ ಬಾಹ್ಯಮೂಲದಿಂದ ಸೇವೆಯನ್ನು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ ನಿಯಮ 2000ರನ್ವಯ ಇ–ಪ್ರಕ್ಯೂರ್‌ಮೆಂಟ್ ಮೂಲಕ **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20.01.2026 ಸಂಜೆ 5.00 ಗಂಟೆ ಆಗಿರುತ್ತದೆ.** ಹೆಚ್ಚಿನ ವಿವರಗಳಿಗಾಗಿ **https://kppp.karnataka.gov.in** ಇಲಾಖೆ ವೆಬ್‌ಸೈಟ್ ನೋಡುವುದು.

ಸಹಿ/– ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:355/ಕೆಎಸ್‌ಎಂಸಿಎ/2025–26

ಬಸವೇಶ್ವರಸ್ವಾಮಿ ಜಾತ್ರೋತ್ಸವ 15ಕ್ಕೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಬೆಂಗಳೂರು ದಕ್ಷಿಣ ತಾಲ್ಲೂಕು ಸೋಂಪುರ ಬಳಿಯ ವರಹಾಸಂದ್ರ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಕಡಲೆಕಾಯಿ ಪರಿಷೆ, ಬಸವೇಶ್ವರಸ್ವಾಮಿ ಜಾತ್ರಾ ಮಹೋತ್ಸವ, ರಥೋತ್ಸವ ಸಂಕ್ರಾಂತಿ ಹಬ್ಬದಂದು ನಡೆಯಲಿದೆ.

ಜನವರಿ 15ರಂದು ನಡೆಯುವ ಗ್ರಾಮೀಣ ಸೊಗಡಿನ ಹಬ್ಬದಲ್ಲಿ ಜಾನಪದ ಜಾತ್ರೆ, ದೇವರ ಉತ್ಸವ, ಭಕ್ತಾದಿಗಳಿಗೆ ಬಸವೇಶ್ವರ ದೇವಸ್ಥಾನ ಆಡಳಿತ ಮಂಡಳಿ ವತಿಯಿಂದ ಬೇಯಿಸಿದ ಗಿಣ್ಣು, ಕಡಲೆಕಾಯಿ, ಅವರೆಕಾಯಿ ಅನ್ನಪ್ರಸಾದ ವ್ಯವಸ್ಥೆಯನ್ನು ಬೆಳಗ್ಗೆ 8ರಿಂದ ರಾತ್ರಿ 11 ಗಂಟೆ ವರೆಗೆ ನಿರಂತರವಾಗಿ ನಡೆಯಲಿದೆ.

‘ಜಾತ್ರೆ ಬರುವ ಎಲ್ಲ ಭಕ್ತರಿಗೆ ತಲಾ ಎರಡು ಸೇರು ಕಡಲೆಕಾಯಿ, ಒಂದು ಜೊಲ್ಲೆ ಕಬ್ಬನ್ನು ಉಚಿತವಾಗಿ ನೀಡಲಾಗುವುದು. ಒಂದು ಸಾವಿರಕ್ಕೂ ಹೆಚ್ಚು ಅರ್ಚಕ ದಂಪತಿಗೆ ಉಡುಗೊರೆ ನೀಡಿ ಗೌರವಿಸಲಾಗುತ್ತಿದೆ’ ಎಂದು ದೇವಸ್ಥಾನ ಧರ್ಮದರ್ಶಿ ಮಂಡಳಿ ಅಧ್ಯಕ್ಷರು ಆಗಿರುವ ರಾಜ್ಯ ಬಿಜೆಪಿ ರೈತ ಮೋರ್ಚಾ ಘಟಕದ ಉಪಾಧ್ಯಕ್ಷ ಎಂ.ರುದ್ರೇಶ್ ತಿಳಿಸಿದರು.

‘ನಗರೀಕರಣ ಭರಾಟೆಯಲ್ಲಿ ಯುವ ಜನಾಂಗ ಗ್ರಾಮೀಣ ಧಾರ್ಮಿಕ ಪರಂಪರೆ, ಸಂಸ್ಕೃತಿ, ಜಾತ್ರೆ, ಉತ್ಸವವನ್ನು ಮರೆಯಬಾರದು. ಸಂಕ್ರಾಂತಿಯಂದು ವಿವಿಧ ಜನಪದ ಉತ್ಸವ, ಕ್ರೀಡೆಗಳನ್ನು ನಡೆಸಲಾಗುತ್ತಿದೆ. ವಿವಿಧ ಗ್ರಾಮಗಳಿಂದ ರೈತರು ಸಾಕಿರುವ ಪಶುಗಳನ್ನು ದೇವಸ್ಥಾನದ ಆವರಣಕ್ಕೆ ವಿವಿಧ ದೇವರುಗಳ ಮೆರವಣಿಗೆ ಮೂಲಕ ಕರೆತಂದು ಸೇರಿಸಿ ಕಿಚ್ಚನ್ನು ಹಾಯಿಸಲಾಗುವುದು’ ಎಂದರು.

‘ದೇಗುಲ ಮಠದ ಇಮ್ಮಡಿ ನಿರ್ವಾಣ ಸ್ವಾಮೀಜಿ, ಕಾಗಿನೆಲೆ ಮಠದ ನಿರಂಜನಾನಂದಪುರಿ ಸ್ವಾಮೀಜಿ, ಯಾದವನಂದ ಮಠದ ಕೃಷ್ಣ ಯಾದವಾನಂದ ಸ್ವಾಮೀಜಿ, ಮರಳೆಗವಿ ಮಠದ ಮುಮ್ಮಡಿ ಶಿವರುದ್ರ ಸ್ವಾಮೀಜಿ, ಬೇಬಿಮಠದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಬಂಡೇಮಠದ ಸಚ್ಚಿದಾನಂದ ಸ್ವಾಮೀಜಿ, ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ಶಾಸಕ ಬಿ.ವೈ. ವಿಜಯೇಂದ್ರ, ಸಂಸದ ಬಿ.ವೈ.ರಾಘವೇಂದ್ರ, ನೈಸ್ ಸಂಸ್ಥೆ ಅಧ್ಯಕ್ಷ ಅಶೋಕ್ ಖೇಣಿ, ವಿಧಾನ ಪರಿಷತ್ ಸದಸ್ಯ ಟಿ.ಎನ್.ಜವರಾಯಿ ಗೌಡ, ಚಿತ್ರ ನಟ ದುನಿಯಾ ವಿಜಯ್ ಭಾಗವಹಿಸುವರು’ ಎಂದು ಹೇಳಿದರು.

ತರಬೇತಿಗೆ ಒಪ್ಪಂದ

ಬೆಂಗಳೂರು: ವರ್ಟಿಕಲ್ ಟ್ರಾನ್ಸ್‌ಪೋರ್ಟೇಶನ್ ಕ್ಷೇತ್ರದಲ್ಲಿ ಪ್ರತಿಭೆಗಳಿಗೆ ಕೌಶಲ ತರಬೇತಿ ನೀಡಲು ಎಲಿವೇಟರ್ ಮತ್ತು ಎಸ್ಕಲೇಟರ್ ಉದ್ಯಮದ ಜಾಗತಿಕ ಸಂಸ್ಥೆಗಳಾದ ಕೋನೆ ಎಲಿವೇಟರ್ಸ್ ಹಾಗೂ ಮಾ ಫೋಯ್ ಫೌಂಡೇಷನ್ ನಡುವೆ ಒಪ್ಪಂದ ಆಗಿದೆ.

ಕೋನೆ ಸಂಸ್ಥೆಯ ಸಿಎಸ್‌ಆರ್ ಯೋಜನೆಯ ಭಾಗವಾಗಿ 150 ಯುವ ಜನರಿಗೆ ಲಿಫ್ಟ್ ಅಳವಡಿಕೆ ಮತ್ತು ಉದ್ಯಮಕ್ಕೆ ಪೂರಕವಾದ ಕೌಶಲ ತರಬೇತಿ ನೀಡಿ, ಅವರನ್ನು ಉದ್ಯೋಗಕ್ಕೆ ಸಜ್ಜುಗೊಳಿಸಲಾಗುತ್ತದೆ.

ಹಿರಿಯ ನಿರ್ದೇಶಕ ಎಂ.ಪಿ. ಸರವಣನ್ ಮಾತನಾಡಿ, ‘ನುರಿತ ಕಾರ್ಯಪಡೆಯನ್ನು ರೂಪಿಸುವುದು ಕೇವಲ ಉದ್ಯಮದ ಬೆಳವಣಿಗೆಯ ದೃಷ್ಟಿಯಿಂದ ಮಾತ್ರವಲ್ಲ, ಮುಂದಿನ ಪೀಳಿಗೆಯ ಪ್ರತಿಭೆಗಳ ಸಬಲೀಕರಣಕ್ಕೂ ಬಹಳ ಅತ್ಯಗತ್ಯ’ ಎಂದು ಹೇಳಿದರು.

ಇದಕ್ಕೆ ಧ್ವನಿಗೂಡಿಸಿದ ಮಾ ಫೋಯ್ ಫೌಂಡೇಷನ್‌ನ ಸಿಎಸ್‌ಆರ್ ಮುಖ್ಯಸ್ಥೆ ರೋವೆನಾ ಸ್ಕರ್ವಿಲ್, ‘ಕೌಶಲ ಅಭಿವೃದ್ಧಿಯು ಸುಸ್ಥಿರ ಉದ್ಯೋಗ ಮತ್ತು ಆರ್ಥಿಕ ಬೆಳವಣಿಗೆಯ ಅಡಿಪಾಯವಾಗಿದೆ’ ಎಂದರು.

ಮಹಾ ಸತ್ಸಂಗ 10ಕ್ಕೆ

ಬೊಮ್ಮನಹಳ್ಳಿ: ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಜನವರಿ 10ರಂದು ಎಚ್‌ಎಸ್‌ಆರ್ ಬಡಾವಣೆಯ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ ಆರ್ಟ್ ಆಫ್ ಲಿವಿಂಗ್‌ನ ಶ್ರೀಶ್ರೀ ರವಿಶಂಕರ ಗುರೂಜಿ ಅವರಿಂದ ಮಹಾಸತ್ಸಂಗ ಏರ್ಪಡಿಸಲಾಗಿದೆ.

ಸಂಜೆ 6 ಗಂಟೆಯಿಂದ ರಾತ್ರಿ 8 ಗಂಟೆವರೆಗೆ ಸತ್ಸಂಗ ನಡೆಯಲಿದೆ ಎಂದು ಕಾರ್ಯಕ್ರಮದ ಆಯೋಜಕರಾದ ಶಾಸಕ ಸತೀಶ್ ರೆಡ್ಡಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಬೆಂಗಳೂರು ನಗರದಲ್ಲಿ ಡ್ರಗ್ ಹಾವಳಿ ಹೆಚ್ಚುತ್ತಿದೆ. ಎಚ್‌ಎಸ್‌ಆರ್ ಬಡಾವಣೆಯ ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಎರಡು ತಿಂಗಳ ಅವಧಿಯಲ್ಲಿ ಸುಮಾರು 40 ಪ್ರಕರಣಗಳು ದಾಖಲಾಗಿವೆ. ಯುವಜನತೆ ಈ ಪಿಡುಗಿನ ದಾಸರಾಗುವುದನ್ನು ತಡೆಯಲು ಮಹಾಸತ್ಸಂಗ ಹಮ್ಮಿಕೊಳ್ಳಲಾಗಿದೆ. ಕಾಲೇಜು ವಿದ್ಯಾರ್ಥಿಗಳು, ಐಟಿಬಿಟಿ ಉದ್ಯೋಗಿಗಳು ಸೇರಿ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕ್ರಮವಹಿಸಲಾಗಿದೆ’ ಎಂದರು. ಮಹಾಸತ್ಸಂಗದಲ್ಲಿ ಹಾಡು, ಸಂಗೀತ, ಯೋಗ, ಧ್ಯಾನ ಮತ್ತು ಗುರೂಜಿ ಆಶೀರ್ವಚನ ಇರಲಿದೆ. ಕಾರ್ಯಕ್ರಮಕ್ಕೆ ಪಾಸ್ ವ್ಯವಸ್ಥೆ ಇದ್ದು, ಆಸಕ್ತರು ಎಚ್‌ಎಸ್‌ಆರ್ ಬಡಾವಣೆಯ ಬಿಡಿಎ ಕಾಂಪ್ಲೆಕ್ಸ್‌ನಲ್ಲಿರುವ ಶಾಸಕರ ಕಚೇರಿಯಲ್ಲಿ ಪಾಸ್ ಪಡೆಯಬಹುದು.

ಕರ್ನಾಟಕ ಸರ್ಕಾರ
ರಾಜಾನುಕುಂಟೆ ಗ್ರಾಮ ಪಂಚಾಯತ್ ಕಾರ್ಯಾಲಯ
ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
ಸಂಖ್ಯೆ: ರಾ.ಗ್ರಾ.ಪಂ/02/2025–26 ದಿನಾಂಕ: 07.01.2026

ಇ–ಟೆಂಡರ್ ಪ್ರಕಟಣೆ

ಅಧ್ಯಕ್ಷರು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ರಾಜಾನುಕುಂಟೆ ಗ್ರಾಮ ಪಂಚಾಯತಿಯಲ್ಲಿ 2025–26 ಹಾಗೂ 2026–27 ನೇ ಸಾಲಿನ ವರ್ಗ–1/15ನೇ ಹಣಕಾಸು ಯೋಜನೆ/ವಿವಿಧ ಯೋಜನೆಯಡಿ ವಿವಿಧ ಸಾಮಾಗ್ರಿ ಖರೀದಿ/ಸೇವೆ ಪಡೆಯಲು ಇ–ಟೆಂಡರ್ ಆಹ್ವಾನಿಸಲಾಗಿದೆ ವಿವರ ಕೆಳಗಿನಂತಿದೆ.

ಕ್ರ.ಸಂ	ವಿವರ	Tender No
1.	ಬೀದಿ ದೀಪಗಳು ಮತ್ತು ಬಿಡಿಭಾಗಗಳ ಸರಬರಾಜು	RDPR/2025-26/IND13089
2.	ಕುಡಿಯುವ ನೀರಿನ ಸಾಮಗ್ರಿಗಳ ಸರಬರಾಜು	RDPR/2025-26/IND13092
3.	ಗ್ರಾಮ ನೈರ್ಮಲ್ಯ ಸಾಮಗ್ರಿಗಳ ಪೂರೈಕೆಗಾಗಿ	RDPR/2025-26/IND13082
4.	ಆಹಾರ ಪದಾರ್ಥಗಳ ಖರೀದಿ	RDPR/2025-26/IND13065
5	ಕ್ರೀಡಾ ಸಾಮಗ್ರಿಗಳ ಖರೀದಿ	RDPR/2025-26/IND13086
6.	ಆಹಾರ ಪೂರೈಕೆ	RDPR/2025-26/IND13087
7.	RO Plant ರಿಪೇರಿ ಬಿಡಿ ಭಾಗ ಸರಬರಾಜು ಮತ್ತು ಸರ್ವೀಸ್‌ಗಾಗಿ	RDPR/2025-26/SE2869/CALL-2
8	ಬೊಲೆರೊ ವಾಹನ ಖರೀದಿ	RDPR/2025-26/IND10780/CALL-2
9.	ಸಿಸಿಟಿವಿ ಕ್ಯಾಮೆರಾಗಳ ಪೂರೈಕೆ ಮತ್ತು ಅಳವಡಿಕೆ	RDPR/2025-26/IND10885/CALL-2
10.	ಇನ್ಸಿನರೇಟರ್ ಮಿಶಿನ್ ಖರೀದಿ	RDPR/2025-26/IND10778/CALL-2
11.	ತುರ್ತು ನೈರ್ಮಲ್ಯ ಸ್ವಚ್ಛತೆ ಮತ್ತು ತೆರವುಗಾಗಿ ಜೆಸಿಬಿ ಮತ್ತು ಟ್ರ್ಯಾಕ್ಟರ್ ಸೇವೆ ಒದಗಿಸಲು	RDPR/2025-26/SE2868/CALL-2
12.	ಗಣಕಯಂತ್ರ ಪ್ರಿಂಟರ್ ಮತ್ತು ಇತರೆ ಎಲಕ್ಟ್ರಾನಿಕ್ ವಸ್ತುಗಳ ಖರೀದಿ ಮತ್ತು ನಿರ್ವಹಣೆ	RDPR/2025-26/IND13063
13.	ಅಂಗನವಾಡಿ ಸಾಮಗ್ರಿ ಖರೀದಿ	RDPR/2025-26/IND13094

(1) ಟೆಂಡರ್ ದಾಖಲಾತಿಗಳನ್ನು ಇ–ಪ್ರಕ್ಯೂರ್‌ಮೆಂಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು **ದಿನಾಂಕ: 07.01.2026 ರಿಂದ 21.01.2026 ಸಂಜೆ 16.00 ಗಂಟೆಯವರೆಗೆ** ಸಲ್ಲಿಸಬಹುದು. ಕೆಲಸದ ಹೆಸರು/ಪೂರೈಕೆದಾರರ ಅರ್ಹತೆ/ ಟೆಂಡರ್ ನಿಯಮಗಳು/ಟೆಂಡರ್ ಪ್ರೋಸೆಸ್ಸಿಂಗ್/EMD ಫೀ ಇತ್ಯಾದಿ ವಿವರಗಳಿಗೆ **www.KPPP.karnataka.gov.in** ಮೂಲಕ ಪಡೆಯಬಹುದು.

ಸಹಿ/–
ಪಂಚಾಯತ್ ಅಭಿವೃದ್ಧಿ ಅಧಿಕಾರಿ
ರಾಜಾನುಕುಂಟೆ ಗ್ರಾಮ ಪಂಚಾಯತಿ
ಯಲಹಂಕ, ತಾಲ್ಲೂಕು

ಸಹಿ/
ಅಧ್ಯಕ್ಷರು
ರಾಜಾನುಕುಂಟೆ ಗ್ರಾಮ ಪಂಚಾಯತಿ
ಯಲಹಂಕ, ತಾಲ್ಲೂಕು

ವಾಸಾಸಂಇ/ವಾಪ್ರ/4927/ಶಿರಡಿ ಸಾಯಿ/2025–26

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123
ಇ–ಮೇಲ್: nelamangala.pa@gmail.com Phone No: 96630 46622
ಸಂಖ್ಯೆ: ನೆಯೋಪ್ರಾ: CLU:104:2025-26 ದಿನಾಂಕ: 08–11–2025

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರಂತೆ)

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ:13–02–2007 ರನ್ವಯ **ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಕಣೇಗೌಡನಹಳ್ಳಿ ಗ್ರಾಮವು “ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ”** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಪ್ರಶ್ನಿತ ಪ್ರದೇಶವನ್ನು **“ಸಾರಿಗೆ** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಮಹಾಯೋಜನೆ ಅನುಮೋದನೆಗೊಂಡು ಐದು ವರ್ಷಗಳ ಅವಧಿಯು ಪೂರ್ಣ ಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2)ರನ್ವಯ **ಸಾರಿಗೆ”** ವಲಯದಲ್ಲಿ ಕಾಯ್ದಿರಿಸಲಾದ ಭೂ ಉಪಯೋಗ ರದ್ದಾಗುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 ರನ್ವಯ ಈ ಕೆಳಕಂಡಂತೆ **“ವಸತಿ”** ಉದ್ದೇಶಕ್ಕೆ ಭೂ ಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುವಂತೆ ಸದರಿ ಕಲಂ 69 (4) ರ ಅಡಿಯಲ್ಲಿ **“ವಸತಿ”** ಭೂ ಉಪಯೋಗ ನಿಗಧಿ ಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ಗ್ರಾಮ	ಸ.ನಂ	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ನಿಗಧಿಪಡಿಸಲು ಕೋರಿರುವ ಭೂ ಉಪಯೋಗ
ಶ್ರೀ ರಂಗಶಾಮಚಾರ್ ಕೆ.ವಿ ಬಿನ್ ಲೇಟ್ ವೆಂಕಟರಂಗಪ್ಪ	ನೆಲಮಂಗಲ, ಕಸಬಾ, ಕಣೇಗೌಡನಹಳ್ಳಿ	2/2	00–26½	ಸಾರಿಗೆ	“ವಸತಿ”
ಶ್ರೀಮತಿ ಅಂಬುಜ ಎಸ್.ಎಲ್ ಕೋಂ ರಂಗಶಾಮಚಾರ್		2/10	00–07		
		2/9	00–11		

ಷರಾ:– ಪ್ರಶ್ನಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **“ಸಾರಿಗೆ”** ವಲಯದಿಂದ **“ವಸತಿ”** ಉದ್ದೇಶಕ್ಕೆ ಭೂ ಉಪಯೋಗ ನಿಗಧಿಪಡಿಸಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ **ಸದಸ್ಯ–ಕಾರ್ಯದರ್ಶಿ,**
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾ.ಸಾ.ಸಂ.ಇ/ವಾಪ್ರ/4938/2025–26

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

SANDEEP VIHAR OWNERS WELFARE ASSOCIATION, ARMY COMPLEX, KANNAMANGALA, WHITEFIELD, BENGALURU-560115
INVITATION FOR VENDORS
1. Sandeep Vihar Owners Welfare Association invites Tender Proposals from reputed Agencies (Vendors) for the undermentioned services.
2. Mandatory License/Certification from competent authorities is essential:-

AREA OF INTEREST	TYPE OF BID
(a) Sewage Treatment Plant (b) Arboriculture (c) Security (d) House Keeping (e) Fitness (Gymnasium) (f) Solid Waste Management	Fresh Contract
(a) Swimming Pool (b) Pest Control (c) CCTV (d) Elevators & Lifts (e) Diesel Generators (f) Sewage Treatment Plant	AMC

3. Once E of I is received, Request for Proposal (RFP) will be issued.
4. Prospective Vendors to submit their proposal by 27 Jan 2026 to the office of the RFC. Email ID: vendorteam@sandeepvihar.com

PUBLIC NOTICE

The General Public is hereby put to notice that my client intends to purchase the Schedule Property from its original owners namely **1) Sri.J.SHASHI KIRAN,** S/o. Late. Jayadeva Reddy, **2) Sri. J.VINOD,** S/o. Late. Jayadeva Reddy, both are residing at No.146, Rajkumar Road, Near Yallamma Temple, Agara, HSR Layout Bangalore – 560102 and **3) Smt.B.L.GAYATHRI,** W/o. Late. G.Prabhakara Reddy, Aged about 67 years, Aadhaar No.8331 2936 0417, PAN:AGQPG9848N, residing at NO.741, 1st A Cross, 18th Main, 6th Block, Koramangala, Bengaluru – 560 095.

Any person having any right, title, claim or interest in the Schedule Property must notify the undersigned with documentary proof thereof within **Seven (7) days** of this publication. In case no such notice is received by us within **Seven (7) days** from the date of publication of this notice, it shall be presumed that the title of the aforesaid owners with respect to the Schedule Property is clear, marketable and free from encumbrance/s of any kind whatsoever and no person has any right, title or interest of any nature whatsoever in respect of the Schedule Property or any part thereof. Claims or alleged interest, if any, which are not received within **Seven (7) days** from the date of publication of this notice shall be deemed to have been waived and disregarded for all intents and purposes and shall not be binding on my client.

SCHEDULE PROPERTY
All that piece and parcel of the Property bearing **Site No.246,** Municipal No.246/67/1, E.P.I.D. No.2530786844 and Municipal No.246/67, E.P.I.D. No. 9302584929, situated at **43rd Cross, Jayanagar 5th Block, Bengaluru,** measuring East to West **40 feet,** North to South **60 feet,** along with building thereon and bounded on: -
East by : Site No.247 **West by : Site No.245.**
North by : Road **South by : Site No.256**

G.V. Sudhakar, Advocate
No. 346/35, 12th Cross, 7th Main, 2nd Block, Jayanagar, Bangalore -560011. Ph: 080-26660013, 9886359644

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Commercial Land

Sarjapur Road

COMMERCIAL LAND Sale 25000Sft Dommasandra Electronic City Main Road Near PRR Junction And DPS 8884501767

Farm House/ Land/ Resorts

General

HILLTOP FARM For Sale in Wayanad. Cont: 7338630606

Sites

Uttarahalli

SALE: KUMARASWAMY layout, ISRO housing society, 3rd B Main road 3630 sq ft, 17.5 K/ sq ft,Serious buyers only Call +17028216450 Whatspp or email animalhouzvet@gmail.com

Doddaballapur Road

DODDABALAPURA TO BANGALORE Main Road Facing 20x30 Near Doddabalapura Railway Station SALE 49 LakhS: 9342552428

Flat

Banashankari

KATRIGUPPE GANAPATHI HANUMANTHA RESIDENCY 3 BHK FLATS FOR SALE Rs. 8999/ SFT Contact: 94482-58218/ 96065-03064

JOB OPPORTUNITIES

Part-Time Jobs

CHANNEL PARTNER with HDFC Bank Subsidiary. Age 40-69, 75K, PF/ MC, Experience Only: 9902072424

PERSONAL

Change of Name

I, DHULIPALLA SRISKANDA #7, 3rd Cross, Ramanjaneya Layout, Marathahalli, Bengaluru-37, Have Changed My Name To DHULIPALLA SHREE SKANDHA Vide Affidavit Dated- 08/01/2026

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

EDUCATION SUCCESS

ಅಭಿನಂದನೆಗಳು

ಭವ್ಯ ಎಚ್
ಪಿ ಹೆಚ್.ಡಿ ಪ್ರದಾನ
ಶ್ರೀ ಹನುಮಂತರಾಯಪ್ಪ ಮತ್ತು ಶ್ರೀಮತಿ ಎಚ್. ಆರ್. ಸರೋಜಮ್ಮ ಅವರ ಪುತ್ರಿ ಮತ್ತು ಅರ್ಥಶಾಸ್ತ್ರ ಪ್ರಾಧ್ಯಾಪಕಿ, ಟ್ಯಾಪ್‌ರೂಟ್ ಪಿಯು ಕಾಲೇಜು, ಅವರಿಗೆ ತುಮಕೂರು ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್‌ಡಿ) ಪದವಿ ಪ್ರದಾನವಾಗಿದೆ. “Impact of Organic Farming on Socio–economic Status of Farmers in Karnataka: A Comparative Study” ಎಂಬ ಸಂಶೋಧನಾ ಪ್ರಬಂಧವನ್ನು ಡಾ. ವಿಲಾಸ್ ಎಂ. ಕಾದ್ರೋಳಕರ್, ಹಿರಿಯ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು ಅವರ ಮಾರ್ಗದರ್ಶನದಲ್ಲಿ ಪೂರ್ಣಗೊಳಿಸಲಾಗಿದೆ.
ಶುಭಕೋರುವವರು : ಕುಟುಂಬವರ್ಗ ಮತ್ತು ಸ್ನೇಹಿತರು

CHANGE OF NAME
I, **DIYA BHARATH GIRIYAPURA & DIYA BHARATH,** D/o Bharath S. Giriyapura, residing at # 7B, SJR Eastwood, Haralur Road, Bengaluru-560102, declare that the above names pertain to me only. Henceforth I shall be known as **DIYA BHARATH** vide affidavit 08.01.2026 before notary K. Ramegowda, Bengaluru

I, SANDHYA.N d/o Late Narayanan Kutty K E w/o Arayath Koroth Haridas R/o Flat 205 Celestial Apartment 2nd Block 2nd Cross BEL Layout Vidyaranyapura Bangalore 97 have changed my name after marriage to Sandhya N Hari or Sandhya Narayanan Hari in its expanded form vide affidavit number IN-KA45180754038798Y dtd 7th January 2025 sworn before Notary K.C. Pemmaiah Vidyaranyapura Bangalore 97

I, ARUNA SOUNDARAN residing at Bangalore-50 have changed my name as ARUNA SOUNDIRAN vide affidavit dated 07-01-2025 before Notary K.S. Bammappanavar, Bangalore

I,AMIT BHADORIA Residing at No.211, 6th A Main, 2nd Cross, Vinayaka Nagar, Defence Colony, Yelahanka, Bangalore-560063 have changed my minor Daughter's Name from SANSKRITI SINGH to SANSKRITI BHADORIA vide Affidavit Dtd:08-01-2026 Sworn Before Notary G.R.Rajanna, Bangalore.

Announcements

THIS IS to inform all concerned that Rajalakshmi (NSDL Client Ids: 26500855, 26501149), Rajalakshmi H (Pan:Akppr***M,Aadhaar:XXXXXXXX4464)& Rajalakshmi Hariharan (Passport:M*82) are the same person. This is to inform all concerned that Hariharan (Nsdl Client id 26501149), Hariharan T S (Pan: Aabph***A, Aadhaar:XXXXXXXX7785) & Hariharan Taracad Sundaresan (Passport:M*43) are the same person.

ಒತ್ತುವರಿ ಆರೋಪ: ಎಫ್ಐಆರ್ ಪ್ರಶ್ನಿಸಿ ಶ್ರೀಶ್ರೀ ರವಿಶಂಕರ ಗುರೂಜಿ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆರೆ ಒತ್ತುವರಿ ಆರೋಪಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಬಿಎಂಟಿಎಫ್ ದಾಖಲಿಸಿರುವ ಎಫ್ಐಆರ್ ರದ್ದುಪಡಿಸಬೇಕು' ಎಂದು ಕೋರಿ ಆರ್ಟ್ ಆಫ್ ಲೀವಿಂಗ್ ಪ್ರತಿಷ್ಠಾನದ ಸಂಸ್ಥಾಪಕ ಶ್ರೀಶ್ರೀ ರವಿಶಂಕರ ಗುರೂಜಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

'ನನ್ನ ವಿರುದ್ಧ, ಬೆಂಗಳೂರು ಮೆಟ್ರೊಪಾಲಿಟನ್ ಟಾಸ್ಕ್‌ಫೋರ್ಸ್ (ಬಿಎಂಟಿಎಫ್) ದಾಖಲಿಸಿರುವ ಎಫ್ಐಆರ್ ರದ್ದುಪಡಿಸಬೇಕು' ಎಂದು ಕೋರಿ ರವಿಶಂಕರ ಗುರೂಜಿ (68) ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಶ್ರೀಶ್ರೀ ಪರ ಹೈಕೋರ್ಟ್ ವಕೀಲ ಪಿ.ಪ್ರಸನ್ನ ಕುಮಾರ್ ಅವರು, 'ಅರ್ಜಿದಾರರ ವಿರುದ್ಧ ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಕಗ್ಗಲೀಪುರ ಗ್ರಾಮದ ಸರ್ವೆ ನಂಬರ್ 46, 135, 137, 150, 160, 164/1 ಮತ್ತು 164/2ರಲ್ಲಿನ ವಿವಿಧೆಡೆ ಸರ್ಕಾರಿ ಜಮೀನು, ಕೆರೆ ಮತ್ತು ರಾಜಕಾಲುವೆ ಒತ್ತುವರಿ ಮಾಡಿದ ಸುಳ್ಳು ಆರೋಪ ಹೊರಿಸಲಾಗಿದೆ' ಎಂದರು.

'ವಾಸ್ತವದಲ್ಲಿ ಒತ್ತುವರಿ ಮಾಡಲಾಗಿದೆ ಎಂಬ ಜಮೀನುಗಳ ಮಾಲೀಕತ್ವಕ್ಕೂ ಮತ್ತು ಅರ್ಜಿದಾರರಿಗೂ ಯಾವುದೇ ಸಂಬಂಧವಿಲ್ಲ. ಒತ್ತುವರಿ ಟೇಬಲ್ ಕಾಲಂನಲ್ಲೂ ಅವರ ಹೆಸರಿಲ್ಲ. ಪೊಲೀಸರು ಅರ್ಜಿದಾರರ ಜೊತೆಗಿನ ಇತರ ನಾಲ್ವರು ಭೂ ಮಾಲೀಕರಿಗೆ ನೋಟಿಸ್ ನೀಡಿದ್ದಾರೆ. ಆದರೆ, ಶ್ರೀಶ್ರೀ ಅವರಿಗೆ ಯಾವುದೇ ನೋಟಿಸ್ ನೀಡಿಲ್ಲ' ಎಂದು ಸ್ಪಷ್ಟಪಡಿಸಿದರು.

'ಇದೇ ಆರೋಪಕ್ಕೆ ಸಂಬಂಧಿಸಿದಂತೆ ಈ ಹಿಂದೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಲಾಗಿತ್ತು. ಅದರಲ್ಲಿ ಶ್ರೀಶ್ರೀ ಅವರನ್ನೂ ಪ್ರತಿವಾದಿಗಳನ್ನಾಗಿ ಮಾಡಲಾಗಿತ್ತು. ಅಂತಿಮವಾಗಿ ತಹಶೀಲ್ದಾರ್ ನೀಡಿದ್ದ ವರದಿಯಲ್ಲಿ ಅರ್ಜಿದಾರರ ವಿರುದ್ಧ ಯಾವುದೇ ಸರ್ಕಾರಿ ಜಮೀನು ಒತ್ತುವರಿ ಆರೋಪ ಇರಲಿಲ್ಲ. ಆದರೆ, ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಲೇವಾರಿ ನಂತರವೂ ಶ್ರೀಶ್ರೀ ಅವರ ವಿರುದ್ಧ ಎಫ್ಐಆರ್ ದಾಖಲಿಸಿ ಮಾನಸಿಕ ತೊಂದರೆ ನೀಡಲಾಗುತ್ತಿದೆ. ಹಾಗಾಗಿ, ಕರ್ನಾಟಕ ಭೂ ಕಂದಾಯ ಕಾಯ್ದೆ–1964ರ ಕಲಂ 192 ಎ ಅಡಿಯಲ್ಲಿ ದಾಖಲಿಸಿರುವ ಎಫ್ಐಆರ್ ರದ್ದುಪಡಿಸಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಪೊಲೀಸರು ನೋಟಿಸ್ ನೀಡಿಲ್ಲ ಎಂದಾದ ಮೇಲೆ ಯಾಕೆ ಈ ಅರ್ಜಿ ಸಲ್ಲಿಸಿದ್ದೀರಿ? ಒಂದು ವೇಳೆ ಪೊಲೀಸರು ನಿಮಗೆ ನೋಟಿಸ್ ನೀಡಿದರೆ ಆವಾಗ ಮಾತ್ರವೇ ತೊಂದರೆ ಅಲ್ಲವೇ' ಎಂದು ಪ್ರಶ್ನಿಸಿ ಪ್ರಾಸಿಕ್ಯೂಷನ್ ಪರ ಹಾಜರಿದ್ದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ ಅವರಿಗೆ, 'ಅರ್ಜಿದಾರ ಶ್ರೀಶ್ರೀ ರವಿಶಂಕರ ಗುರೂಜಿ ಅವರ ವಿರುದ್ಧ ಯಾವುದೇ ಆತುರದ ಕ್ರಮ ಕೈಗೊಳ್ಳಬಾರದು' ಎಂದು ಮೌಖಿಕವಾಗಿ ಆದೇಶಿಸಿತು. ಅಂತೆಯೇ, 'ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಿ' ಎಂದು ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಲಾಗಿದೆ.

ಕೆಎಂಎಫ್ ಕೆಲಸದ ಆಮಿಷ: ₹50 ಲಕ್ಷ ವಂಚನೆ

ಇಬ್ಬರು ಆರೋಪಿಗಳ ವಿರುದ್ಧ ಮಲ್ಲೇಶ್ವರ ಠಾಣೆಯಲ್ಲಿ ಎಫ್ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳದಲ್ಲಿ (ಕೆಎಂಎಫ್) ಕೆಲಸ ಕೊಡಿಸುವುದಾಗಿ ನಂಬಿಸಿ 10 ಮಂದಿಯಿಂದ ₹50 ಲಕ್ಷ ಪಡೆದು ವಂಚಿಸಿರುವ ಸಂಬಂಧ ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಮಲ್ಲೇಶ್ವರ ಠಾಣೆಯ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಆರೋಪಿಗಳಾದ ಎನ್. ಕೃಷ್ಣನ್, ನಾಗರಾಜ್ ಅವರು ತಲೆಮರೆಸಿಕೊಂಡಿದ್ದು, ಅವರ ಪತ್ತೆಗೆ ವಿಶೇಷ ಪೊಲೀಸ್ ತಂಡ ರಚಿಸಲಾಗಿದೆ. ಆರ್.ಟಿ.ನಗರದ ನಿವಾಸಿ ಕರೀಗೌಡ ಪಾಟೀಲ ಅವರು ನೀಡಿರುವ ದೂರಿನ ಮೇರೆಗೆ ಭಾರತೀಯ ನ್ಯಾಯ ಸಂಹಿತೆ (ಬಿಎನ್ಎಸ್) ಸೆಕ್ಷನ್‌ಗಳಾದ 316(2), 3(5) ಅಡಿ ಮಂಗಳವಾರ ಪ್ರಕರಣ ದಾಖಲಾಗಿದೆ.

‘2022ರಲ್ಲಿ ಮಲ್ಲೇಶ್ವರ ಪಾಕಶಾಲಾ ಹೋಟೆಲ್‌ನಲ್ಲಿ ಗೋಪಿ ಎಂಬುವವರು ಎನ್.ಕೃಷ್ಣನ್ ಅವರನ್ನು ಪರಿಚಯಿಸಿದ್ದರು. ಕೃಷ್ಣನ್ ಅವರು ತಾನು ಕೆಎಎಸ್ ಅಧಿಕಾರಿಯಾಗಿದ್ದು, ಕೆಎಂಎಫ್‌ನಲ್ಲಿ ನಿರ್ದೇಶಕನಾಗಿ ಕೆಲಸ ಮಾಡುತ್ತಿರುವುದಾಗಿ ಹೇಳಿಕೊಂಡಿದ್ದರು. ಅದೇ ಸಂದರ್ಭದಲ್ಲಿ ಆರೋಪಿ ನಾಗರಾಜ್ ಸಹ, ತಾನು ಉನ್ನತ ಹುದ್ದೆಯಲ್ಲಿ ಇರುವುದಾಗಿ ಹೇಳಿ ನಕಲಿ ಗುರುತಿನ ಚೀಟಿ ತೋರಿಸಿದ್ದರು.

ಕೆಎಂಎಫ್‌ನಲ್ಲಿ 25 ಸರ್ಕಾರಿ ಹುದ್ದೆಗಳಿದ್ದು, ಉದ್ಯೋಗಿಗಳ ಆಯ್ಕೆ ಅಧಿಕಾರ ನಮಗಿದೆ. ಆಯ್ಕೆ ಮಾಡಲು ಪರೀಕ್ಷೆ ಅಥವಾ ಸಂದರ್ಶನದ ಅಗತ್ಯ ಇಲ್ಲ. ಪ್ರತಿ ಅಭ್ಯರ್ಥಿ ₹10 ಲಕ್ಷ ಸರ್ಕಾರಿ ಶುಲ್ಕ ಪಾವತಿಸಿದರೆ ಮೂರು ತಿಂಗಳಲ್ಲಿ ನೇಮಕಾತಿ ಪತ್ರ ನೀಡಲಾಗುವುದು ಎಂಬುದಾಗಿ ನಂಬಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ಅಭ್ಯರ್ಥಿಗಳಾದ ವಿಜಯೇಂದ್ರ ಎಸ್. ಪಾಟೀಲ, ಜಿ.ಡಿ.ಮಧು, ಎಸ್.ಅನಿತಾ, ಪಿ.ಸೂರಜ್, ಎಂ.ಅಕ್ಷಯ್ ನಾಯಕ್ ಸೇರಿದಂತೆ 10 ಅಭ್ಯರ್ಥಿಗಳ ಜತೆಗೆ ಆರೋಪಿಗಳು ಮಾತುಕತೆ ನಡೆಸಿದ್ದರು. 2022ರ ಡಿಸೆಂಬರ್‌ನಿಂದ 2023ರ ಡಿಸೆಂಬರ್‌ವರೆಗೆ ಬ್ಯಾಂಕ್ ವರ್ಗಾವಣೆಯ ಮೂಲಕ ₹36 ಲಕ್ಷ ಹಾಗೂ ನಗದು ರೂಪದಲ್ಲಿ ₹14 ಲಕ್ಷವನ್ನು ಆರೋಪಿಗಳಿಗೆ ನೀಡಲಾಗಿತ್ತು. 2024ರ ಮಾರ್ಚ್‌ನಲ್ಲಿ ಅಭ್ಯರ್ಥಿಗಳು ಹಾಗೂ ಆರೋಪಿಗಳು ಒಪ್ಪಂದದ ಪತ್ರ ಮಾಡಿಕೊಂಡಿದ್ದರು. ಹಣ ಪಾವತಿಸಿದ ವಿವರ ಹಾಗೂ ಕೆಲಸ ಸಿಗದಿದ್ದರೆ ಹಣವನ್ನು ವಾಪಸ್ ಕೊಡುವುದಾಗಿ ಪತ್ರದಲ್ಲಿ ಉಲ್ಲೇಖಿಸಲಾಗಿತ್ತು.

ಅಲ್ಲದೇ ಆರೋಪಿಗಳು, ಅಭ್ಯರ್ಥಿಗಳಿಗೆ ಚೆಕ್ ಸಹ ನೀಡಿದ್ದರು. ಕೆಲವು ದಿನಗಳು ಕಳೆದ ಮೇಲೆ ಮೈಸೂರಿನಲ್ಲಿ ಸಂದರ್ಶನ ನಡೆಯಲಿದೆ ಎಂದು ಅಭ್ಯರ್ಥಿಗಳಿಗೆ ಇ–ಮೇಲ್ ಮೂಲಕ ಸಂದೇಶ ಕಳಹಿಸಲಾಗಿತ್ತು. ಅದಾದ ಮೇಲೆ ಕೆಲಸವನ್ನು ನೀಡಿಲ್ಲ’ ಎಂದು ದೂರು ನೀಡಲಾಗಿದೆ.

ಇನ್ನೂ ಹೆಚ್ಚಿನ ಹಣಕ್ಕೆ ಬೇಡಿಕೆ

‘ನೇಮಕಾತಿ ಪತ್ರದ ಬಗ್ಗೆ ವಿಚಾರಣೆ ನಡೆಸಿದಾಗ ಕೆಎಂಎಫ್ ಆಯ್ಕೆಪಟ್ಟಿಯಲ್ಲಿ ಹೆಸರುಗಳನ್ನು ಸೇರಿಸಲಾಗಿದೆ. ಇನ್ನೂ ಹೆಚ್ಚಿನ ಹಣ ನೀಡಬೇಕು. ಹಣ ನೀಡದಿದ್ದರೆ, ಮೊದಲು ನೀಡಿದ್ದ ಹಣವನ್ನು ವಾಪಸ್ ನೀಡುವುದಿಲ್ಲ ಎಂಬುದಾಗಿ ಆರೋಪಿಗಳು ಬೆದರಿಕೆ ಹಾಕಿದ್ದರು’ ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಹೈಕೋರ್ಟ್‌ನಲ್ಲಿ ಉದ್ಯೋಗ ಕೊಡಿಸುವ ಆಮಿಷ: ₹ 55 ಲಕ್ಷ ವಸೂಲಿ

ಬೆಂಗಳೂರು: ಹೈಕೋರ್ಟ್‌ನಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ₹55 ಲಕ್ಷ ವಂಚಿಸಿದ್ದ ಏಳು ಆರೋಪಿಗಳ ವಿರುದ್ಧ ಗಂಗಮ್ಮನಗುಡಿ ಪೊಲೀಸ್ ಠಾಣೆಯಲ್ಲಿ ಮತ್ತೊಂದು ಎಫ್ಐಆರ್ ದಾಖಲಾಗಿದೆ.

ಸುದರ್ಶನ್ ಅಡ್ಯಂತಾಯ, ಅರ್ಜುನ್ ಅಡ್ಯಂತಾಯ, ಲವಿನಾ ಜನೆಟ್ ಮೆಂಟೆರೊ, ಜೈಸನ್ ಡಿಸೋಜಾ, ಮಹೇಂದ್ರ ಎಸ್. ಕಾಂಚನ್, ಪಿ.ಪಿ.ರಾಕೇಶ್, ನೆಲ್ಸನ್ ವಿರುದ್ಧ ಪ್ರಕರಣ ದಾಖಲಾಗಿದೆ.

‘ಸಿ.ಎಂ. ಸುಮಿತ್ ಕುಮಾರ್ ಅವರು ₹8 ಲಕ್ಷ, ಜಿ.ಶಿವಕುಮಾರ್ ₹8 ಲಕ್ಷ, ಎಂ.ಎಸ್.ಮಹಿಮಾ ಅವರು ₹11 ಲಕ್ಷ, ಬಿ.ಆರ್.ಹರ್ಷಾ ಅವರು ₹15 ಲಕ್ಷ, ಹರ್ಷಿತಾ ಶ್ರೀನಿವಾಸ್ ₹13 ಲಕ್ಷವನ್ನು ಆರೋಪಿಗಳಿಗೆ ನೀಡಿದ್ದರು. ಒಟ್ಟು ₹55 ಲಕ್ಷ ಪಡೆದು ಆರೋಪಿಗಳು ವಂಚಿಸಿದ್ದಾರೆ’ ಎಂದು ದೂರು ನೀಡಲಾಗಿದೆ.

ಹೈಕೋರ್ಟ್‌ನಲ್ಲಿ ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿತ್ತು. ಆರೋಪಿಗಳು ಕೆಲಸ ಕೊಡಿಸುವುದಾಗಿ ಹಣ ಪಡೆದು ವಂಚನೆ ಎಸಗಲಾಗಿದೆ. ಇದೇ ಪ್ರಕರಣದಲ್ಲಿ ಸಿಸಿಬಿಯಲ್ಲೂ ಎಫ್ಐಆರ್ ದಾಖಲಾಗಿದ್ದು ತನಿಖೆ ನಡೆಯುತ್ತಿದೆ. ಅವರಿಗೆ ಈ ಎಫ್ಐಆರ್ ವರ್ಗಾವಣೆ ಮಾಡಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಎನ್ಎಸ್ಎಸ್ ಅಧಿಕಾರಿ ವಿರುದ್ಧ ಎಫ್ಐಆರ್

ಬೆಂಗಳೂರು: ಬೆಂಗಳೂರು ದಕ್ಷಿಣ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸದಸ್ಯ ಹನಿಯೂರು ಚಂದ್ರೇಗೌಡ ಅವರನ್ನು ಅಪಹರಿಸಿ, ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರ ವಿರುದ್ಧ ರಾಜರಾಜೇಶ್ವರಿನಗರ ಪೊಲೀಸ್ ಠಾಣೆಯಲ್ಲಿ ಬುಧವಾರ ಎಫ್ಐಆರ್ ದಾಖಲಾಗಿದೆ.

ರಾಜ್ಯ ಎನ್ಎಸ್ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಮತ್ತು ಅವರ ಆಪ್ತ ಫಣೀಂದ್ರ ಪ್ರಸಾದ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್ಎಸ್) ಸೆಕ್ಷನ್‌ಗಳಾದ 352, 351(2), ಆರ್/ಡ್ಬ್ಲ್ಯು 3(5) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಡಿ.17ರಂದೇ ಚಂದ್ರೇಗೌಡ ದೂರು ನೀಡಿದ್ದರು. ಅದನ್ನು ಆಧರಿಸಿ ಪೊಲೀಸರು, ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಿಕೊಂಡಿದ್ದರು. ಬಳಿಕ, ಎಫ್ಐಆರ್ ದಾಖಲಿಸಲು ಪೊಲೀಸರಿಗೆ ಸೂಚನೆ ನೀಡುವಂತೆ 46ನೇ ಎಸಿಜೆಎಂ ನ್ಯಾಯಾಲಯಕ್ಕೆ ದೂರುದಾರರು ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯದ ಸೂಚನೆ ಮೇರೆಗೆ ಈಗ ಎಫ್ಐಆರ್ ದಾಖಲಾಗಿದೆ.

ಸುದ್ದಿ 2 ನಿಮಿಷ

ಬಿಜೆಪಿಯಲ್ಲೀಗ ಏಕವ್ಯಕ್ತಿ ವ್ಯವಸ್ಥೆ ಇಲ್ಲ: ಸದಾನಂದ ಗೌಡ

ಬೆಂಗಳೂರು: ‘ಬಿಜೆಪಿಯಲ್ಲಿ ಏಕ ವ್ಯಕ್ತಿ ವ್ಯವಸ್ಥೆ ಇಲ್ಲ, ಪಕ್ಷದ ಪ್ರಮುಖರ ಸಭೆಯಲ್ಲೇ ಎಲ್ಲವನ್ನೂ ತೀರ್ಮಾನ ಮಾಡಲಾಗುತ್ತದೆ. ಸಣ್ಣಪುಟ್ಟ ಸಮಸ್ಯೆ, ವೈಮನಸ್ಸುಗಳನ್ನು ಸರಿಮಾಡಿಕೊಂಡು ಪಕ್ಷವನ್ನು ಬಲಪಡಿಸುತ್ತೇವೆ’ ಎಂದು ಮಾಜಿ ಮುಖ್ಯಮಂತ್ರಿ ಸದಾನಂದ ಗೌಡ ಹೇಳಿದರು.



ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಪ್ರತಿ ಜಿಲ್ಲೆಯ ಪ್ರಮುಖ ಕಾರ್ಯಕರ್ತರ ಜತೆ ಎರಡು ಗಂಟೆ ಸಭೆ ನಡೆಸಲಾಗುತ್ತಿದೆ. ವಿಧಾನಸಭೆಯ ಎರಡು ಕ್ಷೇತ್ರಗಳ ಉಪಚುನಾವಣೆ, ವಿಧಾನಪರಿಷತ್, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಗಳಿಗೆ ಪಕ್ಷವನ್ನು ಸಜ್ಜುಗೊಳಿಸಲಾಗುತ್ತಿದೆ. ರಾಜ್ಯ ರಾಜಕೀಯದಲ್ಲಿ ಹೊಸ ಅಧ್ಯಾಯಕ್ಕೆ ನಾಂದಿ ಹಾಡುತ್ತೇವೆ’ ಎಂದರು.

‘ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ಜನರಿಗೆ ಸಮಾಧಾನ ತಂದಿಲ್ಲ. ರಾಜ್ಯದ ಅಭಿವೃದ್ಧಿಗೆ ಹಣ ಇಲ್ಲದಿದ್ದರೂ ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಹಣ ನೀಡಿದ್ದಾರೆ’ ಎಂದೂ ದೂರಿದರು.

ಬಾಲಕಿ ಕೊಲೆ: ಒಡಿಶಾದಲ್ಲಿ ಆರೋಪಿ ಸೆರೆ

ಬೆಂಗಳೂರು: ನಲ್ಲೂರುಹಳ್ಳಿಯ ಕಾರ್ಮಿಕರ ಶೆಡ್ ಎದುರು ಆಟವಾಡುತ್ತಿದ್ದ ಆರು ವರ್ಷದ ಬಾಲಕಿಯನ್ನು ಅಪಹರಿಸಿ, ಕೊಲೆ ಮಾಡಿ ಮೃತದೇಹವನ್ನು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ ಎಸೆದು ಪರಾರಿಯಾಗಿದ್ದ ಆರೋಪಿಯನ್ನು ವೈಟ್‌ಫೀಲ್ಡ್ ಠಾಣೆಯ ಪೊಲೀಸರು ಒಡಿಶಾದಲ್ಲಿ ಬಂಧಿಸಿದ್ದಾರೆ.

ಯೂಸುಫ್ ಮೀರ್ ಬಂಧಿತ ಆರೋಪಿ. ಪಶ್ಚಿಮ ಬಂಗಾಳದ ಇಜಾಮುಲ್ ಶೇಖ್ ಅವರ ಪುತ್ರಿ ಶಹನಾಜ್ ಖಾತುನ್‌ಳನ್ನು ಕೊಲೆ ಮಾಡಿ ಆರೋಪಿ ಪರಾರಿಯಾಗಿದ್ದ.

ಕೆಲವು ತಿಂಗಳ ಹಿಂದೆ ನಗರಕ್ಕೆ ಬಂದಿದ್ದ ಇಜಾಮುಲ್ ಶೇಖ್ ಕುಟುಂಬಸ್ಥರು ನಲ್ಲೂರುಹಳ್ಳಿ ಸುತ್ತಮುತ್ತ ಕೂಲಿ ಕೆಲಸ ಮಾಡುತ್ತಿದ್ದರು. ಸೋಮವಾರ ಬೆಳಿಗ್ಗೆ ಶೆಡ್ ಎದುರು ಬಾಲಕಿ ಆಟವಾಡುತ್ತಿದ್ದಳು. ಆಗ ಬಾಲಕಿಯ ಅಪಹರಣ ನಡೆದಿತ್ತು. ಮಂಗಳವಾರ ಬೆಳಿಗ್ಗೆ ಪೋಷಕರು ನಾಪತ್ತೆ ದೂರು ದಾಖಲಿಸಿದ್ದರು. ಠಾಣೆಯ ಸಿಬ್ಬಂದಿ ಹುಡುಕಾಟ ನಡೆಸುತ್ತಿದ್ದಾಗ ದೇವಸ್ಥಾನದ ಪಕ್ಕದ ಕಾಲುವೆಯಲ್ಲಿ ಅದೇ ದಿನ ರಾತ್ರಿ ಮೃತದೇಹ ಪತ್ತೆಯಾಗಿತ್ತು ಎಂದು ಪೊಲೀಸರು ಹೇಳಿದರು.

‘ಪಕ್ಕದ ಮನೆಯ ನಿವಾಸಿಯ ಜತೆಗೆ ಬಾಲಕಿಯ ತಾಯಿ ಇತ್ತೀಚೆಗೆ ಜಗಳವಾಡಿದ್ದರು. ಅದೇ ಸಿಟ್ಟಿನಿಂದ ಯೂಸುಫ್ ಮೀರ್, ಬಾಲಕಿಯನ್ನು ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

‘ಖಚಿತ ಮಾಹಿತಿ ಹಾಗೂ ಸಿಸಿಟಿವಿ ದೃಶ್ಯಾವಳಿ ಆಧರಿಸಿ ಆರೋಪಿ ಸಾಗಿದ್ದ ಮಾರ್ಗವನ್ನು ಪತ್ತೆಹಚ್ಚಲಾಯಿತು. ಒಡಿಶಾಕ್ಕೆ ವಿಶೇಷ ತಂಡವು ತೆರಳಿ ಆರೋಪಿಯನ್ನು ಬಂಧಿಸಿದೆ. ಅಲ್ಲಿನ ನ್ಯಾಯಾಲಯದ ಅನುಮತಿ ಪಡೆದು ಆರೋಪಿಯನ್ನು ನಗರಕ್ಕೆ ಕರೆತರಲಾಗಿದೆ’ ಎಂದು ಮೂಲಗಳು ಹೇಳಿವೆ.

ಚಿಟಿಕೆ ಸುದ್ದಿ

ನಾಟಕ ಪ್ರದರ್ಶನ

ಬೆಂಗಳೂರು: ‘ಅಂತರಂಗ’ ರಂಗ ತಂಡವು ಇದೇ 12ರ ಸಂಜೆ 7.15ಕ್ಕೆ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ನಾಟಕ ಪ್ರದರ್ಶನ ಏರ್ಪಡಿಸಿದೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ರಂಗತಂಡದ ಕಾರ್ಯದರ್ಶಿ ಅಂಕಲ್ ಶ್ಯಾಮ್, ‘ತಾಯಿ ಮತ್ತು ಹೆಂಡತಿ ನಡುವೆ ಸಿಲುಕಿ ನರಳಾಡುವ ಗಂಡಿನ ವ್ಯಥೆಯನ್ನು ವಿಡಂಬನೆ ಮಾಡುವ ಟಿ.ಪಿ. ಕೈಲಾಸಂ ವಿರಚಿತ ‘ಹೋಂ ರೂಲು’ ಹಾಗೂ ಟಿ.ಪಿ.ಕೆ. ಅವರ ನಾಟಕಗಳು ಮತ್ತು ಜೀವನದ ಸುತ್ತ ಹೆಣೆಯಲಾಗಿರುವ ಯಡ್ರಾವಿ ನಿರ್ದೇಶನದ ‘ಕನ್ನಡಕ್ಕೊಬ್ಬನೇ ಕೈಲಾಸಂ’ ಏಕವ್ಯಕ್ತಿ ನಾಟಕಗಳು ಪ್ರದರ್ಶನಗೊಳ್ಳಲಿವೆ’ ಎಂದು ಮಾಹಿತಿ ನೀಡಿದ್ದಾರೆ.

ಆಸಕ್ತರು ಬುಕ್ ಮೈ ಶೋ ಮೂಲಕ ಟಿಕೆಟ್ ಖರೀದಿಸಬಹುದು. ಹೆಚ್ಚಿನ ಮಾಹಿತಿಗೆ 9880914509/ 9986911321 ಸಂಪರ್ಕಿಸಬಹುದು.

ಸಂಸ್ಕೃತ ಸ್ಪರ್ಧೆಗಳು

ಬೆಂಗಳೂರು: ಸ್ವಾಮಿ ವಿವೇಕಾನಂದರ 163ನೇ ಜಯಂತಿ ಅಂಗವಾಗಿ ಇದೇ 11ಕ್ಕೆ ಸಮ್ಯಕ್ ಪ್ರತಿಷ್ಠಾನ ವಿವಿಧ ಸಂಸ್ಕೃತ ಸ್ಪರ್ಧೆಗಳನ್ನು ಏರ್ಪಡಿಸಿದೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಪ್ರತಿಷ್ಠಾನದ ಸಂಯೋಜಕ ಹನೇಶ್ ಪ್ರಸಾದ್, ‘ಭಾಗವತ ಕಥನ, ಗೀತ ಗಾಯನ, ಸಂಸ್ಕೃತದಲ್ಲಿ ಪ್ರಬಂಧ ಲೇಖನ, ರಾಧಾಕೃಷ್ಣ ವೇಷಭೂಷಣ ಸ್ಪರ್ಧೆಗಳು ಇರಲಿವೆ. ತುಂಬೀಹಳ್ಳಿ ಮಠದ ವಿದ್ಯಾವಲ್ಲಭತೀರ್ಥ ಸ್ವಾಮಿ ದಿವ್ಯ ಸಾನ್ನಿಧ್ಯ ವಹಿಸುವರು’ ಎಂದಿದ್ದಾರೆ.

ವಿವರಗಳಿಗೆ 8618784965/ 9035693252 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎ.ಕೆ.ವಸಂತ್ ನೇಮಕ

ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಕಾನೂನು, ಮಾನವ ಹಕ್ಕುಗಳು ಮತ್ತು ಮಾಹಿತಿ ಹಕ್ಕು ವಿಭಾಗದ ಕಾರ್ಯಾಧ್ಯಕ್ಷರನ್ನಾಗಿ ಹೈಕೋರ್ಟ್‌ನ ಹಿರಿಯ ವಕೀಲ ಎ.ಕೆ.ವಸಂತ್ ಅವರನ್ನು ನೇಮಕ ಮಾಡಲಾಗಿದೆ.

ಕೆಪಿಸಿಸಿ ವಕ್ತಾರ ಸಿ.ಎಂ.ಧನಂಜಯ ಅವರು ಈ ನೇಮಕದ ಆದೇಶ ಹೊರಡಿಸಿದ್ದಾರೆ.

ಕೋಗಿಲು: ಕಸ್ಟಡಿಗೆ ಆರೋಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣ ಪಡೆದು ಕೋಗಿಲು ಬಡಾವಣೆಯಲ್ಲಿ ಅನಧಿಕೃತವಾಗಿ ಮನೆ ನಿರ್ಮಾಣಕ್ಕೆ ಸಹಕರಿಸಿದ್ದ ಪ್ರಕರಣದಲ್ಲಿ ಬಂಧಿತ ಆರೋಪಿಗಳಾದ ವಿಜಯ್ ಹಾಗೂ ವಸೀಂ ಉಲ್ಲಾ ಬೇಗ್ ಅವರನ್ನು ಯಲಹಂಕ ಠಾಣೆ ಪೊಲೀಸರು ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆದಿದ್ದಾರೆ.

ಪ್ರಕರಣ ದಾಖಲಾದ ಮೇಲೆ ಆರೋಪಿಗಳು ತಲೆಮರೆಸಿಕೊಂಡಿದ್ದರು. ವಿವಿಧೆಡೆ ಕಾರ್ಯಾಚರಣೆ ನಡೆಸಿ, ಇಬ್ಬರನ್ನು ಬಂಧಿಸಲಾಗಿದೆ. ಇಬ್ಬರನ್ನೂ ನ್ಯಾಯಾಲಯಕ್ಕೆ ಹಾಜರು ಪಡಿಸಿ 14 ದಿನ ಪೊಲೀಸ್ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಪ್ರಜಾ ವಿಮೋಚನಾ ಸಂಘಟನೆಯ ಮುಖಂಡ ಮುನಿ ಆಂಜಿನಪ್ಪ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗಿದೆ. ತಲೆಮರೆಸಿಕೊಂಡಿರುವ ಮತ್ತೊಬ್ಬ ಆರೋಪಿ ರಾಬಿನ್ ಅವರಿಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ಕೆಲವು ನಿರಾಶ್ರಿತರಿಂದ ತಲಾ ₹40 ಸಾವಿರದಿಂದ ₹50 ಸಾವಿರ ಪಡೆದುಕೊಂಡು ಕೋಗಿಲು ಬಡಾವಣೆಯಲ್ಲಿ ಅನಧಿಕೃತ ಮನೆ ನಿರ್ಮಾಣಕ್ಕೆ ಆರೋಪಿಗಳು ಅವಕಾಶ ನೀಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಮೂಲಗಳು ತಿಳಿಸಿವೆ.

ಏನಿದು ಪ್ರಕರಣ?: ಘನ ತ್ಯಾಜ್ಯ ನಿರ್ವಹಣೆಗಾಗಿ ಕೋಗಿಲು ಗ್ರಾಮದ ಸರ್ವೆ ನಂಬರ್ 99ರಲ್ಲಿ 14 ಎಕರೆ 36 ಗುಂಟೆ ಜಮೀನನ್ನು ಜಿಲ್ಲಾಧಿಕಾರಿ ಬಿಬಿಎಂಪಿಗೆ ಹಸ್ತಾಂತರ ಮಾಡಿದ್ದರು. ಆ ಪ್ರದೇಶದಲ್ಲಿ ಮುಕ್ಕಾಲು ಭಾಗ ಕಾಂಪೌಂಡ್ ನಿರ್ಮಾಣ ಕಾರ್ಯ ಪೂರ್ಣಗೊಂಡಿತ್ತು. ಆ ಸ್ಥಳದಲ್ಲಿ ಎಳನೀರು ಬುರುಡೆ ಸಂಸ್ಕರಣಾ ಘಟಕ, ಪ್ರಾಣಿ ತ್ಯಾಜ್ಯ ಸಂಸ್ಕರಣಾ ಘಟಕ ನಿರ್ಮಾಣ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿತ್ತು. ಆ ಸ್ಥಳದಲ್ಲಿ ಕಾಮಗಾರಿ ನಡೆಸಲು 2023ರಲ್ಲಿ ಕಾರ್ಯಾದೇಶ ನೀಡಲಾಗಿತ್ತು. ಈ ಜಾಗದಲ್ಲಿ ನಾಲ್ಕು ಎಕರೆ ಪ್ರದೇಶವನ್ನು ಒತ್ತುವರಿ ಮಾಡಿಕೊಂಡು ಅನಧಿಕೃತವಾಗಿ ಮನೆ ನಿರ್ಮಿಸಲಾಗಿತ್ತು. ಸ್ಥಳದಲ್ಲಿದ್ದ 160 ಅನಧಿಕೃತ ಮನೆಗಳನ್ನು ಸದ್ಯ ತೆರವು ಮಾಡಲಾಗಿದೆ.

ಅನಧಿಕೃತ ಮನೆ ನಿರ್ಮಾಣಕ್ಕೆ ನಾಲ್ವರು ಆರೋಪಿಗಳು ಸಹಕಾರ ನೀಡಿದ್ದರು ಎಂದು ಆರೋಪಿಸಿ, ಎಂಜಿನಿಯರ್ ಸಂತೋಷ್ ಕುಮಾರ್ ಕದ್ದಿ ಅವರು ಯಲಹಂಕ ಠಾಣೆಗೆ ದೂರು ನೀಡಿದ್ದರು. ದೂರು ಆಧರಿಸಿ ಪ್ರಕರಣದ ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಸಾಧನೆ ಚಿತ್ರ ಉಡುಗೊರೆ

ರಾಜ್ಯದ ಮುಖ್ಯಮಂತ್ರಿಯಾಗಿ ದಾಖಲೆಯ ಅವಧಿ ಪೂರೈಸಿರುವ ಸಿದ್ದರಾಮಯ್ಯ ಅವರಿಗೆ ವಿಧಾನ ಪರಿಷತ್ ಸದಸ್ಯ ಎಂ.ಆರ್. ಸೀತಾರಾಂ ಅವರು ದೇವರಾಜ ಅರಸು–ಸಿದ್ದರಾಮಯ್ಯ ಅವರ ಕಾಲಘಟ್ಟದ ಸಾಧನೆಗಳಿರುವ ಚಿತ್ರ ನೀಡಿದರು. ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಉಪಸ್ಥಿತರಿದ್ದರು

ಕಿಂಗ್ಸ್ ಕ್ಲಬ್‌ನಲ್ಲಿ ‘ಭೂಮಿಕಾ ಕ್ಲಬ್’ ನಾಳೆ

ಬೆಂಗಳೂರು: ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಮಹಿಳೆಯರಿಗಾಗಿ ಸ್ಥಾಪಿಸಿರುವ ‘ಭೂಮಿಕಾ ಕ್ಲಬ್’ ವೇದಿಕೆಯು ಇದೇ ಶನಿವಾರ (ಜ.10) ಮಧ್ಯಾಹ್ನ 3.30ಕ್ಕೆ ನಾಗರಬಾವಿಯ ಸರ್.ಎಂ. ವಿಶ್ವೇಶ್ವರಯ್ಯ ಲೇಔಟ್‌ನಲ್ಲಿರುವ ಕಿಂಗ್ಸ್ ಕ್ಲಬ್‌ನಲ್ಲಿ 35ನೇ ಆವೃತ್ತಿಯ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

‘ಗೋಲ್ಡ್ ವಿನ್ನರ್’ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಅಡುಗೆ ತಯಾರಿ, ಸಂಗೀತ ಕಾರ್ಯಕ್ರಮ ಸೇರಿ ಹಲವು ವಿಶಿಷ್ಟತೆಯನ್ನು ಈ ಕಾರ್ಯಕ್ರಮ ಒಳಗೊಂಡಿರಲಿದೆ. 2022ರಲ್ಲಿ ಪ್ರಾರಂಭವಾದ ಈ ವೇದಿಕೆಯು, ರಾಜ್ಯದಾದ್ಯಂತ 34 ಕಾರ್ಯಕ್ರಮಗಳನ್ನು ನಡೆಸಿದೆ. ಬೆಂಗಳೂರಿನಲ್ಲಿ 15ನೇ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ.

ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಜನಪ್ರಿಯ ಧಾರವಾಹಿಯಾದ ‘ಕರ್ಣ’ದ ನಟಿ ಶ್ಯಾಮ್ ಕನ್ವರ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಕ್ಕಳ ಫ್ಯಾಷನ್ ಶೋ, ರ್‍ಯಾಂಪ್ ವಾಕ್, ಪ್ರತಿಭಾ ಪ್ರದರ್ಶನ, ರಸಪ್ರಶ್ನೆ ಸೇರಿ ವಿವಿಧ ಚಟುವಟಿಕೆಗಳು ನಡೆಯಲಿವೆ. ಡಬ್ಲ್ಯುಐಸಿಸಿಐ ಲೀಡರ್‌ಶಿಪ್ ಕೋಚಿಂಗ್ ಕೌನ್ಸಿಲ್‌ನ ಅಧ್ಯಕ್ಷೆ ಆಶಾ ಬಿರಾದಾರ್ ಅವರು ‘ಕೌಶಲದಿಂದ ಆದಾಯ’ ವಿಷಯದ ಬಗ್ಗೆ ಉಪನ್ಯಾಸ ನೀಡಲಿದ್ದಾರೆ. ಕೌಶಲ ವೃದ್ಧಿ ಹಾಗೂ ಆದಾಯ ಗಳಿಕೆಗೆ ಇರುವ ಅವಕಾಶಗಳ ಬಗ್ಗೆ ತಿಳಿಯಲು ಈ ಗೋಷ್ಠಿ ಸಹಕಾರಿಯಾಗಲಿದೆ.

ಫಿಟ್ನೆಸ್ ತಜ್ಞೆ ಚಂದನಾ ಲಕ್ಷ್ಮಿಕಾಂತ್ ಅವರು ‘ಜುಂಬಾ’ ನೃತ್ಯ ಪ್ರದರ್ಶನ ಪ್ರಸ್ತುತಪಡಿಸಲಿದ್ದಾರೆ. ಗಾಯಕಿ ಅನಘಾ ಎಂ. ಅವರು ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಅಡುಗೆ ತಯಾರಿ ಸ್ಪರ್ಧೆಯೂ ಇರಲಿದೆ.

ಹೊಸ ವಿಷಯಗಳನ್ನು ಕಲಿಯಲು, ಸಮಾನ ಮನಸ್ಕರೊಂದಿಗೆ ಬೆರೆಯಲು, ಸೃಜನಶೀಲತೆ ಪ್ರದರ್ಶಿಸಲು, ಆರೋಗ್ಯ ಮತ್ತು ಕ್ಷೇಮ ಜಗತ್ತಿನ ಬಗ್ಗೆ ಮಾಹಿತಿ ಪಡೆಯಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ. ಪ್ರೇಕ್ಷಕರಿಗೆ ವಿವಿಧ ಸ್ಪರ್ಧೆ ಇರಲಿದ್ದು, ಭಾಗವಹಿಸಿದವರಿಗೆ ಅಚ್ಚರಿ ಉಡುಗೊರೆ ಪಡೆಯುವ ಅವಕಾಶಗಳು ಇರಲಿವೆ.

ಒಬ್ಬ ಅದೃಷ್ಟ ಪ್ರೇಕ್ಷಕರಿಗೆ ₹15 ಸಾವಿರ ಮೌಲ್ಯದ ವಾಟರ್ ಪ್ಯೂರಿಫೈಯರ್ ಗೆಲ್ಲುವ ಅವಕಾಶ ಇರಲಿದೆ. 10 ಅದೃಷ್ಟಶಾಲಿ ಪ್ರೇಕ್ಷಕರಿಗೆ ಮಲ್ಟಿಪ್ಲೆಕ್ಸ್‌ನಲ್ಲಿ ಚಲನಚಿತ್ರ ವೀಕ್ಷಣೆಗೆ ತಲಾ ಎರಡು ಟಿಕೆಟ್‌ಗಳನ್ನು ಗೆಲ್ಲುವ ಅವಕಾಶ, ಅದೃಷ್ಟಶಾಲಿಗಳಿಗೆ ನಾಗರಬಾವಿಯ ಕಿಂಗ್ಸ್ ಕ್ಲಬ್‌ನಲ್ಲಿ ಕುಟುಂಬ ಸಹಿತ ಭೋಜನದ ವೋಚರ್ ಸಿಗಲಿದೆ.

ಪ್ರವೇಶ ಉಚಿತ ಇರಲಿದ್ದು, ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಹೆಸರು ನೋಂದಾಯಿಸಿಕೊಳ್ಳಬೇಕು. ವಿವರಕ್ಕೆ ಸಂಪರ್ಕ ಸಂಖ್ಯೆ: 9035036186

Gold Winner Presents ಭೂಮಿಕಾ ಕ್ಲಬ್

ಗಾಂಧಿ ಕುಟುಂಬಕ್ಕೆ ಕಾಂಗ್ರೆಸ್ ಸರ್ಕಾರದ ಉಡುಗೊರೆ: ಆರೋಪ

ನ್ಯಾಷನಲ್ ಹೆರಾಲ್ಡ್‌ಗೆ ₹2.9 ಕೋಟಿ: ಜೋಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶೂನ್ಯ ಪ್ರಸರಣ ಹೊಂದಿರುವ ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಕರ್ನಾಟಕ ಸರ್ಕಾರವು ₹2.9 ಕೋಟಿ ಮೊತ್ತದಷ್ಟು ಜಾಹೀರಾತುಗಳನ್ನು ನೀಡಿ, ಅಕ್ರಮ ಎಸಗಿದೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

ಪ್ರಲ್ಹಾದ ಜೋಶಿ

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ಎಷ್ಟು ಪ್ರತಿಗಳು ಮುದ್ರಣವಾಗುತ್ತವೆ? ಯಾರೆಲ್ಲಾ ಅದನ್ನು ಓದುತ್ತಾರೆ. ನ್ಯಾಷನಲ್ ಹೆರಾಲ್ಡ್ ಪತ್ರಿಕೆ ವ್ಯವಹಾರದ ತನಿಖೆ ನಡೆಯುತ್ತಿದೆ. ಅದರ ಪ್ರವರ್ತಕರಾದ ತಾಯಿ–ಮಗ ಜಾಮೀನಿನ ಮೇಲೆ ಹೊರಗಿದ್ದಾರೆ. ಅಂತಹ ಪತ್ರಿಕೆಗೆ ಜಾಹೀರಾತು ನೀಡುವುದು ಸರಿಯೇ’ ಎಂದು ಪ್ರಶ್ನಿಸಿದರು.

‘ಅತಿಹೆಚ್ಚು ಪ್ರಸರಣ ಹೊಂದಿರುವ ರಾಷ್ಟ್ರೀಯ ಪತ್ರಿಕೆಗಳನ್ನು ಕಡೆಗಣಿಸಿ 2023–24ರಲ್ಲಿ ನ್ಯಾಷನಲ್ ಹೆರಾಲ್ಡ್‌ಗೆ ₹1.9 ಕೋಟಿ ಮತ್ತು 2024–25ರಲ್ಲಿ ₹1 ಕೋಟಿ ಮೊತ್ತದ ಜಾಹೀರಾತುಗಳನ್ನು ನೀಡಲಾಗಿದೆ. ಗಾಂಧಿ ಕುಟುಂಬಕ್ಕೆ ರಾಜ್ಯದ ಕಾಂಗ್ರೆಸ್ ಸರ್ಕಾರವು ನೀಡಿರುವ ಉಡುಗೊರೆ ಇದು’ ಎಂದು ಟೀಕಿಸಿದರು.

ಎಸ್ಐಆರ್ ತಡೆಗೆ ಪ್ರತಿಭಟನೆ: ‘ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ ಅಡ್ಡಿಪಡಿಸುವ ಉದ್ದೇಶದಿಂದಲೇ ‘ವಿಬಿ–ಜಿ ರಾಮ್–ಜಿ’ ಯೋಜನೆಯ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ ನಡೆಸುತ್ತಿದೆ’ ಎಂದು ಪ್ರಲ್ಹಾದ ಜೋಶಿ ಆರೋಪಿಸಿದರು.

‘ನರೇಗಾ ಯೋಜನೆ ಅಡಿಯಲ್ಲಿ 80 ವರ್ಷ, 72 ವರ್ಷದವರಿಗೆ ಕೂಲಿ ಹಣ ಪಾವತಿ ಮಾಡುತ್ತಿದ್ದರು. ಜೆಸಿಬಿಯಲ್ಲಿ ಮಣ್ಣು ಅಗೆಸಿ, ಕೂಲಿಯಾಳುಗಳಿಗೆ ₹20–₹30 ನೀಡುತ್ತಿದ್ದರು. ನರೇಗಾ ಅನುಷ್ಠಾನದ ಎಲ್ಲ ಹಂತದಲ್ಲಿಯೂ ಭ್ರಷ್ಟಾಚಾರ ನಡೆಯುತ್ತಿತ್ತು. ಅದನ್ನು ತಪ್ಪಿಸುವ ಸಲುವಾಗಿ ‘ವಿಬಿ ಜಿ ರಾಮ್–ಜಿ’ ತರುತ್ತಿದ್ದೇವೆ. ಆದರೆ ಕಾಂಗ್ರೆಸ್‌ನವರಿಗೆ ಪಾರದರ್ಶಕತೆ ಬೇಕಾಗಿಲ್ಲ. ಹೀಗಾಗಿ ಹೋರಾಟಕ್ಕೆ ಮುಂದಾಗಿದ್ದಾರೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಜೋಶಿಗೆ ನ್ಯಾಷನಲ್ ಹೆರಾಲ್ಡ್ ಇತಿಹಾಸ ಗೊತ್ತಿಲ್ಲ’

‘ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಜಾಹೀರಾತು ನೀಡಿರುವುದು ತಪ್ಪು ಎನ್ನುವ ಕೇಂದ್ರ ಸಚಿವ ಪ್ರಲ್ಹಾದ ಜೋಶಿಗೆ ಪತ್ರಿಕೆಯ ಇತಿಹಾಸವೇ ಗೊತ್ತಿಲ್ಲ. ಇದು ದೇಶದ ಸ್ವಾತಂತ್ರ್ಯ ಹೋರಾಟದ ವೇಳೆ ಆರಂಭವಾದ ಪತ್ರಿಕೆ. ದೇಶದ ಇತಿಹಾಸದ ಭಾಗ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರೊಂದಿಗೆ ಅವರು ಮಾತನಾಡಿ, ‘ಜೋಶಿಯವರಿಗಾಗಲಿ, ಅವರ ಪಕ್ಷಕ್ಕಾಗಲಿ ಪ್ರಜಾಪ್ರಭುತ್ವ ವ್ಯವಸ್ಥೆ ಮೇಲೆ ನಂಬಿಕೆ ಇಲ್ಲ. ಅವರ ಪಕ್ಷದವರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿಲ್ಲ. ಹೀಗಾಗಿ ಅವರಿಗೆ ಅರಿವಿಲ್ಲ’ ಎಂದು ಟೀಕಿಸಿದರು.

ರೌಡಿಶೀಟರ್ ಅಪಹರಿಸಿ ಹಲ್ಲೆ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಹೆಬ್ಬಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯ ಹುಸ್ಕೂರು ಬಳಿ ರೌಡಿಶೀಟರ್‌ವೊಬ್ಬ ಮತ್ತೊಬ್ಬ ರೌಡಿಶೀಟರ್‌ನನ್ನು ಅಪಹರಿಸಿ ಹಲ್ಲೆ ನಡೆಸಿದ್ದಾನೆ.

ಕಾರ್ತಿಕ್ ಅಲಿಯಾಸ್ ಜೆ.ಕೆ ಸಲಗ ಎಂಬ ರೌಡಿಶೀಟರ್‌ನನ್ನು ಗಂಗಾ ಎಂಬ ಮತ್ತೊಬ್ಬ ರೌಡಿಶೀಟರ್ ತನ್ನ ತಂಡದೊಂದಿಗೆ ಹುಸ್ಕೂರು ಬಳಿ ಅಪಹರಿಸಿ ತಮಿಳುನಾಡಿನ ಹೊಸೂರಿಗೆ ಕರೆದೊಯ್ದು ಅಮಾನುಷವಾಗಿ ಹಲ್ಲೆ ನಡೆಸಿದ್ದಾನೆ.

ನಂತರ ಹುಸ್ಕೂರು ರಸ್ತೆ ಬದಿಯಲ್ಲಿ ಬಿಟ್ಟು ವಿಷಯವನ್ನು ಕಾರ್ತಿಕ್ ಪತ್ನಿಗೆ ಕರೆ ಮಾಡಿ ತಿಳಿಸಿದ್ದಾರೆ. ಹಲ್ಲೆಯಿಂದ ತೀವ್ರ ಗಾಯಗೊಂಡಿರುವ ಕಾರ್ತಿಕ್‌ನ ಸ್ಥಿತಿ ಚಿಂತಾಜನಕವಾಗಿದ್ದು ನಾರಾಯಣ ಹೃದಯಾಲಯಕ್ಕೆ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕೊಲೆ ಪ್ರಕರಣವೊಂದರಲ್ಲಿ ಕಾಲಿಗೆ ಗುಂಡೇಟು ಬಿದ್ದ ನಂತರ ಜೈಲು ಸೇರಿದ್ದ ಕಾರ್ತಿಕ ಇತ್ತೀಚೆಗಷ್ಟೇ ಜೈಲಿನಿಂದ ಬಿಡುಗಡೆಯಾಗಿದ್ದ.

ಬಿ.ಕೆ.ಮೃತ್ಯುಂಜಯ ಅಭಿನಂದನಾ ಸಮಾರಂಭ; ಕನ್ನಡಿಗನ ಸಾಧನೆಗೆ ಮೆಚ್ಚುಗೆ

‘ವಿವಿಧತೆಯಿಂದ ಗಟ್ಟಿಯಾದ ಭಾರತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತವು ಸಂಸ್ಕೃತಿ, ರಾಜಪ್ರಭುತ್ವಕ್ಕೂ ಮಹತ್ವ ನೀಡಿದೆ. ವಿವಿಧತೆಯ ನಡುವೆಯೂ ದೇಶ ಗಟ್ಟಿಯಾಗಿ ಉಳಿದಿದೆ’ ಎಂದು ಕೇಂದ್ರದ ಕಾರ್ಮಿಕ, ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಹೆಚ್ಚುವರಿ ಮಹಾ ಪ್ರಧಾನ ಕಾರ್ಯದರ್ಶಿ ರಾಜಯೋಗಿ ಬಿ.ಕೆ.ಮೃತ್ಯುಂಜಯ ಅವರ ಅಭಿನಂದನಾ ಸಮಾರಂಭದಲ್ಲಿ ‘ಸಮರ್ಪಣೆ’ ಅಭಿನಂದನಾ ಸಂಪುಟ ಜನಾರ್ಪಣೆಗೊಳಿಸಿ ಮಾತನಾಡಿದರು.

‘ಭಾರತಕ್ಕೆ ಅಧ್ಯಾತ್ಮಿಕವೇ ಆತ್ಮ. ಅಧ್ಯಾತ್ಮವಿಲ್ಲದ ಭಾರತವನ್ನು ಊಹಿಸಿಕೊಳ್ಳಲು ಆಗುವುದಿಲ್ಲ. ದೊಡ್ಡ ಧಾರ್ಮಿಕ ಪರಂಪರೆ ಭಾರತದಲ್ಲಿದೆ. ಆಸ್ತಿಕರು, ನಾಸ್ತಿಕರನ್ನು ಒಳಗೊಂಡಂತೆ ಭಾರತ ವೈವಿಧ್ಯದ ರೂಪದಂತಿದೆ. ನಾಗಾ ಸಾಧುಗಳು, ಜೈನರ ಸಹಿತ ವಿವಿಧ ಧಾರ್ಮಿಕ ಪರಂಪರೆಯವರು ಆಧ್ಯಾತ್ಮಿಕ ಶ್ರೀಮಂತಿಕೆಯ ಸೂಚಕದಂತೆ ಇದ್ದಾರೆ. ಇದು ನಮ್ಮೆಲ್ಲರ ಹಿರಿಮೆ’ ಎಂದು ಹೇಳಿದರು.

ಅಭಿನಂದನಾ ಕಾರ್ಯಕ್ರಮದಲ್ಲಿ ಬಿ.ಕೆ. ಮೃತ್ಯುಂಜಯ ಅವರಿಗೆ ಚಿನ್ನದ ಕಿರೀಟ ತೊಡಿಸಿ ಗೌರವಿಸಲಾಯಿತು. ಸಿದ್ಧಲಿಂಗ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಮತ್ತು ಶೋಭಾ ಕರಂದ್ಲಾಜೆ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

‘ಕನ್ನಡ ಕುವರರೇ ಆಗಿರುವ ಬಿ.ಕೆ.ಮೃತ್ಯುಂಜಯ ಅವರು ಮೌಂಟ್ ಅಬುದಲ್ಲಿರುವ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಉನ್ನತ ಹುದ್ದೆಗೆ ಏರಿರುವುದು ನಮ್ಮೆಲ್ಲರಿಗೂ ಅಭಿಮಾನದ ಸಂಗತಿ. ಕೃಷಿ ಕುಟುಂಬದಲ್ಲಿ ಜನಿಸಿ ಶಿಕ್ಷಣ ಪಡೆದು 19ನೇ ವಯಸ್ಸಿನಲ್ಲಿಯೇ ಧಾರ್ಮಿಕತೆ ಕಡೆಗೆ ಆಕರ್ಷಿತರಾದವರು’ ಎಂದು ತಿಳಿಸಿದರು.

ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಗೊ.ರು.ಚನ್ನಬಸಪ್ಪ, ‘ಯಾವುದೇ ವ್ಯಕ್ತಿ ಶುದ್ಧ ನಡೆ ನುಡಿ, ವ್ಯಕ್ತಿತ್ವವನ್ನು ಇಟ್ಟುಕೊಂಡಿದ್ದರೆ ಎಷ್ಟು ಎತ್ತರಕ್ಕಾದರೂ ಏರಬಲ್ಲರು ಎನ್ನುವುದಕ್ಕೆ ಬಿ.ಕೆ.ಮೃತ್ಯುಂಜಯ ಅವರೇ ಸಾಕ್ಷಿ. ಯಾವುದೇ ವ್ಯಕ್ತಿ ಮಾತನಾಡುವುದಕ್ಕಿಂತ ಆತನ ಸಾಧನೆಗಳೇ ಮಾತನಾಡಬೇಕು’ ಎಂದು ಹೇಳಿದರು.

ಶ್ರೀಶೈಲ ಪೀಠದ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತುಮಕೂರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಪೀಠಾಧ್ಯಕ್ಷ ನಿಶ್ಚಲಾನಂದನಾಥ ಸ್ವಾಮೀಜಿ, ಹುಕ್ಕೇರಿ ಗುರುಶಾಂತೇಶ್ವರ ಸಂಸ್ಥಾನ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಮೋಟಗಿ ಮಠದ ಪ್ರಭುಚೆನ್ನಬಸವ ಸ್ವಾಮೀಜಿ, ರಾಜಯೋಗಿನಿ ಬಿ.ಕೆ. ಜಯಂತಿ, ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆ ಮತ್ತು ವೀರಶೈವ ಸಹಕಾರ ಬ್ಯಾಂಕ್ ಅಧ್ಯಕ್ಷ ಬಿ.ಎಸ್. ಪರಮಶಿವಯ್ಯ, ಸಮರ್ಪಣೆ ಅಭಿನಂದನ ಸಂಪುಟದ ಪ್ರಧಾನ ಸಂಪಾದಕ ಎಂ.ಜಿ.ನಾಗರಾಜ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ತ್ಯಾಗರಾಜರ ಆರಾಧನೆ: ‘ಪಂಚರತ್ನ ಕೃತಿ ಗೋಷ್ಠಿ’ ಗಾಯನ: ಆಯೋಜನೆ ಮತ್ತು ಸ್ಥಳ: ಶೃಂಗೇರಿ ಶಂಕರ ಮಠ, ಚಾಮರಾಜಪೇಟೆ, ಬೆಳಿಗ್ಗೆ 8.30

‘ತತ್ವಪದ ಸಾಹಿತ್ಯ– ಸಾಂಸ್ಕೃತಿಕ ಅನುಸಂಧಾನ’ ಒಂದು ದಿನದ ವಿಚಾರಸಂಕಿರಣ: ಉದ್ಘಾಟನೆ: ಅಗಸ್ಟೀನ್ ಜಾರ್ಜ್, ಅಧ್ಯಕ್ಷತೆ: ಕಾ.ತ. ಚಿಕ್ಕಣ್ಣ, ಪ್ರಾಸ್ತಾವಿಕ ನುಡಿ: ಸರ್ವೇಶ್ ಬಂಟಹಳ್ಳಿ, ಆಯೋಜನೆ: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕನ್ನಡ ವಿಭಾಗ, ಕ್ರಿಸ್ತು ಜಯಂತಿ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ, ಸ್ಥಳ: ಎ1 ಸಭಾಂಗಣ, ಕ್ರಿಸ್ತು ಜಯಂತಿ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ, ಬೆಳಿಗ್ಗೆ 10

ಕೆಂಪೇಗೌಡರ ಕಂಚಿನ ಪುತ್ಥಳಿ ಅನಾವರಣ, ಅಣ್ಣಮ್ಮ ದೇವಿಯ ಉತ್ಸವ, ಸಂಕ್ರಾಂತಿ ಸುಗ್ಗಿ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಧ್ವಜಾರೋಹಣ: ಪ್ರದೀಪ್ ಕೃಷ್ಣಪ್ಪ, ಅತಿಥಿಗಳು: ಸತ್ಯನಾರಾಯಣ್ ಕೆ.ಆರ್., ಬಿನ್ನಿಪೇಟೆ ಸೂರಿ, ಉಮೇಶ್ ಚಂದ್ರ, ಆಯೋಜನೆ: ಕರ್ನಾಟಕ ರಕ್ಷಣಾ ವೇದಿಕೆ, ಸ್ಥಳ: ಆದಿಚುಂಚನಗಿರಿ ಮಠದ ರಸ್ತೆ, ಹಾಟ್ ಕಾಫಿ ಎದುರು, ಮನುವನ, ವಿಜಯನಗರ, ಬೆಳಿಗ್ಗೆ 11



ನಿರ್ಮಲಾನಂದ ಸ್ವಾಮೀಜಿ

‘ಡೈನಾಸಾರ್ಸ್ ಆಫ್ ಪಟಗೋನಿಯ’ ಚಲನಚಿತ್ರ ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ವಿಶ್ವೇಶ್ವರಯ್ಯ ಇಂಡಸ್ಟ್ರಿಯಲ್ ಆ್ಯಂಡ್ ಟೆಕ್ನಾಲಜಿಕಲ್ ಮ್ಯೂಸಿಯಂ, ಕಸ್ತೂರಬಾ ರಸ್ತೆ, ಬೆಳಿಗ್ಗೆ 11

2025ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ, 2024ನೇ ಸಾಲಿನ ಪುಸ್ತಕ ಬಹುಮಾನ ವಿತರಣೆ ಸಮಾರಂಭ: ಶಿವರಾಜ ಎಸ್. ತಂಗಡಗಿ, ಉಪಸ್ಥಿತಿ: ಡಾ.ಸಿ.ಎನ್. ಮಂಜುನಾಥ್, ಅಧ್ಯಕ್ಷತೆ: ಮುನಿರತ್ನ, ಪ್ರಾಸ್ತಾವಿಕ ನುಡಿ: ಚನ್ನಪ್ಪ ಕಟ್ಟಿ, ಪ್ರಶಸ್ತಿ ಪುರಸ್ಕೃತರ ಪರಿಚಯ: ಎಸ್. ಜಿ. ಸಿದ್ಧರಾಮಯ್ಯ, ಅತಿಥಿಗಳು: ಕುಮಾರ್ ಟಿ.ಎಚ್. ಎಂ., ಕೆ.ಎಂ. ಗಾಯಿತ್ರಿ, ಪ್ರಶಸ್ತಿ ಸ್ವೀಕರಿಸುವವರು: ಜೆ.ವಿ. ಕಾರ್ಲೊ, ಕೆ.ಆರ್. ಸಂಧ್ಯಾರೆಡ್ಡಿ, ವನಮಾಲಾ ವಿಶ್ವನಾಥ, ವಿಠಲರಾವ್ ಟಿ. ಗಾಯಕ್ವಾಡ್, ಜೆ.ಪಿ. ದೊಡಮನಿ, ಪುಸ್ತಕ ಬಹುಮಾನ ಸ್ವೀಕರಿಸುವವರು: ನಟರಾಜ್ ಹೊನ್ನವಳ್ಳಿ, ಸದಾನಂದ ಆರ್., ಕಾರ್ತಿಕ್ ಆರ್., ಮಲ್ಲೇಶಪ್ಪ ಸಿದ್ರಾಂಪೂರ, ದೇವರಾಜ್ ಎನ್., ಆಯೋಜನೆ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 11

ಜೆಫ್ರಿ ಡಿ. ಉಲ್ಮನ್ ಅವರೊಂದಿಗೆ ಸಂವಾದ: ಆಯೋಜನೆ ಮತ್ತು ಸ್ಥಳ: ಆರ್.ವಿ. ಕಾಲೇಜ್ ಆಫ್ ಎಂಜಿನಿಯರಿಂಗ್, ಮಧ್ಯಾಹ್ನ 3.30

ಧಾತು ಅಂತರರಾಷ್ಟ್ರೀಯ ಬೊಂಬೆಯಾಟ ಉತ್ಸವದ ಉದ್ಘಾಟನೆ: ಆಯೋಜನೆ ಮತ್ತು ಸ್ಥಳ: ಮಂಡಲ ಕಲ್ಚರಲ್ ಸೆಂಟರ್, ಕನಕಪುರ ರಸ್ತೆ, ಸಂಜೆ 4

ಸಾಮಾಜಿಕ, ಆರ್ಥಿಕ ಹಕ್ಕುಗಳ ವಿಚಾರಣೆಯ ಮೇಲೆ ಒಂದು ಬೆಳಕು: ಜಕಾರಿಯಾ ಯಾಕೋಬ್, ಅತಿಥಿ: ವಿಭು ಬಖ್ರು, ಅಧ್ಯಕ್ಷತೆ: ಆರ್.ವಿ.ಎಸ್. ನಾಯಕ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ನ್ಯಾಯಾಂಗ ಅಕಾಡೆಮಿ, ಕ್ರೆಸೆಂಟ್ ರಸ್ತೆ, ಸಂಜೆ 5

ವಿಭು ಬಖ್ರು

ಸಾಧಕರ ಸಾನ್ನಿಧ್ಯ: ಅತಿಥಿ: ಡಾ. ಹಿತೇಶ್ ಪ್ರಸಾದ್ ಬಿ., ಪ್ರಾಸ್ತಾವಿಕ ನುಡಿ: ಮುದಿಗೆರೆ ರಮೇಶ್ ಕುಮಾರ್, ಅಧ್ಯಕ್ಷತೆ: ಆರ್.ಎಸ್. ಶಾಂತಾರಾಮ್, ಆಯೋಜನೆ ಮತ್ತು ಸ್ಥಳ: ದೀಪಾ ಅಂಧ ಮಕ್ಕಳ ವಸತಿಯುತ ಪ್ರೌಢಶಾಲೆ, ಅಂಜನಾನಗರ, ಸಂಜೆ 5

‘ಕುವೆಂಪು ಸಿರಿಗನ್ನಡ ಪ್ರಶಸ್ತಿ’ ಪ್ರದಾನ: ಬಸವರಾಜ ಕಲ್ಗುಡಿ, ಅತಿಥಿ: ಮಾನಸ, ಪ್ರಶಸ್ತಿ ಸ್ವೀಕರಿಸುವವರು: ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಅಧ್ಯಕ್ಷತೆ: ಪಿ. ಮಲ್ಲಿಕಾರ್ಜುನಪ್ಪ, ಪ್ರಾಸ್ತಾವಿಕ ನುಡಿ: ಸಿ.ಕೆ. ರಾಮೇಗೌಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.15

ಏಳನೇ ಸಂಗೀತ ಸಮ್ಮೇಳನದ ಉದ್ಘಾಟನೆ: ಅಧ್ಯಕ್ಷತೆ: ಎಂ. ಅನಂತ್, ಅತಿಥಿಗಳು: ದಕ್ಷಿಣಮೂರ್ತಿ, ಟಿ.ಎಸ್. ಸತ್ಯವತಿ, ಸಿ. ಚಂದ್ರಶೇಖರ್, ಸಂಗೀತ ಕಛೇರಿ: ಗಾಯನ: ಎಂ.ಎಸ್. ಶೀಲಾ, ಅಪೇಕ್ಷಾ ಎ., ಪಿಟೀಲು: ಎಚ್. ಎಂ. ಸ್ಮಿತಾ, ಮೃದಂಗ: ಆನೂರ್ ಅನಂತ್ ಕೃಷ್ಣಶರ್ಮ, ಖಂಜೀರಾ: ಎ.ಎಸ್.ಎನ್. ಸ್ವಾಮಿ, ಆಯೋಜನೆ: ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 5.30ರಿಂದ

ನೃತ್ಯ ಸಂಭ್ರಮ: ಅತಿಥಿಗಳು: ಪ್ರದೀಪ್ ಕುಮಾರ್, ಆರ್. ಚಂದ್ರಶೇಖರ್, ಆಯೋಜನೆ: ನಿರಂತರ ಕಲ್ಚರಲ್ ಆ್ಯಂಡ್ ಚಾರಿಟಬಲ್ ಟ್ರಸ್ಟ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 6

‘ಕರ್ಮಣಿ ಉತ್ಸವ’ ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳು ಉತ್ಪಾದಿಸಿದ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳದ ಉದ್ಘಾಟನೆ: ಡಿ.ಕೆ. ಶಿವಕುಮಾರ್, ಉಪಸ್ಥಿತಿ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಲಕ್ಷ್ಮಿ ಆರ್. ಹೆಬ್ಬಾಳಕರ, ಅತಿಥಿಗಳು: ಸಲೀಂ ಅಹಮದ್, ಎಚ್.ಎಂ. ರೇವಣ್ಣ, ಪಿ. ಸಿ. ಮೋಹನ್, ಜಿ.ಸಿ. ಚಂದ್ರಶೇಖರ್, ಎಸ್. ಸುರೇಶ್ ಕುಮಾರ್, ಪ್ರಿಯಕೃಷ್ಣ, ಪುಟ್ಟಣ್ಣ, ಜಿ. ಪದ್ಮಾವತಿ, ಆಯೋಜನೆ: ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಸ್ಥಳ: ಶ್ರೀ ರಾಮಮಂದಿರ ಕ್ರೀಡಾಂಗಣ, 53ನೇ ಕ್ರಾಸ್, ನಾಲ್ಕನೇ ಬ್ಲಾಕ್, ರಾಜಾಜಿನಗರ, ಸಂಜೆ 6.30

ಮಾರ್ಗಶೀರ್ಷೋತ್ಸವ: ವೀಣಾ ವಾದನ: ಜಯಂತಿ ಕುಮರೇಶ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

ಸಮ ಸಮಾಜ ನಿರ್ಮಾಣಕ್ಕೆ ಸಮರ್ಥ ಆಡಳಿತ

ರಾಜ್ಯ ರಾಜಕಾರಣದಲ್ಲಿ ಸುದೀರ್ಘ ಅವಧಿಗೆ ಮುಖ್ಯಮಂತ್ರಿಯಾಗಿ ಮುಂದುವರೆಯುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿರುವ ಸಿದ್ದರಾಮಯ್ಯ, ಸಿದ್ಧಾಂತ, ವೈಚಾರಿಕತೆಯಿಂದಲೂ ಎಲ್ಲರಿಗಿಂತ ವಿಭಿನ್ನವಾಗಿ ಕಾಣಿಸುತ್ತಾರೆ. ಹಾದಿತಪ್ಪಿರುವ ರಾಜಕೀಯ ವ್ಯವಸ್ಥೆಯಲ್ಲಿ ಸಿದ್ಧಾಂತಗಳನ್ನುಳಿಸಿಕೊಂಡಿರುವ ಕೆಲವೇ ಕೆಲವು ರಾಜಕಾರಣಿಗಳಲ್ಲಿ ಪ್ರಮುಖರೆನಿಸಿಕೊಂಡಿದ್ದಾರೆ.

• ನಾಗರಾಜು ಅಶ್ವತ್ಥ್, ಬೆಂಗಳೂರು

'ನಂಬಿಕೆಯಿರಬೇಕು. ಆದರೆ, ಮೂಢನಂಬಿಕೆಗಳಿರಬಾರದು. ಬಸವಣ್ಣನವರು ಹೇಳಿದಂತೆ ಸತ್ಯವೇ ಸ್ವರ್ಗ, ಮಿಥ್ಯವೇ ನರಕ. ಇನ್ಯಾವುದೇ ಸ್ವರ್ಗ ನರಕಗಳಿಲ್ಲ'- ಎನ್ನುವ ದಾರ್ಶನಿಕ ಮಾತುಗಳೊಂದಿಗೆ ರಾಜ್ಯದ ಜನರಿಗೆ ತಮ್ಮ ಸೈದ್ಧಾಂತಿಕ ನಿಲುವುಗಳಿಂದ ಹತ್ತಿರರಾದವರು ಮುಖ್ಯಮಂತ್ರಿ ಸಿದ್ದರಾಮಯ್ಯ. ರಾಜ್ಯದ 22ನೇ ಮುಖ್ಯಮಂತ್ರಿಯಾಗಿ 2013ರಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಅನೇಕ ಸಂದರ್ಭಗಳಲ್ಲಿ ವೈಯಕ್ತಿಕ ಸಿದ್ಧಾಂತಗಳ ಕುರಿತು ಸಾಕಷ್ಟು ಚರ್ಚೆಗಳಾಗಿವೆ. ಸಿದ್ದರಾಮಯ್ಯನವರ ಆಚರಣೆ, ನಂಬಿಕೆ, ವೈಚಾರಿಕ ನಿಲುವುಗಳ ಕುರಿತು ಸಾಕಷ್ಟು ಸಂವಾದಗಳಾಗಿವೆ.

ಆದರೆ, ಈ ಎಲ್ಲಾ ಚರ್ಚೆಗಳಾಚೆಗೆ, 'ಸಮಾಜವಾದಿ ಸಿದ್ಧಾಂತ, ಸಮ ಸಮಾಜ ನಿರ್ಮಾಣವೆಂಬುದೇ ನನ್ನ ಗುರಿ' ಎನ್ನುವ ಮಾತುಗಳೊಂದಿಗೆ ರಾಜ್ಯದಲ್ಲಿ ಅನೇಕ ಸಂದರ್ಭದಲ್ಲಿ ಮೌಢ್ಯವನ್ನು ತೊಳೆಯುವ ಕೆಲಸಕ್ಕೆ ಮುಂದಾದ ನಿದರ್ಶನಗಳನ್ನು ಕಾಣಬಹುದು.

ವಿಶೇಷವಾಗಿ ಸಿದ್ದರಾಮಯ್ಯನವರು ರಾಜ್ಯದ ಪ್ರಮುಖ ರಾಜಕಾರಣಿಗಳೆನಿಸಿದ ರಾಮಕೃಷ್ಣಹೆಗಡೆ, ಎಚ್.ಡಿ.ದೇವೇಗೌಡ, ಬೊಮ್ಮಾಯಿ, ಜೆ.ಎಚ್.ಪಟೇಲ್, ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಅತ್ಯಂತ ಸನ್ನಿಹಿತ ವ್ಯಕ್ತಿಯಾಗಿದ್ದರು. ಸದಾ ಈ ನಾಯಕರೊಂದಿಗೆ ಗುರುತಿಸಿಕೊಳ್ಳುತ್ತಿದ್ದರು. ಅತಿಮುಖ್ಯವಾಗಿ, ರಾಜ್ಯದ ರೈತ ಚೇತನ ಎಂದೇ ಕರೆಸಿಕೊಂಡಿರುವ ಪ್ರೊ.ಎಂ.ಡಿ.ನಂಜುಂಡಸ್ವಾಮಿಯವರ ರಾಜಕೀಯ ಪಾಠಗಳನ್ನು ಕೇಳಿ ರಾಜಕಾರಣಕ್ಕೆ ಹೆಜ್ಜೆಯಿಟ್ಟ ಸಿದ್ದರಾಮಯ್ಯ ಸಮಾಜವಾದದ ಹಿನ್ನೆಲೆಯಲ್ಲೇ ಬೆಳೆದುಬಂದಿದ್ದಾರೆ. ಹೀಗಾಗಿಯೇ, ಮಾನವ ತತ್ವದಲ್ಲೇ ಹೆಚ್ಚಿನ ನಂಬಿಕೆಯನ್ನಿಟ್ಟುಕೊಂಡಿದ್ದಾರೆ. ಮನುಷ್ಯರನ್ನು ಪ್ರೀತಿಸಬೇಕು. ಎಲ್ಲರಿಗೂ ಬದುಕು ಹಕ್ಕಿದೆ.

ಯಾರಿಗೂ ಕೆಟ್ಟದ್ದು ಬಯಸಬಾರದೆನ್ನುವ ಆದರ್ಶಗಳೊಂದಿಗೆ ಬಡವರ ಪರ ವಿಶೇಷ ಪ್ರೀತಿ, ಕಾಳಜಿಯನ್ನಿರಿಸಿದ್ದಾರೆ. ಈ ಅಂಶಗಳು ಅವರ ಜನಪರ ಯೋಜನೆಗಳಲ್ಲೂ ಅಭಿವ್ಯಕ್ತವಾಗಿದೆ.

ಪ್ರಸ್ತುತಿ
ಪಿ.ವಿ.
ಬ್ರ್ಯಾಂಡ್
ಸ್ಪಾಟ್

ಮೌಢ್ಯಾಚರಣೆ ವಿರುದ್ಧ ಸಮರ!

ರಾಜ್ಯದಲ್ಲಿ ಮೌಢ್ಯಾಚರಣೆಗಳಿಂದಾಗಿ ಅಮಾಯಕರು ಹಾದಿತಪ್ಪುವ, ತೊಂದರೆಗೊಳಗಾಗುವ ಅನೇಕ ಪ್ರಕರಣಗಳನ್ನು ಗಮನಿಸಿದ್ದ ಸಿದ್ದರಾಮಯ್ಯ, ಮೌಢ್ಯ ನಿಷೇಧ ಕಾಯ್ದೆ ಜಾರಿಗೆ ಬರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಕಾಯ್ದೆಯ ಮೂಲಕ ಮಾಟ ಮಂತ್ರ ಸೇರಿದಂತೆ ಕೆಲ ಅನಿಷ್ಟ ಪದ್ಧತಿಗಳನ್ನು ಅಳಿಸಿಹಾಕುವ ಪ್ರಯತ್ನ ಮಾಡಿದ್ದಾರೆ. ಇದಲ್ಲದೇ, ಅನೇಕ ಮೂಢನಂಬಿಕೆಗಳನ್ನು ಜನರ ಮನಸ್ಸಿನಿಂದ ತೆಗೆದುಹಾಕಲು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ವಿಶೇಷವಾಗಿ ರಾಜ್ಯದ ಚಾಮರಾಜನಗರಕ್ಕೆ ಭೇಟಿ ನೀಡುವ ಮುಖ್ಯಮಂತ್ರಿಗಳು ಅಧಿಕಾರ ಕಳೆದುಕೊಳ್ಳುತ್ತಾರೆನ್ನುವ ಮಾತೊಂದು ರಾಜಕೀಯ ವಲಯದಲ್ಲಿ ಸಾಕಷ್ಟು ಚರ್ಚೆಗೊಳಗಾಗಿತ್ತು. ಈ ಮಾತನ್ನು ಸುಳ್ಳು ಎಂದು ಸಾಬೀತುಪಡಿಸಲು ಸ್ವತಃ ಮುಂದಾದವರು ಮುಖ್ಯಮಂತ್ರಿ ಸಿದ್ದರಾಮಯ್ಯ. ಅವರ ಮೊದಲ ಅಧಿಕಾರಾವಧಿಯಲ್ಲೇ 10ಕ್ಕೂ ಅಧಿಕ ಬಾರಿ ಚಾಮರಾಜನಗರ ಜಿಲ್ಲೆಗೆ ಭೇಟಿ ನೀಡಿ, ಅಪವಾದವನ್ನು ಅಳಿಸಿಹಾಕುವಲ್ಲಿ ಯಶಸ್ವಿಯಾದರು. ಒಮ್ಮೆ, ಸಿದ್ದರಾಮಯ್ಯನವರ ಕಾರಿನ ಮೇಲೆ ಕಾಗೆಯೊಂದು ಕುಳಿತ ಸನ್ನಿವೇಶದಲ್ಲಿ ಸಾಕಷ್ಟು ಟೀಕೆಗಳನ್ನು ಎದುರಿಸಿದರು.

ಸಿದ್ದರಾಮಯ್ಯನವರ ಹೆಗಲ ಮೇಲೆ ಶನಿಯೇರಿದ್ದಾನೆ. ಅಧಿಕಾರದಿಂದ ಕೆಳಗಿಳಿಯುತ್ತಾರೆಂಬ ಚರ್ಚೆಗಳು ಶುರುವಾಗಿದ್ದವು. ಆದರೆ, ಈ ಯಾವುದೇ ಮೂಢನಂಬಿಕೆಗಳಿಗೆ ಮಹತ್ವ ನೀಡದ ಸಿದ್ದರಾಮಯ್ಯ, ತಮ್ಮ ಕೆಲಸದಿಂದಷ್ಟೇ ಎಲ್ಲಕ್ಕೂ ಉತ್ತರ ನೀಡುತ್ತ, ಅಧಿಕಾರದಲ್ಲಿ ಮುಂದುವರೆಯುತ್ತಿದ್ದಾರೆ.

ಹಿರಿತನ ಗೌರವಿಸುವ ಗುಣ!

1996ರ ಕಾಲಘಟ್ಟ. ಎಚ್.ಡಿ.ದೇವೇಗೌಡರು ಪ್ರಧಾನಮಂತ್ರಿಗಳಾಗುತ್ತಾರೆ. ಆಗ, ರಾಜ್ಯದ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯನವರು ಅಧಿಕಾರಕ್ಕೇರಲಿದ್ದಾರೆಂದೇ ಎಲ್ಲರೂ ಭಾವಿಸಿದ್ದರು. ಹಣಕಾಸು ಸಚಿವರಾಗಿ ಸಾಕಷ್ಟು ಗಮನ ಸೆಳೆದಿದ್ದ ಸಿದ್ದರಾಮಯ್ಯ, ಮುಖ್ಯಮಂತ್ರಿಯಾಗುವುದು ಬಹುತೇಕ ನಿಶ್ಚಿತ ಎನ್ನಲಾಗಿತ್ತು. ಜತೆಗೆ, ರಾಜ್ಯದಲ್ಲಿ ಕೆಲ ನಾಯಕರು ಶಾಸಕರಿಂದ ಮುಂದಿನ ಮುಖ್ಯಮಂತ್ರಿ ಯಾರಾಗಬೇಕೆಂಬ ಸಹಿ ಸಂಗ್ರಹ ಅಭಿಯಾನ ಮಾಡಿದ್ದರು. ಈ ಅಭಿಯಾನದಲ್ಲಿ 80ಕ್ಕೂ ಅಧಿಕ ಶಾಸಕರು ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಬೇಕೆಂಬ ಹಂಬಲ ವ್ಯಕ್ತಪಡಿಸಿದ್ದರು. ಈ ಬೆಳವಣಿಗೆಗಳ ನಡುವೆ ಜೆ.ಎಚ್.ಪಟೇಲರ ಹಿರಿತನ ಮತ್ತು ಎಚ್.ಡಿ.ದೇವೇಗೌಡರು, ರಾಮಕೃಷ್ಣಹೆಗಡೆ, ಬೊಮ್ಮಾಯಿ, ಆರ್.ಎಲ್.ಜಾಲಪ್ಪ, ಎಂ.ಸಿ. ನಾಣಯ್ಯ, ಪಿಜಿಆರ್ ಸಿಂಧ್ಯಾ ಸೇರಿದಂತೆ ಹಿರಿಯ ಮುಖಂಡರ ಮನವಿ ಮೇರೆಗೆ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟುಕೊಡುತ್ತಾರೆ. ಅಂದಿನ ಕಾಲಕ್ಕೆ ಉಪಮುಖ್ಯಮಂತ್ರಿ ಸ್ಥಾನದಲ್ಲಿ ಉಳಿಯುತ್ತಾರೆ.

ಕಷ್ಟಗಳನ್ನು ಕಂಡಿರುವ ವ್ಯಕ್ತಿತ್ವ!

ಬಡವರ ಕಷ್ಟಗಳನ್ನು ಕೇಳುವವರು ಸಾಕಷ್ಟಿದ್ದಾರೆ. ಆದರೆ, ಸ್ವತಃ ಅನುಭವಿಸಿ, ಆ ಕಷ್ಟಗಳಿಗೆ ಪರಿಹಾರೋಪಾಯಗಳನ್ನು ಕೊಡಬೇಕೆನ್ನುವ ಪರಿಕಲ್ಪನೆ ಕೆಲವಷ್ಟೇ ರಾಜಕಾರಣಿಗಳಲ್ಲಿದೆ. ಈ ಪಟ್ಟಿಯಲ್ಲಿ ಸಿದ್ದರಾಮಯ್ಯನವರು ಸಹ ಪ್ರಮುಖ ಸ್ಥಾನ ಪಡೆದುಕೊಳ್ಳುತ್ತಾರೆ. ಬಾಲ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಬೆಳೆದ ಸಿದ್ದರಾಮಯ್ಯ, ಬಡವರ ಕಷ್ಟಗಳೇನೆಂದು ಸ್ವತಃ ಅನುಭವಿಸಿ ಬೆಳೆದಿದ್ದಾರೆ. ಹೀಗಾಗಿ, ಬಡವರಿಗೆ ಹೆಚ್ಚಿನ ಆದ್ಯತೆ ನೀಡುತ್ತಾರೆ. ಹೀಗಾಗಿಯೇ, ಅಹಿಂದ ಚಳುವಳಿಯ ಮೂಲಕ ದಲಿತರು, ಹಿಂದುಳಿದವರ್ಗ, ಅಲ್ಪಸಂಖ್ಯಾರೆಲ್ಲರೂ ಒಂದಾಗಬೇಕೆನ್ನುವ ಕರೆ ನೀಡಿದ್ದು.

ಕುಟುಂಬಕ್ಕೆ ಸಮಯ ನೀಡದ ಲೀಡರ್!

ಸಾರ್ವಜನಿಕ ಜೀವನಕ್ಕೆ ಬರುವ ಯಾವುದೇ ವ್ಯಕ್ತಿ ಸಾಮಾನ್ಯವಾಗಿ ಹೆಚ್ಚಿನ ಸಮಯವನ್ನು ಸಮಾಜದೊಂದಿಗೆ ಕಳೆಯಬೇಕಾಗುತ್ತದೆ. ಈ ಹಾದಿಯಲ್ಲಿ ಸಿದ್ದರಾಮಯ್ಯನವರು ಸಹ ಕುಟುಂಬದಿಂದ ದೂರವೇ ಉಳಿದಿದ್ದರು. ಈ ವಿಚಾರವನ್ನು ಸ್ವತಃ ಸಿದ್ದರಾಮಯ್ಯನವರ ಪುತ್ರ ಡಾ.ಯತೀಂದ್ರ ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ಯತೀಂದ್ರರವರ ಬಾಲ್ಯದಲ್ಲಿ ಅವರ ತಂದೆಯನ್ನು ಭೇಟಿಯಾಗಲು ಕಾಯುತ್ತಿದ್ದರಂತೆ. ಆದರೆ, ಬಹುತೇಕ ಸಮಯದಲ್ಲಿ ಸಿದ್ದರಾಮಯ್ಯನವರು ಚುನಾವಣೆ, ಪ್ರಚಾರ, ಪಕ್ಷದ ಕೆಲಸ, ಜನರ ಕೆಲಸವೆಂದು ಬಹುತೇಕ ಮನೆಯಿಂದ ಹೊರಗೇ ಉಳಿಯುವ ಪರಿಸ್ಥಿತಿಯಿತ್ತೆಂದು ಯತೀಂದ್ರ ಹೇಳುತ್ತಾರೆ.

ಸಿದ್ದರಾಮಯ್ಯನವರೇ ಹೇಳಿದಂತೆ, ಅವರು ಅಳವಡಿಸಿಕೊಂಡಿರುವ ಆದರ್ಶಗಳಿವು!

- ಎಲ್ಲರಿಗೂ ಒಳ್ಳೆಯದು ಮಾಡಲಾಗದಿದ್ದರೂ, ಯಾರಿಗೂ ಕೆಟ್ಟದ್ದು ಬಯಸಬಾರದು.
- ದ್ವೇಷ ರಾಜಕಾರಣ ಮಾಡಿಲ್ಲ. ಎಂದಿಗೂ ಮಾಡುವುದಿಲ್ಲ. ಯಾರೂ ಮಾಡಬಾರದು.
- ರಾಜಕಾರಣಕ್ಕೆ ಯಾರೂ ನಮ್ಮನ್ನು ಕರೆದಿಲ್ಲ. ನಾವಾಗಿಯೇ ಬಂದಿದ್ದೇವೆ. ಪ್ರಾಮಾಣಿಕವಾಗಿ ಜನಸೇವೆ ಮಾಡಬೇಕು.
- ಸಿದ್ಧಾಂತಗಳು ಆಚರಣೆಯಲ್ಲಿರಬೇಕು. ಆ ವಿಚಾರದಲ್ಲಿ ಎಂದಿಗೂ ರಾಜಿಯಾಗಬಾರದು.
- ಪ್ರಾಮಾಣಿಕವಾಗಿ ಉಳಿದುಕೊಳ್ಳಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು.
- ಸಾರ್ವಜನಿಕರ ತೆರಿಗೆ ಹಣದ ವಿಷಯದಲ್ಲಿ ಉತ್ತರದಾಯಿಗಳಾಗಿರಬೇಕು.
- ಅಧಿಕಾರವನ್ನು ಸ್ವಾರ್ಥಕ್ಕೆ ಬಳಸಬಾರದು.
- ಸರ್ಕಾರದ ಯಾವುದೇ ಹುದ್ದೆ ಜನೋಪಯೋಗಕ್ಕೆ ಬಳಕೆಯಾಗಬೇಕು.

ಖ್ಯಾತಿ ತಂದುಕೊಟ್ಟ ಯೋಜನೆಗಳಿವು!

• 2013ರಿಂದ 2018ರ ನಡುವಿನ ಮೊದಲ ಅಧಿಕಾರಾವಧಿಯಲ್ಲಿ ರಾಜ್ಯದಲ್ಲಿ ಅನ್ನಭಾಗ್ಯ, ಕ್ಷೀರಭಾಗ್ಯ ಸೇರಿದಂತೆ ಸಾಕಷ್ಟು ಯೋಜನೆಗಳು ಸಿದ್ದರಾಮಯ್ಯನವರಿಗೆ ಕೀರ್ತಿ ತಂದುಕೊಟ್ಟವು. ಕಾರ್ಮಿಕ ವರ್ಗಕ್ಕೆ ನೆರವಾಗುವ ನಿಟ್ಟಿನಲ್ಲಿ ಇಂದಿರಾಕ್ಯಾಂಟೀನ್ ಸಹ ಉಪಯೋಗವಾಯಿತು.

• 2023ರಿಂದ ಶುರುವಾದ ಸಿದ್ದರಾಮಯ್ಯನವರ ಮುಖ್ಯಮಂತ್ರಿ ಅವಧಿಯಲ್ಲಿ ಗ್ಯಾರಂಟಿಗಳದ್ದೇ ದೊಡ್ಡ ಸದ್ದು. ಗೃಹಜ್ಯೋತಿ, ಗೃಹಲಕ್ಷ್ಮಿ, ಅನ್ನಭಾಗ್ಯ, ಶಕ್ತಿ, ಯುವನಿಧಿ ಯೋಜನೆಗಳು ದೇಶವ್ಯಾಪಿ ಸಂಚಲನ ಮೂಡಿಸಿ, ಸಾಕಷ್ಟು ಚರ್ಚೆಯನ್ನುಂಟು ಮಾಡಿವೆ.

ಅಂಕಿಅಂಶಗಳ ವಿಶೇಷ

2 ಬಾರಿ ಲೋಕಸಭೆಗೂ ಪ್ರಯತ್ನ(2 ಪ್ರಯತ್ನಗಳಲ್ಲೂ ನಿರಾಸೆ)

2 ಬಾರಿ ವಿರೋಧ ಪಕ್ಷದ ನಾಯಕ ಸ್ಥಾನ(2009ಮತ್ತು 2019)

2 ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ(2013ರಿಂದ 2018, 2023ರಿಂದ ಪ್ರಸ್ತುತ)

5 ಮುಖ್ಯಮಂತ್ರಿಗಳೊಂದಿಗೆ ಕೆಲಸ ಮಾಡಿದ ಅನುಭವ (ರಾಮಕೃಷ್ಣ ಹೆಗಡೆ, ಎಚ್.ಡಿ.ದೇವೇಗೌಡ, ಬೊಮ್ಮಾಯಿ, ಜೆ.ಎಚ್.ಪಟೇಲ್, ಧರ್ಮಸಿಂಗ್)

9 ಬಾರಿ ವಿಧಾನಸಭಾ ಚುನಾವಣೆ (7 ಚುನಾವಣೆಗಳಲ್ಲಿ ಗೆಲುವು, 2ಸೋಲು)

ಸಂವಿಧಾನದ ಆಶಯ ನೆರವೇರಿಸಲು ಕಟಿಬದ್ಧ!

ಸಿದ್ದರಾಮಯ್ಯನವರೊಂದಿಗೆ 40 ವರ್ಷಗಳ ಸುದೀರ್ಘ ಸ್ನೇಹ. ಒಂದೇ ಸಿದ್ಧಾಂತಗಳ ಅಡಿಯಲ್ಲಿ ರಾಜಕಾರಣದಲ್ಲಿರುವ ಹಿನ್ನೆಲೆ ಯಾವುದೇ ಯೋಜನೆ ರೂಪಿಸಬೇಕಾದರೆ ಹೆಚ್ಚಿನ ಸಹಕಾರ ಸಿಕ್ಕಿದೆ. ಸಮಾಜವಾದಿ ಚಿಂತನೆ, ಹಿಂದುಳಿಗ ವರ್ಗ, ಅಲ್ಪಸಂಖ್ಯಾತರು ಸೇರಿ ಸಮಾಜದಲ್ಲಿ ಶೋಷಣೆಗೆ ಒಳಗಾಗುವ ಯಾವುದೇ ಜನರ ಧ್ವನಿಯಾಗಲು ಸಿದ್ದರಾಮಯ್ಯ ಎಂದಿಗೂ ಹಾತೊರೆಯುತ್ತಾರೆ. ಜನಪರ ಯಾವುದೇ ಯೋಜನೆಯ ಕುರಿತು ಸಿದ್ದರಾಮಯ್ಯನವರೊಂದಿಗೆ ಚರ್ಚಿಸಿದರೆ, ಆ ಯೋಜನೆಗೆ 'ಇಲ್ಲ' ಎನ್ನುವುದಿಲ್ಲ. ಹಣಕಾಸು ಮಂತ್ರಿಗಳಾಗಿ ಸುದೀರ್ಘ ಅನುಭವವುಳ್ಳ ಅವರು ಹೇಗಾದರೂ ಬಜೆಟ್‌ನಲ್ಲಿ ಯೋಜನೆಗಳಿಗೆ ಹಣ ಹೊಂದಿಸುವ ಪರಿಣತಿ ಹೊಂದಿದ್ದಾರೆ.

ವಿಶೇಷವಾಗಿ, ಹಿಂದುಳಿದ ವರ್ಗಗಳಿಗೆಂದು ನೀಡಿದ ಅನೇಕ ಸಲಹೆಗಳಲ್ಲಿ ಈ ಅನುಭವ ನನಗಾಗಿದೆ. ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟರಿಗೆ ಆಯವ್ಯಯದಲ್ಲಿ ಹಣ ಮೀಸಲಿಡುವ ಯೋಜನೆ ಸಂಬಂಧ 'ಎಸ್ಸಿಪಿ-ಟಿಎಸ್ಪಿ' ಕಾಯ್ದೆ, ಎಸ್ಸಿ ಒಳ ಮೀಸಲಾತಿ, ಎಸ್ಸಿ-ಎಸ್ಟಿ ಬಡ್ತಿ ಮೀಸಲಾತಿ ಮಸೂದೆ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ 20ಲಕ್ಷದಿಂದ 10ಕೋಟಿವರೆಗೆ ಸಾಲ (4 % ಬಡ್ಡಿ) ಸೌಕರ್ಯ ಸೇರಿದಂತೆ ಸಮಾಜದಲ್ಲಿನ ಆರ್ಥಿಕ ಅಶಕ್ತರಿಗೆ ಅಗತ್ಯ ಬಲ ತುಂಬುವ ಕೆಲಸಕ್ಕೆಂದೂ ಒಪ್ಪುತ್ತಾರೆ. ಅತಿಮುಖ್ಯವಾಗಿ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಜಾತಿಗಣತಿ ನಡೆಯಲು ಸೂತ್ರದಾರರೇ ಸಿದ್ದರಾಮಯ್ಯ. ಯಾವುದೇ ಯೋಜನೆಗಳನ್ನು ರೂಪಿಸಬೇಕೆಂದರೆ, ಸಮ ಸಮಾಜವನ್ನು ರೂಪಿಸಬೇಕೆಂದರೆ ಜನಸಂಖ್ಯೆ ಎಷ್ಟಿದೆ ಎನ್ನುವ ಮಾಹಿತಿಯೊಂದಿಗೆ ಯಾವ ವರ್ಗದ ಜನರೆಷ್ಟಿದ್ದಾರೆಂಬ ಅಂಕಿಅಂಶಗಳು ಮುಖ್ಯವಾಗುತ್ತದೆ. ಹೀಗಾಗಿಯೇ, ಹಿಂದೆ 2013ರಲ್ಲೇ ಜಾತಿಗಣತಿಗೆ ಒಪ್ಪಿಗೆ ನೀಡಿದ್ದರು. ಆ ಮೂಲಕ ಸಂವಿಧಾನದ ಆಶಯಗಳನ್ನು ಸಮರ್ಥವಾಗಿ ಅನುಷ್ಠಾನಕ್ಕೆ ತರುವ ಕಾಯಕದಲ್ಲಿ ಸದಾ ಮುಂಚೂಣಿಯಲ್ಲಿದ್ದಾರೆ. ಇತ್ತೀಚಿಗೆ, ರಾಜ್ಯದಲ್ಲಿ ಯುವಕರೆಲ್ಲಾ ಮೌಢ್ಯ, ಕೋಮುವಾದದತ್ತ ಹೆಚ್ಚಿನ ಆಕರ್ಷಣೆಗೆ ಒಳಗಾಗುತ್ತಿರುವ ಅಂಶ ಗಮನಕ್ಕೆ ಬಂತು. ದೇಶದಲ್ಲಿ ನಾವೆಲ್ಲಾ ಒಂದು ಎನ್ನುವ ಭಾವನೆಯಲ್ಲಿ ಬದುಕಬೇಕು. ಸಮುದಾಯಗಳ ನಡುವೆ ಕಿಚ್ಚು ಹಚ್ಚುವ ಯಾವುದೇ ಸಿದ್ಧಾಂತಗಳಿಗೆ ನಾವು ಅವಕಾಶ ಮಾಡಿಕೊಡುವುದಿಲ್ಲ. ಹೀಗಾಗಿ, ಶಾಲಾ, ಕಾಲೇಜುಗಳಲ್ಲಿ ಪ್ರಾರ್ಥನೆ ವೇಳೆ ಸಂವಿಧಾನ ಪೀಠಿಕೆ ಓದು ಕಡ್ಡಾಯಗೊಳಿಸಿದೆವು. ಇದೇ ರೀತಿ, ರಾಜ್ಯದೆಲ್ಲೆಡೆ ಸಂವಿಧಾನದ ಆಶಯಗಳ ಕುರಿತು ಜನರಲ್ಲಿ ಹೆಚ್ಚಿನ ಅರಿವು ಮೂಡಬೇಕೆನ್ನುವ ಸದುದ್ದೇಶದಿಂದಲೇ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನದಂದು ಸಂವಿಧಾನ ಮಾನವ ಸರಪಳಿ ರಚಿಸಿದ್ದೆವು. ಬೀದರ್‌ನಿಂದ ಚಾಮರಾಜನಗರದವರೆಗೆ 25ಲಕ್ಷಕ್ಕೂ ಅಧಿಕ ಜನರಿಂದ 2500ಕಿ.ಮೀ.ಯ ಈ ಮಾನವ ಸರಪಳಿ ಕಾರ್ಯಕ್ರಮ ವಿಶ್ವ ದಾಖಲೆ ಸೃಷ್ಟಿಸಿತು. ಹೀಗೆ, ಜನಪರ, ಸಂವಿಧಾನಾತ್ಮಕ ಅಂಶಗಳ ಯಾವುದೇ ಕಾರ್ಯಕ್ರಮಕ್ಕೆ ಸಿದ್ದರಾಮಯ್ಯ ಸದಾ -ಸಹಕಾರವಾಗಿ ನಿಂತಿದ್ದಾರೆ. ನಿಲ್ಲುತ್ತಾರೆಂಬುದೇ ನಮ್ಮ ಖುಷಿ.

ಎಚ್.ಸಿ.ಮಹದೇವಪ್ಪ, ಸಮಾಜಕಲ್ಯಾಣ ಇಲಾಖೆ ಸಚಿವರು.

ಸುದೀರ್ಘ ಮುಖ್ಯಮಂತ್ರಿ ಹಿರಿಮೆ ಖುಷಿ ಕೊಟ್ಟಿದೆ!

ಸಿದ್ಧರಾಮಯ್ಯನವರು ಡಿ.ದೇವರಾಜ ಅರಸುರವರ ಸುದೀರ್ಘ ಅವಧಿಯ ಮುಖ್ಯಮಂತ್ರಿ ದಾಖಲೆಯನ್ನು ಮೀರಿಸಿ ಮುಂದುವರೆಯುತ್ತಿರುವುದು ವೈಯಕ್ತಿಕವಾಗಿ ಖುಷಿ ತಂದಿದೆ. ಇದು ಕಾಂಗ್ರೆಸ್ ಪಕ್ಷಕ್ಕೆ, ಅವರಿಗೆ, ನಮಗೆಲ್ಲಾ ಹೆಮ್ಮೆಯ ವಿಷಯ. ಬಹುದಿನಗಳ ದಾಖಲೆಯನ್ನು ಮುರಿದಿದ್ದಾರೆ. ಈ ಸ್ಥಾನಕ್ಕೆ ಬರಲು ಸಿದ್ಧರಾಮಯ್ಯನವರು ಸಾಕಷ್ಟು ಶ್ರಮಿಸಿದ್ದಾರೆ. ಅನೇಕ ಹೋರಾಟಗಳನ್ನು ಮಾಡಿದ್ದಾರೆ. ಅವರ ಶ್ರಮ, ಹೋರಾಟದ ಫಲವಾಗಿ ಈ ಕ್ಷಣ ಬಂದಿದೆ. ಈ ಸಂದರ್ಭದಲ್ಲಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಜನಪರ ಕಾಳಜಿಯುಳ್ಳ ಅವರು 5ವರ್ಷದ ಅವಧಿಗೆ ಮುಖ್ಯಮಂತ್ರಿಗಳಾಗಿರುತ್ತಾರೆಂದೇ ನಾವು ಭಾವಿಸಿದ್ದೇವೆ. 2.5ವರ್ಷ ಮುಕ್ತಾಯ ಕಂಡಿದೆ. ಉಳಿದ ಅವಧಿಗೂ ಅವರೇ ಮುಂದುವರೆಯುತ್ತಾರೆಂದು ಭಾವಿಸಿದ್ದೇವೆ. ಈ ಹಿಂದೆ ಬೆಳಗಾವಿ ಅಧಿವೇಶನದಲ್ಲೂ ಈ ಮಾತನ್ನು ಸ್ವತಃ ಸಿದ್ಧರಾಮಯ್ಯನವರು ಹೇಳಿದ್ದರು. ಹೀಗಾಗಿ, ಅವರೇ ಮುಂದುವರೆಯಲಿ ಎಂದು ಬಯಸುತ್ತೇವೆ. ಜತೆಗೆ, ರಾಜ್ಯದಲ್ಲಿ ಸಾಕಷ್ಟು ಬಾರಿ ಯಶಸ್ವಿಯಾಗಿ ಬಜೆಟ್ ಮಂಡಿಸಿದ್ದಾರೆ. ಈ ಬಾರಿಯ ಬಜೆಟ್ ಸಹ ಅವರೇ ಮಂಡಿಸುತ್ತಾರೆ. ಅವರಿಗೆ ಶುಭವಾಗಲೆಂದು ಹಾರೈಸುತ್ತೇನೆ.

ಸತೀಶ್ ಜಾರಕಿಹೊಳಿ, ಲೋಕೋಪಯೋಗಿ ಇಲಾಖೆ ಸಚಿವರು.

ಸಿದ್ಧಾಂತ, ಸ್ವಾಭಿಮಾನದ ಪ್ರತೀಕ ಸಿದ್ದರಾಮಯ್ಯ!

ಸಿದ್ಧರಾಮಯ್ಯನವರು ಪಕ್ಷ ರಾಜಕಾರಣದ ಹೊರತಾಗಿ ನನಗೆ ಆತ್ಮೀಯ ಸ್ನೇಹಿತರು. ನನಗಿಂತ 6ವರ್ಷ ಹಿರಿಯರಾದರೂ, ಒಳ್ಳೆಯ ಸ್ನೇಹಿತರಾಗಿ ರಾಜಕಾರಣದಲ್ಲಿ ಜೊತೆಯಾಗಿದ್ದವರು. ಇಬ್ಬರೂ ಸಹ ಮೂಲತಃ ಜನತಾಪರಿವಾರದಿಂದ ಬಂದವರು. ಸಿದ್ದರಾಮಯ್ಯನವರು ಹಿಂದೆ ಜೆಡಿಎಸ್ ಪಕ್ಷದ ಆರಂಭದಲ್ಲಿ ರಾಜ್ಯಾಧ್ಯಕ್ಷರಾಗಿದ್ದಾಗ ನಾನು ಪ್ರಧಾನ ಕಾರ್ಯದರ್ಶಿಯಾಗಿದ್ದೆ. ಅತ್ಯಂತ ಸ್ವಾಭಿಮಾನಿಯಾಗಿದ್ದ ಅವರೊಂದಿಗೆ ಪಕ್ಷಕಟ್ಟುವ ಕೆಲಸದಲ್ಲಿ ಸಂಪೂರ್ಣ ತೊಡಗಿದ್ದೆ. ಈ ಅವಧಿಯಲ್ಲಿ ಅತ್ಯಂತ ಸಮೀಪದಿಂದ ಅವರನ್ನು ನಾನು ಬಲ್ಲೆ. ದೇವೇಗೌಡರ ಕಟ್ಟಾ ಬೆಂಬಲಿಗನಾಗಿ ಗುರುತಿಸಿಕೊಂಡಿದ್ದರೂ, ಸಿದ್ದರಾಮಯ್ಯರೊಂದಿಗಿನ ಸ್ನೇಹಕ್ಕೆಂದೂ ಚ್ಯುತಿ ಬಂದಿರಲಿಲ್ಲ. ಅವರಿಂದು ಕಾಂಗ್ರೆಸ್ ಪಕ್ಷದಲ್ಲಿದ್ದರೂ, ಹಿಂದಿನ ನನ್ನ ಆತ್ಮೀಯತೆಗೆಂದೂ ಧಕ್ಕೆ ಬಂದಿಲ್ಲ. ಇದಕ್ಕೆ, ಸಾಕ್ಷಿ ಕಳೆದ 2013ರಲ್ಲಿ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾದಾಗ ನಾನೂ ಸಹ ವಿಧಾನಸಭಾ ಸದಸ್ಯನಾಗಿ ಆಯ್ಕೆಯಾಗಿದ್ದೆ. ಆ ಅವಧಿಯಲ್ಲಿ ಕಡೂರು ವಿಧಾನಸಭಾ ಕ್ಷೇತ್ರಕ್ಕೆ ಅತ್ಯಂತ ಹೆಚ್ಚು ಅನುದಾನಗಳನ್ನು ನೀಡಿ ಸಹಕರಿಸಿದ್ದರು. ಯಾವುದೇ ಯೋಜನೆಯ ಕುರಿತು ಅವರೊಂದಿಗೆ ನೇರ ಮಾತನಾಡುವ ಸಲುಗೆ, ನಮ್ಮ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿ ಅವರು ಸ್ಪಂದಿಸುತ್ತಿದ್ದ ರೀತಿಗೆ ನಾನೆಂದೂ ಕ್ಷೇತ್ರದ ಜನರ ಪರವಾಗಿ ಆತ್ಮೀಯ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಜೆಡಿಎಸ್‌ನಲ್ಲಿದ್ದಾಗ ಅಹಿಂದ ಸಮಾವೇಶ ಮಾಡಲು ಹೊರಟಾಗ ಎಚ್.ಡಿ.ದೇವೇಗೌಡರು ಅವರನ್ನು ಪಕ್ಷದಿಂದಲೇ ಉಚ್ಚಾಟಿಸಲು ಹೊರಟಾಗ ನಾನೂ ಮತ್ತು ನನ್ನ ಸ್ನೇಹಿತರು ಈ ಕ್ರಮವನ್ನು ತಪ್ಪಿಸಲು ಸಾಕಷ್ಟು ಪ್ರಯತ್ನಿಸಿದೆವು. ಆದರೆ, ಪ್ರಯತ್ನ ಸಫಲವಾಗಿರಲಿಲ್ಲ. ಆ ನಂತರ ಅವರು ಕಾಂಗ್ರೆಸ್‌ಗೆ ಹೋದರು. ಆದರೆ, ಇಂದಿಗೂ ಅವರ ನನ್ನ ನಡುವೆ ಅದೇ ಆತ್ಮೀಯತೆ ಉಳಿದಿದೆ. ನನ್ನ ರಾಜಕಾರಣದ ಪಯಣದಲ್ಲಿ ಎಚ್.ಡಿ.ದೇವೇಗೌಡರು ಮತ್ತು ಸಿದ್ದರಾಮಯ್ಯನವರ ವಿಶ್ವಾಸ, ಪ್ರೀತಿ ಗಳಿಸಿದೆ ಎನ್ನುವುದು ನನ್ನ ಹೆಮ್ಮೆ. ಸಿದ್ದರಾಮಯ್ಯನವರು ಎಂಡಿ.ನಂಜುಂಡಸ್ವಾಮಿ, ಪೂರ್ಣಚಂದ್ರತೇಜಸ್ವಿ ಸೇರಿದಂತೆ ಪ್ರಗತಿಪರ ಚಿಂತಕರ ಒಡನಾಟದಿಂದ ಪ್ರತ್ಯೇಕ ಸಿದ್ಧಾಂತಗಳನ್ನು ಹೊಂದಿದ್ದಾರೆ. ಇದೇ ಸಿದ್ಧಾಂತಗಳು, ಸ್ವಾಭಿಮಾನಗಳಿಂದಲೇ ಸಾಕಷ್ಟು ಅಭಿಮಾನಿಗಳನ್ನವರು ಸಂಪಾದಿಸಿಕೊಂಡಿದ್ದಾರೆ. ಡಿ.ದೇವರಾಜ ಅರಸುರವರ ಅತ್ಯಂತ ಸುದೀರ್ಘ ಮುಖ್ಯಮಂತ್ರಿ ಎನ್ನುವ ದಾಖಲೆಯನ್ನು ಮುರಿದು, ಸಿದ್ದರಾಮಯ್ಯನವರು ಆ ಸ್ಥಾನದಲ್ಲಿ ಮುಂದುವರೆಯುತ್ತಿರುವುದು ವೈಯಕ್ತಿಕವಾಗಿ ಸಾಕಷ್ಟು ಸಂತೋಷ ನೀಡಿದೆ. ಇದೇ ರೀತಿ ಸಿದ್ದರಾಮಯ್ಯನವರು ಮತ್ತಷ್ಟು ದಾಖಲೆಗಳನ್ನು ಸಾಧಿಸಲಿ ಎಂದು ಹೃದಯಪೂರ್ವಕವಾಗಿ ಹಾರೈಸುತ್ತೇನೆ.

ವೈಎಸ್‌ವಿ.ದತ್ತ, ಹಿರಿಯ ರಾಜಕಾರಣಿ.

ಮಕ್ಕಳು ಮತ್ತು ರೈತಪರ ಚಿಂತನೆಯ ಶಕ್ತಿಯೇ ಕ್ಷೀರಭಾಗ್ಯ!

2013ರಲ್ಲಿ ಸರಕಾರ ರಚನೆಯಾಗಿ ಸಿದ್ದರಾಮಯ್ಯನವರು ಅನೇಕ ಭಾಗ್ಯಗಳನ್ನು ಘೋಷಿಸಿದ್ದರು. ಈ ಯೋಜನೆಗಳಿಗೆ ಅನುದಾನ ಒದಗಿಸುವ ಸಿದ್ಧತೆಯಲ್ಲಿದ್ದರು. ಅದೇ ವೇಳೆ ರಾಜ್ಯದಲ್ಲಿ ಕೆಎಂಎಫ್‌ಗೆ ನಿತ್ಯ 53ಲಕ್ಷ ಲೀ. ಹಾಲು ರೈತರಿಂದ ಪೂರೈಕೆಯಾಗುತ್ತಿತ್ತು. ಆದರೆ, ಈ ಪೈಕಿ 29ಲಕ್ಷ ಲೀ. ಹಾಲು ಮಾತ್ರ ಮಾರಾಟವಾಗುತ್ತಿತ್ತು. ಜತೆಗೆ, ಕೇವಲ 10ಲಕ್ಷ ಲೀ. ಹಾಲನ್ನು ಮಾತ್ರ ಪುಡಿಯಾಗಿ ಪರಿವರ್ತಿಸುವ ವ್ಯವಸ್ಥೆಯಿತ್ತು. ಉಳಿದ ಹಾಲು ಸಂಗ್ರಹ, ನಿರ್ವಹಣೆ, ಪುಡಿಯಾಗಿ ಪರಿವರ್ತನೆ ಸೇರಿದಂತೆ ನಿತ್ಯ ದೊಡ್ಡ ಮಟ್ಟದಲ್ಲಿ ಆರ್ಥಿಕ ಸವಾಲಿತ್ತು. ಇದರ ಪರಿಣಾಮ ರೈತರು ಎದುರಿಸುತ್ತಿದ್ದರು. ಈ ಸಮಸ್ಯೆಗಳಿಗೆ ಪರಿಹಾರೋಪಾಯವಾಗಿ ರಾಜ್ಯದ ಸರ್ಕಾರಿ ಶಾಲೆ ಮಕ್ಕಳಿಗೆ ಹಾಲು ಒದಗಿಸುವ ಯೋಜನೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ತಿಳಿಸುವ ನಿರ್ಧಾರ ಮಾಡಿದ್ದೆವು. ಈ ಪ್ರಯತ್ನಕ್ಕೆ ಅಂದಿನ ಕೆಎಂಎಫ್ ಅಧ್ಯಕ್ಷರಾಗಿದ್ದ ಸೋಮಶೇಖರ್ ರೆಡ್ಡಿಯವರು ಸಹ ಪೂರ್ಣ ಸ್ವಾತಂತ್ರ್ಯ ನೀಡಿದ್ದರು. ಜುಲೈನ ಅದೊಂದು ದಿನ ಬೆಳಗ್ಗೆ 6.30ರ ಸುಮಾರಿಗೆ ಮುಖ್ಯಮಂತ್ರಿಗಳ ನಿವಾಸಕ್ಕೆ ತೆರಳಿ, ಅಂದಿನ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾಗಿದ್ದ ಎಸ್.ವಿ.ರಂಗನಾಥ್ ಜತೆಗೆ ಈ ಯೋಜನೆ ಸಂಬಂಧ ಮಾತನಾಡಿದ್ದೆ. ಹಾಲನ್ನು ಸರ್ಕಾರಿ ಶಾಲಾ ಮಕ್ಕಳಿಗೆ ಒದಗಿಸುವ ಯೋಜನೆಯಿಂದ ನಷ್ಟ ಸರಿದೂಗಿಸುವುದು ಮಾತ್ರವಲ್ಲದೇ, ರಾಜ್ಯದ ರೈತರ ಅಭ್ಯುದಯವನ್ನು ವಿವರಿಸಲಾಗಿತ್ತು. ಆದರೆ, ಆ ವೇಳೆ ಸರ್ಕಾರದ 'ಭಾಗ್ಯ' ಯೋಜನೆಗಳಿಗೆ ಬಜೆಟ್ ಒದಗಿಸಲು ವ್ಯವಸ್ಥೆ ಮಾಡಲಾಗುತ್ತಿತ್ತು. ಯೋಜನೆ ಚೆನ್ನಾಗಿದ್ದರೂ ಹಣಕಾಸು ಹೊಂದಿಸಲಾಗುವುದಿಲ್ಲ ಎನ್ನುವ ಚಿಂತನೆ ಶುರುವಾಯಿತು. ಆಗ, ಮುಖ್ಯ ಕಾರ್ಯದರ್ಶಿಗಳಾದ

ಎಸ್.ವಿ.ರಂಗನಾಥ್ ಯೋಜನೆ ಪರ ನಿಂತರು. ಕೆಲ ಇಲಾಖೆಗಳಲ್ಲಿ ಬಳಕೆಯಾಗದೇ ಉಳಿದ ಅನುದಾನಗಳನ್ನು ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹೊಂದಿಸಿ ಈ ರೈತಪರ ಯೋಜನೆಗೆ ವಿನಿಯೋಗಿಸಬಹುದು ಎನ್ನುವ ಹಾದಿಯನ್ನು ತಿಳಿಸಿದರು. ಈ ಸಲಹೆಯನ್ನು ಪುರಸ್ಕರಿಸಿದ ಸಿದ್ದರಾಮಯ್ಯನವರು ಯೋಜನೆಗೆ ಹಸಿರುನಿಶಾನೆ ತೋರಿದ್ದರು. ಈ ರೀತಿ ರಾಜ್ಯದ ರೈತರಿಗೆ ಮತ್ತು ಸರ್ಕಾರಿ ಶಾಲೆಯ ಮಕ್ಕಳಿಗೆ ವರದಾನವಾಗಿ ಬಂದ ಯೋಜನೆಯೇ 'ಕ್ಷೀರಭಾಗ್ಯ'. ಬಜೆಟ್ ತಲೆಬಿಸಿಯ ನಡುವೆ ಅಧಿಕಾರಿಯೊಬ್ಬರು ತಂದ ಯೋಜನೆಯನ್ನು ಕಡೆಗಣಿಸುವುದು ದೊಡ್ಡ ವಿಷಯವೇ ಆಗುತ್ತಿರಲಿಲ್ಲ. ಆದರೆ, ಸಿದ್ದರಾಮಯ್ಯನವರು ಯೋಜನೆಯನ್ನು ಯಾರು ಕೊಟ್ಟರು ಎನ್ನುವುಕ್ಕಿಂತ, ಯೋಜನೆಯಿಂದ ಜನರಿಗೆಷ್ಟು ಲಾಭ, ರೈತರಿಗೆ ಏನು ಉಪಯೋಗ ಎನ್ನುವ ಅಂಶವನ್ನು ಪರಿಗಣಿಸಿದ್ದರು. ಅನೇಕ ಯೋಜನೆಗಳ ವಿಷಯದಲ್ಲಿ ಸಿದ್ದರಾಮಯ್ಯನವರ ವೈಖರಿ ಹೀಗೆ ಇದೆ. ಹೀಗಾಗಿಯೇ ಅವರು ಜನನಾಯಕರು.

ಎ.ಎಸ್.ಪ್ರೇಮನಾಥ್, ಕೆಎಂಎಫ್‌ನ ಮಾಜಿ ವ್ಯವಸ್ಥಾಪಕ ನಿರ್ದೇಶಕರು.

'ಇತಿಹಾಸ ನಿರ್ಮಿಸಲಿ'

ರಾಜ್ಯದಲ್ಲಿ ರೈತಪರ ಚಳುವಳಿ ನೇತಾರರಾದ ಎಂ.ಡಿ.ನಂಜುಂಡಸ್ವಾಮಿಯವರ ಗರಡಿಯಲ್ಲಿ ಪಳಗಿದ ಸಿದ್ದರಾಮಯ್ಯನವರ ರಾಜಕೀಯ ಬೆಳವಣಿಗೆ ಸಾಕಷ್ಟು ಹೆಮ್ಮೆ ಮೂಡಿಸಿದೆ. ವಿದ್ಯಾರ್ಥಿ ಜೀವನದಿಂದಲೂ ಸಿದ್ದರಾಮಯ್ಯನವರು ಎಂ.ಡಿ.ನಂಜುಂಡಸ್ವಾಮಿಯವರ ಸಂಪರ್ಕದಲ್ಲಿದ್ದರು. ಹೀಗಾಗಿಯೇ, ಜನಪರ ಕಾಳಜಿ, ರೈತಪರ ಚಿಂತನೆ ಅವರ ಜತೆಯಲ್ಲಿದೆ. ಸಮಾಜವಾದ, ಸಮಸಮಾಜ ನಿರ್ಮಾಣದ ಪರಿಕಲ್ಪನೆಗಳಿಗೆ ಜೀವ ನೀಡುವ ಉದ್ದೇಶಗಳು ಅವರ ಯೋಜನೆಗಳಲ್ಲಿ ಕಂಡುಬರುತ್ತದೆ. ಆದರೆ, ಜನರನ್ನು ದುಡಿದು ತಿನ್ನುವಂತೆ ಮಾಡುವುದು ಸರ್ಕಾರದ ಉದ್ದೇಶವಾಗಬೇಕು. ಈ ಕಾಯಕಕ್ಕೆ ಅಗತ್ಯ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಜನರಿಗೆ ಸ್ವಾವಲಂಬನೆಯ ಶಕ್ತಿ ನೀಡಬೇಕು. ಜತೆಗೆ, ಅತಿಮುಖ್ಯವಾಗಿ ರೈತರ ಕಾಳಜಿ ಅಗತ್ಯ ಮತ್ತು ಅನಿವಾರ್ಯ. ದೇಶದ ಇತಿಹಾಸದಲ್ಲಿ ರೈತ ಹೋರಾಟಗಳಲ್ಲಿ ರಾಜ್ಯದ ರೈತಚಳುವಳಿಗೆ ಪ್ರತ್ಯೇಕತೆಯಿದೆ. ಇಲ್ಲಿ ರೂಪಿತವಾಗುವ ರೈತ ಹೋರಾಟಗಳು ವಿಭಿನ್ನ ಮತ್ತು ಸ್ಪಷ್ಟ. ಇಂಥಹಾ, ಹೋರಾಟಗಳ ತಾರ್ಕಿಕ ಅಂತ್ಯವಾಗಬೇಕೆಂದರೆ ಸರ್ಕಾರದ ಪಾತ್ರ ಮುಖ್ಯವಾಗುತ್ತದೆ. ಪ್ರಸ್ತುತ, ರಾಜ್ಯದಲ್ಲಿ ಡಿ.ದೇವರಾಜ ಅರಸುರವರ ಸುದೀರ್ಘ ಮುಖ್ಯಮಂತ್ರಿಯೆನ್ನುವ ದಾಖಲೆಯನ್ನು ಮೀರಿಸಿ ಸಿದ್ದರಾಮಯ್ಯನವರು ಬೆಳವಣಿಗೆ ಹೊಂದುತ್ತಿರುವುದು ಸಂತಸ ತಂದಿದೆ. ಆದರೆ, ರೈತಪರ ಕಾಳಜಿಯೊಂದಿಗೆ ಕೆಲ ಐತಿಹಾಸಿಕ ತೀರ್ಮಾನಗಳನ್ನು ತೆಗೆದುಕೊಂಡು, ಇತಿಹಾಸದ ಪುಟಗಳಲ್ಲಿ ಶ್ರೇಷ್ಠ ಸ್ಥಾನ ಪಡೆದುಕೊಳ್ಳಲಿ ಎನ್ನುವುದು ನಮ್ಮ ನಿರೀಕ್ಷೆ.

ಕೆ.ಟಿ.ಗಂಗಾಧರ್, ವರಿಷ್ಠರು, ರಾಜ್ಯರೈತಸಂಘ.

ನಾನು ಅಮೀರ್ ಖಾನ್ ರೀತಿ ಆಗಬೇಕು: ಝೈದ್ ಖಾನ್

ಝೈದ್, ರಚಿತಾ
ಚಿತ್ರ: ಕಲ್ಟ್

'ಬನಾರಸ್' ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟ ನಟ ಝೈದ್ ಖಾನ್ ನಟನೆಯ 'ಕಲ್ಟ್' ಸಿನಿಮಾ ಜ.23ರಂದು ತೆರೆಕಾಣುತ್ತಿದೆ. ಈ ಸಿನಿಮಾದಲ್ಲಿ ಮೂರು ಶೇಡ್ಸ್‌ನಲ್ಲಿ ಕಾಣಿಸಿಕೊಳ್ಳಲಿರುವ ಝೈದ್‌ಗೆ 'ಉಪಾಧ್ಯಕ್ಷ' ನಿರ್ದೇಶಕ ಅನಿಲ್ ಕುಮಾರ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಈ ಹೊಸ್ತಿಲಲ್ಲಿ ಸಿನಿಪಯಣದ ಕಥೆಯನ್ನು ಬಿಚ್ಚಿಟ್ಟಿದ್ದಾರೆ.

• ಅಭಿಲಾಷ್ ಪಿ.ಎಸ್.

• 'ಬನಾರಸ್'ನ ಅನುಭವ ಸಿನಿಪಯಣವನ್ನು ಹೇಗೆ ರೂಪಿಸಿತು?

ಸಿನಿಮಾದ ಯಾವುದೇ ಹಿನ್ನೆಲೆ ಇಲ್ಲದೆ ಬಂದವನು ನಾನು. ಅಪ್ಪ ರಾಜಕೀಯದಲ್ಲಿ ಇರುವವರು. ಹೀಗಿರುವಾಗ ಸಿನಿಮಾಗೇ ಬರಬೇಕು ಎನ್ನುವ ಆಸೆ ಇಟ್ಟುಕೊಂಡು ಹೆಜ್ಜೆಗಳನ್ನು ಇಟ್ಟವನು ನಾನು. 'ಬನಾರಸ್' ಮೊದಲ ಹೆಜ್ಜೆ. ಎಲ್ಲವೂ ಹೊಸ ಅನುಭವ. 'ಆರ್ಥಿಕವಾಗಿ, ವೈಯಕ್ತಿಕವಾಗಿ ಯಾವುದೇ ಬೆಂಬಲ ನೀಡುವುದಿಲ್ಲ' ಎಂದು ತಂದೆ ಇಲ್ಲಿಗೆ ಹೆಜ್ಜೆ ಇಡುವ ಮೊದಲೇ ಸ್ಪಷ್ಟವಾಗಿ ಹೇಳಿದ್ದರು. ನಾನು ಸಿನಿಮಾ ಕ್ಷೇತ್ರಕ್ಕೆ ಹೋಗುವುದು ಅವರಿಗೆ ಇಷ್ಟವಿರಲಿಲ್ಲ. ಆದರೆ ಸಿನಿಮಾ ಹಸಿವು ನನಗೆ ಜೋರಾಗಿಯೇ ಇತ್ತು. ಪ್ರತಿಭೆಯಿಂದಲೇ ಬರುತ್ತೇನೆ ಎಂದು ಮುಂದಡಿ ಇಟ್ಟೆ.

ತಂದೆಗೆ ಆತ್ಮೀಯರಾಗಿದ್ದ ತಿಲಕ್ ರಾಜ್ ಬಲ್ಲಾಳ್ ಅವರು ನನ್ನ ಸಿನಿಮಾ ಆಸಕ್ತಿಯನ್ನು ಗಮನಿಸಿ, ತಂದೆಗೆ ಮನವರಿಕೆ ಮಾಡಿ ಮುಂಬೈಗೆ ನಟನೆಯ ತರಬೇತಿಗಾಗಿ ಕಳುಹಿಸಿದರು. ತರಬೇತಿ ಪಡೆದು ಬಂದ ನನಗೆ ಅವರೇ ಸಿನಿಮಾವೊಂದನ್ನು ನಿರ್ಮಾಣ ಮಾಡಿದರು. ಅದೇ 'ಬನಾರಸ್'. ಸಿನಿಮಾದಲ್ಲಿನ ಹಾಡುಗಳು ಎಲ್ಲರನ್ನೂ ತಲುಪಿದವು. ಈ ಚಿತ್ರದಿಂದ ನನ್ನ ಮುಖಪರಿಚಯ ಕರ್ನಾಟಕಕ್ಕೆ ಆಯಿತು. ಚಿತ್ರರಂಗದಲ್ಲೊಂದು ವೇದಿಕೆ ದೊರೆಯಿತು. 'ಝೈದ್ ಸಿನಿಮಾ ಬಗ್ಗೆ ಗಂಭೀರವಾಗಿದ್ದಾನೆ. ಬೇರೆ ರಾಜಕಾರಣಿಗಳ ಮಕ್ಕಳ ರೀತಿ ಅಲ್ಲ' ಎನ್ನುವ ಮಾತುಗಳನ್ನೂ ಕೇಳಿದೆ.

• 'ಕಲ್ಟ್' ಸಿನಿಮಾ ಪ್ರವೇಶಿಸಿದ್ದು ಹೇಗೆ?

'ಬನಾರಸ್' ಬಳಿಕ ಮುಂದೇನು ಎಂದು ಕಥೆ ಹುಡುಕುತ್ತಿದ್ದೆ. ನನಗೆ ಬೇಕಾಗಿದ್ದ ನಿರ್ದೇಶಕರು ಸಿಗುತ್ತಿರಲಿಲ್ಲ. ಒಳ್ಳೆಯ ಕಥೆ ಬೇಕಾಗಿತ್ತು. ಹೆಸರಿಗೋಸ್ಕರ ಅಥವಾ ಕೆಲಸವಿಲ್ಲ ಎನ್ನುವ ಕಾರಣಕ್ಕೆ ಸಿನಿಮಾ ಮಾಡುವವನು ನಾನಲ್ಲ. ಸಿನಿಮಾ ಮಾಡಿದರೆ ಅದರ ಕಥೆ ಗಟ್ಟಿಯಾಗಿರಬೇಕು. ನಮಗೋಸ್ಕರ ಯಾರೂ ಕಾಯುತ್ತಿಲ್ಲ ಎಂದು ನೆನಪಿಟ್ಟುಕೊಳ್ಳಬೇಕು. ಹೀಗೆ ಒಂದೂವರೆ ವರ್ಷ ಕಳೆದೆ. ಯಶ್ ಅವರ ಮುಖಾಂತರ ಅನಿಲ್ ಕುಮಾರ್ ಅವರ ಪರಿಚಯವಾಯಿತು. ಆ ಸಂದರ್ಭದಲ್ಲಿ 'ಉಪಾಧ್ಯಕ್ಷ' ಸಿನಿಮಾ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿತ್ತು. ಇದಾಗಿ ಒಂದು ತಿಂಗಳಲ್ಲಿ ನನಗೆ 'ಕಲ್ಟ್' ಕಥೆ ಹೇಳಿದ್ದರು. ಇದು ಬಹಳ ಇಷ್ಟವಾಯಿತು. ಹೀಗೆ 'ಕಲ್ಟ್' ಪಯಣ ಆರಂಭವಾಯಿತು.

• ಹೊಸಬರು ಮಾರುಕಟ್ಟೆಯನ್ನು ಅರಿತುಕೊಳ್ಳುವುದು ಎಷ್ಟು ಮುಖ್ಯ?

ಬಹಳ ಮುಖ್ಯ. ತನ್ನ ಮಾರುಕಟ್ಟೆ ಎಷ್ಟಿದೆಯೋ ಅನ್ನುವುದು ಎಲ್ಲರಿಗೂ ತಿಳಿದಿರಬೇಕು. ನಿರ್ಮಾಪಕರು ನನ್ನ ಮೇಲೆ ಎಷ್ಟು ಹಣ ಹೂಡಿಕೆ ಮಾಡಬಹುದು ಎನ್ನುವುದರ ಅರಿವೂ ಇರಬೇಕು. ನಾನು ಸಚಿವನ ಮಗ. ದೊಡ್ಡ ಸಿನಿಮಾವೇ ಬೇಕು ಎಂಬ ದಡ್ಡನ ಕೆಲಸ ನಾನು ಮಾಡುವುದಿಲ್ಲ. ನಿರ್ಮಾಪಕರು ನಾಯಕನನ್ನೇ ನಂಬಿಕೊಂಡು ಹಣ ಹೂಡಿಕೆ ಮಾಡುವುದು. ಏನೇ ಹೆಚ್ಚು ಕಮ್ಮಿ ಆದರೂ ಗುರಿಯಾಗುವುದು ನಾನೇ. ಹೀಗಾಗಿ ಜವಾಬ್ದಾರಿ ಹೆಚ್ಚು ತೆಗೆದುಕೊಂಡಿದ್ದೇನೆ. ನಾನೇ ಮುಂದೆ ನಿಂತು ಬಜೆಟ್ ಹಾಕಿಸಿದ್ದೇನೆ. ನನ್ನ ಹಿಂದಿನ ಸಿನಿಮಾ ಎಷ್ಟು ವ್ಯಾಪಾರ ಮಾಡಿತ್ತು ಎನ್ನುವುದನ್ನು ತಿಳಿದುಕೊಂಡು ಒಂದು ಚೌಕಟ್ಟು ಹಾಕಿಕೊಂಡು ಹಣ ಹಾಕಿಸಿದ್ದೇನೆ. ರಿಸ್ಕ್ ಇದ್ದೇ ಇರುತ್ತದೆ. ಇಲ್ಲದಿದ್ದರೆ ಇದು ಆಟ ಆಟವೇ ಅಲ್ಲ.

• ಕಥೆ ಆಯ್ಕೆಗೆ ನಿಮ್ಮ ಮಾನದಂಡಗಳೇನು?

ಕಥೆಗಳು ಭಿನ್ನವಾಗಿರಬೇಕು. 'ಬನಾರಸ್'ನ ಕಥೆ ಪ್ರೇಮಕಥೆಯೊಂದಿಗೆ ಟೈಂಲೂಪ್ ಕಾನ್ಸೆಪ್ಟ್ ಹೊಂದಿತ್ತು. ಒಂದೇ ರೀತಿಯ ಜಾನರ್‌ನ ಸಿನಿಮಾಗಳನ್ನು ಮಾಡಲು ಇಷ್ಟವೂ ಇಲ್ಲ, ಮಾಡುವುದೂ ಇಲ್ಲ. ಜನ ನನ್ನ ಸಿನಿಮಾ ಏಕೆ ನೋಡಬೇಕು? ನನ್ನೊಳಗಿನ ವಿಶೇಷತೆ ಏನು? ಎನ್ನುವ ಪ್ರಶ್ನೆಯನ್ನು ಹಾಕಿಕೊಳ್ಳುತ್ತಲೇ ಇರುತ್ತೇನೆ. ಪ್ರತಿ ಬಾರಿಯೂ ಅಮೀರ್ ಖಾನ್ ಅವರ ಸಿನಿಮಾಗಳು ಬಂದಾಗ ಜನರಿಗೆ ಒಂದು ನಿರೀಕ್ಷೆ ಇರುತ್ತದೆ. ಈ ರೀತಿ ನಾನು ಆಗಬೇಕು ಎನ್ನುವ ಕನಸು ಕಾಣುವಾತ ನಾನು. ಪ್ರೇಮಕಥೆಗಳನ್ನು ಮಾಡುವ ಆಸೆ ಬಹಳ ಇದೆ. ಏಕೆಂದರೆ ನನ್ನ ವ್ಯಕ್ತಿತ್ವ, ರೂಪ ಹಾಗಿದೆ. ಕೈಯಲ್ಲಿ ಮಚ್ಚು ಹಿಡಿದು ಬಂದೆನೆಂದರೆ ಅದು ನನಗೆ ಹೊಂದಿಕೆಯಾಗುವುದೇ ಇಲ್ಲ. ಕನ್ನಡದಲ್ಲಿ ಫೀಲ್ ಗುಡ್ ಸಿನಿಮಾಗಳು ಕಡಿಮೆಯಾಗಿವೆ. ಕುಟುಂಬ ಸಹಿತವಾಗಿ ಕುಳಿತು ನೋಡುವ ಸಿನಿಮಾಗಳೇ ಬರುತ್ತಿಲ್ಲ. ಇಂತಹ ಒಂದು ಜಾಗವನ್ನು ತುಂಬುವತ್ತ ನನ್ನ ಹೆಜ್ಜೆ ಇದೆ.

• ರಚಿತಾ ರಾಮ್ ಅವರ ಜೊತೆ ತೆರೆಹಂಚಿಕೊಂಡ ಅನುಭವ..

ನನಗೆ ಅವರು ಮೊದಲಿನಿಂದ ಸ್ನೇಹಿತೆ. ಚಿತ್ರೀಕರಣ ಸಂದರ್ಭದಲ್ಲಿ ಸೆಟ್‌ಗೆ ಬಂದ ಬಳಿಕ ಸ್ಟಾರ್ ರೀತಿ ವರ್ತಿಸುತ್ತಾರಾ ಎನ್ನುವ ಭಯ ಇತ್ತು. ಆದರೆ ರಚಿತಾ ಸ್ನೇಹವನ್ನು ಮರೆಯಲಿಲ್ಲ. ಅವರ ಜೊತೆ ನಟನೆ ಖುಷಿ ನೀಡಿದೆ.

• ಸಿನಿಮಾದಲ್ಲಿನ ನಿಮ್ಮ ಪಾತ್ರದ ಬಗ್ಗೆ...

ಚಿತ್ರದಲ್ಲಿ ಮೂರು ಶೇಡ್‌ಗಳಲ್ಲಿ ಕಾಣಿಸಿಕೊಳ್ಳಲಿದ್ದೇನೆ. 'ಮಾಧವ' ಎನ್ನುವುದು ನನ್ನ ಪಾತ್ರದ ಹೆಸರು. ಮೂರು ಶೇಡ್ಸ್ ಕೇವಲ ವಸ್ತ್ರ ವಿನ್ಯಾಸದಲ್ಲಿ ಅಲ್ಲ, ಆತನ ವ್ಯಕ್ತಿತ್ವ, ದೇಹ, ಧ್ವನಿ ಎಲ್ಲದರಲ್ಲೂ ಬದಲಾವಣೆ ಇದೆ. ಇದು ಮಾನಸಿಕವಾಗಿ, ದೈಹಿಕವಾಗಿ ಸವಾಲುಗಳನ್ನು ಒಡ್ಡಿತು. ಕಾಲೇಜು ದಿನಗಳೂ ಕಥೆಯೊಳಗಿದ್ದು, ಇದಕ್ಕಾಗಿ ತೂಕ ಇಳಿಸಿಕೊಂಡು ಹಳ್ಳಿ ಹುಡುಗನಾಗಿದ್ದೆ. ಇದು 'ಮಾಧವ'ನ ಜೀವನದ ಪಯಣದ ಕಥೆ ಹೊಂದಿದೆ.

'ಬನಾರಸ್'ಗೆ ನಾನು ಡಬ್ಬಿಂಗ್ ಮಾಡಿದ್ದೆ. ಆದರೆ ನನ್ನ ಭಾಷೆಯಲ್ಲಿ ಮುಸ್ಲಿಂ ಕನ್ನಡದ ಧಾಟಿ ಇತ್ತು. ಕನ್ನಡದಲ್ಲೂ ಹೆಚ್ಚು ಸ್ಪಷ್ಟತೆ ಇರಲಿಲ್ಲ. ಹೀಗಾಗಿ ಕೊನೆಯಲ್ಲಿ ಬೇರೆಯವರಿಂದ ಡಬ್ಬಿಂಗ್ ಮಾಡಿಸಿದೆ. ಇದಾದ ಬಳಿಕ ಸ್ಪಷ್ಟವಾಗಿ ಕನ್ನಡ ಮಾತನಾಡುವುದನ್ನು ಕಲಿತಿದ್ದೇನೆ. ಚಿತ್ರರಂಗದಲ್ಲಿ ಉಳಿದುಕೊಳ್ಳಲು ಭಾಷೆ ಮುಖ್ಯ. 'ಕಲ್ಟ್'ನ ಪಾತ್ರಕ್ಕೆ ನಾನೇ ಡಬ್ಬಿಂಗ್ ಮಾಡಿದ್ದೇನೆ.

• ಬೇರೆ ಚಿತ್ರರಂಗದಿಂದ ಆಫರ್‌ಗಳು ಬಂದಿವೆಯೇ?

'ಬನಾರಸ್' ಸಿನಿಮಾಗೂ ಮೊದಲೇ ಬಂದಿದ್ದವು. ಆವಾಗಲೂ ಒಪ್ಪಿಲ್ಲ. 'ಬನಾರಸ್' ಬಳಿಕ ಹಿಂದಿಯಿಂದ ಹಲವು ವೆಬ್‌ಸರಣಿ, ಸಿನಿಮಾಗಳ ಆಫರ್‌ಗಳು ಬಂದಿದ್ದವು. ಹುಟ್ಟಿ ಬೆಳೆದ ಕರ್ನಾಟಕದ ಕನ್ನಡ ಸಿನಿಮಾದಲ್ಲೇ ಇರಬೇಕು ಎಂದು ನಿರ್ಧರಿಸಿದ್ದೇನೆ. ನನ್ನ ಭಾಷೆಯನ್ನು ಬಿಟ್ಟುಕೊಡುವುದಿಲ್ಲ. ಕನ್ನಡ ಹಾಗೂ ಹಿಂದಿಯಲ್ಲಿ ಮಾಡುವುದಿದ್ದರೆ ಒಪ್ಪಿಕೊಳ್ಳುತ್ತೇನೆ. ಮಲಯಾಳ ಚಿತ್ರರಂಗದಿಂದಲೂ ಇತ್ತೀಚೆಗೆ ಹೆಚ್ಚಿನ ಆಫರ್‌ಗಳು ಬಂದಿವೆ. ❖

• ಮುಂದಿನ ಸಿನಿಮಾಗಳು...

'ಕಲ್ಟ್' ಹೊರತುಪಡಿಸಿ ಮೂರು ಸಿನಿಮಾಗಳನ್ನು ಒಪ್ಪಿಕೊಂಡಿದ್ದೇನೆ. ಮೂರನೇ ಮತ್ತು ನಾಲ್ಕನೇ ಸಿನಿಮಾದ ನಿರ್ದೇಶಕರು, ಕಥೆ ಅಂತಿಮಗೊಳಿಸಿ ಪ್ರಿಪ್ರೊಡಕ್ಷನ್ ಆರಂಭಿಸಿದ್ದೇನೆ. ಮೂರನೇ ಸಿನಿಮಾದ ಹಾಡುಗಳೂ ಸಿದ್ಧವಾಗಿವೆ. ಏಪ್ರಿಲ್ ಅಂತ್ಯದಿಂದ ಇದರ ಚಿತ್ರೀಕರಣ ಆರಂಭವಾಗಲಿದೆ. ಇದೊಂದು ಪಕ್ಕಾ ಪೈಸಾ ವಸೂಲ್ ಸಿನಿಮಾ. ಇದೇ ವರ್ಷಾಂತ್ಯದಲ್ಲಿ ತೆರೆಗೆ ತರುವ ಯೋಜನೆ ಹಾಕಿಕೊಂಡಿದ್ದೇವೆ.

ಐಶಾನಿ ಶೆಟ್ಟಿ

'ಶಾಕುಂತಲೆ'ಯ ಕಾಜಾಣ ಕಥೆ

• ಎಪಿಎಸ್

'ವಾಸ್ತು ಪ್ರಕಾರ' ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟ ನಟಿ ಐಶಾನಿ ಶೆಟ್ಟಿ ತಮ್ಮ ನಿರ್ದೇಶನದ ಮೊದಲ ಸಿನಿಮಾದ ಶೀರ್ಷಿಕೆ ಘೋಷಿಸಿದ್ದಾರೆ. 'ಕಾಜಾಣ' ಎಂಬ ಶೀರ್ಷಿಕೆಯ ಸಿನಿಮಾದಲ್ಲಿ ಐಶಾನಿಯೇ ಮುಖ್ಯಭೂಮಿಕೆಯಲ್ಲಿದ್ದು, 2026ರಲ್ಲೇ ಚಿತ್ರ ತೆರೆಗೆ ಬರಲಿದೆ.

ಚಂದನವನದಲ್ಲಿ 'ಶಾಕುಂತಲೆ' ಎಂದೇ ಗುರುತಿಸಿಕೊಂಡಿರುವ ಐಶಾನಿ, 'ಗಣಿ ಬಿ.ಕಾಂ ಪಾಸ್', 'ಹೊಂದಿಸಿ ಬರೆಯಿರಿ', 'ಧರಣಿ ಮಂಡಲ ಮಧ್ಯದೊಳಗೆ' ಹೀಗೆ ಹಲವು ಸಿನಿಮಾಗಳಲ್ಲಿ ನಟಿಸಿದ್ದಾರೆ. ಇತ್ತೀಚೆಗೆ 'ಶಾಕುಂತಲೆ ಸಿನಿಮಾಸ್' ಎಂಬ ನಿರ್ಮಾಣ ಸಂಸ್ಥೆಯನ್ನು ಆರಂಭಿಸಿದ್ದ ಅವರು, ಅದೇ ನಿರ್ಮಾಣ ಸಂಸ್ಥೆಯಡಿ 'ಕಾಜಾಣ'ವನ್ನು ತೆರೆಗೆ ತರುತ್ತಿದ್ದಾರೆ. 'ಕಾಜಿ' ಎಂಬ ಕಿರುಚಿತ್ರವನ್ನು ನಿರ್ದೇಶಿಸಿ, ಇದೀಗ ಸಿನಿಮಾ ನಿರ್ದೇಶನಕ್ಕಿಳಿದ ಅವರು ತಮ್ಮ ಅನುಭವ ಬಿಚ್ಚಿಟ್ಟಿದ್ದಾರೆ.

'ಮೊದಲ ಕಿರುಚಿತ್ರ 'ಕಾಜಿ' ಬಳಿಕ ನಿರ್ದೇಶನದ ಆಸೆ ಮತ್ತಷ್ಟು ಚಿಗುರಿತು. ಇದಕ್ಕಾಗಿ ಸಮಯ ತೆಗೆದುಕೊಂಡೆ. ಸುಮಾರು ಎರಡು ವರ್ಷಗಳ ಹಿಂದೆ 'ಕಾಜಾಣ' ಕಥೆ ಹುಟ್ಟಿತು. ಒಂದು ಘಟನೆಯಿಂದ ಸ್ಫೂರ್ತಿ ಪಡೆದು ಇದನ್ನು ಬರೆದೆ. ಇದರ ಬರವಣಿಗೆ, ಚಿತ್ರಕಥೆಯೂ ನನ್ನದೇ. ಪುತ್ತೂರು ಸೇರಿದಂತೆ ದಕ್ಷಿಣ ಕನ್ನಡದಲ್ಲೇ ಸಿನಿಮಾ ಚಿತ್ರೀಕರಣಗೊಳ್ಳುತ್ತಿದೆ. ಅಲ್ಲಿನ ಸಂಸ್ಕೃತಿಯ ಕುರಿತ ಕೌಟುಂಬಿಕ ಸಿನಿಮಾವಿದು. ಬಹಳ ಜೀವಂತಿಕೆ ಇರುವ ಕಥೆಯಲ್ಲಿ ನಾನೇ ಮುಖ್ಯಭೂಮಿಕೆಯಲ್ಲಿದ್ದೇನೆ. ಡ್ರಾಮಾ ಜಾನರ್‌ನಲ್ಲಿ ಈ ಸಿನಿಮಾವಿದೆ' ಎನ್ನುತ್ತಾರೆ ಐಶಾನಿ.

'ಏಕೆ ಹೆಚ್ಚು ಸಿನಿಮಾಗಳಲ್ಲಿ ನಟಿಸುತ್ತಿಲ್ಲ' ಎನ್ನುವ ಪ್ರಶ್ನೆಗೆ, 'ಮೊದಲಿನಿಂದಲೂ ನನ್ನ ಸಿನಿಗ್ರಾಫ್ ನೋಡಿದರೆ ಹೆಚ್ಚು ಸಿನಿಮಾಗಳನ್ನು ಒಪ್ಪಿಕೊಂಡವಳು ನಾನಲ್ಲ. ಇಷ್ಟವಾಗುವ ಕಥೆಗಳನ್ನಷ್ಟೇ ಮಾಡುತ್ತೇನೆ ಎಂದು ಚಿತ್ರರಂಗಕ್ಕೆ ಬಂದಾಗಲೇ ಹೇಳಿದ್ದೆ. ಸಂಖ್ಯೆಗಳ ಹಿಂದೆ ಬಿದ್ದವಳು ನಾನಲ್ಲ. ಇತ್ತೀಚಿನ ದಿನಗಳಲ್ಲಿ ಭಿನ್ನವಾದ ಕಥೆಗಳನ್ನು ಹೇಳಬೇಕು ಎನ್ನುವ ತುಡಿತ ಹೆಚ್ಚಾಯಿತು. ಹೀಗಾಗಿ 'ಶಾಕುಂತಲೆ ಸಿನಿಮಾಸ್' ಹುಟ್ಟುಹಾಕಿದೆ. ನನ್ನ ಸ್ನೇಹಿತರು, ಸಂಬಂಧಿಕರು ನನ್ನ ಜೊತೆ ಕೈಜೋಡಿಸಿದ್ದಾರೆ. ಬೇರೆ ನಿರ್ಮಾಪಕರ ಬಳಿ ಹೋಗುವುದಕ್ಕಿಂತ ನಮ್ಮದೇ ಬ್ಯಾನರ್‌ನಲ್ಲಿ 'ಕಾಜಾಣ' ತರಲು ನಿರ್ಧರಿಸಿದೆವು' ಎಂದರು.

ಏನಿದು 'ಕಾಜಾಣ'?

'ನನ್ನ ಕಥೆಗೆ ಸೂಕ್ತವಾಗುವ ಶೀರ್ಷಿಕೆಯ ಹುಡುಕಾಟದಲ್ಲಿ ದೊರೆತ ಪದವಿದು. ಒಂದು ಕೃತಿಯಲ್ಲಿ 'ಕಾಜಾಣ'ದ ಬಗ್ಗೆ ಒಂದಿಷ್ಟು ಮಾಹಿತಿ ಇತ್ತು. ಕುವೆಂಪು ಅವರ ಕೃತಿಗಳ ಮುಖಪುಟದಲ್ಲೇ ಇದರ ಚಿತ್ರವಿದೆ. ಈ ಹಕ್ಕಿಯ ಗುಣಲಕ್ಷಣಗಳನ್ನು ತಿಳಿದುಕೊಂಡಾಗ, ನನ್ನ ಕಥೆಯಲ್ಲಿರುವ ನಾಯಕಿಗೆ ಹೋಲಿಕೆಯಾದವು. ಹೀಗಾಗಿ ಸಾಂಕೇತಿಕವಾಗಿ ಇದನ್ನು ಬಳಸಿದೆ. ಸಿನಿಮಾಗೆ ಪೂರಕವಾಗಿ ತಾಂತ್ರಿಕ ತಂಡವಿದೆ. ವಿಶ್ವಜಿತ್ ರಾವ್ ಅವರ ಛಾಯಾಚಿತ್ರಗ್ರಹಣ, ಪೂರ್ಣಚಂದ್ರ ತೇಜಸ್ವಿ ಸಂಗೀತವಿದೆ. 'ರಾಕೆಟ್'ನಲ್ಲಿ ಪೂರ್ಣ ಅವರ ಜೊತೆ ಕೆಲಸ ಮಾಡಿದ್ದೆ' ಎನ್ನುತ್ತಾರೆ ಐಶಾನಿ.

'ಸಿನಿಮಾದಲ್ಲಿ ಹಾಡುಗಾರ್ತಿಯಾಗಿ ಕಾಣಿಸಿಕೊಳ್ಳುವುದಿಲ್ಲ, ಆದರೆ ಸಂಗೀತದಲ್ಲಿ ಯಾವ ರೀತಿ ಜೀವಂತಿಕೆ ಇದೆಯೋ ಅದೇ ರೀತಿ ವ್ಯಕ್ತಿತ್ವ ನನ್ನ ಪಾತ್ರಕ್ಕಿದೆ. ನಟನೆ–ನಿರ್ದೇಶನ ಎರಡೂ ನನಗಿಷ್ಟ. ನಿರ್ದೇಶನದಲ್ಲಿ ಮೊದಲ ಹೆಜ್ಜೆ ಇಟ್ಟಿದ್ದೇನೆ. ಇದರಲ್ಲಿ ಯಶಸ್ಸು ಕಂಡರೆ ಇನ್ನೊಂದಿಷ್ಟು ಕಥೆಗಳನ್ನು ಹೇಳುವ ಆಸೆ ಇದೆ. 'ಶಾಕುಂತಲೆ ಸಿನಿಮಾಸ್'ನಡಿ ಮುಂದಿನ ದಿನಗಳಲ್ಲಿ ಹೊಸಬರ ಕಥೆಗಳನ್ನೂ ಹೇಳಲಿದ್ದೇವೆ. ಭಿನ್ನವಾದ ಕಥೆಗಳು ಬರಬೇಕು ಎನ್ನುವುದೇ ನನ್ನ ಆಸೆ' ಎಂದರು ಐಶಾನಿ. ❖

ಲಕ್ಷ್ಮೀಪುತ್ರ ಚಿಕ್ಕಣ್ಣನಿಗೆ ಜೋಡಿಯಾದ ವಂದಿತಾ

ವಂದಿತಾ

'ಉಪಾಧ್ಯಕ್ಷ' ಸಿನಿಮಾ ಮೂಲಕ ನಾಯಕನಾಗಿ ತೆರೆ ಮೇಲೆ ಮಿಂಚಿದ ನಟ ಚಿಕ್ಕಣ್ಣ ನಟನೆಯ ಹೊಸ ಸಿನಿಮಾ 'ಲಕ್ಷ್ಮೀಪುತ್ರ' ನಾಯಕಿಯನ್ನು ಚಿತ್ರತಂಡ ಭಿನ್ನವಾಗಿ ಘೋಷಿಸಿದೆ.

'ಚಿಕ್ಕಣ್ಣನಿಗೆ ನಾಯಕಿ ಸಿಕ್ಕಿಲ್ವಂತೆ' ಎಂಬುವುದನ್ನೇ ಇಟ್ಟುಕೊಂಡು ನಾಯಕಿಯನ್ನು ಪರಿಚಯಿಸಿದೆ ತಂಡ. 'ನಮೋ ಭೂತಾತ್ಮ–2' ಸಿನಿಮಾ ಮೂಲಕ ಬಣ್ಣದ ಲೋಕಕ್ಕೆ ಕಾಲಿಟ್ಟ ಮೋನಿಕಾ ಗೌಡ ಇದೀಗ ಹೆಸರು ಬದಲಾಯಿಸಿಕೊಂಡು ವಂದಿತಾ ಆಗಿ 'ಲಕ್ಷ್ಮೀಪುತ್ರ'ನಿಗೆ ಜೋಡಿಯಾಗಿದ್ದಾರೆ.

'ಅಂಬಾರಿ', 'ಅದ್ದೂರಿ', 'ಐರಾವತ', 'ರಾಟೆ'ಯಂತಹ ಸಿನಿಮಾಗಳನ್ನು ನಿರ್ದೇಶಿಸಿರುವ ಎ.ಪಿ.ಅರ್ಜುನ್ ತಮ್ಮದೇ ಎಪಿ ಅರ್ಜುನ್ ಫಿಲ್ಮ್ಸ್ ನಡಿ ಈ ಸಿನಿಮಾ ನಿರ್ಮಾಣ ಮಾಡಿದ್ದು, ವಿಜಯ್ ಸ್ವಾಮಿ ನಿರ್ದೇಶಿಸಿದ್ದಾರೆ. ತಮ್ಮ ಹೊಸ ಪ್ರಾಜೆಕ್ಟ್ ಕುರಿತು ಮಾತಿಗಿಳಿದ ವಂದಿತಾ, 'ಮನೆಯವರ ನಿರ್ಧಾರದಿಂದ, ನನ್ನ ಮುಂದಿನ ಸಿನಿಮಾ ಪಯಣದ ದೃಷ್ಟಿಯಿಂದ ಹೆಸರು ಬದಲಾಯಿಸಿಕೊಂಡೆ. ಮೈಸೂರಿನ ನಾನು ಎಂಜಿನಿಯರಿಂಗ್ ಓದಿದ್ದೇನೆ. ಎರಡು ವರ್ಷ ಐಟಿ ಕ್ಷೇತ್ರದಲ್ಲಿ ಕೆಲಸ ಮಾಡಿ ನಂತರದಲ್ಲಿ ಈ ಬಣ್ಣದ ಲೋಕಕ್ಕೆ ಇಳಿದೆ. 2022ರಲ್ಲಿ 'ನಮೋ ಭೂತಾತ್ಮ–2' ಪ್ರಾಜೆಕ್ಟ್ ಮಾಡಿದ್ದೆ. ಇದರಲ್ಲಿ ಎರಡನೇ ನಾಯಕಿಯಾಗಿದ್ದೆ. ಇದಾದ ಬಳಿಕ ಧ್ರುವ ಸರ್ಜಾ ಅವರ ನಟನೆಯ 'KD' ಸಿನಿಮಾದಲ್ಲಿ ಅವಕಾಶ ಸಿಕ್ಕಿತು. ಇದರಲ್ಲಿ ಧ್ರುವ ಅವರ ತಂಗಿಯಾಗಿ ನಟಿಸಿದ್ದೇನೆ. ಇದೊಂದು ಬಿಗ್ ಪ್ರಾಜೆಕ್ಟ್. ಈ ಪ್ಯಾನ್ ಇಂಡಿಯಾ ಸಿನಿಮಾ ಮೇಲೆ ನಿರೀಕ್ಷೆಯೂ ಹೆಚ್ಚಿದೆ. ಇದೀಗ ನಾಯಕಿಯಾಗಿ 'ಲಕ್ಷ್ಮೀಪುತ್ರ' ಸಿನಿಮಾ ಮೂಲಕ ತೆರೆ ಮೇಲೆ ಬರುತ್ತಿದ್ದೇನೆ' ಎಂದರು.

'ಲಕ್ಷ್ಮೀಪುತ್ರ ಸಿನಿಮಾದ ಆಡಿಷನ್ ಕರೆದಾಗಲೇ ತುಂಬಾ ಉತ್ಸುಕಳಾಗಿದ್ದೆ. ಏಕೆಂದರೆ ಚಿಕ್ಕಣ್ಣ ಅವರ 'ಉಪಾಧ್ಯಕ್ಷ' ಸಿನಿಮಾ ದೊಡ್ಡ ಹಿಟ್ ಆಗಿತ್ತು. ಹೀಗಾಗಿ ಎಲ್ಲರಿಗೂ ನಿರೀಕ್ಷೆ ಹೆಚ್ಚು ಇದೆ. ನಾಯಕಿಯಾಗಿ ಮೊದಲ ಚಿತ್ರವಾದ ಕಾರಣ ಆಡಿಷನ್‌ನಲ್ಲಿ ಆಯ್ಕೆಯಾದ ಬಳಿಕ ಕೊಂಚ ಒತ್ತಡಕ್ಕೆ ಸಿಲುಕಿದ್ದೆ. ಸಿನಿಮಾಗೆ ಪೂರ್ವಸಿದ್ಧತೆ ಮಾಡಿಕೊಂಡೆ. ತಂಡದ ಜೊತೆಗೂಡಿ ನಟನೆಯ ಕಾರ್ಯಾಗಾರಗಳೂ ನಡೆದವು. ಚಿಕ್ಕಣ್ಣ ಅವರ ಹಾಸ್ಯಪ್ರಜ್ಞೆ ಎಲ್ಲರಿಗೂ ತಿಳಿದಿದೆ. ಅವರೆದುರು ನಟಿಸುವುದು ಸವಾಲಿನ ವಿಷಯ. ಸಿನಿಮಾದ ಚಿತ್ರೀಕರಣ ನಡೆಯುತ್ತಿದೆ. ಈಗ ರಿಲೀಸ್ ಮಾಡಿರುವುದು ಪರಿಚಯದ ವಿಡಿಯೊ. ಸಿನಿಮಾದೊಳಗಿನ ಪಾತ್ರಕ್ಕೂ ಈ ವಿಡಿಯೊಗೂ ಸಂಬಂಧವಿಲ್ಲ' ಎನ್ನುತ್ತಾರೆ ವಂದಿತಾ.

'ಹೊಸ ಕಥೆಗಳನ್ನು ಕೇಳುತ್ತಿದ್ದೇನೆ. 'KD' ಏ.30ಕ್ಕೆ ತೆರೆಗೆ ಬರುತ್ತಿದೆ. 'ಲಕ್ಷ್ಮೀಪುತ್ರ' ಒಪ್ಪಿಕೊಂಡ ಬಳಿಕ ಜವಾಬ್ದಾರಿ ಹೆಚ್ಚಾಗಿದೆ. ಜನರ ಪ್ರತಿಕ್ರಿಯೆಯ ನಿರೀಕ್ಷೆಯಲ್ಲಿದ್ದೇನೆ' ಎನ್ನುತ್ತಾ ಮಾತಿಗೆ ವಿರಾಮವಿತ್ತರು ವಂದಿತಾ. ❖

ಸಂಕ್ರಾಂತಿಗಿಲ್ಲ ಕನ್ನಡ ಸಿನಿಮಾ

ಈ ವರ್ಷದ ಸಂಕ್ರಾಂತಿಗೆ ಪರಭಾಷಾ ಸಿನಿಮಾಗಳೇ ತೆರೆತುಂಬಿಕೊಳ್ಳಲಿವೆ. ಜ.15ರಂದು ತೆರೆಕಾಣಬೇಕಿದ್ದ ನಟ ಸುದೀಪ್ ಅಕ್ಕನ ಮಗ ಸಂಚಿತ್ ನಟನೆಯ 'ಮ್ಯಾಂಗೋ ಪಚ್ಚ' ಮುಂದೂಡಿಕೆಯಾಗಿದೆ.

ಜ.9ರಂದು ಪ್ರಭಾಸ್ ನಟನೆಯ ತೆಲುಗು ಸಿನಿಮಾ 'ದಿ ರಾಜಾಸಾಬ್' ಹಾಗೂ ಜ.10ರಂದು ಶಿವಕಾರ್ತಿಕೇಯನ್ ನಟನೆಯ 'ಪರಾಶಕ್ತಿ' ರಿಲೀಸ್ ಆಗುತ್ತಿದೆ.

'ಜನ ನಾಯಗನ್' ಮುಂದಕ್ಕೆ

ಜ.9ರಂದು ತೆರೆಕಾಣಬೇಕಿದ್ದ ವಿಜಯ್ ನಟನೆಯ ತಮಿಳು ಸಿನಿಮಾ 'ಜನ ನಾಯಗನ್' ಕೊನೇ ಕ್ಷಣದಲ್ಲಿ ಮುಂದೂಡಿಕೆಯಾಗಿದೆ.

ಸಿನಿಮಾಗೆ ಯುಎ 16 + ವಿಭಾಗದಡಿಯಲ್ಲಿ ಸೆನ್ಸಾರ್ ಪ್ರಮಾಣಪತ್ರ ಕೋರಿ 'ಜನ ನಾಯಗನ್' ಚಿತ್ರತಂಡ ಮದ್ರಾಸ್ ಹೈಕೋರ್ಟ್ ಮೆಟ್ಟಲೇರಿತ್ತು. ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಆದೇಶವನ್ನು ಕಾಯ್ದಿರಿಸಿದೆ. ಈ ಹಿನ್ನೆಲೆಯಲ್ಲಿ ಸಿನಿಮಾವನ್ನು ಮುಂದೂಡಲಾಗಿದೆ ಎಂದು ಸಿನಿಮಾದ ನಿರ್ಮಾಣ ಸಂಸ್ಥೆ ಕೆವಿಎನ್ ಪ್ರೊಡಕ್ಷನ್ಸ್ ತಿಳಿಸಿದೆ. ಶೀಘ್ರದಲ್ಲೇ ಬಿಡುಗಡೆಯ ಹೊಸ ದಿನಾಂಕವನ್ನು ಘೋಷಿಸಲಾಗುವುದು ಎಂದೂ ಸಂಸ್ಥೆಯು ಹೇಳಿದೆ.

ಸಿನಿಮಾಗಾಗಿ ಕೆವಿಎನ್ ಪ್ರೊಡಕ್ಷನ್ಸ್ ₹500 ಕೋಟಿ ಹೂಡಿದೆ. ಇದು ವಿಜಯ್ ನಟನೆಯ ಕೊನೆಯ ಸಿನಿಮಾವಾಗಿದ್ದು, ಮುಂಬರುವ ಮಾರ್ಚ್–ಏಪ್ರಿಲ್‌ನಲ್ಲಿ ನಡೆಯುವ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ವಿಜಯ್ ತಮ್ಮ 'ಟಿವಿಕೆ' ಪಕ್ಷದಿಂದ ಸ್ಪರ್ಧಿಸಲಿದ್ದಾರೆ.

'ಪರಾಶಕ್ತಿ'ಯಲ್ಲಿ ಧನಂಜಯ

ಖ್ಯಾತ ನಿರ್ದೇಶಕಿ ಸುಧಾ ಕೊಂಗರ ನಿರ್ದೇಶನದ 'ಪರಾಶಕ್ತಿ' ಸಿನಿಮಾದಲ್ಲಿ ಕನ್ನಡದ ಇಬ್ಬರು ಕಲಾವಿದರು ಇದ್ದಾರೆ. ನಾಯಕಿಯಾಗಿ ಶ್ರೀಲೀಲಾ ನಟಿಸಿದ್ದು, ಅತಿಥಿ ಪಾತ್ರದಲ್ಲಿ ಧನಂಜಯ ಕಾಣಿಸಿಕೊಳ್ಳಲಿದ್ದಾರೆ. 'ಸುಧಾ ಅವರ ಸಿನಿಮಾಗಳ ದೊಡ್ಡ ಫ್ಯಾನ್ ನಾನು. ನನ್ನ ಪಾತ್ರ ಸಣ್ಣದಾಗಿ ಇರಬಹುದು, ಆದರೆ ಅದಕ್ಕೆ ಮಹತ್ವವಿದೆ' ಎಂದಿದ್ದಾರೆ ಧನಂಜಯ. ❖

'ಅಸಲಿ ಸಿನಿಮಾ' ಎನ್ನುತ್ತಾ ಐಶ್ವರ್ಯ ಹೆಜ್ಜೆ

ಬಹುಭಾಷಾ ನಟ ಅರ್ಜುನ್ ಸರ್ಜಾ ನಿರ್ದೇಶನದ 'ಸೀತಾ ಪಯಣ' ಫೆ.14ರಂದು ಬಿಡುಗಡೆಯಾಗುತ್ತಿದ್ದು, ಸಿನಿಮಾದ 'ಅಸಲಿ ಸಿನಿಮಾ' ಎಂಬ ಹಾಡು ಇತ್ತೀಚೆಗೆ ಬಿಡುಗಡೆಯಾಯಿತು.

ಶ್ರೀ ರಾಮ್ ಫಿಲ್ಮ್ಸ್ ಇಂಟರ್‌ನ್ಯಾಷನಲ್ ಬ್ಯಾನರ್ ಅಡಿಯಲ್ಲಿ ಈ ಸಿನಿಮಾ ನಿರ್ಮಾಣವಾಗಿದೆ. 'ಚೆಲುವಿ ನೀನೇ ಅಂತಾರೋ... ಲುಕ್ ಅಲ್ಲಿ ಬಬ್ಲಿ ಅಂತಾರೋ..' ಎಂಬ ಹಾಡಿಗೆ ಭರತ್ ಜನನಿ ಸಾಹಿತ್ಯವಿದ್ದು, ಅನುರಾಧಾ ಭಟ್ ಹಾಡಿದ್ದಾರೆ. ಅನೂಪ್ ರೂಬೆನ್ಸ್ ಸಂಗೀತ ಹಾಡಿಗಿದೆ. ಅರ್ಜುನ್ ಸರ್ಜಾ ಅವರ ಪುತ್ರಿ ಐಶ್ವರ್ಯ ಅರ್ಜುನ್ ಹಾಡಿನಲ್ಲಿ ಹೆಜ್ಜೆ ಹಾಕಿದ್ದಾರೆ.

ಚಿತ್ರದಲ್ಲಿ ನಿರಂಜನ್ ನಾಯಕನಾಗಿ ನಟಿಸಿದ್ದು, ಪೋಷಕ ಪಾತ್ರಗಳಲ್ಲಿ ಸತ್ಯರಾಜ್, ಪ್ರಕಾಶ್ ರಾಜ್ ಮತ್ತು ಕೋವೈ ಸರಳಾ ಕಾಣಿಸಿಕೊಂಡಿದ್ದಾರೆ. ಅರ್ಜುನ್ ಸರ್ಜಾ ಅವರೂ ಒಂದು ಭಿನ್ನಪಾತ್ರದಲ್ಲಿ ಕಾಣಿಸಿಕೊಂಡಿದ್ದು, ನಟ ಧ್ರುವ ಸರ್ಜಾ ಪ್ರಮುಖ ಪಾತ್ರವೊಂದಕ್ಕೆ ಬಣ್ಣ ಹಚ್ಚಿದ್ದಾರೆ. ಪ್ರೇಮಿಗಳ ದಿನಕ್ಕೆ ಸಿನಿಮಾ ತೆರೆಕಾಣುತ್ತಿದ್ದು, ಕನ್ನಡ ಸೇರಿದಂತೆ ತೆಲುಗು, ತಮಿಳು, ಮಲಯಾಳ ಮತ್ತು ಹಿಂದಿ ಭಾಷೆಗಳಲ್ಲಿ ಸಿನಿಮಾ ತೆರೆಗೆ ತರಲು ಚಿತ್ರತಂಡ ಯೋಜಿಸಿದೆ.

ಸಿನಿಮಾಗೆ ಅರ್ಜುನ್ ಸರ್ಜಾ ಅವರೇ ಕಥೆ, ಚಿತ್ರಕಥೆ ಬರೆದಿದ್ದಾರೆ. ಜಿ. ಬಾಲಮುರುಗನ್ ಛಾಯಾಚಿತ್ರಗ್ರಹಣ, ಅಯೂಬ್ ಖಾನ್ ಸಂಕಲನ, ಅರ್ಜುನ್ ಸರ್ಜಾ ಸಾಹಸ ಚಿತ್ರಕ್ಕಿದೆ. ❖

ಐಶ್ವರ್ಯ ಅರ್ಜುನ್

ರಾಜ್ ಬಿ.ಶೆಟ್ಟಿ ಒಪ್ಪಿದ ಕಥೆ

ನಟ ರಾಜ್ ಬಿ.ಶೆಟ್ಟಿ ನಟನೆಯ, ರವಿ ಸಾರಂಗ ನಿರ್ದೇಶನದ ಸಿನಿಮಾ 'ರಕ್ಕಸಪುರದೋಳ್' ಫೆ.6ರಂದು ತೆರೆಕಾಣಲಿದ್ದು, ಈ ಸಿನಿಮಾ ಮೂಲಕ ಸಾಹಸ ನಿರ್ದೇಶಕ ಕೆ.ರವಿವರ್ಮಾ ಸಿನಿಮಾ ನಿರ್ಮಾಣಕ್ಕೆ ಇಳಿದಿದ್ದಾರೆ.

ಇತ್ತೀಚೆಗೆ ತಮ್ಮ ಜನ್ಮದಿನದ ಸಂದರ್ಭದಲ್ಲಿ ಸಿನಿಮಾ ಕುರಿತು ಮಾತನಾಡಿದ ಅವರು, 'ಸಣ್ಣದೊಂದು ಪ್ರಯತ್ನವಿದು. ಬೆಳೆದು ಬಂದಂತಹ ಚಿತ್ರರಂಗಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂದು ನಿರ್ಮಾಣಕ್ಕೆ ಇಳಿದಿದ್ದೇನೆ. ನಿರ್ದೇಶಕ ರವಿ ಹಾಗೂ ನನ್ನ ಪರಿಚಯ ನಾಲ್ಕು ವರ್ಷಕ್ಕೂ ಅಧಿಕ. ರವಿ ಅವರು ಪ್ರೇಮ್ ಅವರ ಮೂಲಕ ರಾಜ್ ಬಿ.ಶೆಟ್ಟಿ ಅವರನ್ನು ಸಂಪರ್ಕಿಸಿ ಕಥೆ ಹೇಳಿದ್ದರು. ಮೊದಲು ರಾಜ್ ಬಿ.ಶೆಟ್ಟಿಯವರು ಕಥೆ ಕೇಳಿ ಒಪ್ಪಿಕೊಂಡಿದ್ದರು. ಅವರು ಒಪ್ಪಿಕೊಂಡ ಮೇಲೆ ಕಥೆ ಭಿನ್ನವಾಗಿಯೇ ಇರಲಿದೆ ಎನ್ನುವ ನಂಬಿಕೆ ನನಗೆ ಬಂತು. ಇದಕ್ಕೂ ಮೊದಲು ತೆಲುಗಿನಲ್ಲಿ ಸಿನಿಮಾ ನಿರ್ಮಾಣದ ಆಫರ್ ಬಂದಿತ್ತು. ನನ್ನ ಈ ಪ್ರಯತ್ನಕ್ಕೆ ಕೆವಿಎನ್ ಸಂಸ್ಥೆ ಹಾಗೂ ನಿರ್ದೇಶಕ ಪ್ರೇಮ್ ಹಾಗೂ ರಕ್ಷಿತಾ ಅವರು ಸಹಾಯ ಮಾಡಿದ್ದಾರೆ. ನಿರ್ಮಾಪಕನಾಗಿಯಷ್ಟೇ ಅಲ್ಲ, ಸಾಹಸ ನಿರ್ದೇಶಕನಾಗಿಯೂ ಇಲ್ಲಿ ಕೆಲಸ ಮಾಡಿದ್ದೇನೆ. ಮಳವಳ್ಳಿ, ಚಾಮರಾಜನಗರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಚಿತ್ರದ ಶೂಟಿಂಗ್ ನಡೆದಿದೆ' ಎಂದಿದ್ದಾರೆ. ❖

'ಟಾಕ್ಸಿಕ್'ನಲ್ಲಿ 'ರಾಯ'ನಾದ ಯಶ್

'ಟಾಕ್ಸಿಕ್: ಎ ಫೇರಿಟೇಲ್ ಫಾರ್ ಗ್ರೋನ್ ಅಪ್ಸ್' ಸಿನಿಮಾದಲ್ಲಿ ನಟ ಯಶ್ ಹೇಗೆ ಕಾಣಿಸಿಕೊಳ್ಳಲಿದ್ದಾರೆ ಎನ್ನುವುದನ್ನು ಚಿತ್ರತಂಡ ಗುರುವಾರ (ಜ.8) ಬಹಿರಂಗಗೊಳಿಸಿದೆ. ಯಶ್ ಜನ್ಮದಿನದಂದು 'ಟಾಕ್ಸಿಕ್' ಸಿನಿಮಾದಲ್ಲಿನ 'ರಾಯ' ಪಾತ್ರವನ್ನು ಪರಿಚಯಿಸುವ ವಿಡಿಯೊ ಬಿಡುಗಡೆಯಾಗಿದೆ.

ಹಾಲಿವುಡ್ ಸಿನಿಮಾ ಮಟ್ಟಕ್ಕೆ 'ಟಾಕ್ಸಿಕ್' ಕೊಂಡೊಯ್ಯುವ ಪ್ರಯತ್ನವನ್ನು ಚಿತ್ರತಂಡ ಮಾಡಿದೆ ಎನ್ನುವುದಕ್ಕೆ ಸಾಕ್ಷಿಯಂತೆ ಈ ಪರಿಚಯ ವಿಡಿಯೊವಿದೆ. ಯಶ್ ನಟನೆಯ 19ನೇ ಸಿನಿಮಾ ಇದಾಗಿದೆ. ಇದರಲ್ಲಿ ಯಶ್ ಪಾತ್ರದ ಹೇಗಿರಲಿದೆ ಎನ್ನುವ ನಿರೀಕ್ಷೆ ಬಹಳಷ್ಟಿತ್ತು. ಆರಂಭದಲ್ಲಿ ಸಿನಿಮಾದೊಳಗಿರುವ ನಯನತಾರಾ, ರುಕ್ಮಿಣಿ ವಸಂತ್, ಹುಮಾ ಖುರೇಷಿ, ಕಿಯಾರಾ ಅಡ್ವಾಣಿ ಹಾಗೂ ತಾರಾ ಅವರ ಪಾತ್ರಗಳನ್ನು ಪರಿಚಯಿಸಿ ವೇದಿಕೆ ಸಿದ್ಧಪಡಿಸಿದ್ದ ಚಿತ್ರತಂಡ, ಇದೀಗ 'ರಾಯ'ನನ್ನು ಪರಿಚಯಿಸಿದೆ. ಪರಿಚಯಿಸಿದ ಪಾತ್ರಗಳೆಲ್ಲವೂ ಕಪ್ಪು ಧಿರಿಸಿನಲ್ಲೇ ಕಾಣಿಸಿಕೊಂಡಿರುವುದು ವಿಶೇಷ.

'ರಾಯ' ಎನ್ನುವ ಪಾತ್ರದಲ್ಲಿ ಯಶ್ ನಟಿಸಿದ್ದು, ಆ ಪಾತ್ರದ ವ್ಯಕ್ತಿತ್ವ, ಗುಣಲಕ್ಷಣಗಳನ್ನು ಟೀಸರ್ ಮೂಲಕ ಹೇಳಲಾಗಿದೆ. 'ಡ್ಯಾಡಿ ಈಸ್ ಹೋಮ್' ಎನ್ನುತ್ತಾ ಕೈಯಲ್ಲಿ ಟಾಮಿ ಗನ್ ಹಿಡಿದು ಯಶ್ ತಮ್ಮ ಪಾತ್ರವನ್ನು ಬೋಲ್ಡ್ ಆಗಿಯೇ ಪರಿಚಯಿಸಿದ್ದಾರೆ. ಈ ಮೂಲಕ 'ಟಾಕ್ಸಿಕ್' ಕೇವಲ ಒಂದು ಪಾತ್ರದ ಮೇಲಷ್ಟೇ ನಡೆಯುವ ಕಥೆಯಲ್ಲ, ಬದಲಾಗಿ ಹಲವು ಪ್ರಬಲ ಪಾತ್ರಗಳ ಸುತ್ತ ಸುತ್ತುವ ಕಥೆ ಎಂದು ಸೂಕ್ಷ್ಮವಾಗಿ ಹೇಳಿದ್ದಾರೆ ನಿರ್ದೇಶಕಿ ಗೀತು ಮೋಹನ್‌ದಾಸ್. 'ರಾಯ' ಪಾತ್ರದ ಪರಿಚಯ ವಿಡಿಯೊ, 'ಈ ಪಾತ್ರ ಹಾಗೂ ಸಿನಿಮಾ ಸಾಂಪ್ರದಾಯಿಕ ಸಿನಿಮಾವಲ್ಲ' ಎನ್ನುವುದನ್ನು ಸ್ಪಷ್ಟವಾಗಿ ಹೇಳಿದಂತಿದೆ.

'ಟಾಕ್ಸಿಕ್'ನಲ್ಲಿ ನಟನೆಯ ಜೊತೆಗೆ ಸಹ–ಬರಹಗಾರರಾಗಿ, ಸಹ–ನಿರ್ಮಾಪಕನಾಗಿ ಯಶ್ ಹೊಸ ಹೆಜ್ಜೆ ಇಟ್ಟಿದ್ದಾರೆ. ವೆಂಕಟ್ ಕೆ.ನಾರಾಯಣ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಮಾನ್‌ಸ್ಟರ್‌ಮೈಂಡ್ ಕ್ರಿಯೇಷನ್ಸ್‌ನಡಿ ಯಶ್ ನಿರ್ಮಾಣಕ್ಕೆ ಸಾಥ್ ನೀಡಿದ್ದಾರೆ. ಈ ಸಿನಿಮಾ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಏಕಕಾಲದಲ್ಲಿ ಚಿತ್ರೀಕರಣಗೊಂಡಿದೆ. ಸಿನಿಮಾವು ಹಿಂದಿ, ತಮಿಳು, ತೆಲುಗು, ಮಲಯಾಳ ಸೇರಿದಂತೆ ಹಲವು ಭಾರತೀಯ ಹಾಗೂ ವಿದೇಶಿ ಭಾಷೆಗಳಲ್ಲಿ ಡಬ್ ಆಗಿ ರಿಲೀಸ್ ಆಗಲಿದೆ. ಹಾಲಿವುಡ್‌ನ 'ಜಾನ್ ವಿಕ್', 'ಫಾಸ್ಟ್ ಆ್ಯಂಡ್ ಫ್ಯೂರಿಯಸ್', 'ವಾರಿಯರ್' ಮುಂತಾದ ಸಿನಿಮಾಗಳಿಗೆ ಸಾಹಸ ನಿರ್ದೇಶಕರಾಗಿ ಕೆಲಸ ಮಾಡಿದ್ದ ಜೆ.ಜೆ.ಪೆರ್ರಿ 'ಟಾಕ್ಸಿಕ್'ನ ಸಾಹಸ ದೃಶ್ಯಗಳ ಸಂಯೋಜನೆ ಮಾಡಿದ್ದಾರೆ. 'ಕೆ.ಜಿ.ಎಫ್' ಖ್ಯಾತಿಯ ರವಿ ಬಸ್ರೂರು ಸಂಗೀತ ನಿರ್ದೇಶನ ಮಾಡಿದ್ದಾರೆ. ರಾಜೀವ್ ರವಿ ಛಾಯಾಚಿತ್ರಗ್ರಹಣ, ಉಜ್ವಲ್ ಕುಲಕರ್ಣಿ ಸಂಕಲನ, ಟಿಪಿ ಅಬಿದ್ ನಿರ್ಮಾಣ ವಿನ್ಯಾಸ ಚಿತ್ರಕ್ಕಿದೆ. ❖

ಚಿಟಿಕೆ ಸುದ್ದಿ

ಪೊಂಗಲ್ ಹಬ್ಬಕ್ಕೆ ₹ 3 ಸಾವಿರ ಉಡುಗೊರೆ

ತಮಿಳುನಾಡು ಸರ್ಕಾರದ ಪೊಂಗಲ್ ಉಡುಗೊರೆಯನ್ನು ಮಹಿಳೆಯರು ಗುರುವಾರ ಸ್ವೀಕರಿಸಿದರು

ಚೆನ್ನೈ (ಪಿಟಿಐ): ತಮಿಳುನಾಡಿನಲ್ಲಿ 'ಅಕ್ಕಿ ವರ್ಗದ ಪಡಿತರ ಚೀಟಿ' ಹೊಂದಿರುವವರಿಗೆ ಪೊಂಗಲ್ ಹಬ್ಬದ ಉಡುಗೊರೆಯಾಗಿ ₹3,000 ನಗದು ಮತ್ತು ವಿಶೇಷ ಕಿಟ್ ಅನ್ನು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಗುರುವಾರ ಸಾಂಕೇತಿಕವಾಗಿ ವಿತರಿಸಿದರು.

ರಾಜ್ಯದ ಎಲ್ಲ ನ್ಯಾಯಬೆಲೆ ಅಂಗಡಿಗಳಲ್ಲಿ ಫಲಾನುಭವಿಗಳಿಗೆ ಈ ಉಡುಗೊರೆ ದೊರೆಯಲಿದೆ.

ಸುಗ್ಗಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲು ಅನುಕೂಲವಾಗಲಿ ಎಂದು ರಾಜ್ಯ ಸರ್ಕಾರ ಈ ಉಡುಗೊರೆ ನೀಡುವ ಕಾರ್ಯಕ್ಕೆ ಚಾಲನೆ ನೀಡಿದೆ. ಒಂದು ಕೆ.ಜಿ ಅಕ್ಕಿ, ಒಂದು ಕೆ.ಜಿ ಸಕ್ಕರೆ, ಒಂದು ಕಬ್ಬು, ಒಂದು ಧೋತಿ ಮತ್ತು ಒಂದು ಸೀರೆಯನ್ನು ವಿಶೇಷ ಕಿಟ್ ಒಳಗೊಂಡಿದೆ.

ಅತ್ಯಾಚಾರ: ಆರೋಪಿಗಳ ವಿರುದ್ಧ 15 ಆರೋಪ

ಗುವಾಹಟಿ (ಪಿಟಿಐ): ಮಣಿಪುರದಲ್ಲಿ 2023ರಲ್ಲಿ ಜನಾಂಗೀಯ ಗಲಭೆ ಉಂಟಾದಾಗ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ 6 ಆರೋಪಿಗಳ ವಿರುದ್ಧ ಗುವಾಹಟಿಯ ವಿಶೇಷ ಸಿಬಿಐ ನ್ಯಾಯಾಲಯ 15 ಆರೋಪಗಳನ್ನು ಹೊರಿಸಿದೆ.

ಸಾಮೂಹಿಕ ಅತ್ಯಾಚಾರ, ಕೊಲೆ, ಹಿಂಸಾಚಾರ ಸೇರಿ ಆರೋಪಿಗಳ ವಿರುದ್ಧ ವಿವಿಧ ಆರೋಪಗಳನ್ನು ಹೊರಿಸಲಾಗಿದೆ. ಈ ಪ್ರಕರಣದ ಮುಂದಿನ ವಿಚಾರಣೆಯನ್ನು ಜ.16ರಂದು ನಡೆಸಲಾಗುವುದು ಎಂದು ವಿಶೇಷ ಸಿಬಿಐ ನ್ಯಾಯಾಧೀಶ ಛತ್ರ ಭೂಕನ್ ಗೊಗೋಯಿ ಹೇಳಿದರು.

ಆರು ಆರೋಪಿಗಳಲ್ಲಿ ನಾಲ್ವರು ಮಣಿಪುರ ಜೈಲಿನಲ್ಲಿದ್ದು, ಅವರನ್ನು ಗುರುವಾರ ಕೋರ್ಟ್‌ಗೆ ಹಾಜರುಪಡಿಸಲಾಯಿತು. ಇನ್ನುಳಿದ ಇಬ್ಬರು ಆರೋಪಿಗಳು ಜಾಮೀನು ಪಡೆದು ಜೈಲಿನಿಂದ ಹೊರಬಂದಿದ್ದಾರೆ.

2023ರ ಮೇ 4ರಂದು ಘಟನೆ ನಡೆದಿತ್ತು. ಮೂವರು ಮಹಿಳೆಯರನ್ನು ಆರೋಪಿಗಳು ಬೆತ್ತಲೆಗೊಳಿಸಿ, ಇವರಲ್ಲಿ ಇಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದರು. ಸಂತ್ರಸ್ತೆಯರಲ್ಲಿ ಒಬ್ಬರ ಕುಟುಂಬದ ಸದಸ್ಯರನ್ನು ಹತ್ಯೆ ಮಾಡಲಾಗಿತ್ತು. ಮಹಿಳೆಯರನ್ನು ಬೆತ್ತಲೆಗೊಳಿಸಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ನಂತರ ಘಟನೆ ಬೆಳಕಿಗೆ ಬಂದಿತ್ತು.

ಸಭಾಪತಿ ಉಪಸಭಾಪತಿ: ಸುಪ್ರೀಂ ಪ್ರಶ್ನೆ

ನವದೆಹಲಿ (ಪಿಟಿಐ): ಉಪ ರಾಷ್ಟ್ರಪತಿಯು, ರಾಷ್ಟ್ರಪತಿಯ ಅನುಪಸ್ಥಿತಿಯಲ್ಲಿ ಅವರ ಕೆಲಸವನ್ನು ನಿರ್ವಹಿಸಬಹುದಾದರೆ, ರಾಜ್ಯಸಭೆಯ ಉಪಸಭಾಪತಿಯು, ಸಭಾಪತಿಯ ಅನುಪಸ್ಥಿತಿಯಲ್ಲಿ ಅವರ ಕೆಲಸವನ್ನು ನಿರ್ವಹಿಸಬಾರದೇಕೆ ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

ಪ್ರಕರಣವೊಂದರ ವಿಚಾರಣೆ ವೇಳೆ ನ್ಯಾಯಮೂರ್ತಿ ದೀಪಾಂಕರ್ ದತ್ತಾ, ಎಸ್.ಸಿ ಶರ್ಮಾ ನೇತೃತ್ವದ ನ್ಯಾಯಪೀಠ ಈ ಪ್ರಶ್ನೆ ಎತ್ತಿದೆ.

1968 ನ್ಯಾಯಾಧೀಶರ (ವಿಚಾರಣಾ) ಕಾಯ್ದೆಯಡಿ ರಾಜ್ಯಸಭೆಯ ಉಪ ಸಭಾಪತಿಗೆ ನಿಲುವಳಿ ತಿರಸ್ಕರಿಸುವ ಅಧಿಕಾರ ಇಲ್ಲ, ಕೇವಲ ಸ್ಪೀಕರ್ ಮತ್ತು ಸಭಾಪತಿಗೆ ಮಾತ್ರ ನಿಲುವಳಿ ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಇದೆ ಎಂಬ ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಪರವಾಗಿ ಮಾಡಿದ ಸಲ್ಲಿಕೆಯನ್ನು ಒಪ್ಪಿಕೊಳ್ಳಲು ಕೋರ್ಟ್ ನಿರಾಕರಿಸಿತು.

ಯಶವಂತ್ ವರ್ಮಾ ಅವರ ನವದೆಹಲಿಯಲ್ಲಿನ ಅಧಿಕೃತ ನಿವಾಸದಲ್ಲಿ ಮಾರ್ಚ್ 14ರಂದು ಸುಟ್ಟ ನೋಟಿನ ಚೂರುಗಳು ಪತ್ತೆಯಾಗಿದ್ದವು. ಅದರ ಬೆನ್ನಲ್ಲೇ ಅವರನ್ನು ದೆಹಲಿ ಹೈಕೋರ್ಟ್‌ನಿಂದ ಅಲಹಾಬಾದ್ ಹೈಕೋರ್ಟ್‌ಗೆ ಬದಲಿಸಲಾಗಿತ್ತು.

ವಿಕಾಸಸೌಧದ ಕಳಪೆ ಕಾಮಗಾರಿಯ ನಷ್ಟ ಎಂಜಿನಿಯರ್‌ಗಳಿಂದಲೇ ವಸೂಲಿ ಸರಿಯೇ?

ಸರಿ | ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

'ಪ್ರಮುಖ ಸಾಕ್ಷ್ಯ ಹೊತ್ತೊಯ್ದ ಮಮತಾ'

ತನಿಖೆಗೆ ಅಡ್ಡಿಯಾದ ಸಿ.ಎಂ ನಡೆ: ಜಾರಿ ನಿರ್ದೇಶನಾಲಯ ಆರೋಪ

ನವದೆಹಲಿ/ ಕೋಲ್ಕತ್ತ (ಪಿಟಿಐ): 'ನಮ್ಮ ಅಧಿಕಾರಿಗಳು ಪ್ರತೀಕ್ ಜೈನ್ ಅವರ ನಿವಾಸದಲ್ಲಿ ಶೋಧ ನಡೆಸುತ್ತಿದ್ದಾಗ ಅಲ್ಲಿಗೆ ಬಂದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕಡತಗಳು ಮತ್ತು ಎಲೆಕ್ಟ್ರಾನಿಕ್ ಸಾಧನಗಳು ಸೇರಿದಂತೆ ಪ್ರಮುಖ ಸಾಕ್ಷ್ಯಗಳನ್ನು ತೆಗೆದುಕೊಂಡು ಹೋಗಿದ್ದಾರೆ' ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಆರೋಪಿಸಿದೆ.

ಇ.ಡಿ ಅಧಿಕಾರಿಗಳು ಗುರುವಾರ ರಾಜಕೀಯ ಸಲಹಾ ಸಂಸ್ಥೆ 'ಐ-ಪ್ಯಾಕ್'ನ ಕಚೇರಿ ಮತ್ತು ಅದರ ನಿರ್ದೇಶಕ ಪ್ರತೀಕ್ ಜೈನ್ ಅವರ ಮನೆಯಲ್ಲಿ ಶೋಧ ನಡೆಸುತ್ತಿದ್ದಾಗ ಮಮತಾ ಬ್ಯಾನರ್ಜಿ ಅವರು ದಿಢೀರನೆ ಧಾವಿಸಿ ಬಂದಿದ್ದಾರೆ.

'ಮಮತಾ ಅವರು ಜೈನ್ ಅವರ ನಿವಾಸದಿಂದ 'ಐ-ಪ್ಯಾಕ್' ಕಚೇರಿಗೂ ಬಂದರು. ತಮ್ಮ ಆಪ್ತರು ಮತ್ತು ಪೊಲೀಸ್ ಅಧಿಕಾರಿಗಳ ನೆರವಿನಿಂದ ಅಲ್ಲಿಂದಲೂ ಕಡತಗಳು ಹಾಗೂ ಎಲೆಕ್ಟ್ರಾನಿಕ್ ಸಾಕ್ಷ್ಯಗಳನ್ನು ಕೊಂಡೊಯ್ದರು. ಮಮತಾ ಮತ್ತು ಕೋಲ್ಕತ್ತ ಪೊಲೀಸ್ ಆಯುಕ್ತರ ನಡೆ, ತನಿಖೆಗೆ ಅಡ್ಡಿ ಉಂಟುಮಾಡಿದೆ' ಎಂದು ಇ.ಡಿ ಹೇಳಿಕೆಯಲ್ಲಿ ತಿಳಿಸಿದೆ.

'ಮಮತಾ ಅವರು ಹೆಚ್ಚಿನ ಸಂಖ್ಯೆಯ ಪೊಲೀಸ್ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಬರುವವರೆಗೂ ಶೋಧ ಕಾರ್ಯಾಚರಣೆ ಸುಗಮವಾಗಿ ಮತ್ತು ವೃತ್ತಿಪರವಾಗಿ ನಡೆಯುತ್ತಿತ್ತು' ಎಂದಿದೆ. 'ಈ ಶೋಧವು ಸಾಕ್ಷ್ಯಾಧಾರಗಳ ಆಧಾರದ ಮೇಲೆ ಆಗಿದ್ದು, ಯಾವುದೇ ರಾಜಕೀಯ ಸಂಸ್ಥೆಯನ್ನು ಗುರಿಯಾಗಿರಿಸಿಕೊಂಡಿಲ್ಲ. ಯಾವುದೇ ಪಕ್ಷದ ಕಚೇರಿಯಲ್ಲಿ ಶೋಧ ನಡೆಸಿಲ್ಲ' ಎಂದು ಹೇಳಿದೆ.

ಇಂಡಿಯನ್ ಪೊಲಿಟಿಕ್ ಆ್ಯಕ್ಷನ್ ಕಮಿಟಿಯನ್ನು (ಐ-ಪ್ಯಾಕ್) ಪ್ರಶಾಂತ್ ಕಿಶೋರ್ ಅವರು 2014ರ ಲೋಕಸಭೆ ಚುನಾವಣೆಗೆ ಮುನ್ನ ಸ್ಥಾಪಿಸಿದ್ದರು. 'ಜನ ಸುರಾಜ್' ಹೆಸರಿನ ರಾಜಕೀಯ ಪಕ್ಷ ಸ್ಥಾಪಿಸಿದ ಬಳಿಕ ಅವರು 'ಐ-ಪ್ಯಾಕ್' ನಿಂದ ಹೊರಬಂದಿದ್ದರು. ಈ ರಾಜಕೀಯ ಸಲಹಾ ಸಂಸ್ಥೆಯು 2019ರ ಲೋಕಸಭಾ ಚುನಾವಣೆಯ ನಂತರ ಟಿಎಂಸಿ ಮತ್ತು ಪಶ್ಚಿಮ ಬಂಗಾಳ ಸರ್ಕಾರದ ಪರವಾಗಿ ಕೆಲಸ ಮಾಡುತ್ತಿದೆ.

2019ರ ಘಟನೆ ನೆನಪು

ಗುರುವಾರ ನಡೆದ ನಾಟಕೀಯ ಬೆಳವಣಿಗೆಯು 2019ರಲ್ಲಿ ನಡೆದ ಘಟನೆಯನ್ನು ನೆನಪಿಸಿದೆ. ಕೋಲ್ಕತ್ತದ ಲೌಡನ್ ಸ್ಟ್ರೀಟ್ ಪ್ರದೇಶದಲ್ಲಿ ಆಗಿನ ಪೊಲೀಸ್ ಆಯುಕ್ತ ರಾಜೀವ್ ಕುಮಾರ್ ಅವರ ನಿವಾಸದಲ್ಲಿ ಸಿಬಿಐ ಶೋಧ ನಡೆಸಿದ್ದಾಗ ಮಮತಾ ಬ್ಯಾನರ್ಜಿ ಅವರು ಸ್ಥಳಕ್ಕೆ ಧಾವಿಸಿ ಬಂದಿದ್ದರು. ಆ ಬಳಿಕ ಅವರು ಸಿಬಿಐ ಕ್ರಮ ಖಂಡಿಸಿ ಧರಣಿ ನಡೆಸಿದ್ದರು.

ಇ.ಡಿ ಶೋಧ ಏಕೆ?

ಬಹುಕೋಟಿ ರೂಪಾಯಿ ಕಲ್ಲಿದ್ದಲು ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಇ.ಡಿ ಅಧಿಕಾರಿಗಳು ಈ ದಾಳಿ ನಡೆಸಿದ್ದಾರೆ.

ಕೋಲ್ಕತ್ತದ ಸಾಲ್ಟ್‌ಲೇಕ್‌ನಲ್ಲಿರುವ 'ಐ-ಪ್ಯಾಕ್' ಕಚೇರಿ ಮತ್ತು ಲೌಡನ್ ಸ್ಟ್ರೀಟ್‌ನಲ್ಲಿರುವ ಪ್ರತೀಕ್ ಜೈನ್ ಅವರ ನಿವಾಸ ಸೇರಿದಂತೆ ನವದೆಹಲಿಯ ನಾಲ್ಕು ಮತ್ತು ಕೋಲ್ಕತ್ತದ ಆರು ಕಡೆಗಳಲ್ಲಿ ಗುರುವಾರ ಬೆಳಿಗ್ಗೆ 7ರಿಂದಲೇ ಶೋಧ ಆರಂಭಿಸಿದ್ದಾರೆ.

'ಕಲ್ಲಿದ್ದಲು ಹಗರಣ ಪ್ರಕರಣ ಮತ್ತು ಅದಕ್ಕೆ ಸಂಬಂಧಿಸಿದ ಅಪರಾಧಗಳಿಗೆ ಸಂಬಂಧಿಸಿದಂತೆ ಈ ಶೋಧ ಕಾರ್ಯ ನಡೆದಿದೆ. ಇದರ ಹಿಂದೆ ಯಾವುದೇ ರಾಜಕೀಯ ಉದ್ದೇಶ ಇಲ್ಲ. ಹವಾಲಾ ವಹಿವಾಟಿನ ನಂಟು ಈ ಪ್ರಕರಣಕ್ಕೆ ಇದೆ' ಎಂದು ಇ.ಡಿ ಮೂಲಗಳು ಸ್ಪಷ್ಟಪಡಿಸಿವೆ. ಜೈನ್ ಮತ್ತು ಇತರರು ಈ ಹಗರಣದಲ್ಲಿ ಭಾಗಿಯಾಗಿರುವುದನ್ನು ಸಾಬೀತುಪಡಿಸುವ 'ನಿರ್ದಿಷ್ಟ' ಪುರಾವೆಗಳ ಆಧಾರದ ಮೇಲೆ ಸಂಸ್ಥೆ ಈ ಕ್ರಮ ಕೈಗೊಂಡಿದೆ ಎಂದು ಹೇಳಿವೆ.

ಇಂದು ಟಿಎಂಸಿ ರ‍್ಯಾಲಿ

- ಜಾರಿ ನಿರ್ದೇಶನಾಲಯದ ಕ್ರಮವನ್ನು ಖಂಡಿಸಿ ಟಿಎಂಸಿಯು ಶುಕ್ರವಾರ ಕೋಲ್ಕತ್ತದಲ್ಲಿ ಬೃಹತ್ ರ‍್ಯಾಲಿ ನಡೆಸಲಿದೆ.
- ಇ.ಡಿ ಅಧಿಕಾರಿಗಳು ಅಗತ್ಯ ದಾಖಲೆಗಳನ್ನು ಕದ್ದಿದ್ದಾರೆ ಎಂದು ಆರೋಪಿಸಿ ಪ್ರತೀಕ್ ಜೈನ್ ಅವರ ಪತ್ನಿ ಕೋಲ್ಕತ್ತದ ಶೇಕ್ಸ್‌ಪಿಯರ್ ಸಾರಣಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಕೇಂದ್ರ ನಾಗರಿಕ ವಿಮಾನಯಾನ ರಾಜ್ಯ ಖಾತೆ ಸಚಿವ ಮುರಳೀಧರ್ ಮೊಹೋಲ್ ಹಾಗೂ ಬಿಜೆಪಿ ನಾಯಕಿ ಮಾಧುರಿ ಮಿಸಾಲ್ ಸೇರಿದಂತೆ ಹಲವು ಬಿಜೆಪಿ ನಾಯಕರು, ಪುಣೆ ಮಹಾನಗರ ಪಾಲಿಕೆ ಚುನಾವಣೆಗೆ ಪ್ರಣಾಳಿಕೆಯನ್ನು ಬುಧವಾರ ಬಿಡುಗಡೆ ಮಾಡಿದರು ಪಿಟಿಐ ಚಿತ್ರ

ಟಿಕೆಟ್ ದರದಲ್ಲಿ ಮಹಿಳೆಯರಿಗೆ ರಿಯಾಯಿತಿ: ಬಿಜೆಪಿ ಪ್ರಣಾಳಿಕೆ

ಪುಣೆ (ಪಿಟಿಐ): ಮಹಾರಾಷ್ಟ್ರದ ಪುಣೆ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದರೆ, ಮೆಟ್ರೊ ರೈಲು ಮತ್ತು ನಗರ ಬಸ್‌ಗಳ ಟಿಕೆಟ್ ದರದಲ್ಲಿ ಮಹಿಳೆಯರಿಗೆ ರಿಯಾಯಿತಿ ನೀಡಲಾಗುವುದು ಎಂದು ಬಿಜೆಪಿ ಆಶ್ವಾಸನೆ ನೀಡಿದೆ.

ಪುಣೆ ಸಂಸದ ಮುರಳೀಧರ್ ಮೊಹೋಲ್, ರಾಜ್ಯ ಸಚಿವರಾದ ಚಂದ್ರಕಾಂತ ಪಾಟೀಲ್ ಹಾಗೂ ಮಾಧುರಿ ಮಿಸಾಲ್ ಸೇರಿದಂತೆ ಪಕ್ಷದ ಹಲವು ಶಾಸಕರು ಹಾಗೂ ನಾಯಕರ ಸಮ್ಮುಖದಲ್ಲಿ 'ಸಂಕಲ್ಪ ಪತ್ರ' ಎಂಬ ಶೀರ್ಷಿಕೆಯ ಪ್ರಣಾಳಿಕೆಯನ್ನು ಬಿಜೆಪಿ ಬಿಡುಗಡೆ ಮಾಡಿತು.

ರಾಜ್ಯ ಸರ್ಕಾರದ 'ಲಾಡ್ಕಿ ಬಹೀಣ್ ಯೋಜನೆ'ಯಡಿ ಬಡ ಮಹಿಳೆಯರಿಗೆ ಪ್ರತಿ ತಿಂಗಳು ₹2,500 ಆರ್ಥಿಕ ಸಹಾಯಧನ ಹಾಗೂ 500 ಚದರ ಅಡಿಗಿಂತ ಕಡಿಮೆ ಅಳತೆಯಲ್ಲಿರುವ ಮನೆ ಹಾಗೂ ಫ್ಲ್ಯಾಟ್‌ಗಳ ಮೇಲಿನ ಆಸ್ತಿ ತೆರಿಗೆ ಮನ್ನಾ ಮಾಡುವುದಾಗಿ ಪಕ್ಷವು ಜನರಿಗೆ ಆಶ್ವಾಸನೆ ನೀಡಿದೆ. ಪುಣೆ ಮಹಾನಗರ ಪಾಲಿಕೆ ಸೇರಿದಂತೆ ರಾಜ್ಯದಲ್ಲಿ ಇತರ 28 ಸ್ಥಳೀಯ ಸಂಸ್ಥೆಗಳಿಗೆ ಜನವರಿ 15ರಂದು ಚುನಾವಣೆ ನಡೆಯಲಿದೆ.

'ಸೇನ್, ಶಮಿಗೆ ನೋಟಿಸ್: ಸುಳ್ಳು ಸುದ್ದಿ'

ಕೋಲ್ಕತ್ತ/ಪಣಜಿ (ಪಿಟಿಐ): ನೊಬೆಲ್ ಪ್ರಶಸ್ತಿ ಪುರಸ್ಕೃತ ಅಮರ್ತ್ಯ ಸೇನ್ ಮತ್ತು ಕ್ರಿಕೆಟಿಗ ಮೊಹಮ್ಮದ್ ಶಮಿ ಅವರಿಗೆ ಎಸ್‌ಐಆರ್ ಸಂಬಂಧಿತ ವಿಚಾರಣೆಗೆ ಹಾಜರಾಗುವಂತೆ ಚುನಾವಣಾ ಆಯೋಗವು ನೋಟಿಸ್ ನೀಡಿದ್ದು ವಿವಾದ ಸೃಷ್ಟಿಸಿತ್ತು. ಇದಕ್ಕೆ ಪಶ್ಚಿಮ ಬಂಗಾಳದ ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ಸ್ಪಷ್ಟನೆ ನೀಡಿದ್ದು, 'ಇದು ಸುಳ್ಳು ಸುದ್ದಿ' ಎಂದು ಹೇಳಿದ್ದಾರೆ.

'ಇವರಿಗೆ ನೋಟಿಸ್ ನೀಡಿರುವುದು ಎಸ್‌ಐಆರ್ ಪ್ರಕ್ರಿಯೆಯ ಭಾಗವೇ ಹೊರತು, ಉದ್ದೇಶಪೂರ್ವಕವಾಗಿ, ಯಾರನ್ನೂ ಗುರಿಯಾಗಿಸಿ ಮಾಡಿದ್ದಲ್ಲ' ಎಂದು ಆಯೋಗವು 'ಎಕ್ಸ್'ನಲ್ಲಿ ಬುಧವಾರ ಪೋಸ್ಟ್ ಹಂಚಿಕೊಂಡಿದೆ.

'ಅಮರ್ತ್ಯ ಸೇನ್ ಅವರು ಸಾಗರೋತ್ತರ ಮತದಾರರೆಂದು ಎಸ್‌ಐಆರ್‌ನ ಮೂನೆಯನ್ನು ಭರ್ತಿ ಮಾಡಿದ್ದಾರೆ. ಇದನ್ನು ಅವರ ತಾಯಿ ಅಮಿತಾ ಸೇನ್ ಅವರ ಸಂಬಂಧಿ ಶಾಂತಬಾನು ಸೇನ್ ಅವರ ಮೂಲಕ ಸಲ್ಲಿಸಲಾಗಿತ್ತು. ಅಮರ್ತ್ಯ ಸೇನ್ ಮತ್ತು ಅವರ ತಾಯಿ ವಯಸ್ಸಿನ ಅಂತರವು 15 ವರ್ಷಕ್ಕಿಂತ ಕಡಿಮೆ ಇರುವುದು ನಮೂನೆಯಿಂದ ಕಂಡುಬಂದಿತು' ಎಂದು ಆಯೋಗ ಹೇಳಿದೆ.

'ಇಂಥ ವ್ಯತ್ಯಾಸಗಳು ಕಂಡುಬಂದಾಗ ಸಾಮಾನ್ಯವಾಗಿ ಎಲ್ಲರಿಗೂ ನೋಟಿಸ್ ಜಾರಿ ಮಾಡಲಾಗುತ್ತದೆ. ಬೇರೆ ಎಲ್ಲರಂತೆಯೇ ಸೇನ್ ಅವರಿಗೂ ನೋಟಿಸ್ ನೀಡಲಾಗಿದೆ. ಅವರಿಗೆ 85 ವರ್ಷ ದಾಟಿದ್ದರಿಂದ ಅಧಿಕಾರಿಗಳು ಅವರ ಮನೆಗೇ ತೆರಳಿ ಕೆಲವು ಔಪಚಾರಿಕವಾದ ಕಾರ್ಯಗಳನ್ನು ಪೂರ್ಣಗೊಳಿಸಿದ್ದಾರೆ' ಎಂದರು.

'ಶಮಿ ಅವರು ನಮೂನೆಯಲ್ಲಿನ ಕೆಲವು ಕಡ್ಡಾಯವಾದ ಕಾಲಂಗಳನ್ನು ಭರ್ತಿ ಮಾಡದೇ ಖಾಲಿ ಬಿಟ್ಟಿದ್ದರು. ಈ ಕಾರಣದಿಂದ ಶಮಿ ಮತ್ತು ಅವರ ಕುಟುಂಬದವರಿಗೆ ಸ್ವಯಂಚಾಲಿತವಾಗಿ ನೋಟಿಸ್ ಜಾರಿಯಾಗಿದೆ' ಎಂದು ಆಯೋಗ ತನ್ನ ಸ್ಪಷ್ಟನೆಯಲ್ಲಿ ಹೇಳಿದೆ.

ವ್ಯಕ್ತಿ ಆತ್ಮಹತ್ಯೆ: ನೋಟಿಸ್‌ನಿಂದ ಒತ್ತಡ–ಆರೋಪ

ಕೋಲ್ಕತ್ತ, ಪಶ್ಚಿಮ ಬಂಗಾಳ (ಪಿಟಿಐ): 64 ವರ್ಷದ ವ್ಯಕ್ತಿಯೊಬ್ಬರು ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ಪಶ್ಚಿಮ ಬಂಗಾಳದ ಉತ್ತರ ದಿನಜ್‌ಪುರ ಜಿಲ್ಲೆಯಲ್ಲಿ ಗುರುವಾರ ನಡೆದಿದೆ. ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಗೆ (ಎಸ್‌ಐಆರ್) ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿದ್ದರಿಂದ ಮಾನಸಿಕ ಒತ್ತಡಕ್ಕೆ ಒಳಗಾಗಿ ಈ ರೀತಿ ಮಾಡಿಕೊಂಡಿದ್ದಾರೆ ಎಂದು ಕುಟುಂಬದ ಸದಸ್ಯರು ಹೇಳಿದ್ದಾರೆ.

ಇಲ್ಲಿನ ರಾಯ್‌ಗಂಗ್ ಪೊಲೀಸ್ ಠಾಣಾ ವ್ಯಾಪ್ತಿಯ ಪಲ್ಲರಾ ಪ್ರದೇಶದ ನಿವಾಸಿ ಬಬ್ಲು ಪಾಲ್ ಮೃತಪಟ್ಟವರು.

'ಪಾಲ್ ಅವರು ಗುರುವಾರ ಬೆಳಿಗ್ಗೆ ತಮ್ಮ ಮನೆಯಲ್ಲಿ ನೇಣು ಹಾಕಿಕೊಂಡರು. ಮಾಹಿತಿ ಸಿಗುತ್ತಿದ್ದಂತೆಯೇ, ತಕ್ಷಣವೇ ಅವರ ಮನೆಗೆ ಧಾವಿಸಿದ ಅಧಿಕಾರಿಗಳು ಮೃತದೇಹವನ್ನು ಕೆಳಗಿಳಿಸಿ, ಮರಣೋತ್ತರ ಪರೀಕ್ಷೆಗಾಗಿ ರಾಯ್‌ಗಂಜ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಗೆ ಕಳುಹಿಸಿದ್ದರು. ತನಿಖೆ ಮುಂದುವರಿದಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗೋವಾದ ಕಾಂಗ್ರೆಸ್ ಸಂಸದರಿಗೆ ಇ.ಸಿ ನೋಟಿಸ್

ಭಾರತೀಯ ನೌಕಾಪಡೆಯ ಮಾಜಿ ಅಧಿಕಾರಿ, ದಕ್ಷಿಣ ಗೋವಾ ಕ್ಷೇತ್ರದ ಕಾಂಗ್ರೆಸ್ ಸಂಸದ ಕ್ಯಾಪ್ಟನ್ ವಿರಿಯೆಟೊ ಫರ್ನಾಂಡಿಸ್ ಅವರಿಗೆ ತಮ್ಮ ಪೌರತ್ವವನ್ನು ಸಾಬೀತುಪಡಿಸುವಂತೆ ಚುನಾವಣಾ ಆಯೋಗವು (ಇ.ಸಿ) ನೋಟಿಸ್ ನೀಡಿದೆ. ಈ ಬಗ್ಗೆ ಫರ್ನಾಂಡಿಸ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

'ದಾಖಲೆಗಳನ್ನು ತಂದು ನನ್ನ ಗುರುತು ಸಾಬೀತು ಮಾಡುವಂತೆ ಆಯೋಗವು ನೋಟಿಸ್ ನೀಡಿದೆ. 2024ರ ಲೋಕಸಭೆ ಚುನಾವಣೆಗೆ ಸ್ಪರ್ಧಿಸುವ ಹೊತ್ತಿನಲ್ಲಿಯೂ ಆಯೋಗವು ತೀವ್ರ ಪರಿಶೀಲನೆ ನಡೆಸಿತ್ತು. ನಾನು 1989ರಿಂದಲೂ ಮತ ಚಲಾಯಿಸುತ್ತಿದ್ದೇನೆ' ಎಂದು ಹೇಳಿದ್ದಾರೆ.

ವಿಚಾರಣೆ 13ಕ್ಕೆ ಮುಂದೂಡಿಕೆ

ನವದೆಹಲಿ (ಪಿಟಿಐ): ಬಿಹಾರವೂ ಸೇರಿದಂತೆ ಹಲವು ರಾಜ್ಯಗಳಲ್ಲಿ ಚುನಾವಣಾ ಆಯೋಗ ಕೈಗೊಂಡಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಜ.13ಕ್ಕೆ ಮುಂದೂಡಿದೆ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ನೇತೃತ್ವದ ಪೀಠವು, ಎಸ್‌ಐಆರ್ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಜ.8ರಂದು ನಿಗದಿಪಡಿಸಿತ್ತು. ಚುನಾವಣಾ ಆಯೋಗದ ಪರವಾಗಿ ವಕೀಲ ರಾಕೇಶ್ ದ್ವಿವೇದಿ ವಾದ ಮಂಡಿಸಲು ಹಾಜರಾಗಿದ್ದರು. ಆದರೆ, ವಿಚಾರಣೆಯನ್ನು ಮುಂದೂಡಲಾಗಿದೆ ಎಂದು ಸಿಜೆಐ ತಿಳಿಸಿದರು.

ಜಾಗತಿಕ ನಾಯಕತ್ವ ಸಾಧಿಸಿ: ಮೋದಿ

ನವದೆಹಲಿ (ಪಿಟಿಐ): ಭಾರತದ ಮೇಲಿನ ವಿಶ್ವದ ನಂಬಿಕೆಯೇ ಅದರ ಶಕ್ತಿಯಾಗಿದ್ದು, ಜಾಗತಿಕ ನಾಯಕತ್ವವನ್ನು ಸಾಧಿಸಲು ಭಾರತೀಯ ಎಐ ನವೋದ್ಯಮಗಳು ಕೆಲಸ ಮಾಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಕರೆ ಕೊಟ್ಟಿದ್ದಾರೆ.

'ಎಲ್ಲ ಬೀದಿನಾಯಿ ತೆರವು ಮಾಡಲು ಹೇಳಿಲ್ಲ'

ನವದೆಹಲಿ (ಪಿಟಿಐ): 'ಬೀದಿಗಳಿಂದ ಎಲ್ಲ ಬೀದಿನಾಯಿಗಳನ್ನೂ ತೆರವು ಮಾಡಿ ಎಂದು ನ್ಯಾಯಾಲಯವು ನಿರ್ದೇಶನ ನೀಡಿಲ್ಲ. ಪ್ರಾಣಿ ಜನನ ನಿಯಂತ್ರಣ (ಎಬಿಸಿ) ನಿಯಮಗಳ ಅನ್ವಯ ಕ್ರಮ ಕೈಗೊಳ್ಳಿ ಎಂದು ನಿರ್ದೇಶನ ನೀಡಿದ್ದೇವೆ' ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್.ವಿ. ಅಂಜಾರಿಯಾ ಅವರ ಪೀಠವು ಬೀದಿನಾಯಿಗಳ ಕುರಿತು ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ನಡೆಸಿತು. ವಿವಿಧ ವಕೀಲರು ವಾದ ಮಂಡಿಸಿದರು.

'ತಮ್ಮ ಬಗ್ಗೆ ಭಯ ಇರುವ ವ್ಯಕ್ತಿಯನ್ನು ನಾಯಿಗಳು ಗುರುತಿಸುತ್ತವೆ. ಜೊತೆಗೆ, ಈ ಹಿಂದೆ ನಾಯಿಯಿಂದ ಕಡಿತಕ್ಕೆ ಒಳಗಾಗಿದ್ದರೂ ಅವುಗಳಿಗೆ ತಿಳಿಯುತ್ತವೆ. ಇಂಥ ವ್ಯಕ್ತಿಗಳ ಮೇಲೆಯೇ ನಾಯಿಗಳು ದಾಳಿ ನಡೆಸುತ್ತವೆ' ಎಂದು ಪೀಠ ಅಭಿಪ್ರಾಯಪಟ್ಟಿತು.

'ದೆಹಲಿಯಂಥ ನಗರಗಳಲ್ಲಿ ಇಲಿಗಳ ಕಾಟ ಇದೆ. ಇಲ್ಲಿ ಮಂಗಗಳ ಕಾಟವೂ ಇದೆ. ಹೀಗಿರುವಾಗಿ ಬೀದಿನಾಯಿಗಳನ್ನು ತೆರವು ಮಾಡಿಬಿಟ್ಟರೆ, ಕೆಟ್ಟ ಪರಿಮಾಣ ಎದುರಿಸಬೇಕಾಗಬಹುದು' ಎಂದು ಬೀದಿನಾಯಿಗಳ ಕುರಿತು ಪೀಠಕ್ಕೆ ಅಮಿಕಸ್ ಕ್ಯೂರಿಯಾಗಿರುವ ಹಿರಿಯ ವಕೀಲ ಗೌರವ್ ಅಗರ್ವಾಲ್ ಹೇಳಿದರು.

ತಿಳಿಹಾಸ್ಯದ ಮೂಲಕ ಪ್ರತಿಕ್ರಿಯಿಸಿದ ಪೀಠ, 'ನಾಯಿಗಳು ಮತ್ತು ಬೆಕ್ಕುಗಳು ಶತ್ರುಗಳು. ಇಲಿಗಳನ್ನು ಬೆಕ್ಕುಗಳು ಕೊಲ್ಲುತ್ತವೆ. ಆ ಲೆಕ್ಕದಲ್ಲಿ ಬೆಕ್ಕುಗಳನ್ನೇ ನಾವು ಉಳಿಸಿಕೊಳ್ಳಬೇಕು' ಎಂದಿತು.

'ಆಸ್ಪತ್ರೆಗಳಲ್ಲಿ ಎಷ್ಟು ನಾಯಿಗಳು ತಿರುಗಾಡುವುದನ್ನು ಬಯಸುತ್ತೀರಿ?'

ಇಲಿಗಳ ಸಂಖ್ಯೆ ಹೆಚ್ಚಳವಾಗುವ ಬಗ್ಗೆ ಚರ್ಚೆ ಮುಂದುವರಿದು, 'ಆಸ್ಪತ್ರೆಗಳ ಕಾರಿಡಾರ್‌ಗಳಲ್ಲಿ, ರೋಗಿಗಳ ಬಳಿ, ವಾರ್ಡ್‌ಗಳಲ್ಲಿ ಎಷ್ಟು ನಾಯಿಗಳನ್ನು ನೋಡಲು ಬಯಸುತ್ತೀರಿ?' ಎಂದು ಪೀಠವು ವಕೀಲ ಸಿ.ಯು. ಸಿಂಗ್ ಅವರಿಗೆ ಪ್ರಶ್ನಿಸಿತು. 'ಪೀಠವನ್ನು ಅಗೌರವಿಸುತ್ತಿಲ್ಲ. ಆದರೆ, ಬೀದಿನಾಯಿಗಳನ್ನು ಒಮ್ಮೆಲೆ ಖಾಲಿ ಮಾಡಿಬಿಟ್ಟರೆ ಉಂಟಾಗುವ ಪರಿಸ್ಥಿತಿ ಬಗ್ಗೆ ಹೇಳಿದೆಯಷ್ಟೆ. ಪ್ರಾಣಿ ಜನನ ನಿಯಂತ್ರಣ ನಿಯಮಗಳನ್ನು ಪಾಲಿಸಬೇಕು' ಎಂದು ನ್ಯಾಯಾಲಯದ ಆದೇಶವಿದ್ದರೂ, ನಿಯಮಗಳಿದ್ದರೂ ಹಲವು ರಾಜ್ಯಗಳು, ಹಲವು ನಗರಗಳು ನಿಯಮವನ್ನು ಪಾಲಿಸುತ್ತಿಲ್ಲ' ಎಂದು ಸಿಂಗ್ ಹೇಳಿದರು.

ವಕೀಲ ಕೃಷ್ಣನ್ ವೇಣುಗೋಪಾಲ್ ಅವರು ಪ್ರತಿಕ್ರಿಯಿಸಿ, 'ಎಬಿಸಿ ನಿಯಮಗಳನ್ನು ಜಾರಿ ಮಾಡಲು ಸಾಕಷ್ಟು ಅನುದಾನ ನೀಡಲಾಗುತ್ತಿಲ್ಲ. ಕೇಂದ್ರ ಸರ್ಕಾರ ಮತ್ತು ರಾಜ್ಯಗಳು 60:40 ಅನುಪಾತದಲ್ಲಿ ಅನುದಾನ ನೀಡುವಂತಾಗಬೇಕು' ಎಂದರು. ಬಿಸಿ ನಿಯಮಗಳ ಅನ್ವಯ ದೇಶದಲ್ಲಿ 66 ಪ್ರಾಣಿ ಜನನ ನಿಯಂತ್ರಣ ಕೇಂದ್ರಗಳಷ್ಟೇ ಇವೆ. ಈ ಕೇಂದ್ರಗಳನ್ನು ಹೆಚ್ಚಿಸಬೇಕಿದೆ. ಇಂಥ ಕೇಂದ್ರಗಳನ್ನು ನಡೆಸುವ ಮಾನ ಸಂಪನ್ಮೂಲ ಕೂಡ ಬಹಳ ಕಡಿಮೆ ಇವೆ' ಎಂದು ವಕೀಲರೊಬ್ಬರು ಪೀಠದ ಗಮನ ಸೆಳೆದರು.

'ಶರ್ಜೀಲ್ ಮೇಲಿನ ಆರೋಪ ಅಸಂಬದ್ಧ'

ನವದೆಹಲಿ (ಪಿಟಿಐ): '2020ರ ದೆಹಲಿ ಗಲಭೆಗೆ ಮುನ್ನ ಉಮರ್ ಖಾಲಿದ್ ನನ್ನ ಕಕ್ಷಿದಾರ ಶರ್ಜೀಲ್ ಇಮಾಮ್ ಅವರಿಗೆ ಎಂದಿಗೂ ಮಾರ್ಗದರ್ಶನ ನೀಡಿಲ್ಲ. ಇಮಾಮ್ ಅವರು ಖಾಲಿದ್ ಅವರ ಶಿಷ್ಯರಾಗಿದ್ದರು ಎಂಬ ಪ್ರಾಸಿಕ್ಯೂಷನ್ ಆರೋಪವು ಅಸಂಬದ್ಧ' ಎಂದು ಇಮಾಮ್ ಪರ ವಕೀಲರು ನ್ಯಾಯಾಲಯಕ್ಕೆ ಗುರುವಾರ ತಿಳಿಸಿದ್ದಾರೆ. ಪ್ರಕರಣದ ಆರೋಪಿ ಇಮಾಮ್ ವಿರುದ್ಧದ ಆರೋಪದ ಕುರಿತು ವಾದಗಳನ್ನು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಸಮೀರ್ ಬಾಜಪೈ ಆಲಿಸಿದರು. ಜೈಲಿನಲ್ಲಿರುವ ಇಮಾಮ್ ಪರ ವಕೀಲರು, 'ಇಮಾಮ್ ಮತ್ತು ಖಾಲಿದ್ ಅವರು ಜೆಎನ್‌ಯು ವಿದ್ಯಾರ್ಥಿಗಳಾಗಿದ್ದರೂ, ಅವರ ನಡುವೆ ಯಾವುದೇ ನೇರ ಅಥವಾ ಪರೋಕ್ಷ ಸಂವಹನ ನಡೆದಿಲ್ಲ. ಪ್ರಾಸಿಕ್ಯೂಷನ್ ಬಳಿ ಇರುವ ಸಾಕ್ಷ್ಯಗಳಿಂದ ಈ ಆರೋಪಗಳನ್ನು ಸಾಬೀತು ಮಾಡಲು ಸಾಧ್ಯವಿಲ್ಲ' ಎಂದರು.

ಖಾಲಿದ್

ಪತ್ನಿ ವಿರುದ್ಧ ದೆಹಲಿ ಹೈಕೋರ್ಟ್ ಮೊರೆಹೋಗಿದ್ದ ಪತಿ

'ಗರ್ಭಾವಸ್ಥೆ ಮುಂದುವರಿಸಲು ಒತ್ತಡ ಸಲ್ಲ'

ನವದೆಹಲಿ(ಪಿಟಿಐ): ಗರ್ಭಾವಸ್ಥೆಯನ್ನು ಮುಂದುವರಿಸುವಂತೆ ಮಹಿಳೆಯೊಬ್ಬರ ಮೇಲೆ ಒತ್ತಡ ಹೇರುವುದು ಆಕೆಯ ದೇಹದ ಮೇಲಿನ ಹಕ್ಕನ್ನು ಉಲ್ಲಂಘಿಸಿದಂತೆ ಮತ್ತು ಮಾನಸಿಕ ಆಘಾತವನ್ನು ಹೆಚ್ಚಿಸಿದಂತೆ ಎಂದು ದೆಹಲಿ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

14 ವಾರದ ಭ್ರೂಣವನ್ನು ವೈದ್ಯಕೀಯವಾಗಿ ತೆಗೆಸಿದ್ದ ಪರಿತ್ಯಕ್ತ ಪತ್ನಿ ವಿರುದ್ಧ ಪತಿಯೊಬ್ಬರು ಸಲ್ಲಿಸಿದ್ದ ಕ್ರಿಮಿನಲ್ (ಅಪರಾಧಿಕ) ಅರ್ಜಿಯನ್ನು ವಜಾಗೊಳಿಸಿದ ಸಂದರ್ಭದಲ್ಲಿ ನ್ಯಾಯಾಲಯ ಈ ಆದೇಶ ನೀಡಿದೆ.

'ವೈವಾಹಿಕ ತಕರಾರು ಪ್ರಕರಣದಲ್ಲಿ ಗರ್ಭಪಾತ ಬಯಸುವುದು ಆಕೆಯ ಸ್ವಾತಂತ್ರ್ಯವಾಗಿದೆ' ಎಂದು ಅಭಿಪ್ರಾಯಪಟ್ಟ ನ್ಯಾಯಮೂರ್ತಿ ನೀನಾ ಬನ್ಸಲ್ ಕೃಷ್ಣ ಅವರು, 'ಅರ್ಜಿದಾರರ ಪತ್ನಿ, ಗರ್ಭಪಾತಕ್ಕೆ ಸಂಬಂಧಿಸಿದ ಐಪಿಸಿಯ 312ನೇ ಸೆಕ್ಷನ್ ಅನ್ನು ಉಲ್ಲಂಘಿಸುವ ಉದ್ದೇಶ ಹೊಂದಿಲ್ಲ' ಎಂದು ಹೇಳಿದ್ದಾರೆ.

'ಆಯ್ಕೆಯು ವೈಯಕ್ತಿಕ ಸ್ವಾತಂತ್ರ್ಯವಾಗಿದ್ದು, ಗರ್ಭಾವಸ್ಥೆಯ ನಿಯಂತ್ರಣ ಮಹಿಳೆಯ ಅಗತ್ಯ ಮತ್ತು ಹಕ್ಕನ್ನು ಅವಲಂಬಿಸಿದೆ. ಗರ್ಭಪಾತ ನಿರ್ಣಯ ಕಾಯ್ದೆಯಲ್ಲಿ (ಎಂಟಿಪಿ) ಗರ್ಭಪಾತಕ್ಕೆ ಪತಿಯ ಅನುಮತಿ ಕೇಳಬೇಕೆಂದಿಲ್ಲ. ಮಹಿಳೆಯ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಆಗುವ ಹಾನಿಯನ್ನೂ ಶಾಸನದ ಜಾರಿ ವೇಳೆ ಪರಿಗಣಿಸಬೇಕಾಗುತ್ತದೆ' ಎಂದು ಮಂಗಳವಾರ ನೀಡಿದ ತೀರ್ಪಿನಲ್ಲಿ ನ್ಯಾಯಾಲಯ ಉಲ್ಲೇಖಿಸಿದೆ.

ಐಪಿಸಿ 312ನೇ ಸೆಕ್ಷನ್ ಅಡಿ ಮ್ಯಾಜಿಸ್ಟ್ರಿಯಲ್ ನ್ಯಾಯಾಲಯದ ಮುಂದೆ ಹಾಜರಾಗುವಂತೆ ಪತಿ ನೀಡಿದ್ದ ಸಮನ್ಸ್ ಅನ್ನು ಪತ್ನಿ ಸೆಷನ್ಸ್ ನ್ಯಾಯಾಲಯದಲ್ಲಿ ಪಶ್ನಿಸಿದ್ದರು. ಸೆಷನ್ಸ್ ಕೋರ್ಟ್ ಆಕೆಗೆ ವಿನಾಯಿತಿ ನೀಡಿತ್ತು. ಇದನ್ನು ಪತಿ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

ವೈವಾಹಿಕ ಸ್ಥಿತಿಯಲ್ಲಿ ಬದಲಾವಣೆ ಆದಾಗ (ವಿಧವೆ, ವಿಚ್ಛೇದನ ಮತ್ತಿತರೆ) ಎಂಟಿಪಿ ಕಾಯ್ದೆಯ 3–ಬಿ(ಸಿ) ನಿಯಮದಡಿ ಆಕೆಗೆ ಗರ್ಭಪಾತ ನಿರ್ಣಯದ ಅಧಿಕಾರವಿದೆ ಎಂದು ಕೋರ್ಟ್ ತಿಳಿಸಿದೆ.

'ತನ್ನನ್ನು ತಾನೇ ರಕ್ಷಿಸಿಕೊಳ್ಳುವ' ಅವಕಾಶ

'ಗರ್ಭಪಾತದ ದಿನಾಂಕದವರೆಗೂ ನಾವು ಜೊತೆಗಿದ್ದೆವು. ವೈವಾಹಿಕ ವ್ಯಾಜ್ಯ ಇರಲಿಲ್ಲ. ಹೀಗಾಗಿ ಗರ್ಭಾವಸ್ಥೆ ನಿರ್ಣಯ ಕಾಯ್ದೆಯ ನಿಯಮ ಇಲ್ಲಿ ಅನ್ವಯಿಸುವುದಿಲ್ಲ' ಎಂದು ಪತಿ ವಾದಿಸಿದ್ದರು. ಆದರೆ ಕೋರ್ಟ್ ಇದನ್ನು ಅಲ್ಲಗಳೆದು, ವೈವಾಹಿಕ ವ್ಯಾಜ್ಯ ಎಂಬುದು 'ದಂಪತಿ ಪ್ರತ್ಯೇಕವಾದಾಗ ಮತ್ತು ವಿವಾದ ಆದಾಗ ಉಂಟಾಗುತ್ತದೆ ಎಂದರ್ಥವಲ್ಲ. ತುರ್ತು ಮತ್ತು ಇಚ್ಛೆಯಿಲ್ಲದ ಗರ್ಭಾವಸ್ಥೆಯಲ್ಲಿ ಪುರುಷನು ಹೊರೆಯನ್ನು ಹಂಚಿಕೊಳ್ಳಲು ಅಲ್ಲಿ ಇರದಿರಬಹುದು. ಹೀಗಾಗಿ ಮಹಿಳೆ 'ತನ್ನನ್ನು ತಾನೇ ರಕ್ಷಿಸಿಕೊಳ್ಳುವ' ಅವಕಾಶ ಹೊಂದಿದ್ದಾರೆ' ಎಂದು ನ್ಯಾಯಾಲಯ ಹೇಳಿದೆ.

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ

ನಂ. ಡಿಸಿಸಿಬಿ/ಕಟ್ಟಡ/46/2025–26 ದಿನಾಂಕ : 08–01–2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬ್ಯಾಂಕಿನ ಕೆ ಆರ್ ಪೇಟೆ ತಾಲ್ಲೂಕು ಶಾಖೆಯ ನೂತನ ಕಟ್ಟಡದ ಮೊದಲನೇ ಮಹಡಿ ನಿರ್ಮಾಣ ಕಾಮಗಾರಿ ಸಂಬಂಧ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆಯನ್ನು ಪ್ರಕಟಿಸಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು ಕರ್ನಾಟಕ ಇ–ಪೋರ್ಟಲ್ ಜಾಲತಾಣ https//kppp.karnataka.gov.in ಮೂಲಕ ಹೆಚ್ಚಿನ ವಿವರಗಳನ್ನು ಪಡೆಯಬಹುದಾಗಿರುತ್ತದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 16–01–2026ರ ಸಂಜೆ 5–00 ಗಂಟೆ ಆಗಿರುತ್ತದೆಂದು ತಿಳಿಯಪಡಿಸಿದೆ.

Tender No. MDCCB/2025-26/ BD/WORK_INDENT8	Construction of K R Pete Branch First Floor building

ಸಹಿ/– ಮುಖ್ಯಕಾರ್ಯನಿರ್ವಹಣಾಧಿಕಾರಿ, ಎಂ.ಡಿ.ಸಿ.ಸಿ. ಬ್ಯಾಂಕ್ ನಿ., ಮಂಡ್ಯ

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ. 5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 009.
ಇ–ಮೇಲ್: bmicapa@gmail.com, ದೂರವಾಣಿ: –080–22341230 / 35

ಸಂಖ್ಯೆ: ಬಿಎಂಐಸಿಎಪಿಎ/ಸಿ.ಎ. ನಿವೇಶನ ಹಂಚಿಕೆ/2025–26 ದಿನಾಂಕ: 08–01–2026

ಸಾರ್ವಜನಿಕ ಪ್ರಕಟಣೆ

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬೆಂಗಳೂರು ಜಿಲ್ಲೆಯಲ್ಲಿ **ಅನುಮೋದಿತ ವಸತಿ ಬಡಾವಣೆಗಳಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ರಾಜ್ಯ / ಕೇಂದ್ರ ಸರ್ಕಾರಿ ಇಲಾಖೆಗಳು / ಸ್ಥಳೀಯ ಸಂಸ್ಥೆಗಳು / ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಅನುಮೋದಿಸಲ್ಪಟ್ಟ ಸಂಘ ಸಂಸ್ಥೆಗಳಿಗೆ ಹಂಚಿಕೆ ಮಾಡುವ ಸಂಬಂಧ**, ಕರ್ನಾಟಕ ಯೋಜನಾ ಪ್ರಾಧಿಕಾರ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ಕಾಯ್ದೆ 2016 ರಂತೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 29.01.2026.**

ನಾಗರೀಕ ಸೌಲಭ್ಯ ನಿವೇಶನವಿರುವ ಬಡಾವಣೆಯ ಮಾಹಿತಿ, ನಾಗರೀಕ ಸೌಲಭ್ಯ ನಿವೇಶನದ ವಿಸ್ತೀರ್ಣ, ಗುತ್ತಿಗೆ ಮೊತ್ತ (ಉಪನೋಂದಣಾಧಿಕಾರಿಗಳಿಂದ ನಿಗದಿಪಡಿಸಲಾದ ಮಾರುಕಟ್ಟೆ ದರ) ಮತ್ತು ನಾಗರೀಕ ಸೌಲಭ್ಯ ನಿವೇಶನ ಮೀಸಲಿಟ್ಟಿರುವ ಉದ್ದೇಶದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ತಾಲ್ಲೂಕು, ಹೋಬಳಿ ಮತ್ತು ಗ್ರಾಮ	ಸರ್ವೆ ಸಂಖ್ಯೆ	ನಾಗರೀಕ ಸೌಲಭ್ಯ ನಿವೇಶನದ ವಿಸ್ತೀರ್ಣ (ಚ. ಮೀ. ಗಳಲ್ಲಿ)	ಗುತ್ತಿಗೆ ಮೊತ್ತ (ಉಪ –ನೋಂದಣಾಧಿಕಾರಿಗಳಿಂದ ನಿಗದಿಪಡಿಸಲಾದ ಮಾರುಕಟ್ಟೆ ದರ ಪ್ರತಿ ಚ.ಮೀ. ಗೆ)	ಉದ್ದೇಶ
1	ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ. ಕಾವಲ್ ಗ್ರಾಮ	123/5	618.03	ರೂ. 18,480	ಪ್ರಾಥಮಿಕ ಶಾಲೆ
2	ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮ	11/6	545.25	ರೂ. 13,500	ಪ್ರಾಥಮಿಕ ಆರೋಗ ಕೇಂದ್ರ (ಆಸ್ಪತ್ರೆ)
3	ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಚನಮಡು ಗ್ರಾಮ	11/3	777.01	ರೂ. 13,860	ವಿದ್ಯಾರ್ಥಿ ನಿಲಯ (ಹಾಸ್ಟಲ್)
4	ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ. ಎಂ. ಕಾವಲ್ ಗ್ರಾಮ ಮತ್ತು ರಾಚನಮಡು ಗ್ರಾಮ	ಬಿ. ಎಂ. ಕಾವಲ್ ಗ್ರಾಮದ 103/1 ಮತ್ತು ಇತರೆ, ರಾಚನಮಡು ಗ್ರಾಮ 15/2 ಮತ್ತು ಇತರೆ	2230.35	ರೂ. 26,400	ಡೈರಿ ಉತ್ಪನ್ನಗಳ ಉದ್ದೇಶಕ್ಕಾಗಿ
5	ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ. ಎಂ. ಕಾವಲ್ ಗ್ರಾಮ ಮತ್ತು ರಾಚನಮಡು ಗ್ರಾಮ	ಬಿ. ಎಂ. ಕಾವಲ್ ಗ್ರಾಮದ 103/1 ಮತ್ತು ಇತರೆ, ರಾಚನಮಡು ಗ್ರಾಮ 15/2 ಮತ್ತು ಇತರೆ	1383.03	ರೂ. 26,400	ಡೈರಿ ಉತ್ಪನ್ನಗಳ ಉದ್ದೇಶಕ್ಕಾಗಿ

ಸೂಚನೆ: ಹೆಚ್ಚಿನ ಮಾಹಿತಿಗಾಗಿ ಮೇಲೆ ತಿಳಿಸಿರುವ ಕಛೇರಿ ವಿಳಾಸಕ್ಕೆ ಕಛೇರಿ ಅವಧಿಯಲ್ಲಿ ಭೇಟಿ ನೀಡಿ ಮಾಹಿತಿ ಪಡೆಯಬಹುದು.

ಸಹಿ/– ಸದಸ್ಯ ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

DIPR/CP/RO4935/AAPL/2025-26

Dr. B.R. Ambedkar School of Economics University Bengaluru

ಡಾ|| ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು

No: BASEU/42/ADM/2025 Date: 07.01.2026

ಪ್ರವೇಶಾತಿ ಅಧಿಸೂಚನೆ : 2026–27

ಡಾ.ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು ರಲ್ಲಿ ಕೆಳಕಂಡ ಒಂಭತ್ತು ಕೋರ್ಸ್‌ಗಳಿಗೆ 2026–27ನೇ ಸಾಲಿಗೆ ಪ್ರವೇಶಾತಿಗಾಗಿ ಅರ್ಜಿಗಳನ್ನು http://www.base.ac.in ವೆಬ್‌ಸೈಟಿನಲ್ಲಿ ಆಹ್ವಾನಿಸಲಾಗಿದೆ. ಈ ಎಲ್ಲಾ ಕೋರ್ಸ್‌ಗಳು ಪೂರ್ಣಾವಧಿ ವಿಷಯದ ವಸತಿ ಸೌಲಭ್ಯದ ಕೋರ್ಸ್‌ಗಳಾಗಿದೆ (Full-time Residential).

- ಐದು ವರ್ಷಗಳ ಸಂಯೋಜಿತ ಎಂ.ಎಸ್.ಸಿ ಅರ್ಥಶಾಸ್ತ್ರ (75 ಸೀಟು ಭಾರತೀಯ ವಿದ್ಯಾರ್ಥಿಗಳಿಗೆ ಮತ್ತು 5 ಸೀಟು ವಿದೇಶಿ ಪ್ರಜೆಗಳು / ಭಾರತೀಯ ಮೂಲದ ವ್ಯಕ್ತಿಗಳು)
- ಐದು ವರ್ಷಗಳ ಸಂಯೋಜಿತ ಎಂ.ಎ. ಅರ್ಥಶಾಸ್ತ್ರ (50 ಸೀಟು ಭಾರತೀಯ ವಿದ್ಯಾರ್ಥಿಗಳಿಗೆ ಮತ್ತು 5 ಸೀಟು ವಿದೇಶಿ ಪ್ರಜೆಗಳು / ಭಾರತೀಯ ಮೂಲದ ವ್ಯಕ್ತಿಗಳು)
- ಮೂರು ವರ್ಷಗಳ ಬಿ.ಎಸ್.ಸಿ. ಡೇಟಾ ಅನಾಲಿಟಿಕ್ಸ್ (50 ಸೀಟು ಭಾರತೀಯ ವಿದ್ಯಾರ್ಥಿಗಳಿಗೆ ಮತ್ತು 5 ಸೀಟು ವಿದೇಶಿ ಪ್ರಜೆಗಳು / ಭಾರತೀಯ ಮೂಲದ ವ್ಯಕ್ತಿಗಳು)
- ಎರಡು ವರ್ಷಗಳ ಎಂ.ಎಸ್.ಸಿ. ಅರ್ಥಶಾಸ್ತ್ರ (30 ಸೀಟು ಭಾರತೀಯ ವಿದ್ಯಾರ್ಥಿಗಳಿಗೆ ಮತ್ತು 5 ಸೀಟು ವಿದೇಶಿ ಪ್ರಜೆಗಳು /ಭಾರತೀಯ ಮೂಲದ ವ್ಯಕ್ತಿಗಳು)
- ಎರಡು ವರ್ಷಗಳ ಎಂ.ಎಸ್.ಸಿ. ಹಣಕಾಸು ಅರ್ಥಶಾಸ್ತ್ರ (30 ಸೀಟು ಭಾರತೀಯ ವಿದ್ಯಾರ್ಥಿಗಳಿಗೆ ಮತ್ತು 5 ಸೀಟು ವಿದೇಶಿ ಪ್ರಜೆಗಳು / ಭಾರತೀಯ ಮೂಲದ ವ್ಯಕ್ತಿಗಳು)
- ಎರಡು ವರ್ಷಗಳ ಎಂ.ಎ. ಅರ್ಥಶಾಸ್ತ್ರ (30 ಸೀಟು ಭಾರತೀಯ ವಿದ್ಯಾರ್ಥಿಗಳಿಗೆ ಮತ್ತು 5 ಸೀಟು ವಿದೇಶಿ ಪ್ರಜೆಗಳು /ಭಾರತೀಯ ಮೂಲದ ವ್ಯಕ್ತಿಗಳು)
- ಎರಡು ವರ್ಷಗಳ ಎಂ.ಎಸ್.ಸಿ. ಅಭಿವೃದ್ಧಿ ಅರ್ಥಶಾಸ್ತ್ರ (30 ಸೀಟು ಭಾರತೀಯ ವಿದ್ಯಾರ್ಥಿಗಳಿಗೆ ಮತ್ತು 5 ಸೀಟು ವಿದೇಶಿ ಪ್ರಜೆಗಳು / ಭಾರತೀಯ ಮೂಲದ ವ್ಯಕ್ತಿಗಳು)
- ಎರಡು ವರ್ಷಗಳ ಎಂ.ಎಸ್.ಸಿ. ಡೇಟಾ ಅನಾಲಿಟಿಕ್ಸ್ (30 ಸೀಟು ಭಾರತೀಯ ವಿದ್ಯಾರ್ಥಿಗಳಿಗೆ ಮತ್ತು 5 ಸೀಟು ವಿದೇಶಿ ಪ್ರಜೆಗಳು / ಭಾರತೀಯ ಮೂಲದ ವ್ಯಕ್ತಿಗಳು)
- ಎರಡು ವರ್ಷಗಳ ಎಂ.ಎಸ್.ಸಿ. ಸಾರ್ವಜನಿಕ ನೀತಿ (30 ಸೀಟು ಭಾರತೀಯ ವಿದ್ಯಾರ್ಥಿಗಳಿಗೆ ಮತ್ತು 5 ಸೀಟು ವಿದೇಶಿ ಪ್ರಜೆಗಳು / ಭಾರತೀಯ ಮೂಲದ ವ್ಯಕ್ತಿಗಳು)

ಅಭ್ಯರ್ಥಿಗಳು ಸಾಮಾನ್ಯ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆ (CUET) 2026-27 ಆನ್‌ಲೈನ್ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (NTA) ನಡೆಸುವ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ. ಹೆಚ್ಚಿನ ವಿವರಗಳಿಗಾಗಿ ಪಿಜಿಗಾಗಿ https://exams.nta.nic.in/cuet-pg/ ಮತ್ತು ಯುಜಿಗಾಗಿ https://cuet.nta.nic.in/ ಗೆ ಭೇಟಿ ನೀಡಿ. ಅಭ್ಯರ್ಥಿಗಳು ಈ ವಿಶ್ವವಿದ್ಯಾಲಯಕ್ಕೆ ಪ್ರತ್ಯೇಕ ಅರ್ಜಿ ಭರ್ತಿ ಮಾಡುವುದು ಕಡ್ಡಾಯವಾಗಿರುತ್ತದೆ. ಅರ್ಜಿ, ಅರ್ಹತೆ, ಮಾನದಂಡಗಳು ಮತ್ತು ಇತರ ವಿವರಗಳಿಗಾಗಿ http://base.ac.in ನಲ್ಲಿ ವೀಕ್ಷಿಸಬಹುದು.

ಅರ್ಜಿಯ ಶುಲ್ಕ : (1) ಸಾಮಾನ್ಯ ಹಾಗೂ ಇತರೆ ಅಭ್ಯರ್ಥಿಗಳು : ರೂ. 600/–, (2) ಎಸ್.ಸಿ/ಎಸ್.ಟಿ/ ಅಂಗವಿಕಲರು : ರೂ.300/–, (3) ವಿದೇಶಿ ಪ್ರಜೆಗಳು / ಭಾರತೀಯ ಮೂಲಕ ವ್ಯಕ್ತಿಗಳು : ರೂ. 1000/–

* ಆನ್ – ಲೈನ್ ಅರ್ಜಿಗಳನ್ನು ತುಂಬಲು ಪ್ರಾರಂಭ ದಿನಾಂಕ: 08.01.2026
* ಆನ್–ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : CUET UG ಮತ್ತು PG 2026 ಫಲಿತಾಂಶ ಘೋಷಣೆಯಾದ ಒಂದು ವಾರದ ಅಂತ್ಯದವರೆಗೆ.

ಸೂಚನೆ:– ಈ ಎಲ್ಲಾ ದಿನಾಂಕಗಳು ಸರ್ಕಾರದ ಆದೇಶದನ್ವಯ ಬದಲಾವಣೆಗೆ ಒಳಪಟ್ಟಿರುತ್ತದೆ.

ಸಹಿ/– ಪ್ರೊ. ವಿಶ್ವನಾಥ ಕುಲಪತಿಗಳು

ವಾಸಾಸಂಇ/ವಾ.ಪ್ರ/4943/ಶಿರಡಿ ಸಾಯಿ/2025–26

ಸಹಿ/– ಮಮತಾ ದೇವಿ ಜಿ.ಎಸ್. (ಕ.ಆ.ಸೇ) ಕುಲಸಚಿವರು

ವಿಳಾಸ : ಜ್ಞಾನಭಾರತಿ ಮುಖ್ಯರಸ್ತೆ, ನಾಗರಭಾವಿ ಅಂಚೆ, ಬೆಂಗಳೂರು, ಕರ್ನಾಟಕ–560072,
Email: info@base.ac.in, Active Helpdesk: 080-29557767

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಸುಖದ ನಂತರ ದುಃಖ ಬರುತ್ತದೆ. ನಮಗೆ ಎರಡೂ ಬೇಕಾಗಿಲ್ಲ. ಒಂದು ಕಬ್ಬಿಣದ ಸಂಕೋಲೆ; ಇನ್ನೊಂದು ಚಿನ್ನದ ಸಂಕೋಲೆ.

–ಸ್ವಾಮಿ ವಿವೇಕಾನಂದ

ಸಂಪಾದಕೀಯ

ಜಿಡಿಪಿ ಅಂದಾಜು ಆಶಾದಾಯಕ ಸಾಗಬೇಕಾದ ದಾರಿ ದೂರ ಇದೆ

ದೇಶದ ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ) ಸಂಬಂಧಿಸಿದಂತೆ ಪ್ರಸಕ್ತ ಆರ್ಥಿಕ ವರ್ಷದ ಮೊದಲ ಅಂದಾಜನ್ನು ಕೇಂದ್ರ ಸರ್ಕಾರವು ಬುಧವಾರ ಬಿಡುಗಡೆ ಮಾಡಿದ್ದು, ಇದುವರೆಗಿನ ಆರ್ಥಿಕ ಮುನ್ನೋಟಗಳಿಗಿಂತಲೂ ಹೆಚ್ಚಿನ ಆಶಾವಾದವನ್ನು ವ್ಯಕ್ತಪಡಿಸಲಾಗಿದೆ. ಜಿಡಿಪಿಯು ಶೇ 7.4ರಷ್ಟು ಬೆಳವಣಿಗೆ ಕಾಣಲಿದೆ ಎಂಬ ನಿರೀಕ್ಷೆಯನ್ನು ಇಟ್ಟುಕೊಳ್ಳಲಾಗಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಆರ್ಥಿಕ ಬೆಳವಣಿಗೆ ದರ ಶೇ 7.3ರಷ್ಟು ಇರಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಂದಾಜಿಸಿತ್ತು. ಆರ್ಥಿಕ ವರ್ಷದ ಮೊದಲಾರ್ಧದಲ್ಲಿ ಶೇ 8ರಷ್ಟು ಬೆಳವಣಿಗೆ ಸಾಧಿಸಲಾಗಿದ್ದರೂ ದ್ವಿತೀಯಾರ್ಧದಲ್ಲಿ ಬೆಳವಣಿಗೆ ದರ ಕುಂಠಿತಗೊಳ್ಳಲಿದೆ ಎಂಬ ನಿರೀಕ್ಷೆ ಮೊದಲೇ ಇತ್ತು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸರ್ಕಾರದ ಸುಂಕ ಸಮರ ಮತ್ತು ಸರ್ಕಾರ ಮಾಡುವ ವೆಚ್ಚದಲ್ಲಿ ಆಗುವ ಇಳಿಕೆಯಿಂದ ಆರ್ಥಿಕ ಬೆಳವಣಿಗೆ ದರ ಕುಂಠಿತಗೊಳ್ಳಲಿದೆ ಎಂಬ ಅಂದಾಜಿಗೆ ಆರ್ಥಿಕ ತಜ್ಞರು ಬಂದಿದ್ದರು. ಆದರೆ, ಜಿಡಿಪಿ ಪ್ರಮಾಣ ಶೇ 7.4ರಷ್ಟು ಇರಲಿದೆ ಎನ್ನುವ ಅಂದಾಜು ಗಮನಾರ್ಹವಾದುದು. ಇದು ಕಳೆದ ಹಣಕಾಸು ವರ್ಷಕ್ಕಿಂತಲೂ (ಶೇ 6.5) ಅತ್ಯುತ್ತಮವಾದ ಸಾಧನೆ ಎನಿಸಲಿದೆ. ತಗ್ಗಿದ ಚಿಲ್ಲರೆ ಹಣದುಬ್ಬರ ಮತ್ತು ವಾಣಿಜ್ಯ ಚಟುವಟಿಕೆ ಹೆಚ್ಚಿದ ಬೇಡಿಕೆ ಸೇರಿ ಆರ್ಥಿಕ ಬೆಳವಣಿಗೆಯ ದರಕ್ಕೆ ವೇಗವನ್ನು ನೀಡಿವೆ. ಬಜೆಟ್‌ನ ನಿರೀಕ್ಷೆಯ ಪ್ರಮಾಣ ಶೇ 10.1ರಷ್ಟಕ್ಕೆ ಹೋಲಿಸಿದಾಗ, ಈಗಿನ ಬೆಳವಣಿಗೆ ದರ ಅತ್ಯಲ್ಪ ಎಂದೇ ಹೇಳಬೇಕು. ಸತತ ಎರಡನೇ ವರ್ಷದಲ್ಲಿಯೂ ಜಿಡಿಪಿ ವೃದ್ಧಿ ದರವು ಶೇ 10ಕ್ಕಿಂತ ಕಡಿಮೆ ಪ್ರಮಾಣದಲ್ಲಿ ದಾಖಲಾಗಲಿದೆ. ಆರ್ಥಿಕ ಬೆಳವಣಿಗೆಯ ಕುಂಠಿತವು ಒಟ್ಟಾರೆ ಬಜೆಟ್‌ನ ರೂಪುರೇಷೆಯ ಮೇಲೆ ಪರಿಣಾಮವನ್ನು ಬೀರುತ್ತದೆ.

ಜಿಡಿಪಿಯು ಶೇ 7.4ರಷ್ಟು ಬೆಳವಣಿಗೆ ಕಾಣಲಿದೆ ಎಂಬ ಅಂದಾಜು ಆಶಾದಾಯಕ. ಆದರೆ, ಪ್ರತಿಕೂಲ ಜಾಗತಿಕ ವಿದ್ಯಮಾನಗಳ ಸವಾಲನ್ನೂ ದೇಶದ ಆರ್ಥಿಕತೆ ಎದುರಿಸಬೇಕಾಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಸೇವಾ ವಲಯದ ಪ್ರಗತಿ ಎದ್ದು ಕಾಣುತ್ತಿದೆ. 2024–25ರಲ್ಲಿ ಶೇ 7.2ರಷ್ಟು ಬೆಳವಣಿಗೆ ಕಂಡಿದ್ದ ಈ ವಲಯವು ಈ ವರ್ಷದಲ್ಲಿ ಶೇ 9.1ರಷ್ಟು ಪ್ರಗತಿ ದಾಖಲಿಸಲಿದೆ ಎಂದು ಅಂದಾಜು ಮಾಡಲಾಗಿದೆ. ವ್ಯಾಪಾರ, ಹೋಟೆಲ್, ಸಾರಿಗೆ ಮತ್ತು ಸಂವಹನ, ಹಣಕಾಸು, ರಿಯಲ್ ಎಸ್ಟೇಟ್ ಮತ್ತು ವೃತ್ತಿಪರ ಸೇವಾ ವಲಯಗಳು ಉತ್ತಮ ಸಾಧನೆ ತೋರಬಹುದು ಎಂದು ನಿರೀಕ್ಷಿಸಲಾಗಿದೆ. ಸುಂಕ ಏರಿಕೆಯಿಂದ ವ್ಯಾಪಾರ ವಲಯವು ಇದುವರೆಗೆ ಅಂತಹ ದೊಡ್ಡ ಸಂಕಷ್ಟವನ್ನು ಎದುರಿಸಿದಂತಿಲ್ಲ ಎಂದು ತೋರುತ್ತದೆ. ಆದರೆ, ಮುಂದಿನ ದಿನಗಳಲ್ಲಿ ಪರಿಸ್ಥಿತಿ ತಿರುವು ಮುರುವು ಆಗಬಹುದು. ಉತ್ಪಾದನಾ ವಲಯವು ಪ್ರಗತಿ ಕಾಣುತ್ತಿದ್ದು, ನಿರ್ಮಾಣ ಕ್ಷೇತ್ರದ ಬೆಳವಣಿಗೆ ಕುಂಠಿತಗೊಂಡಿದೆ. ಬಳಕೆ ಮತ್ತು ಹೂಡಿಕೆ ಚಟುವಟಿಕೆಗಳು ಇನ್ನೂ ಹೆಚ್ಚುವ ನಿರೀಕ್ಷೆ ಇದೆ.

ಜಿಡಿಪಿ ಅಂದಾಜುಗಳು ಲಭ್ಯವಿರುವ ನವೆಂಬರ್‌ವರೆಗಿನ ದತ್ತಾಂಶ ಹಾಗೂ ಸದ್ಯದ ವಿಧಾನಗಳನ್ನು ಅವಲಂಬಿಸಿವೆ. ಕೇಂದ್ರ ಸಾಂಖ್ಯಿಕ ಹಾಗೂ ಯೋಜನಾ ಅನುಷ್ಠಾನ ಸಚಿವಾಲಯವು ಜಿಡಿಪಿ ನಿರ್ಧರಿಸುವುದಕ್ಕೆ ಫೆಬ್ರುವರಿಯಲ್ಲಿ ಹೊಸ ವಿಧಾನಗಳನ್ನು ಬಿಡುಗಡೆ ಮಾಡಲಿದೆ. ಆ ದತ್ತಾಂಶಗಳ ಗಾತ್ರ ಮತ್ತಷ್ಟು ಹಿಗ್ಗಿ, ಆರ್ಥಿಕ ಸ್ಥಿತಿಯ ಚಿತ್ರಣ ಇನ್ನೂ ಸ್ಪಷ್ಟಗೊಳ್ಳಲಿದೆ. ಗ್ರಾಹಕರ ಬೆಲೆ ಸೂಚ್ಯಂಕ, ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ ಕೂಡ ಬಿಡುಗಡೆ ಆಗಬೇಕಿದೆ. ಹೊಸ ವಿಧಾನಗಳು ಆರ್ಥಿಕ ಬೆಳವಣಿಗೆ ಗತಿಯನ್ನು ನಿಚ್ಚಳವಾಗಿ ಗುರುತಿಸುವ ಜತೆಗೆ ತಳಮಟ್ಟದಲ್ಲಿ ಆಗಿರುವ ಪ್ರಗತಿಗೂ ಕನ್ನಡಿ ಹಿಡಿಯಲಿವೆ. ಸದ್ಯದ ಜಾಗತಿಕ ವಿದ್ಯಮಾನಗಳು ದೇಶದ ಆರ್ಥಿಕತೆಗೆ ಬಹುದೊಡ್ಡ ಸವಾಲುಗಳಾಗಿವೆ. ಅಮೆರಿಕದ ಹೆಚ್ಚುವರಿ ಸುಂಕದ ತೂಗುಗತ್ತಿ ಬೇರೆ ತೂಗುತ್ತಿದ್ದು, ಆತಂಕದ ಅಲೆಯನ್ನು ಎಬ್ಬಿಸಿದೆ. ಈ ಆತಂಕವನ್ನು ದೂರಮಾಡುವ ನಿಟ್ಟಿನಲ್ಲಿ ಎರಡು ವಾಣಿಜ್ಯ ಒಪ್ಪಂದಗಳನ್ನು ಮಾಡಿಕೊಳ್ಳಲು ನಡೆದಿರುವ ಪ್ರಯತ್ನಗಳು ದೇಶದ ಆರ್ಥಿಕ ಸ್ಥಿರತೆಗೆ ಬಲು ಮುಖ್ಯವಾಗಿವೆ.

ಆಳ್ವಿಕೆ ಯಾರದು?

ಅಮೆರಿಕ ಈಗಲೂ ಪ್ರಜಾಪ್ರಭುತ್ವ ಎಂದು ನಂಬುತ್ತೀರಾ? ಅಮೆರಿಕವನ್ನು ಆಳುತ್ತಿರುವುದು ಅಲ್ಲಿನ ಸಂಸತ್ತೇ? ರಿಪಬ್ಲಿಕನ್ ಪಕ್ಷವೇ? ‘ಮಗಾ’ ಗುಂಪೇ? ಕೇವಲ ಟ್ರಂಪೇ?

ಜಿ.ಎನ್. ನಾಗರಾಜ್, ಲೇಖಕ, ಫೇಸ್‌ಬುಕ್‌ನಿಂದ

ಕಿಡಿನುಡಿ

ಹುಬ್ಬಳ್ಳಿಯಲ್ಲಿ ಪೊಲೀಸರು ಮಹಿಳೆಯನ್ನು ವಿವಸ್ತ್ರಗೊಳಿಸಿಲ್ಲ. ಆದರೂ, ಹೆಣ್ಣುಮಗಳ ವಿಚಾರವನ್ನು ಕೈಗೆತ್ತಿಕೊಂಡು ಬಿಜೆಪಿಯವರು ರಾಜಕೀಯ ಮಾಡುತ್ತಿರುವುದು ಎಷ್ಟು ಸರಿ?

ಜಿ. ಪರಮೇಶ್ವರ, ಗೃಹ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 9-1-2001

● ಹಳ್ಳಿಗಳಿಗೆ ಭೇಟಿ: ಪೊಲೀಸರಿಗೆ ಮುಖ್ಯಮಂತ್ರಿ ಸೂಚನೆ

ಬೆಂಗಳೂರು, ಜ. 8– ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಹಳ್ಳಿಗಳಿಗೆ ಭೇಟಿ ನೀಡಿ ಅಲ್ಲಿನ ಸಮಸ್ಯೆಗಳನ್ನು ಬಗೆಹರಿಸುವ ಮೂಲಕ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಬೇಕು ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು, ಇಂದು ಇಲ್ಲಿ ಸೂಚಿಸಿದರು.

ಇಲ್ಲಿನ ಪೊಲೀಸ್ ಮಹಾನಿರ್ದೇಶಕರ ಕಚೇರಿಯಲ್ಲಿ ಏರ್ಪಡಿಸಿದ್ದ ರಾಜ್ಯದ ಎಲ್ಲ ಐಪಿಎಸ್ ಅಧಿಕಾರಿಗಳ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

‘ಜಿಲ್ಲಾಧಿಕಾರಿಗಳು ಭೇಟಿ ನೀಡುವ ಹಾಗೆ ಎಸ್‌ಪಿಗಳೂ ಹಳ್ಳಿಗಳಿಗೆ ಭೇಟಿ ನೀಡಿದರೆ ಒಳ್ಳೆಯದು’ ಎಂದು ತಾಕೀತು ಮಾಡಿದರು.

● ಭೂಗತ ಜಗತ್ತಿನ ಸಂಪರ್ಕ: ಭರತ್ ಷಾ ಬಂಧನ

ಮುಂಬೈ, ಜ. 8 (ಪಿಟಿಐ)– ಭೂಗತ ಜಗತ್ತಿನೊಂದಿಗೆ ನೇರ ಸಂಪರ್ಕ ಹೊಂದಿದ್ದಾರೆ ಎಂಬ ಬಗ್ಗೆ ಖಚಿತ ಸಾಕ್ಷ್ಯ ದೊರೆತ ಹಿನ್ನೆಲೆಯಲ್ಲಿ ಹಿಂದಿ ಚಿತ್ರ ಜಗತ್ತಿನ ಪ್ರಖ್ಯಾತ ಹಣಕಾಸು ಪೂರೈಕೆದಾರ ಮತ್ತು ವಜ್ರದ ಉದ್ಯಮಿ ಭರತ್ ಷಾ ಅವರನ್ನು ಇಂದು ಇಲ್ಲಿ ಬಂಧಿಸಲಾಗಿದ್ದು, ಅವರನ್ನು ಜನವರಿ 18ರ ತನಕ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

ಷಾ ಅವರು ಕರಾಚಿ ಮೂಲದ ಭೂಗತ ದೊರೆ ಛೋಟಾ ಶಕೀಲ್ ಜತೆಗೆ ದೂರವಾಣಿ ಮೂಲಕ ನಡೆಸಿದ ಮಾತುಕತೆಗಳ ಧ್ವನಿಸುರುಳಿ ಲಭ್ಯವಾದ ಕಾರಣ ಅವರನ್ನು ಬಂಧಿಸಲಾಗಿದೆ ಎಂದು ಮಹಾರಾಷ್ಟ್ರದ ಗೃಹ ಸಚಿವ ಛಗನ್ ಭುಜಬಲ್ ತಿಳಿಸಿದರು.

75 ವರ್ಷಗಳ ಹಿಂದೆ

ಮಂಗಳವಾರ, 9-1-1951

● ರಾಜಾ ತ್ರಿಭುವನ್ ಮತ್ತೆ ನೇಪಾಳ ಸಿಂಹಾಸನಕ್ಕೆ

ನವದೆಹಲಿ, ಜ. 8– ರಾಜಾ ತ್ರಿಭುವನರು ಮುಂದೆಯೂ ನೇಪಾಳದ ರಾಜರಾಗಿರುವರೆಂದು ನೇಪಾಳದ ಪ್ರಧಾನಿ ಮಹಾರಾಜಾ ಮೋಹನ್ ಷಂಷೀರ್‌ಜಂಗ್ ಬಹದ್ದೂರರು ಖಟ್ಮಂಡುವಿನಲ್ಲಿ ಪ್ರಕಟಿಸಿದರು.

1952ಕ್ಕಿಂತ ವಿಳಂಬವಾಗದಂತೆ ರಾಜ್ಯಾಂಗದ ಸಭೆಯೊಂದನ್ನು ಕರೆದು ಹದಿನಾಲ್ಕು ಮಂದಿಯನ್ನೊಳಗೊಂಡ ತಾತ್ಕಾಲಿಕ ಸಚಿವ ಸಂಪುಟವನ್ನು ಆದಷ್ಟು ಶೀಘ್ರವಾಗಿ ರಚಿಸಬೇಕೆಂಬ ನಿರ್ಧಾರವನ್ನೂ ಪ್ರಧಾನಿ ಘೋಷಿಸಿದರು.

ಮಧ್ಯಂತರ ಕಾಲದಲ್ಲಿ ರಚಿತವಾಗಬೇಕಾದ ತಾತ್ಕಾಲಿಕ ಸಚಿವ ಸಂಪುಟದಲ್ಲಿ ಏಳು ಮಂದಿ ಜನತಾ ಪ್ರತಿನಿಧಿಗಳಿರಬೇಕು. ಸಚಿವ ಸಂಪುಟವು ಜಂಟಿ ಜವಾಬ್ದಾರಿ ತತ್ತ್ವದ ಮೇಲೆ ಕಾರ್ಯ ನಿರ್ವಹಿಸಬೇಕು ಎಂದು ಏಳು ಪುಟಗಳಷ್ಟು ವಿಸ್ತಾರವಾಗಿರುವ ಘೋಷಣೆಯಲ್ಲಿ ತಿಳಿಸಲಾಗಿದೆ.

● ಅತೃಪ್ತ ಪಾಕಿಸ್ತಾನಿಗಳ ಕಣ್ಣೊರೆಸುವ ಕುತಂತ್ರ

ಮುಂಬೈ, ಜ. 8– ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಕಾಶ್ಮೀರ ಪ್ರಶ್ನೆ ಚರ್ಚೆಗೆ ಬರಬೇಕೆಂದು ಪ್ರಧಾನಿ ಲಿಯಾಕತ್ ಅಲಿಖಾನರು ಮಾಡಿದ ಪ್ರಯತ್ನ ಪಾಕಿಸ್ತಾನದ ಜನತೆಯ ವಿಶ್ವಾಸಗಳಿಸಲಿಕ್ಕಲ್ಲದೆ ಬೇರೆಯಲ್ಲ ಎಂಬುವುದಾಗಿ ಕಾಶ್ಮೀರ ಪ್ರಧಾನಿ ಶೇಖ್ ಮಹಮದ್ ಅಬ್ದುಲ್ಲಾರವರು ಮುಂಬೈನಲ್ಲಿ ತಿಳಿಸಿದರು.

ಪಾಕಿಸ್ತಾನದ ಪ್ರಸ್ತುತ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳು ಪಾಕಿಸ್ತಾನದ ಜನತೆಯಲ್ಲಿ ತೀವ್ರವಾದ ಅತೃಪ್ತಿ ಮತ್ತು ಅಸಮಾಧಾನ ಉಂಟು ಮಾಡಿವೆ ಎಂದರು.

ವಿರಳ ಲೋಹ: ಭಾರತಕ್ಕೆ ದೆಸೆ?

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ವ್ಯಾಪಾರ ಮಾತ್ರವಲ್ಲದೆ, ರಾಜತಾಂತ್ರಿಕ ಅಸ್ತ್ರವಾಗಿಯೂ ಬಳಕೆಯಾಗುತ್ತಿರುವ ವಿರಳ ಲೋಹಗಳ ಕ್ಷೇತ್ರದಲ್ಲಿ ಚೀನಾದ ಏಕಸ್ವಾಮ್ಯ ಮುರಿಯುವ ಅವಕಾಶ ಭಾರತಕ್ಕಿದೆ. ಪರಿಸರಕ್ಕೆ ಗಾಸಿಯಾಗದೆ ವಿರಳ ಲೋಹಗಳ ಸಂಸ್ಕರಣೆಗೆ ಸಂಬಂಧಿಸಿದಂತೆ ಹೆಚ್ಚು ಪ್ರಯತ್ನಗಳು ನಡೆಯಬೇಕಾಗಿದೆ.

ಸ್ಮಾರ್ಟ್‌ಫೋನ್‌ನಿಂದ ಯುದ್ಧ ವಿಮಾನಗಳವರೆಗೆ ವಿರಳ ಲೋಹಗಳ ಬಳಕೆಯಿಲ್ಲದ ಆಧುನಿಕ ತಂತ್ರಜ್ಞಾನವನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಈ ವಿರಳ ಲೋಹಗಳನ್ನು ಆಧುನಿಕ ತಂತ್ರಜ್ಞಾನದ ‘ವಿಟಮಿನ್’, ‘ಹೊಸ ಯುಗದ ಚಿನ್ನ’ ಎಂದು ಕರೆಯಲಾಗುತ್ತಿದೆ.

ಭೂಮಿಯ ಹೊರಪದರದಲ್ಲಿ 17 ವಿರಳ ಲೋಹಗಳು ತೆಳುವಾಗಿ ಹರಡಿಕೊಂಡಿವೆ. ಹೆಸರಿಗೆ ತಕ್ಕಂತೆ ಇವು ವಿರಳವೇನಲ್ಲ. ಚಿನ್ನ, ಬೆಳ್ಳಿಗಿಂತ ಹೆಚ್ಚೇ ಇವೆ. ಭೂಮಿಯಲ್ಲಿ ಒಂದೇ ಕಡೆ ಒತ್ತೊತ್ತಾಗಿ ಮತ್ತು ಶುದ್ಧ ರೂಪದಲ್ಲಿ ದೊರಕುವುದಿಲ್ಲವಾದ್ದರಿಂದ ಈ ಹೆಸರು! ನಮ್ಮ ಕರಾವಳಿಯುದ್ದಕ್ಕೂ ದೊರಕುವ ಮೊನಾಜೈಟ್ ಅದಿರಿನಲ್ಲಿ ಹಗುರ ವಿರಳ ಲೋಹಗಳು ಹೇರಳವಾಗಿವೆ. ಆದರೆ, ಇವುಗಳ ಗಣಿಗಾರಿಕೆ ದುಬಾರಿ. ಶುದ್ಧರೂಪಕ್ಕೆ ತರುವ ವಿಧಾನ ಸಂಕೀರ್ಣ; ಪರಿಸರಸ್ನೇಹಿಯೂ ಅಲ್ಲ.

ವಾಹನದ ಬ್ಯಾಟರಿ, ವಿಮಾನದ ಎಂಜಿನ್, ಪವನ ವಿದ್ಯುತ್ ಟರ್ಬೈನ್‌ಗಳಿಗೆ ಬೇಕಾದ ಶಕ್ತಿಶಾಲಿ ಆಯಸ್ಕಾಂತ ತಯಾರಿಕೆಯಲ್ಲಿ ಬಳಸುವ ಪ್ರಸೋಡೈಮಿಯಂ ಮತ್ತು ನಿಯೋಡೈಮಿಯಂಗಳು ಜೊತೆಯಾಗಿಯೇ ದೊರಕುತ್ತವೆ. ಇವೆರಡನ್ನೂ ಆಯಸ್ಕಾಂತ ಉದ್ಯಮದ ‘ಓಡುವ ಕುದುರೆ’ ಎನ್ನುತ್ತೇವೆ. ನ್ಯೂಕ್ ಲಿಯರ್ ಬ್ಯಾಟರಿ (ಪ್ರೊಮಿಥಿಯಂ), ಕ್ಯಾನ್ಸರ್ ಚಿಕಿತ್ಸೆ (ಸಮೇರಿಯಂ), ತೈಲ ಸಂಸ್ಕರಣೆ (ಲುಟೇಶಿಯಂ), ಚಿಕ್ಕ ಎಕ್ಸ್‌ರೇ ಯಂತ್ರ (ಥುಲಿಯಂ), ಹೈ ಪವರ್ ಲೇಸರ್ (ಹೊಲ್ಮಿಯಂ), ಎಂಆರ್‌ಐ ಸ್ಕ್ಯಾನರ್ (ಗಡೊಲಿನಿಯಂ) ಹಾಗೂ ಬ್ಯಾಟರಿ ಎಲೆಕ್ಟ್ರೋಡ್‌ಗಳಲ್ಲಿ (ಲ್ಯಾಂಥನಂ) ಬಳಸಲಾಗುವ ವಿರಳ ಲೋಹಗಳು ಸದ್ಯಕ್ಕೆ ಜಾಗತಿಕ ರಾಜಕೀಯ ನಿಯಂತ್ರಣದ ಕೇಂದ್ರಬಿಂದುವಾಗುತ್ತಿವೆ. ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್, ಫೈಬರ್ ಆಪ್ಟಿಕ್ಸ್, ಸೆಮಿಕಂಡಕ್ಟರ್, ಸೂಪರ್ ಕಂಡಕ್ಟರ್‌ಗಳಿಂದ ಹಿಡಿದು ದೇಶ ರಕ್ಷಣೆಯ ಡ್ರೋನ್, ಉಪಗ್ರಹ ವ್ಯವಸ್ಥೆ, ಜೆಟ್ ವಿಮಾನ, ಸೋನಾರ್, ರಾಡಾರ್‌ಗಳಲ್ಲಿ ಇವು ವ್ಯಾಪಕವಾಗಿ ಬಳಕೆಯಾಗುತ್ತಿವೆ. ಎಲೆಕ್ಟ್ರಿಕ್ ವಾಹನಗಳ ಮೋಟರ್‌ಗಳು ಮತ್ತು ವಿಂಡ್ ಟರ್ಬೈನ್‌ಗಳಿಗೆ ಬೇಕಾದ ಶಕ್ತಿಶಾಲಿ ಶಾಶ್ವತ ಆಯಸ್ಕಾಂತ ತಯಾರಿಕೆಗೆ ವಿರಳ ಲೋಹಗಳು ಬೇಕು.

ಸದ್ಯಕ್ಕೆ ಈ ಲೋಹಗಳ ವಿಷಯದಲ್ಲಿ ಚೀನಾ ನಂಬರ್ ಒನ್ ಸ್ಥಾನದಲ್ಲಿದೆ. ವಿಶ್ವದ ಸುಮಾರು ಶೇ 90ರಷ್ಟು ವಿರಳ ಲೋಹಗಳ ಸಂಸ್ಕರಣೆ ಚೀನಾದಲ್ಲೇ ಆಗುತ್ತದೆ. ದೇಶವೊಂದರ ರಕ್ಷಣಾವಲಯ ಸದೃಢಗೊಳ್ಳಲು ವಿರಳ ಲೋಹಗಳ ಖಜಾನೆಯೇ ಇರಬೇಕು. ಈ ಲೋಹಗಳನ್ನು ತಾನೂ ಬಳಸಿಕೊಂಡು, ಇತರರಿಗೂ ಮಾರುತ್ತಿರುವ ಚೀನಾದ ಆರ್ಥಿಕತೆ ಸಶಕ್ತವಾಗಿಯೇ ಇದೆ. ಚೀನಾದ ಮೇಲಿನ ಇತರ ದೇಶಗಳ ಅವಲಂಬನೆ ಹೆಚ್ಚುತ್ತಿದೆ.

ನಮಗೀಗ ವಾತಾವರಣಕ್ಕೆ ಇಂಗಾಲದ ಡೈ ಆಕ್ಸೈಡ್ ಹೊಮ್ಮಿಸದ, ಏರುತ್ತಿರುವ ಭೂಮಿಯ ಬಿಸಿ ನಿಯಂತ್ರಿಸಬಲ್ಲ ಇಂಧನ ಮೂಲಗಳು ಬೇಕು. ಆ ದಿಸೆಯಲ್ಲಿ ಮೊನಾಜೈಟ್ ಅದಿರು ಆಪದ್ಬಾಂಧವನಂತಿದೆ. ಈ ಅದಿರಿನಲ್ಲಿ ಹೇರಳವಾಗಿ ದೊರಕುವ ವಿರಳ ಲೋಹಗಳನ್ನು ಬಳಸಿಕೊಂಡು, ಕಾರ್ಬನ್ ಸಮತೋಲನದ ವ್ಯವಸ್ಥೆಯನ್ನು ನಿರ್ಮಿಸಬಹುದಾಗಿದೆ.

ಮೊನಾಜೈಟ್‌ಯುಕ್ತ ಮರಳಿನ ಗಣಿಗಳು ನಮ್ಮಲ್ಲಿವೆ. ವಿಶ್ವದ ಒಟ್ಟು ವಿರಳ ಲೋಹಗಳ ನಿಕ್ಷೇಪದಲ್ಲಿ ಭಾರತದ ಪಾಲು ಶೇ 6ರಷ್ಟಿದೆ. ವಿರಳ ಲೋಹಗಳ ಆಕ್ಸೈಡ್ ರೂಪದ 72 ಲಕ್ಷ ಟನ್ ನಿಕ್ಷೇಪಗಳು ನಮ್ಮಲ್ಲಿವೆ. ಇದು ಜಗತ್ತಿನ ಮೂರನೇ ಅತಿದೊಡ್ಡ ನಿಕ್ಷೇಪವಾಗಿದೆ. ನಿಕ್ಷೇಪಗಳು ಹೇರಳವಾಗಿದ್ದರೂ, ಜಾಗತಿಕ ವಿರಳ ಲೋಹ ಉತ್ಪಾದನೆಯಲ್ಲಿ ಭಾರತದ ಪಾಲು ಶೇ 1ಕ್ಕಿಂತ ಕಡಿಮೆ. ಇದಕ್ಕೆ ಮುಖ್ಯ ಕಾರಣ, ಗಣಿಗಾರಿಕೆ ಮತ್ತು ಸಂಸ್ಕರಣಾ ತಂತ್ರಜ್ಞಾನದಲ್ಲಿ ನಿರೀಕ್ಷಿತ ಪ್ರಗತಿ ಆಗದಿರುವುದು. ಸದ್ಯಕ್ಕೆ ಪ್ರಾಥಮಿಕ ಸಂಸ್ಕರಣೆಯನ್ನಷ್ಟೇ ಮಾಡಬಲ್ಲ ಸಾಮರ್ಥ್ಯ ನಮ್ಮಲ್ಲಿದೆ. 2024ರಲ್ಲಿ ಚೀನಾದಲ್ಲಿ 2.7 ಲಕ್ಷ ಟನ್ ವಿರಳ ಲೋಹ ಉತ್ಪಾದನೆಯಾದರೆ, ಭಾರತದಲ್ಲಿನ ಉತ್ಪಾದನೆ ಬರೀ 2,900 ಟನ್‌ನಷ್ಟಿತ್ತು.

ಆಂಧ್ರಪ್ರದೇಶದ ಕರಾವಳಿಯುದ್ದಕ್ಕೂ ಮೊನಾಜೈಟ್ ದೊರಕುತ್ತದೆ. ಕೇರಳ, ಒಡಿಶಾ, ತಮಿಳುನಾಡು ಸಮುದ್ರ ತೀರಗಳಲ್ಲೂ ಮೊನಾಜೈಟ್ ಇದೆ. ಈ ಅದಿರಿನಲ್ಲಿ ಶೇ 50ರಿಂದ 60ರಷ್ಟು ಉತ್ತಮ ಗುಣಮಟ್ಟದ ವಿರಳ ಲೋಹಗಳಲ್ಲದೆ, ಶೇ 8–10ರಷ್ಟು ಥೋರಿಯಂ ಸಹ ದೊರಕುತ್ತದೆ. ಇದು ವಿಕಿರಣ ಹೊಮ್ಮಿಸುತ್ತದೆ ಮತ್ತು ಅಣು ವಿದ್ಯುತ್ ಉತ್ಪಾದನೆಗೆ ಬೇಕಾದ ಕಚ್ಚಾವಸ್ತುವಾದ್ದರಿಂದ, ಇದರ ಗಣಿಗಾರಿಕೆ ಪರಿಸರಸ್ನೇಹಿ ವಿಧಾನದಲ್ಲೇ ಆಗಬೇಕು. ಜಗತ್ತಿನ ಇತರ ಭಾಗದ ನಿಕ್ಷೇಪಗಳಿಗೆ ಹೋಲಿಸಿದರೆ ನಮ್ಮಲ್ಲಿ ದೊರಕುವ ಅದಿರಿನ ಪ್ರಮಾಣ ಹೆಚ್ಚು ಎಂಬ ಮಾತಿದೆ.

ಎಲೆಕ್ಟ್ರಾನಿಕ್ಸ್ ಮತ್ತು ಹಸಿರು ಇಂಧನ (ಇವಿ ಬ್ಯಾಟರಿಗಳು) ವಲಯಕ್ಕೆ ಅಗತ್ಯವಾದ, ಸಿದ್ಧಪಡಿಸಿದ ವಿರಳ ಲೋಹದ ಉತ್ಪನ್ನಗಳಿಗಾಗಿ ಈಗಲೂ ಚೀನಾವನ್ನೇ ಅವಲಂಬಿಸಿದ್ದೇವೆ. ಚೀನಾದ ಮೇಲಿನ ಅವಲಂಬನೆ ತಗ್ಗಿಸಲು ಅಮೆರಿಕ, ಆಸ್ಟ್ರೇಲಿಯಾ ಮತ್ತು ಜಪಾನ್‌ಗಳು ಈಗ ಪರ್ಯಾಯ ಮಾರ್ಗಗಳನ್ನು ಹುಡುಕುತ್ತಿವೆ. ಭಾರತಕ್ಕೂ ಮುಕ್ತ ಅವಕಾಶವಿದೆ. ಪರಿಸರಕ್ಕೆ ಹಾನಿಯಾಗದಂತೆ ನಮ್ಮ ಸಂಪನ್ಮೂಲಗಳನ್ನು ಬಳಸಿಕೊಂಡರೆ, ವಿರಳ ಲೋಹಗಳ ದಾಸ್ತಾನಿನ ವಿಷಯದಲ್ಲಿ ಜಗತ್ತಿಗೆ ಭಾರತ ಪ್ರಮುಖ ಕೇಂದ್ರವಾಗಲಿದೆ.

‘ಆತ್ಮನಿರ್ಭರ ಭಾರತ’ ಯೋಜನೆಯಡಿ ವಿರಳ ಲೋಹಗಳ ಸಂಸ್ಕರಣೆಗೆ ಒತ್ತು ನೀಡಲಾಗುತ್ತಿದೆ. ಇಲ್ಲಿಯವರೆಗೂ ಸುರಕ್ಷತೆಯ ದೃಷ್ಟಿಯಿಂದ, ವಿಕಿರಣ ಹೊಮ್ಮಿಸುವ ಮೊನಾಜೈಟ್ ಗಣಿಗಾರಿಕೆಯು ಸರ್ಕಾರಿ ಸಂಸ್ಥೆ ಐಆರ್‌ಇಎಲ್ (ಇಂಡಿಯನ್ ರೇರ್ ಅರ್ಥ್ಸ್ ಲಿಮಿಟೆಡ್) ಅಧೀನದಲ್ಲಿತ್ತು. ಇದು ಉತ್ಪಾದನೆಯ ವೇಗವನ್ನು ಮಿತಗೊಳಿಸಿತ್ತು. ಈ ವಲಯದಲ್ಲಿ ಸ್ವಾವಲಂಬನೆ ಸಾಧಿಸಲು ಭಾರತ ಸರ್ಕಾರವು ಗಣಿಗಾರಿಕೆ ಕಾಯ್ದೆಗೆ ತಿದ್ದುಪಡಿ (ಖನಿಜಗಳ ಕಾಯ್ದೆ ತಿದ್ದುಪಡಿ- 2023) ತಂದು, ವಿರಳ ಲೋಹಗಳು ಸೇರಿದಂತೆ 24 ಪ್ರಮುಖ ‘ಕ್ರಿಟಿಕಲ್ ಮಿನರಲ್ಸ್’ಗಳನ್ನು ಪಟ್ಟಿ ಮಾಡಿ, ಖಾಸಗಿ ಕಂಪನಿಗಳಿಗೆ ಗಣಿಗಾರಿಕೆ ಮಾಡಲು ಅವಕಾಶ ನೀಡಿದೆ.

ಈಗಾಗಲೇ ಅಣು ವಿದ್ಯುತ್ ಉತ್ಪಾದನೆಯ ಕ್ಷೇತ್ರಕ್ಕೆ ಖಾಸಗಿಯವರಿಗೆ ನೀಡಲಾಗುತ್ತಿರುವ ಆಹ್ವಾನಕ್ಕೆ ತಜ್ಞರಿಂದ ಮತ್ತು ಸಮಾಜ ವಿಜ್ಞಾನಿಗಳಿಂದ ವಿರೋಧ ವ್ಯಕ್ತವಾಗಿದೆ. ಸ್ವಲ್ಪ ಎಚ್ಚರ ತಪ್ಪಿದರೂ ಭಾರೀ ಅನಾಹುತವನ್ನೇ ತಂದೊಡ್ಡಬಲ್ಲ ಅಣು ವಿದ್ಯುತ್ ಉತ್ಪಾದನೆಯಲ್ಲಿ ಅವಘಡಗಳಾದರೆ ಖಾಸಗಿ ಕಂಪನಿಯನ್ನು ಪ್ರಶ್ನಿಸುವ ಅಥವಾ ಹೊಣೆಗಾರರನ್ನಾಗಿಸುವ ಯಾವ ಹಕ್ಕೂ ನಮಗಿಲ್ಲ. ಪರಿಸ್ಥಿತಿ ಹೀಗಿರುವಾಗ ಅಣುವಿದ್ಯುತ್ ಉತ್ಪಾದನೆಯಷ್ಟೇ ಸವಾಲಿನ ಹಾಗೂ ಸಂಕೀರ್ಣವಾದ ವಿರಳ ಲೋಹ ಗಣಿಗಾರಿಕೆಯನ್ನು ಖಾಸಗಿಯವರಿಗೆ ವಹಿಸುವುದು ಎಷ್ಟು ಸರಿ?

ದೇಶಕ್ಕೆ ಅಗತ್ಯವಿರುವ ಖನಿಜಗಳ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ‘ನ್ಯಾಷನಲ್ ಕ್ರಿಟಿಕಲ್ ಮಿನರಲ್ಸ್ ಮಿಷನ್’ ಎಂಬ ಪ್ರತ್ಯೇಕ ಮಿಷನ್ ಸ್ಥಾಪಿಸಲಾಗಿದೆ. ಜಾಗತಿಕ ಸಹಯೋಗಕ್ಕಾಗಿ ‘ಮಿನರಲ್ಸ್ ಸೆಕ್ಯುರಿಟಿ ಪಾರ್ಟನರ್‌ಶಿಪ್’ ಸ್ಥಾಪಿಸಿ ವಿದೇಶಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದೇವೆ. ಇದರ ಮೂಲಕ ಪೂರೈಕೆ ಸರಪಳಿಯನ್ನು ಚೀನಾದ ಹಿಡಿತದಿಂದ ಮುಕ್ತಗೊಳಿಸಿ, ಮಿತ್ರರಾಷ್ಟ್ರಗಳೊಂದಿಗೆ ತಂತ್ರಜ್ಞಾನ ಮತ್ತು ಸಂಪನ್ಮೂಲ ಹಂಚಿಕೊಳ್ಳುವುದು ಭಾರತದ ಗುರಿಯಾಗಿದೆ. ಆಸ್ಟ್ರೇಲಿಯಾ ಮತ್ತು ದಕ್ಷಿಣ ಅಮೆರಿಕದಲ್ಲಿ ಇರುವ ವಿರಳ ಲೋಹದ ನಿಕ್ಷೇಪಗಳ ಗಣಿಗಾರಿಕೆ ನಡೆಸಲು ಅಥವಾ ಪಾಲುದಾರಿಕೆ ಹೊಂದಲು ಭಾರತವು ‘ಖನಿಜ್ ಬಿದೇಶ್ ಇಂಡಿಯಾ ಲಿಮಿಟೆಡ್’ ಎಂಬ ಸಾರ್ವಜನಿಕ ವಲಯದ ಕಂಪನಿಯನ್ನು ಸ್ಥಾಪಿಸಿದ್ದು, ಈಗಾಗಲೇ ಜಾಂಬಿಯಾದಲ್ಲಿ 9,000 ಚ.ಕಿ.ಮೀ. ವ್ಯಾಪ್ತಿಯಲ್ಲಿ ಭೂಸರ್ವೇಕ್ಷಣೆ ನಡೆಸಲಾಗುತ್ತಿದೆ.

ನಮ್ಮ ಗುರಿ 2070ರ ವೇಳೆಗೆ ‘ನೆಟ್ ಜೀರೊ’ ಗುರಿ ತಲಪುವುದು. ಇದಕ್ಕೆ ಎಲೆಕ್ಟ್ರಿಕ್ ವಾಹನಗಳು, ಪವನ ಮತ್ತು ಸೌರಶಕ್ತಿ ಅತಿಮುಖ್ಯ. ಈ ವಲಯಗಳಿಗೆ ವಿರಳ ಲೋಹಗಳು ಅನಿವಾರ್ಯ. ಆದ್ದರಿಂದ, ಮುಂದಿನ ದಶಕದಲ್ಲಿ ಭಾರತವು ಬರೀ ಕಚ್ಚಾಲೋಹ ರಫ್ತು ಮಾಡುವ ದೇಶವಾಗದೆ, ಶಕ್ತಿಶಾಲಿ ಶಾಶ್ವತ ಆಯಸ್ಕಾಂತ (ಮ್ಯಾಗ್ನೆಟ್) ಮತ್ತು ಹೈ–ಟೆಕ್ ಉಪಕರಣಗಳನ್ನು ತಯಾರಿಸುವ ಕೇಂದ್ರವಾಗಬೇಕು. ವಿರಳ ಲೋಹಗಳ ಉತ್ಪಾದನೆ, ಸಂಸ್ಕರಣೆ, ದಾಸ್ತಾನು ಮತ್ತು ರಫ್ತು ಕೇವಲ ವ್ಯಾಪಾರದ ವಿಷಯವಲ್ಲ. ವಿಶ್ವದ ಒಟ್ಟು ಉತ್ಪಾದನೆಯ ಶೇ 60ರಷ್ಟನ್ನು ತಾನೇ ಉತ್ಪಾದಿಸಿ, ಶೇ 90ರಷ್ಟನ್ನು ಸಂಸ್ಕರಿಸುವ ಚೀನಾ ಅದನ್ನು ಜಾಗತಿಕ ರಾಜತಾಂತ್ರಿಕತೆಯ ಅಸ್ತ್ರವನ್ನಾಗಿಸಿಕೊಂಡಿದೆ. 2010ಲ್ಲಿ ಜಪಾನ್‌ನೊಂದಿಗೆ ಸಂಘರ್ಷ ಉಂಟಾದಾಗ ವಿರಳ ಲೋಹಗಳ ರಫ್ತನ್ನು ಸ್ಥಗಿತಗೊಳಿಸಿತ್ತು. ಈಗ ಅಮೆರಿಕದೊಂದಿಗೆ ಸುಂಕ ಸಮರದಲ್ಲಿರುವ ಚೀನಾ, ಅಮೆರಿಕಕ್ಕೆ ರಫ್ತು ನಿಲ್ಲಿಸಿದೆ.

ಅಮೆರಿಕ ಮತ್ತು ಯುರೋಪ್ ರಾಷ್ಟ್ರಗಳು ತಮ್ಮ ಹೈ–ಟೆಕ್ ಉತ್ಪನ್ನಗಳ ಉತ್ಪಾದನೆಗಾಗಿ ಚೀನಾವನ್ನು ಅವಲಂಬಿಸಿರುವುದು ಅವುಗಳ ರಾಷ್ಟ್ರೀಯ ಭದ್ರತೆಗೆ ಇರುವ ದೊಡ್ಡ ಸವಾಲಾಗಿದೆ. ಈ ಕಾರಣಕ್ಕಾಗಿಯೇ ಇಂದು ಜಗತ್ತು ‘ಚೀನಾ ಪ್ಲಸ್ ಒನ್’ ಕಾರ್ಯತಂತ್ರವನ್ನು ಅನುಸರಿಸುತ್ತಿದೆ. ಅಂದರೆ, ಪೂರೈಕೆ ಸರಪಳಿಗಾಗಿ ಚೀನಾ ಹೊರತಾದ ಪರ್ಯಾಯ ರಾಷ್ಟ್ರಗಳತ್ತ ಕಣ್ಣು ನೆಟ್ಟಿವೆ. ಇಲ್ಲಿ ಭಾರತಕ್ಕೆ ದೊಡ್ಡ ಅವಕಾಶದ ಬಾಗಿಲು ತೆರೆದಿದೆ.

ವಿರಳ ಲೋಹಗಳ ಸಂಸ್ಕರಣೆಯ ತಂತ್ರಜ್ಞಾನವನ್ನು ಪರಿಸರಕ್ಕೆ ಪೂರಕವಾಗುವಂತೆ ರೂಪಿಸುವುದು ನಮ್ಮ ವಿಜ್ಞಾನಿಗಳು, ತಂತ್ರಜ್ಞರ ಆದ್ಯತೆಯಾಗಬೇಕು. ಭಾರತವು ಈ ಕ್ಷೇತ್ರದಲ್ಲಿ ಜಾಗತಿಕ ನಾಯಕನಾಗಿ ಹೊರಹೊಮ್ಮುವ ಸಾಧ್ಯತೆಗಳಿವೆ. ಮುಂದಿನ ದಶಕದಲ್ಲಿ ವಿರಳ ಲೋಹಗಳ ಪೂರೈಕೆ ನಿಯಂತ್ರಿಸುವ ದೇಶವೇ ಜಗತ್ತಿನ ರಾಜತಾಂತ್ರಿಕ ದಿಕ್ಕನ್ನು ನಿರ್ಧರಿಸುವ ತಾಕತ್ತು ಪಡೆಯುತ್ತದೆ.

ವಾಚಕರ ವಾಣಿ

8,450 ಪ್ರಶ್ನೆ: ಮಕ್ಕಳ ಸೃಜನಶೀಲತೆಗೆ ಪೆಟ್ಟು

ಇತ್ತೀಚೆಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಉತ್ತಮ ಫಲಿತಾಂಶಕ್ಕೆಂದು 8,450 ಪ್ರಶ್ನೆಗಳಿರುವ ‘ಪ್ರಶ್ನೆಕೋಶ’ವನ್ನು ಸಿದ್ಧಪಡಿಸಿದೆ. ವಾರ್ಷಿಕ ಪರೀಕ್ಷೆಯಲ್ಲಿ ಈ ಪ್ರಶ್ನೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಶ್ನೆಗಳು ಬರುವುದಿಲ್ಲವೆಂಬುದು ಇದರ ವಿಶೇಷ. ಪರೀಕ್ಷೆಗೆ 75 ದಿನಗಳಿರುವಾಗ ಈ ರೀತಿಯ ಹೊಸ ಪ್ರಯೋಗ ಮಾಡಲು ಹೊರಟಿರುವುದು ಮಕ್ಕಳ ಸೃಜನಶೀಲತೆಗೆ ಪೆಟ್ಟು ನೀಡಲಿದೆ. ವಿದ್ಯಾರ್ಥಿಗಳ ವಿಷಯ ಜ್ಞಾನಕ್ಕಿಂತ ನೆನಪಿನ ಶಕ್ತಿಗೆ ಆದ್ಯತೆ ನೀಡಿದಂತಾಗುತ್ತದೆ. ಪ್ರಶ್ನೆಕೋಶದಲ್ಲಿನ ಪ್ರಶ್ನೆಗಳಿಗೆ ಮಾತ್ರ ಪ್ರಾಮುಖ್ಯತೆ ನೀಡುವುದರಿಂದ ಕಂಠಪಾಠಕ್ಕೆ ಉತ್ತೇಜನ ನೀಡಿದಂತಾಗುತ್ತದೆ. ಇದರಿಂದ ಭವಿಷ್ಯದ ಸವಾಲು ಎದುರಿಸುವ ಮಕ್ಕಳ ಆಲೋಚನಾತ್ಮಕ, ವಿಶ್ಲೇಷಣಾತ್ಮಕ ಅಂಶವು ಕಡೆಗಣಿಸಲ್ಪಡುತ್ತದೆ. ಇಂತಹ ಹೊಸ ಪ್ರಯೋಗದಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶವೇನೋ ಹೆಚ್ಚಾಗಬಹುದು. ಆದರೆ, ಮಕ್ಕಳ ಪ್ರತಿಭೆಗೆ ಧಕ್ಕೆಯಾಗಲಿದೆ.

ಸುರೇಂದ್ರ ಪೈ, ಭಟ್ಕಳ

ರಿಪಬ್ಲಿಕ್ ಬಳ್ಳಾರಿ: ಸರ್ಕಾರಗಳಿಗೆ ಸವಾಲು

ಕಳೆದೆರಡು ದಶಕಗಳಿಂದ ಬಳ್ಳಾರಿಯ ರಾಜಕಾರಣವು ರಾಜ್ಯದಲ್ಲಿ ಆಡಳಿತ ನಡೆಸುವ ಸರ್ಕಾರಗಳ ದಿಕ್ಕನ್ನು ಕಕ್ಕಾಬಿಕ್ಕಿಯಾಗಿಸಿದೆ. ಬಳ್ಳಾರಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸರಿಪಡಿಸಲು ಅಧಿಕಾರದ ಚುಕ್ಕಾಣಿ ಹಿಡಿಯುವ ಸರ್ಕಾರಗಳು ತಿಣುಕಾಡುತ್ತವೆ. ಈ ರಾಜಕೀಯ ಪ್ರಲಾಪವು ಉನ್ನತ ಅಧಿಕಾರಿಗಳಿಗೂ ನುಂಗಲಾರದ ಬಿಸಿತುಪ್ಪವಾಗಿದೆ. ಬಳ್ಳಾರಿಯ ಅಭಿವೃದ್ಧಿಗೂ, ಅಲ್ಲಿರುವವರ ಸಂಪತ್ತಿಗೂ ಬಹಳ ವ್ಯತ್ಯಾಸವಿದೆ. ಅಭಿವೃದ್ಧಿ ಮಾಡಲು ರಾಜಕಾರಣ ಒಳ್ಳೆಯದು. ಆದರೆ, ರಾಜಕಾರಣಿಗಳು ಒಳ್ಳೆಯವರಲ್ಲ ಎಂಬ ಮಾತು ದಿಟವಾಗಿದೆ.

ಗಾದಿಲಿಂಗಪ್ಪ, ಕುರುಗೋಡು

ಬುಟ್ಟಿ ಹೆಣೆಯುವವರ ಬದುಕು ಬರಿದು

ಬಿದಿರಿನೊಂದಿಗೆ ಬೆಸೆದುಕೊಂಡಿರುವ ಮೇದಾರರ ಬದುಕು ಅತಂತ್ರ ಸ್ಥಿತಿಯಲ್ಲಿದೆ. ತಲೆತಲಾಂತರದಿಂದ ನಂಬಿಕೊಂಡು ಬಂದ ಇವರ ಕುಲಕಸುಬು ಕೇವಲ ಕಲೆಯಲ್ಲ, ಅದು ಅವರ ಉಸಿರು. ಆದರೆ, ಇಂದು ಬಿದಿರಿನ ಅಲಭ್ಯತೆ ಮೇದಾರರ ಬದುಕಿಗೆ ತೊಡಕಾಗಿದೆ. ಪ್ರಸ್ತುತ ಕಾಡಿನಲ್ಲಿ ಬಿದಿರು ಸಿಗುತ್ತಿಲ್ಲ. ಮಾರುಕಟ್ಟೆಯಲ್ಲಿನ ಬಿದಿರಿಗೆ ಹೆಚ್ಚಿನ ಬೆಲೆ ತೆರಲಾಗದೆ ಈ ಸಮುದಾಯ ಕಣ್ಣೀರಿನಲ್ಲಿ ಕೈತೊಳೆಯುತ್ತಿದೆ.

ಪ್ಲಾಸ್ಟಿಕ್ ಅಬ್ಬರದ ನಡುವೆಯೂ ಪರಿಸರಸ್ನೇಹಿ ಬುಟ್ಟಿ, ಮೊರ ತಯಾರಿಸುವ ಇವರ ಕೈಗಳಿಗೆ ಕೆಲಸವಿಲ್ಲದಂತಾಗಿದೆ. ಹಸಿದ ಹೊಟ್ಟೆಗಳು ಸರ್ಕಾರದ ಪ್ರೋತ್ಸಾಹಧನ ಮತ್ತು ಸೌಲಭ್ಯದ ನಿರೀಕ್ಷೆಯಲ್ಲಿವೆ. ಈ ಪಾರಂಪರಿಕ ಕಲೆಯನ್ನು ಉಳಿಸಲು ಸರ್ಕಾರವು ರಿಯಾಯಿತಿ ದರದಲ್ಲಿ ಬಿದಿರು ಪೂರೈಸಿ, ಅವರಿಗೆ ಬೆನ್ನೆಲುಬಾಗಿ ನಿಲ್ಲಬೇಕಿದೆ. ಅವರ ಬದುಕು ಕಮರುವ ಮುನ್ನಾ ಈ ಶ್ರಮಜೀವಿಗಳಿಗೆ ಆಸರೆ ಕಲ್ಪಿಸಬೇಕಿದೆ.

ಬಸವಚೇತನ ಎಂ. ಹೂಗಾರ್, ಬೀದರ್

ವ್ಯಾವಹಾರಿಕ ಶಿಕ್ಷಣ ಸಮಾಜಕ್ಕೆ ಅಪಾಯ

ಶಿಕ್ಷಣ ಜ್ಞಾನದ ಬೆಳಕು. ಅದು ನಮ್ಮನ್ನು ಅಜ್ಞಾನದ ಕತ್ತಲೆಯಿಂದ ಹೊರತಂದು, ಉತ್ತಮ ವ್ಯಕ್ತಿತ್ವವನ್ನು ರೂಪಿಸುತ್ತದೆ. ಸಮಾಜದ ಬೆಳವಣಿಗೆ ಮತ್ತು ದೇಶದ ಅಭಿವೃದ್ಧಿಗೆ ನೆರವಾಗುತ್ತದೆ. ವಿಮರ್ಶಾತ್ಮಕ ಚಿಂತನೆ, ಸೃಜನಶೀಲತೆ ಮತ್ತು ಆತ್ಮವಿಶ್ವಾಸವನ್ನೂ ಬೆಳೆಸುತ್ತದೆ. ಇದು ಕೇವಲ ಶಾಲೆಗಳಲ್ಲಿ ಕಲಿಯುವುದಲ್ಲ; ಬದಲಿಗೆ ಜೀವನಪೂರ್ತಿ ಸಾಗುವ ಒಂದು ಪ್ರಕ್ರಿಯೆ. ಶಿಕ್ಷಣವು ಜಗತ್ತನ್ನು ಬದಲಾಯಿಸಲು ಬಳಸಬಹುದಾದ ಅತ್ಯಂತ ಶಕ್ತಿಶಾಲಿ ಅಸ್ತ್ರ. ಆದರೆ, ಬದಲಾಗುತ್ತಿರುವ ರಾಜಕೀಯ ವಿದ್ಯಮಾನಗಳಿಂದ ಶಿಕ್ಷಣ ಕೇವಲ ವ್ಯಾವಹಾರಿಕವಾಗಿದೆ. ಶಿಕ್ಷಣಕ್ಕಿಂತ ವಿನಯ, ವಿನಮ್ರತೆ, ಉತ್ತಮ ವ್ಯಕ್ತಿತ್ವ ಹೊಂದಿದವರು ಉತ್ತಮರು ಎನ್ನುವ ಕಾಲವೂ ಇತ್ತು. ಪ್ರಸ್ತುತ ಕಲಿಕೆಯು ಪಠ್ಯ ಚಟುವಟಿಕೆಗಳಿಗೆ ಸೀಮಿತವಾಗದೆ ನೈತಿಕ ಮೌಲ್ಯವನ್ನು ಬಿತ್ತಬೇಕಿದೆ.

ಶೇಖರ್ ಕೆ., ಕೋಳೂರು

ಸಾವಿನ ಪರಿಹಾರದಲ್ಲೂ ರಾಜಕೀಯ

ಪ್ರಸ್ತುತ ಸಾವಿನ ಪರಿಹಾರಕ್ಕೆ ಧರ್ಮ ಮತ್ತು ರಾಜಕೀಯ ಮೆತ್ತಿಕೊಂಡಿದೆ. ರಾಜಕೀಯ ಅಥವಾ ಧಾರ್ಮಿಕ ವಿಷಯಕ್ಕೆ ಸಂಬಂಧಿಸಿದಂತೆ ಸಂಭವಿಸುವ ಸಾವುಗಳಿಗೆ ಲಕ್ಷದಿಂದ ಕೋಟಿ ರೂಪಾಯಿವರೆಗೂ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ಸಿಗುತ್ತದೆ. ಆದರೆ, ಆಕಸ್ಮಿಕ ಸಾವು ಅಥವಾ ರಸ್ತೆ ಅಪಘಾತದಲ್ಲಿ ಮೃತಪಟ್ಟವರಿಗೆ ಸಿಗುವ ಪರಿಹಾರ ಮೊತ್ತ ಅತ್ಯಲ್ಪ. ಆಪ್ತೇಷ್ಟರು ಮರಣ ಹೊಂದಿದಾಗ ಸೃಷ್ಟಿಯಾಗುವ ಶೂನ್ಯವನ್ನು ಸಹಿಸಿಕೊಳ್ಳುವುದು ಕಷ್ಟಕರ. ಆಗಿದ್ದರೆ ಸಾವು ಅಸಹಜವೇ? ಜೀವನದ ಭಾಗವಾಗಿ ಸಾವನ್ನು ಅನುಸಂಧಾನಿಸದಿರುವುದೇ ಅಸಹಜ. ಹಾಗಾಗಿ, ಪರಿಹಾರ ವಿತರಣೆಯಲ್ಲಿ ತಾರತಮ್ಯ ಸಲ್ಲದು.

ರಾಹುಲ್ ಎಸ್.ಎಚ್., ಧಾರವಾಡ

ಧರ್ಮಸ್ಥಳಕ್ಕೆ ರೈಲು ಮಾರ್ಗ ಅಳವಡಿಸಿ

ಬೆಂಗಳೂರು, ಹಾಸನ, ಸಕಲೇಶಪುರ, ಕುಕ್ಕೆ ಸುಬ್ರಮಣ್ಯ ಮಾರ್ಗವಾಗಿ ಧರ್ಮಸ್ಥಳಕ್ಕೆ ಪ್ರತಿದಿನ ಸಾವಿರಾರು ಭಕ್ತರು ಬಸ್ಸನ್ನೇ ನೆಚ್ಚಿಕೊಂಡು ಭೇಟಿ ನೀಡುತ್ತಿರುವುದು ಸರಿಯಷ್ಟೆ. ಆದರೆ, ಸುಬ್ರಮಣ್ಯ ರಸ್ತೆ ತನಕವಷ್ಟೆ ರೈಲಿನ ಸೌಕರ್ಯವಿದ್ದು, ಮುಂದುವರಿದು ಮಂಗಳೂರು ಮಾರ್ಗವಾಗಿ ರೈಲು ಉಡುಪಿ, ಮೂಕಾಂಬಿಕಾ ರಸ್ತೆ, ಮುರುಡೇಶ್ವರ ಹಾಗೂ ಗೋಕರ್ಣದ ಮೂಲಕ ಕಾರವಾರ ತಲಪುತ್ತದೆ. ಸುಬ್ರಮಣ್ಯ ರಸ್ತೆಯಿಂದ ಧರ್ಮಸ್ಥಳಕ್ಕೆ 54 ಕಿ.ಮೀ. ದೂರವಿದೆ. ಭಾರತೀಯ ರೈಲ್ವೆ ಇಲಾಖೆಯು ಸುಬ್ರಮಣ್ಯ ರಸ್ತೆಯಿಂದ ಧರ್ಮಸ್ಥಳಕ್ಕೆ ಹೊಸ ರೈಲು ಮಾರ್ಗ ಅಳವಡಿಸಿದರೆ ಬೆಂಗಳೂರು ಹಾಗೂ ಇತರ ಊರುಗಳಿಂದ ಬರುವ ಸಾವಿರಾರು ಭಕ್ತರಿಗೆ ಅನುಕೂಲವಾಗಲಿದೆ.

ಬೆಂ.ಮು. ಮಾರುತಿ, ಬೆಂಗಳೂರು

ಚುರುಮುರಿ

ಮನಸ್ಸಲ್ಲೇನಿದೆ?

● ಬಿ.ಎನ್. ಮಲ್ಲೇಶ್

‘ಡಿಸಿಎಂ ಡಿಕೆಶಿ ಸಾಹೇಬ್ರು ಮೊನ್ನೆ ಸಿಎಂ ಸಾಹೇಬ್ರಿಗೆ ನಗ್ತಾ ನಗ್ತಾ ಕೇಕ್ ತಿನ್ನಿಸಿದ್ರಂತಪ... ಅವರ ಮನಸಲ್ಲಿ ಏನಿತ್ತೋ...’ ಹರಟೆಕಟ್ಟೆಯಲ್ಲಿ ದುಬ್ಬೀರ ಒಳ ಮನಸ್ಸಿನ ವಿಷಯ ಪ್ರಸ್ತಾಪಿಸಿದ.

‘ಇನ್ನೇನಿರುತ್ತೆ? ದಾಖಲೆ ಮಾಡಿದ್ದಾತು, ಇನ್ನಾದ್ರೂ ಕುರ್ಚಿ ಬಿಟ್ಟು ಕೊಡಿ ಅಂತ ಕೇಕ್ ತಿನ್ನಿಸಿರಬೇಕು... ಮುಖ ನೋಡಿದ್ರೆ ಮನಸ್ಸಲ್ಲಿ ಏನಿದೆ ಅಂತ ಗೊತ್ತಾಗಲ್ವಾ?’ ಗುಡ್ಡೆ ಮಾರ್ಮಿಕವಾಗಿ ನಕ್ಕ.

‘ಮುಖ ನೋಡಿದ್ರೆ ಮನಸ್ಸಲ್ಲಿರೋದು ಗೊತ್ತಾಗುತ್ತಾ? ನಿನ್ತೆಲಿ... ಈಗ ಟ್ರಂಪ್ ದಿನಕ್ಕೊಂತರಾ ಮುಖ ಮಾಡ್ತಾರೆ, ಅವರ ಮನಸ್ಸಲ್ಲಿ ಏನಿದೆ ಹೇಳ್ತೀಯ?’ ಗುಡ್ಡೆ ಸವಾಲು ಹಾಕಿದ.

‘ನೊಬೆಲ್ ಶಾಂತಿ ಪ್ರಶಸ್ತಿ ಒಂದೇ ಅವರ ಮುಖ, ಮನಸ್ಸಲ್ಲಿರೋದು... ಸರಿನಾ?’

‘ನೊಬೆಲ್ ಅಶಾಂತಿ ಪ್ರಶಸ್ತಿ ಅಂತ ಏನರೆ ಇದ್ರೆ ಅವರಿಗೆ ಕೊಡಬೋದು ನೋಡು...’ ಮಂಜಮ್ಮ ನಕ್ಕಳು.

‘ಈಗ ನಾಯಿಗಳು ಯಾವಾಗ ಕಚ್ತಾವೆ ಹೇಳಕ್ಕೆ ಬರಲ್ಲ ಅಂತ ಕೋರ್ಟ್ ಹೇಳಿದೆ, ನೀನು ನಾಯಿಗಳ ಮುಖ ನೋಡಿ ಯಾವ ನಾಯಿ ಕಚ್ಚುತ್ತೆ, ಯಾವುದು ಕಚ್ಚಲ್ಲ ಹೇಳ್ತೀಯ?’

‘ಅದು ಕಷ್ಟ...’ ಎಂದ ತೆಪರೇಸಿ.

‘ಹೋಗ್ಲಿ, ಕೈ ಕಮಾಂಡು ಡಿಕೆಶಿ ಸಾಹೇಬ್ರನ್ನ ಅಸ್ಸಾಂ ಚುನಾವಣೆಗೆ ಉಸ್ತುವಾರಿ ಮಾಡಿದೆ, ಅದರ ಮನಸ್ಸಲ್ಲೇನಿದೆ ಹೇಳು ನೋಡಾಣ...’

‘ಕರ್ನಾಟಕದ ಕುರ್ಚಿ ಕದನಕ್ಕೆ ವಿರಾಮ ಹಾಕೋ ಪ್ಲಾನು ಅನ್ಸುತ್ತೆ...’

‘ಸರಿ, ನಮ್ ಕುಮಾರಣ್ಣ ನಂದೂ ಗಣಿ ರೆಡ್ಡಿ ಗಲಾಟೆ ಹಳೆ ಕಥೆ ಅಂದ್ರಂತಲ್ಲ, ಅವರ ಮನಸ್ಸಲ್ಲಿ ಏನಿರಬಹುದು?’

‘ಹೊಸ ಕತೆ ಶುರು ಮಾಡೋ ಪ್ಲಾನ್ ಇರಬಹುದು...’

‘ಈಗ ಅದೆಲ್ಲ ಬೇಡ, ನಮ್ ಸಿದ್ರಾಮಣ್ಣ ಒಂದ್ಸಲ ನಾನೇ ಐದು ವರ್ಷ ಸಿಎಂ ಅಂತಾರೆ, ಇನ್ನೊಂದ್ಸಲ ಹೈಕಮಾಂಡ್ ಹೇಳಿದ್ದೇ ಫೈನಲ್ ಅಂತಾರೆ, ಮೊನ್ನೆ ‘ಎಷ್ಟು ದಿನ ಇರ್ತೀನೋ ಗೊತ್ತಿಲ್ಲ’ ಅಂದ್ರು... ಅವರ ಮನಸ್ಸಲ್ಲಿ ನಿಜವಾಗ್ಲೂ ಏನಿದೆ ಹೇಳ್ತೀಯ?’ ಮಂಜಮ್ಮ ಕೇಳಿದಳು.

‘ದೇವ್ರಾಣೆ ಗೊತ್ತಿಲ್ಲ, ನಾ ಸೋತೆ’ ಎಂದ ತೆಪರೇಸಿ. ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

ಸಂಗತ

ಪ್ರೇಮ ವಿವಾಹ: ದೃಷ್ಟಿಕೋನ ಬದಲಾಗಲಿ

ಪ್ರೇಮಿಗಳಿಗೆ ತಮ್ಮ ಪ್ರೇಮವನ್ನು ಹೆತ್ತವರಲ್ಲಿ ಹೇಳಿಕೊಳ್ಳುವ ಧೈರ್ಯ ಅಗತ್ಯ. ಪ್ರೇಮವನ್ನು ಮುಚ್ಚಿಡುವುದು ಮುಜುಗರಕ್ಕೆ, ಅನಾಹುತಕ್ಕೆ ಕಾರಣ ಆಗಬಹುದು.

● ಸಿದ್ದಯ್ಯ ಹಿರೇಮಠ

‘ಮದುವೆಯ ದಿನ ಅಥವಾ ಮುನ್ನಾದಿನ ಕಲ್ಯಾಣಮಂಟಪದಿಂದ ವಧು ಪರಾರಿ. ದೀರ್ಘಕಾಲದ ಪ್ರೇಮಿಯೊಂದಿಗೆ ದೇವಸ್ಥಾನದಲ್ಲಿ ಮದುವೆ’ ಎಂಬಂಥ ಘಟನೆಗಳು ಆಗಾಗ್ಗೆ ನಡೆಯುತ್ತಲೇ ಇವೆ. ಪ್ರೇಮಿಗಳು ತಾವು ಸಂಕಷ್ಟ ಅನುಭವಿಸುತ್ತಲೇ, ಉಳಿದವರನ್ನೂ ತಲ್ಲಣಕ್ಕೆ ಒಳಗುಮಾಡುವ ಪ್ರಸಂಗಗಳು ಒಂದೆರಡಲ್ಲ.

ಮದುವೆ ಮಂಟಪದಿಂದ ವರ ಪರಾರಿಯಾಗಿ ಇಷ್ಟಪಟ್ಟವಳೊಂದಿಗೆ ಸಪ್ತಪದಿ ತುಳಿದ; ಪ್ರೀತಿಸಿದ ಯುವಕ ಕೈಕೊಟ್ಟು ಮತ್ತೊಬ್ಬಳನ್ನು ಮದುವೆಯಾಗಲು ಮುಂದಾದಾಗ ಯುವತಿ ಅಡ್ಡಿಪಡಿಸಿದಳು ಎನ್ನುವಂಥ ಪ್ರಸಂಗಗಳೂ ನಡೆಯುತ್ತಿವೆ. ಕೆಲವು ಯುವತಿಯರು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ, ಮದುವೆ ಆದ ಹೊಸದರಲ್ಲೇ ಗಂಡನ ಮನೆಯಿಂದ ಪರಾರಿಯಾಗಿ ಪ್ರಿಯಕರನನ್ನು ವರಿಸಿದಂಥ ಬೆಳವಣಿಗೆಗಳು ಈಚೆಗೆ ಕಂಡುಬರುತ್ತಿವೆ.

ಮದುವೆಯ ಹಿಂದಿನ ದಿನ ವಧುವೊಬ್ಬಳು ಪರಾರಿ ಆಗಿದ್ದರಿಂದ, ಮದುವೆಯ ಸಿದ್ಧತೆ ಹಾಗೂ ಕಲ್ಯಾಣ ಮಂಟಪಕ್ಕೆ ಮಾಡಲಾದ ವೆಚ್ಚವನ್ನೆಲ್ಲ ಭರಿಸುವಂತೆ ವರನ ಕಡೆಯವರು ಹೆಣ್ಣಿನ ತಂದೆ–ತಾಯಿಗೆ ಕಾಟ ಕೊಟ್ಟ ಘಟನೆ ಇತ್ತೀಚೆಗಷ್ಟೇ ನಡೆದಿದೆ.

ಆರತಕ್ಷತೆಗೆ ಮೊದಲೇ ಮಗಳು ಪರಾರಿಯಾಗಿದ್ದರಿಂದ ಅವಮಾನ ತಾಳಲಾರದೇ ತಂದೆ–ತಾಯಿ ಮತ್ತು ಮನೆಯವರು ಸಾಕಷ್ಟು ಮಾನಸಿಕ ವೇದನೆ ಅನುಭವಿಸಿದರು, ವಧು ತಾಳಿ ಕಟ್ಟುವುದಕ್ಕೆ ಮೊದಲು, ಕೊನೆಯ ಕ್ಷಣದಲ್ಲಿ ಹಸೆಮಣೆಯಿಂದ ಎದ್ದುಹೋಗಿ ಪ್ರಿಯಕರನನ್ನು ವರಿಸಿದ್ದರಿಂದ ಮದುವೆಯಾಗದೇ ಬರಿಗೈಯಲ್ಲಿ ಹಿಂದಿರುಗಿದ ವರನಿಗೆ ವರ್ಷಗಳು ಕಳೆದರೂ ಮದುವೆಯಾಗುವ ಯೋಗ ಕೂಡಿಬಂದಿಲ್ಲ ಎಂಬ ಸುದ್ದಿಗಳೂ ವರದಿಯಾಗಿವೆ.

ಕಳೆದ ವರ್ಷವಷ್ಟೇ ಗದಗ ಜಿಲ್ಲೆಯ ಗ್ರಾಮವೊಂದರಲ್ಲಿ ನಗುತ್ತಲೇ ನಿಶ್ಚಿತಾರ್ಥ ಮಾಡಿಕೊಂಡಿದ್ದ ವಿದ್ಯಾವಂತ ಯುವತಿಯೊಬ್ಬಳು, ಮೂರು ತಿಂಗಳು ಆ ಯುವಕನೊಂದಿಗೆ ಮೊಬೈಲ್ ಫೋನ್‌ನಲ್ಲಿ ಮಾತನಾಡಿದ್ದಳು. ಯುವಕ ಕರೆ ಮಾಡುವುದು ಸ್ವಲ್ಪ ತಡವಾದರೂ ಮುನಿಸಿಕೊಳ್ಳುತ್ತಿದ್ದಳು. ‘ವಿಡಿಯೊ ಕಾಲ್ ಮಾಡಿ ಮುಖ ತೋರಿಸದಿದ್ದರೆ ಊಟವನ್ನೇ ಮಾಡುವುದಿಲ್ಲ’ ಎಂದು ತನ್ನೊಂದಿಗೆ ಹಸೆಮಣೆ ಏರಲು ಸನ್ನದ್ಧನಾಗಿದ್ದ ಆ ಯುವಕನಿಗೆ ಹೇಳುತ್ತಿದ್ದಳು. ಆಕೆ, ಒಂದು ದಿನ ಮನೆಯಿಂದ ಇದ್ದಕ್ಕಿದ್ದಂತೆ ನಾಪತ್ತೆಯಾಗಿ ಬಾಲ್ಯದ ಗೆಳೆಯನೊಂದಿಗೆ ಪಕ್ಕದೂರಿನ ದೇವಸ್ಥಾನದಲ್ಲಿ ಮದುವೆ ಆಗಿದ್ದಳು. ಪೊಲೀಸ್ ಠಾಣೆಗೆ ತೆರಳಿ ರಕ್ಷಣೆ ನೀಡುವಂತೆ ಕೋರಿದ್ದಳು.

ಹೆತ್ತು, ಹೊತ್ತು, ಸಾಕಿ, ಸಲಹಿದ ಆಕೆಯ ಮನೆಯವರಿಗೆ ಇದರಿಂದ ತೀವ್ರ ಆಘಾತ ಆಗಿತ್ತು. ಮೂರು ತಿಂಗಳ ಹಿಂದಷ್ಟೇ ಹೆಣ್ಣು ನೋಡಲು ಹೋಗಿ, ‘ಒಪ್ಪಿಗೆ ಆಗಿದೆ’ ಎಂದು ತಿಳಿಸಿದ ನಂತರವಷ್ಟೇ ಊರವರನ್ನೆಲ್ಲ ಕರೆದೊಯ್ದು ನಿಶ್ಚಿತಾರ್ಥ ಮಾಡಿಕೊಂಡು, ಮದುವೆಗೆ ಸಿದ್ಧತೆ ನಡೆಸುತ್ತಿದ್ದ ಯುವಕ ಮಾನಸಿಕವಾಗಿ ಗಾಸಿಗೊಂಡಿದ್ದ. ‘ಮೊದಲೇ ತಿಳಿಸಿದ್ದರೆ ಮಗಳ ಪ್ರೇಮವಿವಾಹಕ್ಕೆ ನಾವು ಅಡ್ಡಿಪಡಿಸುತ್ತಲೇ ಇರಲಿಲ್ಲ’ ಎಂದು ಯುವತಿಯ ಪಾಲಕರು ಹೇಳಿದರೆ, ‘ಪ್ರೀತಿಯ ವಿಷಯವನ್ನು ತಿಳಿಸಿದ್ದರೆ ನಾವಾದರೂ ಯಾಕಾಗಿ ನಿಶ್ಚಿತಾರ್ಥದವರೆಗೆ ಹೋಗುತ್ತಿದ್ದೆವು?’ ಎಂದು ಯುವಕನ ಕಡೆಯವರು ಪ್ರಶ್ನಿಸಿದ್ದರು.

ತಮ್ಮ ಪ್ರೇಮದ ವಿಷಯವನ್ನು ಬಹಿರಂಗಪಡಿಸದೆ, ಮನೆಯವರ ಒತ್ತಾಯಕ್ಕೆ ಕಟ್ಟುಬಿದ್ದು ಮದುವೆಗೆ ಒಪ್ಪುವ ತರುಣ, ತರುಣಿಯರಿದ್ದಾರೆ. ಮದುವೆ ನಿಶ್ಚಯವಾದ ನಂತರವೂ, ತಾಳಿ ಕಟ್ಟುವ ಕೊನೆಯ ಕ್ಷಣದವರೆಗೂ ಏನನ್ನೂ ಹೇಳದೆ, ಇದ್ದಕ್ಕಿದ್ದಂತೆ ಪರಾರಿಯಾಗಿ ಪ್ರೇಮಿಯೊಂದಿಗೆ ಮದುವೆಯಾಗುವ ಬದಲು, ಮೊದಲೇ ಧೈರ್ಯದಿಂದ ನಿಜಸ್ಥಿತಿ ಹೇಳಿದಲ್ಲಿ ಮುಂದಾಗುವ ಅನಾಹುತ, ಮುಜುಗರವನ್ನು ತಪ್ಪಿಸಲು ಸಾಧ್ಯವಿದೆ.

21 ದಾಟಿದ ಯುವಕ, 18 ದಾಟಿದ ಯುವತಿ ಜೀವನ ಸಂಗಾತಿಯ ಆಯ್ಕೆ ಮತ್ತು ಪ್ರೇಮದ ವಿಷಯವನ್ನು ಬಹಿರಂಗಪಡಿಸುವ ವಿಷಯದಲ್ಲಿ ವಿವೇಚನೆಯ ಹೆಜ್ಜೆ ಇರಿಸಿದಲ್ಲಿ ಅನಾಹುತಕ್ಕೆ ಆಸ್ಪದ ಕೊಡದೆ ಜೀವನ ನಡೆಸಲು ಅವಕಾಶ ಇದೆ. ಆದರೆ, ದುಡುಕುತನ ಅಥವಾ ಭಯ, ಇಲ್ಲಸಲ್ಲದ ಬೆಳವಣಿಗೆಗಳಿಗೆ ಕಾರಣವಾಗುತ್ತಿದೆ.

ಪ್ರೇಮ ವಿವಾಹಗಳು ಈಗ ಅಚ್ಚರಿಯಾಗೇನೂ ಉಳಿದಿಲ್ಲ. ಅನ್ಯಜಾತಿ, ಅನ್ಯಧರ್ಮೀಯ ಯುವಕ–ಯುವತಿಯರು ಪ್ರೀತಿಸುತ್ತಿದ್ದಾಗ, ಅವರ ಮದುವೆಗೆ ಅನೇಕರು ಬೆಂಬಲವನ್ನೂ ಸೂಚಿಸುತ್ತಿದ್ದಾರೆ. ಕಾನೂನಿನ ರಕ್ಷಣೆಯೂ ಪ್ರೇಮಿಗಳಿಗೆ ಸಿಗುತ್ತಿದ್ದು, ಪ್ರೇಮವಿವಾಹಗಳ ಸಂಖ್ಯೆ ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಿದೆ.

ದುರದೃಷ್ಟವಶಾತ್, ಮರ್ಯಾದೆಗೇಡು ಹತ್ಯೆಯಂಥ ಹೇಯಕೃತ್ಯಗಳೂ ನಡೆಯುತ್ತಿವೆ. ಹುಬ್ಬಳ್ಳಿ ತಾಲ್ಲೂಕಿನಲ್ಲಿ ನಾಗರಿಕ ಸಮಾಜ ತಲೆ ತಗ್ಗಿಸುವಂಥ ಕೃತ್ಯ ನಡೆದಿದೆ. ಸ್ವಜಾತಿಯ ಯುವಕ–ಯುವತಿ ಮನೆಯಿಂದ ಹೊರಹೋಗಿ ಪ್ರೇಮವಿವಾಹ ಮಾಡಿಕೊಂಡು, ಪೊಲೀಸ್ ಠಾಣೆಗೆ ಬಂದು ರಕ್ಷಣೆ ಕೋರಿದ ಸಂದರ್ಭದಲ್ಲಿ, ಪ್ರೇಮಿಗಳನ್ನು ಬೆಂಬಲಿಸಿದ ಆರೋಪದಲ್ಲಿ ಸಂಬಂಧವೇ ಇಲ್ಲದ ಇಬ್ಬರನ್ನು ಯುವತಿಯ ಸಂಬಂಧಿಗಳು ಕೊಚ್ಚಿ ಕೊಲೆ ಮಾಡಿರುವ ಘಟನೆ ಭದ್ರಾವತಿಯಲ್ಲಿ ಈಚೆಗಷ್ಟೇ ಸಂಭವಿಸಿದೆ.

ಮೆಚ್ಚಿದ ಹುಡುಗ ಅಥವಾ ಹುಡುಗಿಯೊಂದಿಗೆ ಜೀವನ ನಡೆಸಬೇಕು ಎಂದು ಬಯಸುವವರು ಹೃದಯದಲ್ಲಿ ಹುದುಗಿದ ಪ್ರೇಮದ ಬಗ್ಗೆ ಪಾಲಕರೆದುರು ಹೇಳುವ ಧೈರ್ಯ ಮಾಡಬೇಕು. ಈ ಕುರಿತ ನಿರ್ಧಾರ ಅಚಲ ಎಂಬುದನ್ನೂ ಸ್ಪಷ್ಟಪಡಿಸಬೇಕು. ಅದು ಆಗದೆ ಹೋದರೆ, ಪ್ರೇಮ ವಿವಾಹದ ಬಗೆಗಿನ ಸಂಕುಚಿತ ದೃಷ್ಟಿಕೋನಗಳಿಗೆ ಒತ್ತಾಸೆ ನೀಡಿದಂತಾಗುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

'ಹ್ಯಾಟ್ರಿಕ್' ಸಂಸದರ ಆಸ್ತಿ ಶೇ 110 ಏರಿಕೆ



ಪ್ರಜಾವಾಣಿ ವಾರ್ತೆ

2014, 2019 ಮತ್ತು 2024ರ ಲೋಕಸಭಾ ಚುನಾವಣೆಗಳಲ್ಲಿ 103 ಸಂಸದರು ಸತತವಾಗಿ ಆಯ್ಕೆಯಾಗಿದ್ದಾರೆ. ಇವರ ಪೈಕಿ 102 ಸಂಸದರ ಆಸ್ತಿ ಮೌಲ್ಯವು ಈ ಹತ್ತು ವರ್ಷಗಳಲ್ಲಿ ಎಷ್ಟು ಏರಿಕೆಯಾಗಿದೆ ಎನ್ನುವುದರ ಬಗ್ಗೆ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಮತ್ತು ನ್ಯಾಷನಲ್ ಎಲೆಕ್ಷನ್ ವಾಚ್ ವರದಿ ಪ್ರಕಟಿಸಿವೆ. ಸಂಸದರು ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದ ಪ್ರಮಾಣ ಪತ್ರಗಳ ದತ್ತಾಂಶವನ್ನೇ ಮಾಹಿತಿ ಮೂಲವನ್ನಾಗಿ ಪರಿಗಣಿಸಿ ವಿಶ್ಲೇಷಣೆ ಮಾಡಲಾಗಿದೆ. ಉತ್ತರ ಪ್ರದೇಶದ ಅಕ್ಬರಪುರ ಕ್ಷೇತ್ರದ ಸಂಸದ ದೇವೇಂದ್ರ ಸಿಂಗ್ ಅಲಿಯಾಸ್ ಭೋಲಾ ಸಿಂಗ್ ಅವರ 2019ರ ಪ್ರಮಾಣ ಪತ್ರದ ದತ್ತಾಂಶ ಲಭ್ಯವಾಗದೇ ಇದ್ದುದರಿಂದ ಅವರನ್ನು ಈ ವರದಿಯಲ್ಲಿ ಒಳಗೊಂಡಿಲ್ಲ.

ಸತತ ಮೂರು ಚುನಾವಣೆಗಳಲ್ಲಿ ಗೆಲ್ಲುವ ಹೊತ್ತಿಗೆ 102 ಸಂಸದರ ಆಸ್ತಿ ಮೌಲ್ಯ ಸರಾಸರಿ ₹33.13 ಕೋಟಿಯಷ್ಟು ಹೆಚ್ಚಾಗಿದೆ. ಶೇಕಡವಾರು ಲೆಕ್ಕಾಚಾರದಲ್ಲಿ ಆಸ್ತಿ ಪ್ರಮಾಣ ಶೇ 110ರಷ್ಟು ಏರಿಕೆ ಕಂಡಿದೆ. ಈ ಸಂಸದರ ಪೈಕಿ ರಾಜ್ಯದ ಆರು ಮಂದಿ ಇದ್ದಾರೆ.

ಉತ್ತರ ಪ್ರದೇಶದ ಫರುಕಾಬಾದ್‌ನ ಸಂಸದ ಮುಕೇಶ್ ರಜಪೂತ್ ಅವರ ಆಸ್ತಿ ಮೌಲ್ಯದಲ್ಲಿ ಅತಿ ಹೆಚ್ಚು (ಶೇ 12,821) ಏರಿಕೆಯಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಆಸ್ತಿ ಪ್ರಮಾಣ ಶೇ 82ರಷ್ಟು ಹೆಚ್ಚಾಗಿದ್ದರೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಆಸ್ತಿ ಪ್ರಮಾಣ ಶೇ 117ರಷ್ಟು ಏರಿಕೆ ಕಂಡಿದೆ. 102 ಸಂಸದರ ಪೈಕಿ ಕೇಂದ್ರ ಸಚಿವ ಸಿ.ಆರ್.ಪಾಟೀಲ್ ಅವರೊಬ್ಬರ ಆಸ್ತಿ ಮೌಲ್ಯ ಶೇ 47ರಷ್ಟು ಇಳಿಕೆಯಾಗಿದೆ ಎಂದು ವರದಿ ತಿಳಿಸಿದೆ.

ಯಾರ ಆಸ್ತಿ ಗರಿಷ್ಠ ಹೆಚ್ಚಳ? (ಕೋಟಿಗಳಲ್ಲಿ)

ಸಂಸದ	ಹೆಚ್ಚಳ	2014	2019	2024
ಶ್ರೀಮಂತ್ ಉದಯನ್‌ರಾಜೇ ಪ್ರತಾಪಸಿನ್ಹಮಹಾರಾಜ್ ಭೋಂಸಲೆ (ಬಿಜೆಪಿ, ಸತಾರಾ- ಮಹಾರಾಷ್ಟ್ರ)	₹162.51 ಕೋಟಿ	₹60.60	₹199.68	₹223.12
ಪೂನಂಬೆನ್ ಹೇಮತ್‌ಭಾಯ್ ಮಾಡಂ (ಬಿಜೆಪಿ, ಜಾಮ್‌ನಗರ- ಗುಜರಾತ್)	₹130.26 ಕೋಟಿ	₹17.43	₹42.73	₹147.70
ಪಿ.ವಿ.ಮಿಥುನ್ ರೆಡ್ಡಿ (ವೈಎಸ್‌ಆರ್‌ಸಿಪಿ, ರಾಜಂಪೇಟ- ಆಂಧ್ರಪ್ರದೇಶ)	₹124.25 ಕೋಟಿ	₹22.60	₹66.51	₹146.86
ಹೇಮಾಮಾಲಿನಿ (ಬಿಜೆಪಿ, ಮಥುರಾ- ಉತ್ತರ ಪ್ರದೇಶ)	₹100.73 ಕೋಟಿ	₹178.17	₹250.82	₹278.93
ರಾವ್ ಇಂದರ್‌ಜಿತ್ ಸಿಂಗ್ (ಬಿಜೆಪಿ, ಗುರುಗ್ರಾಮ- ಹರಿಯಾಣ)	₹96.47 ಕೋಟಿ	₹25	₹42	₹121.54
ಹರ್‌ಸಿಮ್ರತ್ ಕೌರ್ ಬಾದಲ್ (ಎಸ್‌ಎಡಿ, ಬಠಿಂಡಾ- ಪಂಜಾಬ್)	₹90.35 ಕೋಟಿ	₹108.17	₹217.99	₹198.52
ಶತ್ರುಘ್ನ ಸಿನ್ಹ (ತೃಣಮೂಲ ಕಾಂಗ್ರೆಸ್, ಅಸನ್‌ಸೋಲ್- ಪಶ್ಚಿಮ ಬಂಗಾಳ)	₹78.76 ಕೋಟಿ	₹131.74	₹132.74	₹210.50
ಶ್ರೀರಂಗ್ ಅಪ್ಪಾ ಚಂದೂ ಬಾರಣೆ (ಶಿವಸೇನೆ, ಮಾವಲ್- ಮಹಾರಾಷ್ಟ್ರ)	₹65.35 ಕೋಟಿ	₹66.50	₹102.33	₹131.86
ನಿಶಿಕಾಂತ್ ದುಬೆ (ಬಿಜೆಪಿ, ಗೊಡ್ಡಾ- ಜಾರ್ಖಂಡ್)	₹59.13 ಕೋಟಿ	₹15.56	₹46.27	₹74.70
ಸುಪ್ರಿಯಾ ಸುಳೆ (ಎನ್‌ಸಿಪಿ- ಶರದ್ ಪವಾರ್ ಬಣ, ಬಾರಾಮತಿ-ಮಹಾರಾಷ್ಟ್ರ)	₹52.61 ಕೋಟಿ	₹113.91	₹140.89	₹166.52

ಮೋದಿ ಆಸ್ತಿ ಶೇ 82 ಹೆಚ್ಚಳ

ಉತ್ತರ ಪ್ರದೇಶದ ವಾರಾಣಸಿ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರ ಆಸ್ತಿಯು 10 ವರ್ಷಗಳಲ್ಲಿ ₹1.26 ಕೋಟಿಯಷ್ಟು ಹೆಚ್ಚಳವಾಗಿದೆ. ಶೇಕಡವಾರು ಲೆಕ್ಕಾಚಾರದಲ್ಲಿ ಶೇ 82ರಷ್ಟು ಜಾಸ್ತಿಯಾಗಿದೆ.

(ಕೋಟಿಗಳಲ್ಲಿ) 2024: ₹ 3.02 | 2019: ₹ 2.51 | 2014: ₹ 1.65

ಒಬ್ಬರ ಸಂಪತ್ತು ಇಳಿಕೆ

ಗುಜರಾತ್‌ನ ನವಸಾರಿ ಕ್ಷೇತ್ರದ ಬಿಜೆಪಿ ಸಂಸದ, ಕೇಂದ್ರ ಸಚಿವ ಸಿ.ಆರ್.ಪಾಟೀಲ್ ಅವರ ಆಸ್ತಿಯಲ್ಲಿ ಇಳಿಕೆಯಾಗಿದೆ. 102 ಸಂಸದರ ಪೈಕಿ ಚುನಾವಣೆಯಿಂದ ಚುನಾವಣೆಗೆ ಆಸ್ತಿ ಕಡಿಮೆಯಾದ ಏಕೈಕ ಸಂಸದ ಇವರು.

2014	2019	2024
₹74.47	₹44.60	₹39.49

47% ↓

ರಾಜ್ಯದ ಆರು ಸಂಸದರ ಆಸ್ತಿಯೂ ಹೆಚ್ಚಳ

ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ ಸೇರಿದಂತೆ ಕರ್ನಾಟಕದ ಆರು ಸಂಸದರು 2014ರಿಂದ ಸತತ ಮೂರು ಲೋಕಸಭಾ ಚುನಾವಣೆಗಳಲ್ಲೂ ಗೆಲುವು ಸಾಧಿಸಿದ್ದಾರೆ. ಅವರ ಆಸ್ತಿಯಲ್ಲೂ ಹೆಚ್ಚಳವಾಗಿದೆ. ಇವರೆಲ್ಲರೂ ಬಿಜೆಪಿಯವರೇ. ವಿಜಾಪುರ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ರಮೇಶ್ ಜಿಗಜಿಣಗಿ ಅವರ ಆಸ್ತಿ ₹42.68 ಕೋಟಿಯಷ್ಟು ಹೆಚ್ಚಾಗಿದೆ. ಬೆಂಗಳೂರು ಸೆಂಟ್ರಲ್ ಕ್ಷೇತ್ರದ ಪಿ.ಸಿ.ಮೋಹನ್ ಆಸ್ತಿ ₹33.72 ಕೋಟಿ ಜಾಸ್ತಿಯಾಗಿದೆ. ಪ್ರಲ್ಹಾದ ಜೋಶಿ ಅವರದ್ದು ₹16.89 ಕೋಟಿ ಜಾಸ್ತಿಯಾಗಿದೆ. ಶಿವಮೊಗ್ಗದ ಬಿ.ವೈ.ರಾಘವೇಂದ್ರ ಅವರ ಆಸ್ತಿ ₹14.82 ಕೋಟಿಯಷ್ಟು ಏರಿಕೆ ಕಂಡಿದೆ. ಉಡುಪಿ-ಚಿಕ್ಕಮಗಳೂರು ಕ್ಷೇತ್ರದ ಶೋಭಾ ಕರಂದ್ಲಾಜೆ ಅವರ ಆಸ್ತಿ ₹6.67 ಮತ್ತು ಬಾಗಲಕೋಟೆಯ ಪಿ.ಸಿ.ಗದ್ದಿಗೌಡರ ಅವರ ಆಸ್ತಿ ₹3.94 ಕೋಟಿಯಷ್ಟು ಜಾಸ್ತಿಯಾಗಿದೆ.

ರಾಜ್ಯದ ಸಂಸದರ ಆಸ್ತಿಯಲ್ಲಾದ ಹೆಚ್ಚಳ (ಕೋಟಿಗಳಲ್ಲಿ) (ಆವರಣದಲ್ಲಿರುವುದು ಹೆಚ್ಚಳವಾದ ಆಸ್ತಿಯ ಪ್ರಮಾಣ)

ಸಂಸದ	2014	2019	2024
ರಮೇಶ್ ಜಿಗಜಿಣಗಿ (477%)	₹8.94	₹50.41	₹51.63
ಪಿ.ಸಿ.ಮೋಹನ್ (71%)	₹47.57	₹75.55	₹81.30
ಬಿ.ವೈ.ರಾಘವೇಂದ್ರ (25%)	₹58.89	₹67.40	₹73.71
ಪ್ರಲ್ಹಾದ ಜೋಶಿ (403%)	₹4.19	₹11.13	₹21.09
ಶೋಭಾ ಕರಂದ್ಲಾಜೆ (93%)	₹7.20	₹10.48	₹13.88
ಪಿ.ಸಿ.ಗದ್ದಿಗೌಡರ (109%)	₹3.63	₹4.39	₹7.58

ರಾಹುಲ್ ಆಸ್ತಿ ಶೇ 117 ಏರಿಕೆ

ಕಳೆದ ಚುನಾವಣೆಯಲ್ಲಿ ಉತ್ತರಪ್ರದೇಶದ ರಾಯ್‌ಬರೇಲಿ ಕ್ಷೇತ್ರದಿಂದ ಆಯ್ಕೆಯಾಗಿರುವ ಕಾಂಗ್ರೆಸ್ ಮುಖಂಡ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಆಸ್ತಿ 10 ವರ್ಷಗಳಲ್ಲಿ ₹10.99 ಕೋಟಿಯಷ್ಟು ಜಾಸ್ತಿಯಾಗಿದೆ. ಶೇಕಡವಾರು ಲೆಕ್ಕದಲ್ಲಿ 117ರಷ್ಟು ಹೆಚ್ಚಾಗಿದೆ.

(ಕೋಟಿಗಳಲ್ಲಿ) ₹ 20.39 (2024) | ₹ 15.88 (2019) | ₹ 9.40 (2014)

ಬಿಜೆಪಿಯಲ್ಲಿ ಹೆಚ್ಚು ಸಂಸದರು

ಗಣನೀಯ ಪ್ರಮಾಣದಲ್ಲಿ ಆಸ್ತಿ ಮೌಲ್ಯ ಹೆಚ್ಚಳವಾದ ಸಂಸದರ ಪೈಕಿ ಬಿಜೆಪಿಯವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ (65). ತೃಣಮೂಲ ಕಾಂಗ್ರೆಸ್ ಸಂಸದರು ಎರಡನೇ ಸ್ಥಾನ ಮತ್ತು ಕಾಂಗ್ರೆಸ್‌ನವರು ಮೂರನೇ ಸ್ಥಾನದಲ್ಲಿದ್ದಾರೆ.

(ಆವರಣದಲ್ಲಿರುವುದು ಹೆಚ್ಚಳವಾದ ಸರಾಸರಿ ಆಸ್ತಿ ಪ್ರಮಾಣ)

ಪಕ್ಷ	ಸಂಸದರು
ಬಿಜೆಪಿ	65 (108%)
ತೃಣಮೂಲ ಕಾಂಗ್ರೆಸ್	11 (86%)
ಕಾಂಗ್ರೆಸ್	8 (135%)
ಶಿವಸೇನೆ	3 (132%)
ಶಿವಸೇನೆ (ಠಾಕ್ರೆ ಬಣ)	2 (247%)
ವೈಎಸ್‌ಆರ್‌ಪಿ	2 (232%)
ಇತರ ಪಕ್ಷಗಳು	11

₹7 ಲಕ್ಷದಿಂದ ₹9 ಕೋಟಿಗೆ!

ಉತ್ತರಪ್ರದೇಶದ ಫರುಕಾಬಾದ್‌ನ ಸಂಸದ ಮುಕೇಶ್ ರಜಪೂತ್ 2014ರ ಚುನಾವಣೆ ವೇಳೆ ತಮ್ಮ ಬಳಿ ₹7.24 ಲಕ್ಷದಷ್ಟು ಮೌಲ್ಯದ ಆಸ್ತಿ ಇದೆ ಎಂದು ಘೋಷಿಸಿಕೊಂಡಿದ್ದರು. 2019ರಲ್ಲಿ ₹7.49 ಕೋಟಿಗೆ ಏರಿತ್ತು. ಕಳೆದ ಚುನಾವಣೆಯಲ್ಲಿ ಈ ಮೊತ್ತ ₹9.36 ಕೋಟಿಗೆ ಏರಿಕೆಯಾಗಿದೆ. 10 ವರ್ಷಗಳಲ್ಲಿ ಅವರ ಆಸ್ತಿ ₹9.29 ಕೋಟಿಯಷ್ಟು ಜಾಸ್ತಿಯಾಗಿದೆ (ಶೇ 12,821) ಹೆಚ್ಚಾಗಿದೆ.

ರಾಷ್ಟ್ರೀಯ

ತುರ್ಕ್‌ಮಾನ್ ಗೇಟ್ ಹಿಂಸಾಚಾರ: ಆರು ಬಂಧನ

ದೆಹಲಿಯ ಸೈಯದ್ ಫೈಜ್ ಇಲಾಹಿ ಮಸೀದಿ ಬಳಿ ನಡೆದಿದ್ದ ಒತ್ತುವರಿ ತೆರವು ಕಾರ್ಯಾಚರಣೆ — ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ದೆಹಲಿಯ ರಾಮಲೀಲಾ ಮೈದಾನ ಪ್ರದೇಶದ ಸೈಯದ್ ಫೈಜ್ ಇಲಾಹಿ ಮಸೀದಿ ಸಮೀಪ ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ನಡೆದ ಹಿಂಸಾಚಾರ ಪ್ರಕರಣ ಸಂಬಂಧ ಮತ್ತೆ ಆರು ಆರೋಪಿಗಳನ್ನು ಪೊಲೀಸರು ಗುರುವಾರ ಬಂಧಿಸಿದ್ದಾರೆ.

ತುರ್ಕ್‌ಮಾನ್ ಗೇಟ್ ಪ್ರದೇಶದ ನಿವಾಸಿಗಳಾದ ಅಫಾನ್, ಆದಿಲ್, ಶಹನವಾಜ್, ಹಮ್ಜಾ, ಅಥರ್ ಮತ್ತು ಉಬೇದ್ ಬಂಧಿತರು. ಒಟ್ಟು ಬಂಧಿತರ ಸಂಖ್ಯೆ 11ಕ್ಕೆ ಏರಿಕೆಯಾಗಿದೆ. ಇದರಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನೂ ಸೇರಿದ್ದಾನೆ.

'ಕಾನೂನು, ಸುವ್ಯವಸ್ಥೆ ಕಾಪಾಡಲು ಹಾಗೂ ಅಹಿತಕರ ಘಟನೆಗಳನ್ನು ತಡೆಗಟ್ಟಲು ಸ್ಥಳದಲ್ಲಿ ಸಾಕಷ್ಟು ಪೊಲೀಸ್ ಸಿಬ್ಬಂದಿ ಮತ್ತು ಅರೆಸೇನಾ ಪಡೆಗಳನ್ನು ನಿಯೋಜಿಸಲಾಗಿದೆ. ಹಿರಿಯ ಅಧಿಕಾರಿಗಳು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದಾರೆ' ಎಂದು ಹೆಚ್ಚುವರಿ ಪೊಲೀಸ್ ಕಮಿಷನರ್ (ಕೇಂದ್ರ) ನಿಧಿನ್ ವಲ್ಸನ್ ತಿಳಿಸಿದ್ದಾರೆ.

ದೆಹಲಿ ಹೈಕೋರ್ಟ್ ಸೂಚನೆಯಂತೆ, ಮಸೀದಿಗೆ ಹೊಂದಿಕೊಂಡಿರುವ ಜಾಗ ಮತ್ತು ತುರ್ಕ್‌ಮಾನ್ ಗೇಟ್ ಹತ್ತಿರದ ಸ್ಮಶಾನದಲ್ಲಿನ ಒತ್ತುವರಿ ತೆರವು ಕಾರ್ಯವನ್ನು ದೆಹಲಿ ಮಹಾನಗರ ಪಾಲಿಕೆ (ಎಂಸಿಡಿ) ಬುಧವಾರ ಬೆಳಿಗ್ಗೆ ಕೈಗೆತ್ತಿಕೊಂಡಿತ್ತು. ಜೆಸಿಬಿ ಕಾರ್ಯಾಚರಣೆ ಆರಂಭಿಸುತ್ತಿದ್ದಂತೆ ಕೆಲವು ಕಿಡಿಗೇಡಿಗಳು ಎಂಸಿಡಿ ಸಿಬ್ಬಂದಿ, ಪೊಲೀಸರತ್ತ ಕಲ್ಲು ತೂರಾಟ ನಡೆಸಿದ್ದು, ಠಾಣಾಧಿಕಾರಿ ಸೇರಿದಂತೆ ಐವರು ಪೊಲೀಸರು ಗಾಯಗೊಂಡಿದ್ದರು.

'ಒತ್ತುವರಿ ತೆರವು ಕಾರ್ಯಾಚರಣೆ ಮೂಲಕ ತುರ್ಕ್‌ಮಾನ್ ಗೇಟ್ ಎದುರಿನ ಮಸೀದಿಯನ್ನು ಕೆಡವಲಾಗುತ್ತಿದೆ' ಎಂಬ ವದಂತಿಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದ್ದರಿಂದ ಹೆಚ್ಚಿನ ಜನರು ಸ್ಥಳದಲ್ಲಿ ಜಮಾಯಿಸಿದ್ದರು. ಈ ಹಿಂಸಾಚಾರದಲ್ಲಿ 150ರಿಂದ 200 ಮಂದಿ ಭಾಗಿಯಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗೌರಿ ಲಂಕೇಶ್ ಹತ್ಯೆ ಆರೋಪಿ ಚುನಾವಣೆಯಲ್ಲಿ ಸ್ಪರ್ಧೆ

ಜಾಲ್ನಾ (ಮಹಾರಾಷ್ಟ್ರ) (ಪಿಟಿಐ): ಪತ್ರಕರ್ತೆ ಗೌರಿ ಲಂಕೇಶ್ ಕೊಲೆ ಪ್ರಕರಣದ ಆರೋಪಿಗಳಲ್ಲಿ ಒಬ್ಬರಾದ ಶ್ರೀಕಾಂತ್ ಪಾಂಗಾರ್ಕರ್ ಅವರು ಮಹಾರಾಷ್ಟ್ರದ ಜಾಲ್ನಾ ಮಹಾನಗರ ಪಾಲಿಕೆಗೆ ಜನವರಿ 15ರಂದು ನಡೆಯಲಿರುವ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ.

ಶ್ರೀಕಾಂತ್ ಅವರು 13ನೇ ವಾರ್ಡ್‌ನಿಂದ ಕಣಕ್ಕಿಳಿದಿದ್ದಾರೆ. ಇಲ್ಲಿ ಬಿಜೆಪಿ ಮತ್ತು ಇತರ ಹಲವು ಪಕ್ಷಗಳ ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದಾರೆ. ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಇಲ್ಲಿ ಅಭ್ಯರ್ಥಿಯನ್ನು ಕಣಕ್ಕಿಳಿಸಿಲ್ಲ.

2024ರ ವಿಧಾನಸಭಾ ಚುನಾವಣೆಗೂ ಮುನ್ನ, ಶ್ರೀಕಾಂತ್ ಶಿವಸೇನಾಗೆ ಸೇರ್ಪಡೆಗೊಂಡಿದ್ದರು. ಆದರೆ ತೀವ್ರ ಟೀಕೆ ಎದುರಾದ ಕಾರಣ ಅವರನ್ನು ಪಕ್ಷಕ್ಕೆ ಸೇರಿಸುವ ನಿರ್ಧಾರವನ್ನು ಶಿಂದೆ ಅವರು ತಡೆ ಹಿಡಿದಿದ್ದರು.

ಜಾಲ್ನಾ ನಗರಸಭೆ ಆಗಿದ್ದ ಸಂದರ್ಭದಲ್ಲಿ ಶ್ರೀಕಾಂತ್ ಅವರು 2001ರಿಂದ 2006ರ ಸದಸ್ಯರಾಗಿದ್ದರು. ಅವರು ಅವಿಭಜಿತ ಶಿವಸೇನಾದಿಂದ ಸ್ಪರ್ಧಿಸಿದ್ದರು. 2011ರಲ್ಲಿ ಶಿವಸೇನಾ ಟಿಕೆಟ್ ನೀಡದಿದ್ದಾಗ ಹಿಂದು ಜನಜಾಗೃತಿ ಸಮಿತಿ ಸೇರಿದ್ದರು. ಲಂಕೇಶ್ ಹತ್ಯೆ ಪ್ರಕರಣದಲ್ಲಿ ಜೈಲಿನಲ್ಲಿದ್ದ ಅವರಿಗೆ ಕರ್ನಾಟಕ ಹೈಕೋರ್ಟ್ 2024ರ ಸೆಪ್ಟೆಂಬರ್‌ನಲ್ಲಿ ಜಾಮೀನು ನೀಡಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಾಲಿವುಡ್ ನಟ ಹಾಗೂ ಕೋಲ್ಕತ್ತ ನೈಟ್ ರೈಡರ್ಸ್ (ಕೆಕೆಆರ್) ಐಪಿಎಲ್ ತಂಡದ ಮಾಲೀಕ ಶಾರುಕ್ ಖಾನ್ ಅವರು ಬಾಂಗ್ಲಾದೇಶದ ಮುಸ್ತಾಫಿಜುರ್ ರೆಹಮಾನ್ ಅವರನ್ನು ತಮ್ಮ ತಂಡಕ್ಕೆ ಖರೀದಿಸಿದ್ದು ವಿವಾದಕ್ಕೆ ಗುರಿಯಾಗಿತ್ತು. ಈ ಹಿನ್ನೆಲೆಯಲ್ಲಿ ಶಾರುಕ್ ಖಾನ್ ಅವರ ವಿಡಿಯೊ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ನೀವು ದೇಶಕ್ಕಾಗಿ ಏನಾದರೂ ಮಾಡಬೇಕಿದ್ದರೆ, ಭಾರತದಿಂದ ಬಾಂಗ್ಲಾಕ್ಕೆ ವಿದ್ಯುತ್ ಪೂರೈಸುತ್ತಿರುವ ಉದ್ಯಮಿ ಅದಾನಿ ವಿರುದ್ಧ ಧ್ವನಿಯೆತ್ತಿ' ಎಂದು ಶಾರುಕ್ ಹೇಳಿರುವುದಾಗಿ ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಇನ್‌ವಿಡ್ ಸಾಧನದ ಮೂಲಕ ವಿಡಿಯೊ ಕೀಫ್ರೇಮ್‌ಗಳನ್ನು ವಿಂಗಡಿಸಿ, ಅವುಗಳನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ, 'ಟಾಕ್ಸ್ ಅಟ್ ಗೂಗಲ್' ಎನ್ನುವ ಯುಟ್ಯೂಬ್ ಚಾನೆಲ್‌ನಲ್ಲಿ ಶಾರುಕ್ ಅವರ ಇಂಥದ್ದೇ ವಿಡಿಯೊ ಅಪ್‌ಲೋಡ್ ಆಗಿರುವುದು ಕಂಡಿತು. 2014 ಅ.2ರಂದು ಅಪ್‌ಲೋಡ್ ಮಾಡಲಾದ ವಿಡಿಯೊದಲ್ಲಿ ಶಾರುಕ್ ಅವರು ಗೂಗಲ್‌ಪ್ಲೆಕ್ಸ್‌ನಲ್ಲಿ ಸುಂದರ್ ಪಿಚ್ಚೈ ಅವರೊಂದಿಗೆ ಸಂವಾದ ಮತ್ತು ತಮ್ಮ 'ಹ್ಯಾಪಿ ನ್ಯೂ ಇಯರ್' ಚಿತ್ರದ ಪ್ರಚಾರದಲ್ಲಿ ಪಾಲ್ಗೊಂಡಿದ್ದರು. 2014ರ ವಿಡಿಯೊವನ್ನು ತಿದ್ದಿ ಅದನ್ನು ಕೆಕೆಆರ್ ತಂಡದ ವಿವಾದದೊಂದಿಗೆ ಬೆಸೆದು ಸುಳ್ಳು ಪ್ರಚಾರ ಮಾಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ರೇಣುಕಾ ನಿಡಗುಂದಿ

ಏನು ಬಂದಿರಿ ಹದುಳವಿದ್ದಿರೆ...

ಇತ್ತೀಚೆಗೆ ಕೆಬಿಸಿ ಜೂನಿಯರ್‌ನಲ್ಲಿ ಭಾಗವಹಿಸಿದ್ದ ಒಬ್ಬ ಬಾಲಕ ತನ್ನ ಹೈಪರ್ ಆ್ಯಕ್ಟಿವಿಟೀಸ್ ಜೊತೆಗೆ ತನ್ನ ಅತೀ ಎನಿಸುವ ಆತ್ಮವಿಶ್ವಾಸದ ವರ್ತನೆಯಿಂದ ಬಹು ಚರ್ಚೆಗೆ ಒಳಗಾಗಿದ್ದು ಗೊತ್ತೇ ಇದೆ. ಅದಕ್ಕಾಗಿ ಸಾಮಾಜಿಕ ಜಾಲತಾಣಗಳಲ್ಲಿ ಎಡಿಎಚ್‌ಡಿ ಸಮಸ್ಯೆ, ಪೋಷಕರನ್ನು ಕುರಿತು –'ಬಾಲಕನಿಗೆ ಸಂಸ್ಕಾರ ಕಲಿಸಿಲ್ಲ, ದೊಡ್ಡವರಿಗೆ ಹೇಗೆ ಗೌರವ ಕೊಡಬೇಕು, ಹೇಗೆ ಮಾತನಾಡಬೇಕು ಎಂಬುದನ್ನು ಕಲಿಸಿಲ್ಲ' ಎಂದು ಅನೇಕರು ಟೀಕಿಸಿದರು. ಈ ಘಟನೆ ಜನಪ್ರಿಯ ಟಿವಿ ಶೋ ಒಂದರಲ್ಲಿ ಘಟಿಸಿದ್ದರಿಂದ ದೇಶದಾದ್ಯಂತ ಜನರ ಗಮನ ಸೆಳೆಯಿತು. ಆದರೆ ನಿತ್ಯ ಜೀವನದಲ್ಲಿ ಅನೇಕರ ವರ್ತನೆ ಆ ಬಾಲಕನಿಗಿಂತಲೂ ಕನಿಷ್ಠವಾಗಿರುತ್ತದೆ ಎಂಬುದನ್ನು ನಾವೆಲ್ಲರೂ ಒಂದಲ್ಲಾ ಒಂದು ಸಂದರ್ಭದಲ್ಲಿ ಅನುಭವಿಸಿರುತ್ತೇವೆ. ಈಗಿನ ಪೀಳಿಗೆಯೇ ಹಾಗಿದೆ. ಯಾರ ಮಾತನ್ನೂ ಕೇಳುವುದಿಲ್ಲ. ಹಿರಿಯರ ಬಗ್ಗೆ ಗೌರವವಿಲ್ಲ. ತಂದೆ ತಾಯಿ, ಶಾಲಾ ಶಿಕ್ಷಕರು, ಆಟ ಪಾಠ ಎಲ್ಲದರ ಬಗ್ಗೆಯೂ ಒಂದು ತರಹದ ಅಸಡ್ಡೆ, ಮುಂಗೋಪ, ಅವಿವೇಕತನ ಅತಿಯಾದ ಆತ್ಮವಿಶ್ವಾಸದಲ್ಲಿ ಮಾಡಿಕೊಳ್ಳುವ ಎಡವಟ್ಟುಗಳನ್ನು ನಾವು ಗುರುತಿಸಬಹುದು. ಹಾಗಾದರೆ ಈ ಸಂಸ್ಕಾರವೆಂಬುದು ಮಕ್ಕಳಿಗೆ ಮಾತ್ರ ಸೀಮಿತವೇ?

ದೊಡ್ಡವರಿಗೆ ನಮಸ್ಕರಿಸುವುದು, ವಿನಯದಿಂದ ಮಾತನಾಡುವುದು, ಮನೆಗೆ ಬಂದವರನ್ನು ಬನ್ನಿ, ಕೂತುಕೊಳ್ಳಿ ಎಂದು ಹೇಳುವುದು, ಬಿಸಿಲಲ್ಲಿ ಬಂದವರಿಗೆ ಕುಡಿಯಲು ನೀರು ಕೊಡುವುದು... ಇಂತಹ ಸಣ್ಣ ಸಣ್ಣ ಸಂಗತಿಗಳನ್ನು ಮನೆಯಿಂದಲೇ ಕಲಿಯುತ್ತಾರೆ ಮಕ್ಕಳು. ಈಗ ಬಸ್, ಮೆಟ್ರೊ ಎಲ್ಲಿಯೇ ನೋಡಿ ನಿಲ್ಲಲು ಸಾಧ್ಯವಾಗದ ಹಿರಿಯರಿಗೆ ಸೌಜನ್ಯಕ್ಕೂ ಕುಳಿತುಕೊಳ್ಳಿ ಎಂದು ತಮ್ಮ ಸೀಟು ಬಿಟ್ಟುಕೊಡದ ಮಕ್ಕಳಿದ್ದಾರೆ. ಮಹಾನಗರದಲ್ಲಂತೂ ನೆರೆಹೊರೆಯವರನ್ನೂ ಬಾಗಿಲ ಹೊರಗಡೆಯೇ ನಿಲ್ಲಿಸಿ ಮಾತನಾಡುವವರಿದ್ದಾರೆ. ಮನೆಗೆ ಬಂದವರನ್ನು ಕೂತುಕೊಳ್ಳಿ ಅನ್ನುವುದೂ ಇಲ್ಲ. ಚಹ ಕಾಫಿಗಳಂತೂ ದೂರದ ಮಾತು. ಬಸವಣ್ಣನವರ ವಚನ ನೆನಪಾಗುತ್ತದೆ.

ಏನು ಬಂದಿರಿ ಹದುಳವಿದ್ದಿರೆ ಎಂದಡೆ
ನಿಮ್ಮೈಸಿರಿ ಹಾರಿ ಹೋಹುದೇ?
ಕುಳ್ಳಿರೆಂದಡೆ ನೆಲಕುಳಿ ಹೋಹುದೇ?
ಒಡನೆ ನುಡಿದಡೆ ಸಿರ, ಹೊಟ್ಟೆಯೊಡೆವುದೇ?
ಕೊಡಲಿಲ್ಲದಿದ್ದಡೊಂದು, ಗುಣವಿಲ್ಲದಿದ್ದಡೆ
ಮೂಗ ಕೊಯ್ವುದ ಮಾಬನೆ
ಕೂಡಲಸಂಗಮದೇವಯ್ಯಾ !

ಈ ವಚನದಲ್ಲಿ ಬಸವಣ್ಣ ಶಿವ ಶರಣರಿಗೆ ಇರಬೇಕಾದ ಆತಿಥ್ಯದ ಗುಣ ಲಕ್ಷಣಗಳನ್ನು ವಿವರಿಸುತ್ತಾರೆ. ಮನೆಗೆ ಬಂದ ಅತಿಥಿಗಳನ್ನು ಸೌಜನ್ಯದಿಂದ ಮಾತನಾಡಿಸಿ ಅವರ ಯೋಗ ಕ್ಷೇಮ ವಿಚಾರಿಸಿದರೆ ನಮ್ಮ ಸಿರಿತನ ಹಾರಿ ಹೋಗುತ್ತದೆಯೇ ಎಂದು ಕಟುವಾಗಿ ಪ್ರಶ್ನಿಸುತ್ತಾರೆ. ಅದೇ ರೀತಿ ಕುಳಿತು ಕೊಳ್ಳಲು ಆಹ್ವಾನ ನೀಡಿದರೆ, ನೆಲ ತಗ್ಗಿ ಹೋಗುತ್ತದೆಯೇ ಎಂದು ಮತ್ತೊಮ್ಮೆ ಪ್ರಶ್ನಿಸುತ್ತಾ ಮನೆಗೆ ಬಂದವರನ್ನು ಪ್ರೀತಿಯಿಂದ ಮಾತನಾಡಿಸುವುದು ಸೌಜನ್ಯದ ಲಕ್ಷಣ; ಹಾಗೆ ಮಾಡದಿರುವುದು ಮತ್ತು ಕಷ್ಟದಲ್ಲಿರುವವರಿಗೆ ಕೈಲಾದ ಸಹಾಯ ಮಾಡದಿರುವುದು ಸಜ್ಜನರ ಲಕ್ಷಣವಲ್ಲ ಎಂದು ಹೇಳುತ್ತಾರೆ. ಮೂಗ ಕೊಯ್ಯದೆ ಬಿಡುವನೆ ಎಂದರೆ ಅಂಥವರು ಶಿಕ್ಷಾರ್ಹರು ಅಂಥವರು ದೇವರ ಒಲುಮೆಗೆ ಪಾತ್ರರಾಗುವುದಿಲ್ಲ ಎಂದು ಬಸವಣ್ಣ ಹೇಳುತ್ತಾರೆ.

ಇನ್ನೊಂದರಲ್ಲಿ 'ಇವನಾರವ ಎಂದೆನಿಸದೆ, ಇವನಮ್ಮವ ಎಂದೆನಿಸಯ್ಯಾ' ಎಂದು ಎಲ್ಲ ವರ್ಗದ ಜನರನ್ನು ಆದರದಿಂದ ಕಾಣು ಎಂದು ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಲು ಕರೆ ನೀಡಿರುವಂತೆ ಇಲ್ಲಿ ಕೂಡ ಆದರಾತಿಥ್ಯ ಶರಣರ ಗುಣ ಲಕ್ಷಣ ಎಂದು ಹೇಳುತ್ತಾರೆ. ಈ ಗುಣಗಳು ಶರಣರಿಗಷ್ಟೇ ಅಲ್ಲ, ಎಲ್ಲ ಮನುಷ್ಯರಲ್ಲಿರಬೇಕಾದ ಸದ್ಗುಣಗಳು. ❖

ಪದಬಂಧ 6279

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆಟದಲ್ಲಿ ನಿಪುಣನಾದವನು ಇಲ್ಲಿದ್ದಾನೆ (4)
3.ಹೋಲಿಕೆಗೆ ಮೀರಿದುದು (4)
5.ಬತ್ತದ ಮೇಲೆ ಹೊಟ್ಟು ತೆಗೆದ ಮೇಲೆ ಉಳಿಯುವ ಕಾಳು ಉಲ್ಟಾ ಆಗಿಬಿಟ್ಟಿದೆ (2)
7.ವೃತ್ತಿ ಅಥವಾ ಪ್ರಯತ್ನ (3)
8.ಕಾಜಾಣ ನೋಡಿದ ಬುದ್ಧಿವಂತನಿಲ್ಲಿ ತಿರುಗಿದ್ದಾನಲ್ಲಾ! (2)
9.ಎಳೆತನದಲ್ಲೇ ನಡೆದ ಮದುವೆ (5)
12.ನೆನಪಿನಿಂದ ಮಾಸದ ತಿಂಗಳು (2)
14.ಕರದಲ್ಲಿರುವ ತೆಂಗಿನ ಚಿಪ್ಪು (3)
15.ನೆನಪಲ್ಲೇ ಇರುವ ಕಾರಣ ಗೊತ್ತಾಯಿತೇ? (2)
18.ಕತ್ತು ಬಗ್ಗಿಸಿ ಹಾಕಿದ ಸಹಿ! (4)
19.ಮನದ ವಿಷಯ ಪ್ರಸ್ತಾಪ ಮಾಡಿದ್ದಕ್ಕೇ ಈ ದ್ವೇಷ! (4)

ಮೇಲಿಂದ ಕೆಳಕ್ಕೆ
1.ಆಟದ ಬಯಲು (4)
2.ಮೇನೆ ಇಲ್ಲಿದೆ (3)
3.ತಲೆ ಇಲ್ಲದ ದೇಹ (2)
4.ಕೊಬ್ಬಿದ ಆನೆಯಿದು (4)
6.ಬೆಲೆ ಕಟ್ಟಲಾಗದುದನ್ನು ಹೀಗೆ ಹೇಳುತ್ತಾರೆ (3)
7.ಹುರುಪು ಈ ರೀತಿ ಬಂದಿದೆ (3)
9.ಧ್ವಜ ಇಲ್ಲಿ ಕಾಣುತ್ತಿದೆ (3)
10.ಒಳ್ಳೆಯ ಅಥವಾ ಕೆಟ್ಟ ನಾತ (3)
11.ಹೂವುಗಳಲ್ಲಿರುವ ಸಿಹಿರಸ (4)
13.ಆರೋಪದಲ್ಲೇ ಮುಕ್ತಾಯ! (4)
16.ವನದ ಹತ್ತಿರ ಬೀಸುತ್ತಿರುವ ಗಾಳಿ (3)
17.ಹಕೀಕತ್ತು ಮಾಡುವಾಗ ಆದ ತೊಂದರೆ (2)



6278ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಹಿಷ್ಕಾರ 3.ನರುಗಂಪು 5.ಸದರ 7.ಪರ 9.ಗುರು 10.ಮಾವುತ 11.ದುಬಾರಿ 13.ಮರ 14.ನಿಜ 16.ಶಂಕರ 18.ತೆಗಳಿಕೆ 19.ತಿಲಾಂಜಲಿ

ಮೇಲಿಂದ ಕೆಳಕ್ಕೆ:
1.ಬಳಪ 2.ರಸ 3.ನರ 4.ಪುಕಾರು 6.ದಣಿವು 8.ರಕ್ತಸಂಚಾರ 9.ಗುಪ್ತಗಾಮಿನಿ 12.ಬಾಲಕ 13.ಮಮತೆ 15.ಜಗಲಿ 16.ಶಂಕೆ 17.ರತಿ

ಸುಡೊಕು 6663

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7			5		2		8
5		4	1		8			
	8			7			5	
	6		9	3		1		2
2		5						
	3			8	2	5		6
			5		6		2	
3		2						
	5			2		4		1

6662 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

09 ಜನವರಿ 2026 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ಷಷ್ಠಿ ಗಂ 7-06 ನಕ್ಷತ್ರ: ಉತ್ತರಫಲ್ಗುನಿ ಗಂ 13-41 ಯೋಗ: ಶೋಭನ ಗಂ. 16-56 ಕರಣ: ವಣಿಜ ಗಂ.7-06 ಧನು ಮಾಸದ 25 ನೇ ದಿನ. ಮಳೆ ನಕ್ಷತ್ರ : ಪೂರ್ವಾಷಾಢ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 -12-00, ಸೂರ್ಯೋದಯ : 07-00 ಸೂರ್ಯಾಸ್ತ : 06-16, ಮುಸ್ಲಿಂ ದಿನಾಂಕ : 19 ರಜಬ್, ಅದೃಷ್ಟ ಸಂಖ್ಯೆ : 3, 9

ಮೇಷ: ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸುವುದರಿಂದ ಮಾನಸಿಕ ಶಾಂತಿ, ಜೀವನೋಲ್ಲಾಸ ಹೆಚ್ಚಾಗಲಿದೆ. ಮಕ್ಕಳು ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸಿ, ಏಕಾಗ್ರತೆಯನ್ನು ಕಾಯ್ದುಕೊಳ್ಳಿ.

ವೃಷಭ: ಜೊತೆಗೂಡಿ ಕೆಲಸ ಮಾಡುವುದು, ನಾಲ್ಕಾರು ಜನರ ಜೊತೆಯಲ್ಲಿ ಬೆರೆಯುವುದನ್ನು ಅಭ್ಯಾಸ ಮಾಡಿಕೊಳ್ಳಿ. ಆಫೀಸಿನಲ್ಲಿ ಉಂಟಾಗಿದ್ದ ಸಮಸ್ಯೆಗಳು ತನ್ನಿಂತಾನೆ ಬಗೆ ಹರಿಯಲಿವೆ.

ಮಿಥುನ: ಸತ್ಯ ವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು ಎಂಬುವ ಮಾತನ್ನು ನೆನಪಿನಲ್ಲಿ ಇಟ್ಟುಕೊಂಡಿರುವುದು ಒಳ್ಳೆಯದು. ಕಾರ್ಯರಂಗದಲ್ಲಿ ಅಪವಾದದ ಭೀತಿ ಕಳವಳ ಮೂಡಿಸಲಿದೆ.

ಕರ್ಕಾಟಕ: ಇಂದು ಶ್ರೀಲಕ್ಷ್ಮಿ ಸಮೇತ ವೆಂಕಟರಮಣನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಶುಭವಾಗುತ್ತದೆ. ಸ್ವಂತ ಉದ್ಯೋಗದಲ್ಲಿ ಅಭಿವೃದ್ಧಿಯನ್ನು ಹೊಂದುವಿರಿ. ಸಂಬಂಧಿಗಳಿಂದ ಸಂತಸದ ಸುದ್ದಿ ಕೇಳುವಿರಿ.

ಸಿಂಹ: ದೊಡ್ಡ ಪ್ರಮಾಣದ ಸಿಹಿ ತಿಂಡಿಯ ತಯಾರಕರಿಗೆ ಕಾರ್ಮಿಕರ ಕೊರತೆ ಎದುರಾಗಲಿದೆ. ಉದ್ಯೋಗದಲ್ಲಿನ ಪ್ರಯತ್ನಗಳು ಫಲಪ್ರದ. ವಿದೇಶ ಪ್ರವಾಸದ ಯೋಗವಿದೆ.

ಕನ್ಯಾ: ಬರೆಯುತ್ತಿರುವ ಪುಸ್ತಕಕ್ಕೆ ನಿಮ್ಮ ಕಣ್ಣೆದುರು ನಡೆದ ಒಂದು ಘಟನೆ ಪ್ರೇರಣೆಯಾಗಬಹುದು. ಸರ್ಕಾರಿ ಕೆಲಸಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಿಕೊಳ್ಳುವ ಯೋಚನೆಯನ್ನು ಮಾಡಿ.

ತುಲಾ: ಕೆಲಸವನ್ನು ಹುಡುಕುವ ಬದಲು ಉನ್ನತ ವಿದ್ಯಾಭ್ಯಾಸದ ಬಗ್ಗೆ ಒಲವು ತೋರಿಸಿ. ಕುಲದೇವರ ದರ್ಶನದಿಂದ ಎಲ್ಲಾ ವ್ಯವಹಾರಗಳಲ್ಲಿ ಅಭಿವೃದ್ಧಿ ಸಾಧಿಸಬಲ್ಲಿರಿ.

ವೃಶ್ಚಿಕ: ದೈಹಿಕ ಮತ್ತು ಆರ್ಥಿಕ ಶಕ್ತಿಯನ್ನು ವ್ಯಯಿಸದೇ ಸಿಕ್ಕ ಸಮಯದಲ್ಲಿ ಕಾರ್ಯವೆಸಗುವ ಚಾಣಾಕ್ಷತನ ಇರುವುದು. ದೃಢ ನಿರ್ಧಾರ ಕೈಗೊಂಡ ಫಲದಿಂದಾಗಿ ಫಲಿತಾಂಶ ಪಡೆಯುವಿರಿ.

ಧನು: ಮದುವೆಗೆ ಸಂಬಂಧಿಸಿದ ಮಾತುಕತೆಗಳು ಗಮನಕ್ಕೆ ಬಾರದೇ ಹೋಗಬಹುದು. ನಂಬಿ ಕೆಟ್ಟವರಿಲ್ಲ ಎಂಬ ಮಾತು ನಿಮ್ಮ ಪಾಲಿಗೆ ಅಕ್ಷರಶಃ ಸತ್ಯವಾಗಲಿದೆ.

ಮಕರ: ಸಾಮರ್ಥ್ಯ, ದಕ್ಷತೆ, ಸೇವಾ ಮನೋಭಾವಗಳಿಂದ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆ ನಿಮ್ಮದಾಗಲಿದೆ. ಸರ್ಕಾರಿ ಕೆಲಸಗಳು ಗುತ್ತಿಗೆಯಾಗಿ ಲಭಿಸುವುದರ ಜತೆಗೆ ಲಾಭದಾಯಕ ಎನಿಸಲಿದೆ.

ಕುಂಭ: ಕೂಡಿ ಬಂದಂಥ ಕಂಕಣ ಬಲವು ತಪ್ಪು ನಡತೆಯಿಂದ ಅಥವಾ ಮೂರನೇ ವ್ಯಕ್ತಿಯ ಅಸಂಬದ್ಧ ಹೇಳಿಕೆಯಿಂದ ಮುರಿದು ಬೀಳುವ ಸಾಧ್ಯತೆ ಇದೆ. ಮೇಧಾವಿಗಳಿಂದ ಧನ ಸಂಪಾದನೆ ಹೊಂದುವಿರಿ.

ಮೀನ: ಕೆಲಸದಲ್ಲಿ ವಿಘ್ನಗಳು ಎದುರಾದರೂ, ಅಪೇಕ್ಷಿತ ಫಲ ದೊರಕುವುದು. ನಿಮ್ಮಲ್ಲಿರುವ ಕಲೆಗೆ ಒಂದು ನೆಲೆ ಕಲ್ಪಿಸುವ ಹೋರಾಟವು ಸಫಲವಾಗಲಿದೆ. ಪತಿಯ ಆರೋಗ್ಯದಲ್ಲಿ ಗಮನ ಇರಿಸಿ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	26,140
ಇಂದಿನ ಅಂತ್ಯ:	25,876
ದಿನದ ಕುಸಿತ	263

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

100 ಕ್ಕೆ	₹605
12 ಕ್ಕೆ	₹90
ಮೈಸೂರು: 100 ಕ್ಕೆ	₹603

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿಗೆ)

ಆರ್‌ಎಸ್‌ಎಸ್-4	₹183
ಆರ್‌ಎಸ್‌ಎಸ್-5	₹178
ಗುಡ್ ಲಾಟ್	₹166

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಮಿ.ಟ)	₹511-761
ದ್ವಿತಳಿ (ದ್ವಿ.ಟ)	₹405-899

ಮುದ್ರೆಮನೆ ಕಾಫಿ

ಎಪಿ	₹27000
ಎಸಿ	₹14850
ಆರ್‌ಪಿ	₹17000
ಆರ್‌ಸಿ	₹9775

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1305 (1295)
ಸೂರ್ಯಕಾಂತಿ (ರಿಫೈನ್ಡ್)	₹1520 (1510)
ಪಾಮೋಲಿನ್	₹1260 (1260)

ಬೆಳ್ಳಿ ಧಾರಣೆ ₹12,500 ಇಳಿಕೆ

ನವದೆಹಲಿ (ಪಿಟಿಐ): ದಾಖಲೆಯ ಮಟ್ಟವನ್ನು ತಲುಪಿದ್ದ ಬೆಳ್ಳಿಯ ಬೆಲೆಯು ಗುರುವಾರದ ವಹಿವಾಟಿನಲ್ಲಿ ದೊಡ್ಡ ಮಟ್ಟದ ಕುಸಿತ ಕಂಡಿದೆ. ಕೆ.ಜಿ. ಬೆಳ್ಳಿಯ ಬೆಲೆಯು ಇಲ್ಲಿನ ಚಿನಿವಾರ ಪೇಟೆಯಲ್ಲಿ ₹12,500ರಷ್ಟು ಇಳಿಕೆ ಕಂಡಿದ್ದು, ₹2,43,500ಕ್ಕೆ ತಲುಪಿದೆ.

ಇದೇ ವೇಳೆ ಶೇಕಡ 99.9ರಷ್ಟು ಪರಿಶುದ್ಧತೆಯ ಚಿನ್ನದ ಬೆಲೆಯು 10 ಗ್ರಾಂಗೆ ₹900ರಷ್ಟು ಕಡಿಮೆ ಆಗಿದ್ದು, ₹1,40,500ಕ್ಕೆ ತಲುಪಿದೆ. ಜಗತ್ತಿನ ಹಲವೆಡೆ ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ಅಮೂಲ್ಯ ಲೋಹಗಳ ಮಾರಾಟಕ್ಕೆ ಮುಂದಾಗಿದ್ದುದು ಬೆಲೆ ಇಳಿಕೆಗೆ ಒಂದು ಕಾರಣ ಎಂದು ವರ್ತಕರು ತಿಳಿಸಿದ್ದಾರೆ.

ಬುಧವಾರದ ವಹಿವಾಟಿನಲ್ಲಿ ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹5,000 ಏರಿಕೆ ಆಗಿ ದಾಖಲೆಯ ₹2,56,000ಕ್ಕೆ ತಲುಪಿತ್ತು ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಸುಂಕದ ಭೀತಿಗೆ ಕುಸಿದ ಷೇರುಪೇಟೆ

ಅಮೆರಿಕದಿಂದ ಸುಂಕ ಇನ್ನಷ್ಟು ಹೆಚ್ಚಳ ಭೀತಿ, ವಿದೇಶಿ ಬಂಡವಾಳ ಹೊರಹರಿವು ಇಳಿಕೆಗೆ ಕಾರಣ

ಮುಂಬೈ (ಪಿಟಿಐ): ಲೋಹ, ತೈಲ ಮತ್ತು ಅನಿಲ ವಲಯದ ಕಂಪನಿಗಳ ಷೇರುಗಳ ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಗುರುವಾರದ ವಹಿವಾಟಿನಲ್ಲಿ ಶೇ 1ರಷ್ಟು ಇಳಿಕೆ ಕಂಡಿವೆ. ಷೇರುಪೇಟೆಯಲ್ಲಿ ಕರಡಿ ಕುಣಿತ ಮುಂದುವರಿದಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 780 ಅಂಶ ಇಳಿಕೆಯಾಗಿ, 84,180ಕ್ಕೆ ವಹಿವಾಟು ಕೊನೆಗೊಳಿಸಿದೆ. ವಹಿವಾಟಿನ ನಡುವಿನಲ್ಲಿ ಸೂಚ್ಯಂಕವು 851 ಅಂಶದವರೆಗೆ ಕುಸಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 263 ಅಂಶ ಕಡಿಮೆಯಾಗಿ 25,876ಕ್ಕೆ ತಲುಪಿದೆ.

'ರಷ್ಯಾದಿಂದ ಕಚ್ಚಾ ತೈಲ ಖರೀದಿ ಮಾಡುವ ದೇಶಗಳ ಮೇಲೆ ಅಮೆರಿಕವು ಸುಂಕ ಹೆಚ್ಚಿಸುವ ಭೀತಿ ಮತ್ತು ವಿದೇಶಿ ಬಂಡವಾಳದ ನಿರಂತರ ಹೊರಹರಿವು ದೇಶದ ಷೇರುಪೇಟೆ ಸೂಚ್ಯಂಕಗಳ ಇಳಿಕೆಗೆ ಕಾರಣವಾಗಿವೆ' ಎಂದು ಜಿಯೊಜಿತ್ ಇನ್ವೆಸ್ಟ್‌ಮೆಂಟ್ಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಲಾರ್ಸೆನ್ ಆ್ಯಂಡ್ ಟೊಬ್ರೊ, ಟೆಕ್ ಮಹೀಂದ್ರ, ಟಿಸಿಎಸ್, ರಿಲಯನ್ಸ್ ಇಂಡಸ್ಟ್ರೀಸ್, ಟಾಟಾ ಸ್ಟೀಲ್ ಮತ್ತು ಟ್ರೆಂಟ್ ಷೇರಿನ ಮೌಲ್ಯ ಇಳಿಕೆ ಆಗಿದೆ.

ಎಟರ್ನಲ್, ಐಸಿಐಸಿಐ ಬ್ಯಾಂಕ್, ಬಜಾಜ್ ಫೈನಾನ್ಸ್ ಮತ್ತು ಭಾರತ್ ಎಲೆಕ್ಟ್ರಾನಿಕ್ಸ್ ಷೇರಿನ ಮೌಲ್ಯದಲ್ಲಿ ಏರಿಕೆ ಆಗಿದೆ.

ಏಷ್ಯಾದ ಮಾರುಕಟ್ಟೆಗಳ ಪೈಕಿ ದಕ್ಷಿಣ ಕೊರಿಯಾ ಸಕಾರಾತ್ಮಕ ವಹಿವಾಟು ಕಂಡಿದೆ. ಜಪಾನ್, ಶಾಂಘೈ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆಗಳಲ್ಲಿ ನಕಾರಾತ್ಮಕ ವಹಿವಾಟು ನಡೆದಿದೆ.

ಸೋಮವಾರದಿಂದ ಗುರುವಾರ ದವರೆಗಿನ ವಹಿವಾಟಿನಲ್ಲಿ ಸೆನ್ಸೆಕ್ಸ್ 1,581 ಅಂಶ ಮತ್ತು ನಿಫ್ಟಿ 451 ಅಂಶ ಇಳಿಕೆ ಆಗಿವೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬುಧವಾರದ ವಹಿವಾಟಿನಲ್ಲಿ ₹1,527 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶೀ ಸಾಂಸ್ಥಿಕ ಹೂಡಿಕೆದಾರರು ₹2,889 ಕೋಟಿ ಮೌಲ್ಯದ ಷೇರುಗಳನ್ನು ಖರೀದಿ ಮಾಡಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.75ರಷ್ಟು ಏರಿಕೆಯಾಗಿದೆ. ಪ್ರತಿ ಬ್ಯಾರಲ್ ದರವು 60.42 ಡಾಲರ್ ಆಗಿದೆ.

'ಜಾಗತಿಕ ಮಟ್ಟದಲ್ಲಿ ಹೆಚ್ಚಿದ ರಾಜಕೀಯ ಬಿಕ್ಕಟ್ಟು ಮತ್ತು ವ್ಯಾಪಾರ ಅನಿಶ್ಚಿತತೆಯು ಮಾರುಕಟ್ಟೆ ಇಳಿಕೆಗೆ ಕಾರಣವಾಗಿದೆ. ವಿದೇಶಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದು, ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆಯು ಸೂಚ್ಯಂಕಗಳ ಇಳಿಕೆಗೆ ಕಾರಣವಾಗಿದೆ' ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಹಿರಿಯ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಮುಖ್ಯಾಂಶಗಳು

- ನಾಲ್ಕು ದಿನದಲ್ಲಿ ಸೆನ್ಸೆಕ್ಸ್ 1,581, ನಿಫ್ಟಿ 451 ಅಂಶ ಇಳಿಕೆ
- ಜಪಾನ್, ಶಾಂಘೈ, ಹಾಂಗ್‌ಕಾಂಗ್ ಮಾರುಕಟ್ಟೆ ಇಳಿಕೆ
- ಬ್ರೆಂಟ್ ಕಚ್ಚಾ ತೈಲ ದರವು ಶೇ 0.75ರಷ್ಟು ಏರಿಕೆ

ದೇಶದ ಷೇರುಪೇಟೆ ಸೂಚ್ಯಂಕಗಳು ಸತತ ನಾಲ್ಕನೇ ವಹಿವಾಟಿನ ದಿನವೂ ಇಳಿಕೆ ಕಂಡಿವೆ. ಇದು ಕಳೆದ ನಾಲ್ಕು ತಿಂಗಳಲ್ಲಿ ಅತಿ ಹೆಚ್ಚು ಇಳಿಕೆ ಕಂಡ ದಿನವಾಗಿದೆ

ಗೌರವ್ ಗರ್ಗ್, ಲೆಮನ್ ಮಾರ್ಕೆಟ್ಸ್ ಡೆಸ್ಕ್‌ನ ಸಂಶೋಧನಾ ವಿಶ್ಲೇಷಕ

ರಿಲಯನ್ಸ್: ₹1.65 ಲಕ್ಷ ಕೋಟಿ ನಷ್ಟ

ಷೇರುಪೇಟೆ ಸೂಚ್ಯಂಕಗಳ ಇಳಿಕೆಯಿಂದ ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯವು ಕಳೆದ ನಾಲ್ಕು ದಿನಗಳ ವಹಿವಾಟಿನಲ್ಲಿ ಶೇ 8ರವರೆಗೆ ಇಳಿಕೆ ಆಗಿದೆ. ಇದರಿಂದ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯ (ಎಂ-ಕ್ಯಾಪ್) ₹1,65,299 ಕೋಟಿಯಷ್ಟು ಕರಗಿದೆ. ಕಂಪನಿಯ ಒಟ್ಟು ಎಂ-ಕ್ಯಾಪ್ ₹19.89 ಲಕ್ಷ ಕೋಟಿಗೆ ಇಳಿದಿದೆ.

ಸುದ್ದಿ 2 ನಿಮಿಷ

ಮೊದಲ ಡ್ರೀಮ್‌ಲೈನರ್ ಪಡೆದ ಏರ್ ಇಂಡಿಯಾ

ನವದೆಹಲಿ (ಪಿಟಿಐ): ಟಾಟಾ ಸಮೂಹ ಒಡೆತನದ ಏರ್ ಇಂಡಿಯಾ ಸಂಸ್ಥೆಯು ಖಾಸಗೀಕರಣಗೊಂಡ 4 ವರ್ಷಗಳ ಬಳಿಕ ತನ್ನ ಮೊದಲ ಬೋಯಿಂಗ್ 787-9 ಡ್ರೀಮ್‌ಲೈನರ್ ವಿಮಾನವನ್ನು ಪಡೆದುಕೊಂಡಿದೆ.

ಏರ್ ಇಂಡಿಯಾ ಸಂಸ್ಥೆಗಾಗಿಯೇ ನಿರ್ದಿಷ್ಟವಾಗಿ ವಿನ್ಯಾಸಗೊಳಿಸಿದ (ಲೈನ್ ಫಿಟ್/ಕಸ್ಟಮ್ ಮೇಡ್) ಮೊದಲ ವಿಮಾನ ಇದಾಗಿದ್ದು, ಸಿಯಾಟಲ್‌ನಲ್ಲಿರುವ ಬೋಯಿಂಗ್ ಫ್ಯಾಕ್ಟರಿಯಲ್ಲಿ ಈ ವಿಮಾನದ ಹಸ್ತಾಂತರ ಪ್ರಕ್ರಿಯೆಯು ಜನವರಿ 7ರಂದು ನಡೆದಿದೆ ಎಂದು ಅಧಿಕಾರಿಗಳು ಗುರುವಾರ ಮಾಹಿತಿ ನೀಡಿದ್ದಾರೆ.

ಅಲ್ಲದೇ, ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯವು (ಡಿಜಿಸಿಎ) ವಿಮಾನವನ್ನು ಪರಿಶೀಲಿಸಿದ ಬಳಿಕ ಕೆಲವೇ ದಿನಗಳಲ್ಲಿ ವಿಮಾನ ಭಾರತಕ್ಕೆ ಬರಲಿದೆ ಎಂದೂ ತಿಳಿಸಿದ್ದಾರೆ.

ಈ ವಿಮಾನವು ಎಕಾನಮಿ, ಪ್ರೀಮಿಯಂ ಎಕಾನಮಿ ಹಾಗೂ ಬಿಸಿನೆಸ್ ಕ್ಲಾಸ್ ವಿಭಾಗವನ್ನು ಹೊಂದಿದೆ. ಇದಕ್ಕೂ ಮೊದಲು ಏರ್ ಇಂಡಿಯಾ ಸಂಸ್ಥೆಯು ಸರ್ಕಾರಿ ಒಡೆತನದಲ್ಲಿದ್ದಾಗ ಅಂದರೆ 2017ರಲ್ಲಿ ಕಡೆಯದಾಗಿ ಅದಕ್ಕಾಗಿಯೇ ವಿನ್ಯಾಸಗೊಳಿಸಿದ್ದ ಡ್ರೀಮ್‌ಲೈನರ್ ವಿಮಾನವನ್ನು ಪಡೆದುಕೊಂಡಿತ್ತು ಎನ್ನಲಾಗಿದೆ.

ಎಲ್ ಆ್ಯಂಡ್ ಟಿ: ಸೇನೆಯಿಂದ ಕಾರ್ಯಾದೇಶ

ನವದೆಹಲಿ (ಪಿಟಿಐ): ಸ್ವದೇಶಿ ನಿರ್ಮಿತ ಪಿನಾಕ ರಾಕೆಟ್ ಉಡಾವಣಾ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುವ ಕಾರ್ಯಾದೇಶವನ್ನು ಲಾರ್ಸೆನ್ ಆ್ಯಂಡ್ ಟೊಬ್ರೊ (ಎಲ್ ಆ್ಯಂಡ್ ಟಿ) ಕಂಪನಿಯು ಭಾರತೀಯ ಸೇನೆಯ ಕೋರ್ ಆಫ್ ಎಲೆಕ್ಟ್ರಾನಿಕ್ಸ್ ಆ್ಯಂಡ್ ಮೆಕಾನಿಕಲ್ ಎಂಜಿನಿಯರ್ಸ್‌ನಿಂದ (ಇಎಂಇ) ಪಡೆದುಕೊಂಡಿದೆ.

ಆದರೆ, ಈ ಕಾರ್ಯಾದೇಶದ ಮೊತ್ತವನ್ನು ಎಲ್ ಆ್ಯಂಡ್ ಟಿ ಬಹಿರಂಗಪಡಿಸಿಲ್ಲ.

ಇಎಂಇ ಕೋರ್ ಜೊತೆಗಿನ ಈ ಪಾಲುದಾರಿಕೆಯು ಭಾರತೀಯ ಸೇನೆಯಲ್ಲಿ ಪ್ರಸ್ತುತ ಬಳಕೆಯಲ್ಲಿರುವ ಪಿನಾಕ ರೆಜಿಮೆಂಟ್‌ಗಳು ದೀರ್ಘಕಾಲದವರೆಗೆ ಕಾರ್ಯಾಚರಣೆಗೆ ಲಭ್ಯವಾಗುವಂತೆ ಮಾಡುವ ಮತ್ತು ಅವುಗಳನ್ನು ಆಧುನೀಕರಿಸುವ ಗುರಿ ಹೊಂದಿದೆ ಎಂದು ಎಲ್ ಆ್ಯಂಡ್ ಟಿ ಕಂಪನಿಯು ಷೇರುಪೇಟೆಗೆ ಗುರುವಾರ ತಿಳಿಸಿದೆ.

ಈ ಕಾರ್ಯಾದೇಶವು ಹಳೆಯ ಬಿಡಿಭಾಗಗಳ ನಿರ್ವಹಣೆ, ಸೇನೆಯ ಕಾರ್ಯಾಗಾರಗಳಿಗೆ ನಿರಂತರ ತಾಂತ್ರಿಕ ಬೆಂಬಲವನ್ನು ಒದಗಿಸುವುದಕ್ಕೆ ಗಮನ ನೀಡುತ್ತದೆ ಎಂದು ಹೇಳಿದೆ.

ಮೊಬೈಲ್ ಶುಲ್ಕ ಹೆಚ್ಚಳ ಸಾಧ್ಯತೆ

ನವದೆಹಲಿ (ಪಿಟಿಐ): ದೇಶದ ದೂರಸಂಪರ್ಕ ಸೇವಾ ವಲಯದ ಕಂಪನಿಗಳು ಸೇವಾ ಶುಲ್ಕವನ್ನು ಜೂನ್‌ನಲ್ಲಿ ಶೇಕಡ 15ರಷ್ಟು ಹೆಚ್ಚಿಸುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ಅಂದಾಜು ಮಾಡಿದ್ದಾರೆ. ಬ್ರೋಕರೇಜ್ ಸಂಸ್ಥೆ ಜೆಫರೀಸ್‌ನ ತಜ್ಞರು ಸಿದ್ಧಪಡಿಸಿರುವ ವರದಿಯಲ್ಲಿ ಈ ಅಂದಾಜು ನೀಡಲಾಗಿದೆ.

ಶುಲ್ಕ ಹೆಚ್ಚಳ ಮಾತ್ರವೇ ಅಲ್ಲದೆ, ಇಂಟರ್ನೆಟ್ ಬಳಕೆ ಹೆಚ್ಚಾಗುತ್ತಿರುವುದು, ಪೋಸ್ಟ್‌ಪೇಯ್ಡ್ ಗ್ರಾಹಕರು ಜಾಸ್ತಿ ಆಗುತ್ತಿರುವುದು ಪ್ರತಿ ಗ್ರಾಹಕನಿಂದ ಬರುವ ವರಮಾನವನ್ನು (ಎಆರ್‌ಪಿಯು) ಹೆಚ್ಚುಮಾಡುತ್ತಿವೆ ಎಂದು ವರದಿಯಲ್ಲಿ ಹೇಳಲಾಗಿದೆ.

ಜಿಯೊ ಕಂಪನಿಯು ತನ್ನ ಶುಲ್ಕಗಳನ್ನು ಶೇ 10ರಿಂದ ಶೇ 20ರವರೆಗೆ ಹೆಚ್ಚು ಮಾಡಬಹುದು ಎಂದು ಅಂದಾಜು ಮಾಡಲಾಗಿದೆ. ಸಾಲದ ಸುಳಿಗೆ ಸಿಲುಕಿರುವ ವೊಡಾಫೋನ್ ಐಡಿಯಾ ಕಂಪನಿಯು ತಾನು ಬಾಕಿ ಇರಿಸಿಕೊಂಡಿರುವ ಮೊತ್ತಗಳನ್ನು ಪಾವತಿಸಲು 2026–27ರಿಂದ 2029–30ರ ನಡುವೆ ಶುಲ್ಕವನ್ನು ಶೇ 45ರಷ್ಟು ಹೆಚ್ಚಿಸಬೇಕಾಗುತ್ತದೆ ಎಂದು ವರದಿಯು ಹೇಳಿದೆ.

ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ

ಇಂದಿನಿಂದ ಮೂರು ದಿನ ಅರಮನೆ ಮೈದಾನದಲ್ಲಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನವರಿ 9ರಿಂದ 11ರವರೆಗೆ ಬೆಂಗಳೂರಿನ ಅರಮನೆ ಮೈದಾನದ ಗಾಯತ್ರಿ ಗ್ರ್ಯಾಂಡ್, ಗಾಯತ್ರಿ ವೃಕ್ಷದಲ್ಲಿ ನಾಲ್ಕನೇ ಆವೃತ್ತಿಯ 'ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ' ನಡೆಯಲಿದೆ.

ಒಕ್ಕಲಿಗ ಉದ್ಯಮಿಗಳ ಬೆಳವಣಿಗೆ ಮತ್ತು ಯಶಸ್ಸಿಗಾಗಿಯೇ ಮೂರು ದಿನಗಳ ಎಕ್ಸ್‌ಪೊ ಆಯೋಜಿಸಲಾಗಿದೆ. ಇದು ಒಕ್ಕಲಿಗ ಸಮುದಾಯದ ಉದ್ಯಮಶೀಲತೆಗೆ ವೇದಿಕೆ ಕಲ್ಪಿಸುವುದರ ಜೊತೆಗೆ ಇನೋವೇಶನ್, ನೆಟ್‌ವರ್ಕಿಂಗ್ ಹಾಗೂ ಸಹಭಾಗಿತ್ವಕ್ಕೆ ನೆರವಾಗಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

FC EXPO 2026 4TH EDITION 9, 10 ಮತ್ತು 11 ಜನವರಿ

ಆದಿ ಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಸ್ಪಟಿಕಪುರಿ ಸಂಸ್ಥಾನದ ನಂಜಾವಧೂತಸ್ವಾಮೀಜಿ, ವಿಶ್ವ ಒಕ್ಕಲಿಗ ಮಹಾಸಂಸ್ಥಾನದ ನಿಶ್ಚಲಾನಂದನಾಥ ಸ್ವಾಮೀಜಿ, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಭಾಗವಹಿಸಲಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ಸಚಿವರಾದ ಎಚ್.ಡಿ. ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ಮಾಜಿ ಸಂಸದ ಬಿ.ಎನ್. ಬಚ್ಚೇಗೌಡ, ಸಚಿವರಾದ ಎಂ.ಸಿ. ಸುಧಾಕರ್, ಕೃಷ್ಣ ಬೈರೇಗೌಡ, ಎನ್. ಚಲುವರಾಯಸ್ವಾಮಿ, ಕೆ. ವೆಂಕಟೇಶ್, ವಿರೋಧ ಪಕ್ಷದ ನಾಯಕ ಆರ್. ಅಶೋಕ, ಸಂಸದ ಸಿ.ಎನ್. ಮಂಜುನಾಥ, ಶಾಸಕರಾದ ಸಿ.ಎನ್. ಅಶ್ವತ್ಥ ನಾರಾಯಣ, ಎಂ. ಕೃಷ್ಣಪ್ಪ, ಜಿ.ಟಿ. ದೇವೇಗೌಡ, ಕೆ. ಗೋಪಾಲಯ್ಯ, ಶರತ್ ಬಚ್ಚೇಗೌಡ, ಕೆ.ಎಚ್. ಪುಟ್ಟಸ್ವಾಮಿ ಗೌಡ, ಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡ, ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ, ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್, ಒಕ್ಕಲಿಗರ ಸಂಘದ ರಾಜ್ಯ ಅಧ್ಯಕ್ಷ ಎಲ್. ಶ್ರೀನಿವಾಸ್ ಪಾಲ್ಗೊಳ್ಳಲಿದ್ದಾರೆ.

'ಎಕ್ಸ್‌ಪೊದಲ್ಲಿ ಪಾಲ್ಗೊಳ್ಳುವ ಆಸಕ್ತರು ಎಫ್‌ಸಿ ನೆಕ್ಸ್ಟ್ ಆ್ಯಪ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು. ಉತ್ಪನ್ನಗಳು ಮತ್ತು ವ್ಯಾಪಾರಕ್ಕೆ ಸಂಬಂಧಿಸಿದ 200ಕ್ಕೂ ಹೆಚ್ಚು ಮಳಿಗೆಗಳು ಇರಲಿದ್ದು, ಪ್ರದರ್ಶನ ಮತ್ತು ಮಾರಾಟ ಮಳಿಗೆ, ಆಹಾರ ಮಳಿಗೆಗಳನ್ನು ಮುಂಗಡವಾಗಿ ಕಾಯ್ದಿರಿಸಬಹುದು. 70 ಸಾವಿರಕ್ಕೂ ಅಧಿಕ ಯುವ ಉದ್ಯಮಿಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದು ಫಸ್ಟ್ ಸರ್ಕಲ್ ಮುಖ್ಯ ಮಾರ್ಗದರ್ಶಕ ಜಯರಾಮ್ ರಾಯಪುರ, ಫಸ್ಟ್ ಸರ್ಕಲ್ ಅಧ್ಯಕ್ಷ ಡಿ.ಮುನಿರಾಜು ತಿಳಿಸಿದ್ದಾರೆ.

ಅಡಿಕೆ ಧಾರಣೆ

ಮಾರುಕಟ್ಟೆ	ತಳಿ	ಧಾರಣೆ
ಕುಮಟಾ	ಚಿಪ್ಪು	15699-39699
	ಕೋಕ	14617-34889
	ಹಳೆಚಾಲಿ	39099-50639
	ಹೊಸಚಾಲಿ	37699-45600
ಪುತ್ತೂರು	ಕೋಕ	20000-35500
	ಹೊಸತು	26000-45000
ಸಾಗರ	ಬಿಳಿಗೋಟು	12199-37777
	ಚಾಲಿ	28666-46377
	ಕೋಕ	11100-34500
	ಕೆಂಪುಗೋಟು	13129-42591
	ರಾಶಿ	44000-58910
	ಸಿಪ್ಪೆಗೋಟು	8290-25285
ಶಿವಮೊಗ್ಗ	ಬೆಟ್ಟೆ	60810-66829
	ಗೊರಬಲು	19020-44501
	ರಾಶಿ	42696-58899
	ಸರಕು	60659-91699
ಶಿರಸಿ	ಬೆಟ್ಟೆ	45126-56831
	ಬಿಳಿಗೋಟು	26600-41299
	ಚಾಲಿ	43701-51898
	ಕೆಂಪುಗೋಟು	23699-35169
	ರಾಶಿ	52909-59096
ಯಲ್ಲಾಪುರ	ಆಪಿ	68901-74675
	ಬಿಳಿಗೋಟು	16009-36099
	ಕೋಕ	15499-30899
	ಹಳೆಚಾಲಿ	37000-51508
	ಹೊಸಚಾಲಿ	34299-43888
	ಕೆಂಪುಗೋಟು	19099-41519
	ರಾಶಿ	50869-66000
	ತಟ್ಟಿಬೆಟ್ಟೆ	38819-53699

ಭಾರತದಲ್ಲಿ ಬಾಂಗ್ಲಾ ವೀಸಾ ಸೇವೆ ಸ್ಥಗಿತ

ಡಾಕಾ (ಪಿಟಿಐ): ಬಾಂಗ್ಲಾದೇಶದ ಮಧ್ಯಂತರ ಸರ್ಕಾರವು ಸುರಕ್ಷತೆ ದೃಷ್ಟಿಯಿಂದ ವೀಸಾ ಸೇವೆಯನ್ನು ಅಮಾನತಿನಲ್ಲಿ ಇಡುವಂತೆ ನವದೆಹಲಿ ಸೇರಿ ಭಾರತದಲ್ಲಿರುವ ತನ್ನ ಪ್ರಮುಖ ಅಧಿಕಾರಿಗಳಿಗೆ ಗುರುವಾರ ಸೂಚನೆ ನೀಡಿದೆ.

ವಿದೇಶಾಂಗ ವ್ಯವಹಾರಗಳ ಸಲಹೆಗಾರ ಎಂ. ತೌಹಿದ್ ಹುಸೇನ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಭಾರತದಲ್ಲಿರುವ ನಮ್ಮ ಮೂವರು ಅಧಿಕಾರಿಗಳಿಗೆ ವೀಸಾ ವಿಭಾಗಗಳನ್ನು ತಾತ್ಕಾಲಿಕವಾಗಿ ಮುಚ್ಚಲು ತಿಳಿಸಿದ್ದೇವೆ' ಎಂದರು.

'ಇದಲ್ಲದೇ, ಅಮೆರಿಕ ಇತ್ತೀಚೆಗಷ್ಟೆ ಜಾರಿ ಮಾಡಿರುವ ವಿಸಾ ಬಾಂಡ್ (ಗ್ಯಾರಂಟಿ) ಅಗತ್ಯದ ಆದೇಶವನ್ನು ರದ್ದು ಮಾಡುವಂತೆ ಮನವಿ ಮಾಡಿಕೊಳ್ಳಲಾಗಿದೆ' ಎಂದರು.

ಭಾರತ ಈ ಹಿಂದೆ 2024ರ ಆಗಸ್ಟ್‌ನಲ್ಲಿ ಬಾಂಗ್ಲಾದೇಶಿ ನಾಗರಿಕರ ವೀಸಾ ಮೇಲೆ ನಿಯಂತ್ರಣ ಹೇರಿತ್ತು.

HEALTH SPECIAL

ಉಚಿತ ಶಿಬಿರ
ಶೇಷಾದ್ರಿಪುರಂ ಬೆಂಗಳೂರಿನಲ್ಲಿ
20 ದಿನಗಳು ಮಾತ್ರ
ದಿನಾಂಕ 08-01-2026 ರಿಂದ 27-01-2026 ವರೆಗೆ
ಸಮಯ: ಬೆಳಗೆ 10.00 ರಿಂದ 02.00 ವರೆಗೆ
ಮಂಡಿ, ಬೆನ್ನು, ಕತ್ತುನೋವು, ಕೀಲುನೋವು, ಭುಜದ ನೋವು, ಲಕ್ವ, ಹಿಮ್ಮಡಿ ನೋವು, ಟೆನ್ನಿಸ್ ಎಲ್ಬೋ ಪೇನ್, ತಲೆನೋವು, ಮೈಗ್ರೇನ್, ಮಾನಸಿಕ ಸಮಸ್ಯೆ, ಚಿಕೂನ್‌ಗುನ್ಯಾ, ಗಂಟುನೋವು, ರುಮಟಾಯ್ಡ್ ಆರ್ಥ್ರೈಟಿಸ್, ವೆರಿಕೋಸ್ ವೇಯಿನ್ಸ್ ಸಮಸ್ಯೆ, ಕಾಲುಗಳಲ್ಲಿ ಊತ, ರಕ್ತ ಚಲನೆ ಇಲ್ಲದವರಿಗೆ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ, ಸಿಯಾಟಿಕಾ, ಮೂಳೆ ನೋವುಗಳಿಗೆ ಯಾವುದೇ ರೀತಿಯ ಔಷದಿ ಇಲ್ಲದೆ, ಯಾವುದೇ ರೀತಿಯ ಶಸ್ತ್ರ ಚಿಕಿತ್ಸೆ ಇಲ್ಲದೆ ವಿಶೇಷವಾದ ಹೈಡ್ರೊ ಥೆರಪಿಯಿಂದ ಮಸಾಜ್ ಮಾಡಲಾಗುತ್ತದೆ.

SP ಸೆಲೆಬ್ರಿಟಿ ವೆಲ್ನೆಸ್ (ರಿ) 9740142206
ವಿಳಾಸ : ಸನ್ಮಾನ್ ಹೋಟೆಲ್ ಹತ್ತಿರ , ಕುಮಾರ ಕೀನೊ ಅಪಾರ್ಟ್ಮೆಂಟ್ ಎದುರು, ಶೇಷಾದ್ರಿಪುರಂ, ಬೆಂಗಳೂರು-20

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

ಉದ್ಯೋಗಾವಕಾಶ

General

ಕಂಪನಿಗಳಿಗೆ ಬೇಕಾಗಿದ್ದಾರೆ: ಟಯೋಟಾ, ಬ್ರಿಟಾನಿಯಾ, ಟಾಟಾಮೋಟಾರ್ಸ್, TVSಗಳಿಗೆ SSLC,PUC, Degree, Diploma, ITIನವರು 18,500/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೊಟವಿದೆ. 9035075571.

Part-Time Jobs

ಮನೆಯಿಂದಲೇ ಕೆಲಸಗಳಿಗೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಕರ್ನಾಟಕದಾದ್ಯಂತ ಕಂಪನಿಗಳಿಗೆ ಆದ್ಯತೆ. 20,000/- 35,000/- ಸಂಪಾದಿಸಿ, ಕೊರಿಯರ್ ಸೌಲಭ್ಯವಿದೆ. 9964311522, 9742133993

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವೈಯಕ್ತಿಕ

Announcements

ಈ ಮೂಲಕ ಸಂಬಂಧಪಟ್ಟ ಎಲ್ಲರಿಗೂ ತಿಳಿಯಪಡಿಸುವುದೇನೆಂದರೆ ರಾಜಲಕ್ಷ್ಮಿ (NSDL ಗ್ರಾಹಕ ಐಡಿಗಳು:26500855,2650 1149), ರಾಜಲಕ್ಷ್ಮಿ ಹೆಚ್ (PAN:AKPPR**M, ಆಧಾರ್:XXXXXXXX4464),ರಾಜಲಕ್ಷ್ಮಿ ಹರಿಹರನ್(ಪಾಸ್‌ಪೋರ್ಟ್:M*82) ಎಲ್ಲರೂ ಒಂದೇ ವ್ಯಕ್ತಿಯಾಗಿರುತ್ತಾರೆ. ಈ ಮೂಲಕ ಸಂಬಂಧಪಟ್ಟ ಎಲ್ಲರಿಗೂ ತಿಳಿಯಪಡಿಸುವುದೇನೆಂದರೆ ಹರಿಹರನ್ (NSDL ಗ್ರಾಹಕ ಐಡಿ 26501149), ಹರಿಹರನ್ ಟಿ ಎಸ್(PAN:AABPH**A, ಆಧಾರ್:XXXXXXXX7785),ಹರಿಹರನ್ ತರಕಾಡ್ ಸುಂದರೇಶನ್ (ಪಾಸ್‌ಪೋರ್ಟ್:M*43) ಎಲ್ಲರೂ ಒಂದೇ ವ್ಯಕ್ತಿಯಾಗಿರುತ್ತಾರೆ.

Change of Name

I' SANTOSH S/o Nagenderappa Navale R/o Bangalore city my old name is Santosh Nagenderappa Navale. Changed my New Name SANTOSH NAVALE, Should be considered so full purposes

ಪ್ರವಾಸ

Travel

ಅಯೋಧ್ಯ, ಪ್ರಯಾಗ್‌ರಾಜ್ ಗಯಾ,ಕಾಶಿ 6 ದಿನಗಳು ಫೆಬ್ರವರಿ ಮಾರ್ಚ್ ಏಪ್ರಿಲ್‌ಗಳಲ್ಲಿ ವಿಜಯವಾಡ ಭದ್ರಾಚಲಂ ರಾಜಮಂಡ್ರಿ ಪಂಚರಾಮ, ಮಂದಿರಗಳು ಸಿಂಹಾಚಲಂ ವಿಶಾಖಪಟ್ಟಣಂ10 ದಿನಗಳು. ರಾಮೇಶ್ವರಂ ಕನ್ಯಾಕುಮಾರಿ ಮಧುರೈ,ತಂಜಾವೂರು ತಿರುವನಂತಪುರಂ ಗುರುವಾಯೂರು 7 ದಿನಗಳು. ಕೊಲ್ಕತ್ತಾ ಪುರಿ,ಭುವನೇಶ್ವರ್ ಶಕ್ತಿಪೀಠಗಳು 7 ದಿನಗಳು. ಶ್ರೀಶೈಲ,ಮಹಾನಂದಿ ಅಹೋಬಲಂ 5 ದಿನಗಳು. ಫೆಬ್ರವರಿ ಮಾರ್ಚ್ ನಲ್ಲಿ ಸಂಪರ್ಕಿಸಿ. 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಬೆಂಗಳೂರು.18.

11ದಿನಗಳ ಗುಜರಾತ್ ರನ್‌ಆಫ್ ಕಚ್. 12 ದಿನಗಳ ಮಧ್ಯಪ್ರದೇಶ. 4 ದಿನಗಳ ಪುರಿಜಗನ್ನಾಥ್. 4 ದಿನಗಳ ಉಜ್ಜಯಿನಿ ಓಂಕಾರೇಶ್ವರ. 10ದಿನಗಳ ನೇಪಾಳ ಮುಕ್ತಿನಾಥ್. 8 ದಿನಗಳ ಅಸ್ಸಾಂ,ಮೇಘಾಲಯ ಕಾಜಿರಂಗ ಸಂಪರ್ಕಿಸಿ. ನಂದಿ ಹಾಲಿಡೇಸ್ ಬಸವನಗುಡಿ 9740228186 9035513332

ಮಲೇಷಿಯಾ & ಸಿಂಗಾಪುರ ಪ್ರವಾಸ 7 ದಿನಗಳು 22/01/2026 ಶ್ರೀಲಂಕಾ 6 ದಿನಗಳ ಪ್ರವಾಸ 5/3/26 ದುಬೈ ಪ್ರವಾಸ 6 ದಿನಗಳು 12/2/26 ಸಂಪರ್ಕಿಸಿ ಸುವರ್ಣ ಯಾತ್ರಾ 6360146483/ 9019462508

ನಗದುರಹಿತ ಚಿಕಿತ್ಸೆ: ಪ್ರಧಾನಿ ಶೀಘ್ರ ಚಾಲನೆ

ನವದೆಹಲಿ (ಪಿಟಿಐ): ರಸ್ತೆ ಅಪಘಾತಗಳಲ್ಲಿ ಗಾಯಾಳು ಆಗುವವರಿಗೆ ನಗದು ರಹಿತವಾಗಿ ಚಿಕಿತ್ಸೆ ಒದಗಿಸುವ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಶೀಘ್ರವೇ ಚಾಲನೆ ನೀಡಲಿದ್ದಾರೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಗುರುವಾರ ತಿಳಿಸಿದ್ದಾರೆ.


ನಿತಿನ್ ಗಡ್ಕರಿ

ಈ ಸೌಲಭ್ಯವನ್ನು ಸಚಿವಾಲಯವು 2024ರ ಮಾರ್ಚ್‌ನಲ್ಲಿ ಪ್ರಾಯೋಗಿಕವಾಗಿ ಚಂಡೀಗಢದಲ್ಲಿ ಆರಂಭಿಸಿತು. ನಂತರ ಇದನ್ನು ಆರು ರಾಜ್ಯಗಳಿಗೆ ವಿಸ್ತರಣೆ ಮಾಡಲಾಗಿದೆ. ಪ್ರಧಾನಿ ಮೋದಿ ಅವರು ಇದನ್ನು ರಾಷ್ಟ್ರದ ಎಲ್ಲೆಡೆಗೆ ವಿಸ್ತರಿಸುವ ಯೋಜನೆಯನ್ನು ಉದ್ಘಾಟಿಸಲಿದ್ದಾರೆ.

ರಸ್ತೆ ಅಪಘಾತಗಳಲ್ಲಿ ಗಾಯಗೊಂಡವರಿಗೆ ಸಕಾಲದಲ್ಲಿ ವೈದ್ಯಕೀಯ ಚಿಕಿತ್ಸೆ ದೊರಕದೆ ಪ್ರಾಣಹಾನಿ ಸಂಭವಿಸುವುದನ್ನು ತಡೆಯುವ ಉದ್ದೇಶವನ್ನು ಈ ಯೋಜನೆ ಹೊಂದಿದೆ. ಈ ಯೋಜನೆಯ ಅಡಿಯಲ್ಲಿ ಗಾಯಾಳುಗಳು ತಲಾ ₹1.5 ಲಕ್ಷದವರೆಗೆ, ಅಪಘಾತ ನಡೆದ ದಿನ ದಿಂದ ಏಳು ದಿನಗಳವರೆಗೆ ನಗದು ರಹಿತವಾಗಿ ಚಿಕಿತ್ಸೆ ಪಡೆಯಲು ಅರ್ಹರಾಗಿರುತ್ತಾರೆ. ದೇಶದ ಯಾವುದೇ ರಸ್ತೆಯಲ್ಲಿ ಮೋಟಾರು ವಾಹನ ಗಳಿಂದ ಉಂಟಾಗುವ ಅಪಘಾತಗಳಲ್ಲಿ ಗಾಯ ಗೊಂಡವರು ಈ ಸೌಲಭ್ಯಕ್ಕೆ ಅರ್ಹರಾಗಲಿದ್ದಾರೆ.

ಆದರೆ 2024ರ ಮಾರ್ಚ್‌ನಲ್ಲಿ ಪ್ರಾಯೋಗಿಕವಾಗಿ ಈ ಯೋಜನೆ ಆರಂಭವಾದ ನಂತರದಲ್ಲಿ ನಗದು ರಹಿತ ಚಿಕಿತ್ಸೆಗಾಗಿ ಬಂದ ಕೋರಿಕೆಗಳ ಪೈಕಿ ಸರಿಸುಮಾರು ಶೇ 20ರಷ್ಟು ತಿರಸ್ಕೃತಗೊಂಡಿವೆ.

ಮುಂಬೈ ಧಾರಣೆ (ಶೇಂಗಾ) 08-01-2026

ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ (ಹೊಸ)	7800-7900
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಪಾಮ್ ವಾರದ ಡೆಲಿವರಿ	1258 (1258)
ಸೂರ್ಯಕಾಂತಿ ಎಣ್ಣೆ ಕಚ್ಚಾ	1460 (1460)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,35,500 (1,36,000)
ಬೆಳ್ಳಿ ಕೆ.ಜಿಗೆ	2,35,000 (2,43,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಎಲ್ಲೆಡೆಯೂ 'ಎ' ಖಾತೆ

ಒಂದನೇ ಪುಟದಿಂದ...

'ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನಧಿಕೃತ ಬೆಳವಣಿಗೆಗಳನ್ನು ನಿಯಂತ್ರಿಸುವುದು ಈ ತೀರ್ಮಾನದ ಮುಖ್ಯ ಉದ್ದೇಶ. ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯದೇ ನಿವೇಶನಗಳನ್ನು ರಚಿಸಿ ಪರಭಾರೆ ಮಾಡುವುದನ್ನು ಇನ್ನು ಮುಂದೆ ನಿರ್ಬಂಧಿಸಲಾಗುವುದು. ಈಗಾಗಲೇ ಅನಧಿಕೃತವಾಗಿ ರಚಿತವಾಗಿರುವ ಬಡಾವಣೆಗಳನ್ನು ಕಾನೂನು ವ್ಯಾಪ್ತಿಗೆ ತರುವ ಉದ್ದೇಶವೂ ಸರ್ಕಾರದ್ದಾಗಿದೆ' ಎಂದು ಅವರು ತಿಳಿಸಿದರು.

'ಜಿಬಿಎ ಮತ್ತು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 'ಎ' ಖಾತಾ ಮತ್ತು 'ಬಿ' ಖಾತಾ ಹೊಂದಿರುವವರು ಪಾವತಿಸುತ್ತಿರುವ ಆಸ್ತಿ ತೆರಿಗೆ ಪ್ರಮಾಣದಲ್ಲಿ ಭಾರಿ ವ್ಯತ್ಯಾಸವಿದೆ. 'ಎ' ಖಾತಾದಾರರು ಹೆಚ್ಚು ತೆರಿಗೆ ಪಾವತಿಸುತ್ತಿದ್ದರೆ, 'ಬಿ' ಖಾತಾದಾರರು ಕಡಿಮೆ ತೆರಿಗೆ ಪಾವತಿಸುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಆದಾಯ ಕಡಿಮೆ ಆಗುತ್ತಿದೆ. ಎಲ್ಲರಿಗೂ 'ಎ' ಖಾತಾ ನೀಡುವುದರಿಂದ ಸರ್ಕಾರಕ್ಕೆ ಆದಾಯ ಹೆಚ್ಚುತ್ತದೆ. ಆದರೆ, 'ಎ' ಖಾತಾ ನೀಡುವುದರಿಂದ ಅನಧಿಕೃತ ಕಟ್ಟಡಗಳನ್ನು 'ಸಕ್ರಮ' ಎಂದು ಪರಿಗಣಿಸಲಾಗುವುದಿಲ್ಲ' ಎಂದು ಮೂಲಗಳು ತಿಳಿಸಿವೆ.

'ಬಿ' ಖಾತಾ ಹೊಂದಿರುವವರು 'ಎ' ಖಾತಾ ಪಡೆಯುವುದರಿಂದ ಆಸ್ತಿಯ ಕ್ರಯ–ವಿಕ್ರಯ, ಅಡಮಾನ, ಬ್ಯಾಂಕ್ ಸಾಲ ಸೇರಿ ವಿವಿಧ ಸೌಕರ್ಯಗಳನ್ನು ಪಡೆಯಲು ಸಹಾಯಕವಾಗುತ್ತದೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹20000-22000
ಬೆಂಗಳೂರು	₹31000-43000
ತಿಪಟೂರು	₹27000-28300
ತುರುವೇಕೆರೆ	₹27000-28200

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1400-2200
ಮಧ್ಯಮ	₹800-1400
ಸಣ್ಣ	₹400-800

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಶೇ 500 ಸುಂಕ ಮಸೂದೆ: ಟ್ರಂಪ್ ಅಸ್ತು

ಒಂದನೇ ಪುಟದಿಂದ...

'ಉಕ್ರೇನ್‌ನಲ್ಲಿ ಪುಟಿನ್ ಹರಿಸುತ್ತಿರುವ ರಕ್ತಪಾತಕ್ಕೆ ಹಣಕಾಸು ಒದಗಿಸುತ್ತಿವೆ. ಅದನ್ನು ತಡೆಯಲು ಮತ್ತು ತೈಲ ಖರೀದಿ ದೇಶಗಳನ್ನು ಶಿಕ್ಷಿಸಲು ಈ ಮಸೂದೆಯು ಟ್ರಂಪ್ ಅವರಿಗೆ ಅಧಿಕಾರ ನೀಡುತ್ತದೆ' ಎಂದೂ ಹೇಳಿದ್ದಾರೆ.

ಮುಂದಿನ ವಾರದ ಆರಂಭದಲ್ಲಿ ಈ ಮಸೂದೆಗೆ ಎರಡೂ ಪಕ್ಷಗಳ ಸದಸ್ಯರು ಬಹುಮತದಿಂದ ಅಂಗೀಕಾರ ನೀಡುತ್ತಾರೆ ಎಂಬ ನಿರೀಕ್ಷೆಯಿದೆ ಎಂದು ಗ್ರಹಾಂ ಭರವಸೆ ವ್ಯಕ್ತಪಡಿಸಿದರು.

ಗ್ರಹಾಂ ಮತ್ತು ಬ್ಲೂಮೆಂಥಾಲ್ ಅವರು ಈ ಮಸೂದೆಯನ್ನು ಕಳೆದ ವರ್ಷ ಪರಿಚಯಿಸಿದ್ದರು. ರಷ್ಯಾದಿಂದ ತೈಲ ಖರೀದಿಸುವ ಮತ್ತು ಅದನ್ನು ಮರು ಮಾರಾಟ ಮಾಡುವ ದೇಶಗಳ ಮೇಲೆ ಶೇ 500ರಷ್ಟು ಸುಂಕ ವಿಧಿಸುವುದನ್ನು ಅದರಲ್ಲಿ ಪ್ರಸ್ತಾಪಿಸಲಾಗಿದೆ. ಇದನ್ನು ಸೆನೆಟ್‌ನ ವಿದೇಶಾಂಗ ವ್ಯವಹಾರಗಳ ಸಮಿತಿಯ ಸದಸ್ಯರು ಸರ್ವಾನುಮತದಿಂದ ಬೆಂಬಲಿಸಿದ್ದರು.

ಟ್ರಂಪ್ ಭಾರತದ ಸರಕುಗಳ ಮೇಲೆ ಶೇ 50ರಷ್ಟು ಸುಂಕವನ್ನು ಈಗಾಗಲೇ ವಿಧಿಸಿದ್ದಾರೆ. ಇದರಲ್ಲಿ ರಷ್ಯಾದಿಂದ ಇಂಧನ ಖರೀದಿಸುತ್ತಿರುವುದಕ್ಕೆ ಶೇ 25ರಷ್ಟು ಸುಂಕವೂ ಸೇರಿದೆ.

ನಿತ್ಯ ಹೊಸ ಸವಾಲು: ಕಾಂಗ್ರೆಸ್

ನವದೆಹಲಿ (ಪಿಟಿಐ): ಭಾರತ ಮತ್ತು ಅಮೆರಿಕ ನಡುವಿನ ಸಂಬಂಧವು ಸಂಕಷ್ಟದ ದಿನಗಳನ್ನು ಕಾಣುತ್ತಿದ್ದು, ನಿತ್ಯ ಹೊಸ ಸವಾಲುಗಳನ್ನು ಎದುರಿಸಬೇಕಾಗಿದೆ ಎಂದು ಕಾಂಗ್ರೆಸ್ ಗುರುವಾರ ಅಸಮಾಧಾನ ವ್ಯಕ್ತಪಡಿಸಿದೆ.

ರಷ್ಯಾದಿಂದ ತೈಲ ಖರೀದಿಸುವ ದೇಶಗಳ ಮೇಲೆ ಶೇ 500ರಷ್ಟು ಸುಂಕ ವಿಧಿಸಬಹುದಾದ ನಿರ್ಬಂಧಗಳ ಮಸೂದೆಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆಂಬಲಿಸಿದ ಬೆನ್ನಲ್ಲೇ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಭಾರತದ ಪ್ರಧಾನಿ ಅವರ ಸಮಾಧಾನಕರ ಪೋಸ್ಟ್‌ಗಳ ಹೊರತಾಗಿಯೂ ಉಭಯ ದೇಶಗಳ ನಡುವಿನ ಸಂಬಂಧಗಳು ಹೊಸ ಅಸಹಜತೆಯ ಹಾದಿ ಹಿಡಿಯುತ್ತಿವೆ. ಇದಕ್ಕೆ ಪ್ರತಿಯಾಗಿ ಟ್ರಂಪ್ ಅವರು ಪಾಕಿಸ್ತಾನದ ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್ ಅವರನ್ನು ಹೊಗಳುತ್ತಲೇ ಇದ್ದಾರೆ ಎಂದಿದ್ದಾರೆ.

60 ಸಂಸ್ಥೆಗಳಿಂದ ಹಿಂದೆ ಸರಿದ ಅಮೆರಿಕ

ಒಂದನೇ ಪುಟದಿಂದ...

'ವಿಶ್ವಸಂಸ್ಥೆಯ 31 ಸಂಸ್ಥೆಗಳು, ವಿಶ್ವಸಂಸ್ಥೆಯೇತರ 35 ಸಂಸ್ಥೆಗಳು ಅಮೆರಿಕದ ರಾಷ್ಟ್ರೀಯ ಹಿತಾಸಕ್ತಿ, ಭದ್ರತೆ, ಆರ್ಥಿಕ ಸಮೃದ್ಧಿ ಹಾಗೂ ಸಾರ್ವಭೌಮತೆಗೆ ವಿರುದ್ಧವಾಗಿ ಕೆಲಸ ಮಾಡುತ್ತಿವೆ' ಎಂದು ಶ್ವೇತಭವನವು ಬಿಡುಗಡೆಗೊಳಿಸಿದ ಮಾಹಿತಿಪತ್ರದಲ್ಲಿ ತಿಳಿಸಿದೆ. ಸಾಧ್ಯವಾದಷ್ಟು ಬೇಗ ಈ ಸಂಸ್ಥೆಗಳಿಂದ ಅಮೆರಿಕವು ಹೊರಬರುವುದಕ್ಕಾಗಿ ದೇಶದ ಎಲ್ಲಾ ಸಂಸ್ಥೆಗಳು ತಕ್ಷಣವೇ ಕ್ರಮ ಕ್ರಮ ಕೈಗೊಳ್ಳಬೇಕು ಎಂದು ಟ್ರಂಪ್ ಅವರು ಕಾರ್ಯಕಾರಿ ಆದೇಶದಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ವಿಶ್ವಸಂಸ್ಥೆಯ ಎಲ್ಲಾ ಅಂಗಸಂಸ್ಥೆಗಳಿಂದ ಹಿಂದೆ ಸರಿಯುವುದೆಂದರೆ, ಅನುದಾನ ಸ್ಥಗಿತ ಹಾಗೂ ಭಾಗವಹಿಸುವುದನ್ನು ನಿಲ್ಲಿಸಲಾಗುತ್ತದೆ ಎಂದೂ ಅರ್ಥ ಎಂದು ಟ್ರಂಪ್ ತಿಳಿಸಿದ್ದಾರೆ.

ಹಿಂದೆ ಸರಿದ ಪ್ರಮುಖ ಸಂಸ್ಥೆಗಳು: ಜಾಗತಿಕ ತಾಪಮಾನ ನಿಯಂತ್ರಣದ ದಿಸೆಯಲ್ಲಿ ಕೆಲಸ ಮಾಡಲು ಭಾರತ ಹಾಗೂ ಫ್ರಾನ್ಸ್ ಸಹಕಾರದಲ್ಲಿ ಸ್ಥಾಪನೆಯಾಗಿರುವ 'ಅಂತರರಾಷ್ಟ್ರೀಯ ಸೌರಶಕ್ತಿ ಒಕ್ಕೂಟ'ವು ಅಮೆರಿಕ ಹೊರ ಬರುವ ಸಂಸ್ಥೆಗಳ ಪಟ್ಟಿಯಲ್ಲಿ ಇದೆ.

66 ಸಂಸ್ಥೆಗಳು ಕಳಪೆ ನಿರ್ವಹಣೆಯೊಂದಿಗೆ ತಮ್ಮದೇ ಕಾರ್ಯಸೂಚಿಗೆ ತಕ್ಕಂತೆ ನಡೆಯುತ್ತಿದ್ದು, ಅಮೆರಿಕದ ಸಾರ್ವಭೌಮತೆ, ಸ್ವಾತಂತ್ರ್ಯ, ಸಮೃದ್ಧಿಗೂ ಬೆದರಿಕೆ ಒಡ್ಡುತ್ತಿವೆ

ಮಾರ್ಕೊ ರುಬಿಯೊ, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ

ದೇಶದ ಹಿತಾಸಕ್ತಿಗೆ ಕೆಲಸ ಮಾಡದ ಹಲವು ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಅಮೆರಿಕ ಹೊರಬರುತ್ತದೆ. ನೆರವನ್ನೂ ನೀಡುವುದಿಲ್ಲ

ಮೈಕ್ ವಾಲ್ಟ್ಜ್, ವಿಶ್ವಸಂಸ್ಥೆಯ ಅಮೆರಿಕ ರಾಯಭಾರಿ

ಇದರಲ್ಲಿ 100 ರಾಷ್ಟ್ರಗಳು ಸದಸ್ಯತ್ವ ಹೊಂದಿದ್ದು, 90 ದೇಶಗಳು ಪೂರ್ಣ ಪ್ರಮಾಣದ ಸದಸ್ಯತ್ವ ಹೊಂದಲು ಆಸಕ್ತಿ ವ್ಯಕ್ತಪಡಿಸಿವೆ.

ಉಳಿದಂತೆ, ಉಕ್ರೇನ್‌ನಲ್ಲಿರುವ ವಿಜ್ಞಾನ- ತಂತ್ರಜ್ಞಾನ ಕೇಂದ್ರ, ಜಾಗತಿಕ ತಾಪಮಾನ ಬದಲಾವಣೆಯ ಅಂತರ ರಾಷ್ಟ್ರೀಯ ಸಮಿತಿ, ವಿಶ್ವಸಂಸ್ಥೆಯ ಆರ್ಥಿಕ–ಸಾಮಾಜಿಕ ವ್ಯವಹಾರಗಳ ಸಮಿತಿ, ಆಫ್ರಿಕಾದ ಆರ್ಥಿಕ ಆಯೋಗ, ಶಾಂತಿ ನಿರ್ಮಾಣ ಆಯೋಗ, ಶಾಂತಿ ಸ್ಥಾಪನೆ ನಿಧಿ, ವಿಶ್ವಸಂಸ್ಥೆ ವ್ಯವಹಾರ ಹಾಗೂ ಅಭಿವೃದ್ಧಿ, ವಿಶ್ವಸಂಸ್ಥೆಯ ಲಿಂಗ ಸಮಾನತೆ ಹಾಗೂ ಮಹಿಳಾ ಸಬಲೀಕರಣ ಸಮಿತಿ ಪ್ರಮುಖವಾದವು.

'ಅಮೆರಿಕ ಹಿಂದೆ ಸರಿದಿರುವ ಎಲ್ಲ ಮಾಹಿತಿಯನ್ನು ಪಡೆದು ಪ್ರತಿಕ್ರಿಯೆ ನೀಡಲಾಗುವುದು' ಎಂದು ವಿಶ್ವಸಂಸ್ಥೆಯ ವಕ್ತಾರರು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಹಿಂದೆ ಸರಿಯುವ ನಿರ್ಧಾರ ಪ್ರಕಟಿಸಿದ ಅಮೆರಿಕ
- ದೇಶದ ಹಿತಾಸಕ್ತಿ ಕಾಪಾಡಲು ವಿಫಲ
- ಮುಂದಿನ ದಿನಗಳಲ್ಲಿ ಈ ಸಂಸ್ಥೆಗಳಿಗೆ ಯಾವುದೇ ನೆರವು ನೀಡಲ್ಲ

ಹಡಗಿನಲ್ಲಿ ಭಾರತೀಯ ಸಿಬ್ಬಂದಿ: ರಷ್ಯಾ ಕಳವಳ

ಮಾಸ್ಕೋ / ಲಂಡನ್ (ಪಿಟಿಐ): ಅಮೆರಿಕ ವಶಪಡಿಸಿಕೊಂಡಿರುವ ರಷ್ಯಾದ ತೈಲ ಟ್ಯಾಂಕರ್ ಇದ್ದ ಹಡಗಿನಲ್ಲಿ ಒಬ್ಬ ಭಾರತೀಯ ಸಿಬ್ಬಂದಿಯೂ ಇದ್ದು, ಸಿಬ್ಬಂದಿಯ ಜತೆಗೆ ಮಾನವೀಯವಾಗಿ ವರ್ತಿಸುವಂತೆ ರಷ್ಯಾ, ಅಮೆರಿಕವನ್ನು ಆಗ್ರಹಿಸಿದೆ.

ಅಟ್ಲಾಂಟಿಕಾದಲ್ಲಿ ಬುಧವಾರ ಬೆಲ್ಲಾ–1 ಹೆಸರಿನ ರಷ್ಯಾ ಧ್ವಜವಿದ್ದ ಹಡಗನ್ನು ಅಮೆರಿಕ ವಶಪಡಿಸಿಕೊಂಡಿದೆ. ಈ ಬಗ್ಗೆ ರಷ್ಯಾ ಕಳವಳ ವ್ಯಕ್ತಪಡಿಸಿ, ಸಾಗರ ಸಂಚಾರ ಸ್ವಾತಂತ್ರ್ಯದ ಬಗೆಗಿರುವ ಅಂತರರಾಷ್ಟ್ರೀಯ ಕಾನೂನುಗಳಿಗೆ ಬದ್ಧವಾಗಿ ಅಮೆರಿಕ ನಡೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ಜತೆಗೆ ಹಡಗಿನಲ್ಲಿ ಮೂವರು ರಷ್ಯಾ ಸಿಬ್ಬಂದಿ, ಒಬ್ಬ ಭಾರತೀಯ ಸಿಬ್ಬಂದಿ, ಜಾರ್ಜಿಯಾ ಹಾಗೂ ಉಕ್ರೇನ್ ಮೂಲದ ಸಿಬ್ಬಂದಿ ಇರುವ ಬಗ್ಗೆಯೂ ರಷ್ಯಾ ಕಳವಳ ವ್ಯಕ್ತಪಡಿಸಿದೆ. ಸಿಬ್ಬಂದಿಯ ಹಕ್ಕು ಮತ್ತು ಹಿತಾಸಕ್ತಿಗೆ ಅನುಗುಣವಾಗಿ ಮಾನವೀಯ ನೆಲೆಗಟ್ಟಿನಲ್ಲಿ ಅವರೊಂದಿಗೆ ವರ್ತಿಸಿ, ಸಿಬ್ಬಂದಿ ತಮ್ಮ ತಾಯಿ ನಾಡಿಗೆ ಹಿಂದಿರುಗಲು ಯಾವುದೇ ಅಡೆತಡೆ ಉಂಟು ಮಾಡಬಾರದೆಂದೂ ರಷ್ಯಾದ ವಿದೇಶಾಂಗ ಸಚಿವಾಲಯ ಆಗ್ರಹಿಸಿದೆ.

ತೈಲದ ದುರಾಸೆ (ವೆನೆಜುವೆಲಾ ವರದಿ): 'ಅಮೆರಿಕ ಅಧ್ಯಕ್ಷರು ಆರೋಪಿಸಿರುವಂತೆ ಮಾದಕದ್ರವ್ಯ ಹಾವಳಿಯಾಗಲೀ, ಪ್ರಜಾಪ್ರಭುತ್ವದ ಅಧಃಪತನವಾಗಲೀ ನಮ್ಮ ದೇಶದಲ್ಲಿ ಇಲ್ಲ. ಅವರು ತೈಲದ ಮೇಲಿನ ದುರಾಸೆಯಿಂದ ಇಷ್ಟೆಲ್ಲ ಒತ್ತಡ ಹೇರುತ್ತಿದ್ದಾರೆ' ಎಂದು ವೆನೆಜುವೆಲಾದ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರಾಡ್ರಿಗಸ್ ಸ್ಥಳೀಯ ಟಿವಿಯ ನೇರ ಪ್ರಸಾರದ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ರಷ್ಯಾ ಧ್ವಜ ಹೊಂದಿದ್ದ ಹಡಗು ಬ್ರಿಟನ್, ಅಮೆರಿಕ ವಶಕ್ಕೆ

ಬ್ರಿಟನ್ ಹಾಗೂ ಅಮೆರಿಕ ಪಡೆಗಳು ಜಂಟಿ ಕಾರ್ಯಾಚರಣೆ ನಡೆಸಿ, ರಷ್ಯಾ ಧ್ವಜ ಹೊಂದಿದ್ದ ತೈಲ ಹಡಗನ್ನು ವಶಪಡಿಸಿಕೊಂಡಿವೆ. ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಈ ಕುರಿತು ಮಾತುಕತೆ ನಡೆಸಿದರು.

'ಬೆಲ್ಲಾ 1' ಹಡಗನ್ನು ವಶಪಡಿಸಿಕೊಂಡ ಕಾರ್ಯಾಚರಣೆ, ಉಕ್ರೇನ್‌ನಲ್ಲಿ ಇತ್ತೀಚೆಗೆ ನಡೆದ ಬದಲಾವಣೆಗಳು ಹಾಗೂ ವೆನಿಜುವೆಲಾದಲ್ಲಿ ಅಮೆರಿಕದ ಕಾರ್ಯಾಚರಣೆ ಬಗ್ಗೆ ಉಭಯ ನಾಯಕರು ಬುಧವಾರ ದೂರವಾಣಿಯಲ್ಲಿ ಮಾತುಕತೆ ನಡೆಸಿದರು ಎಂದು ಪ್ರಧಾನಿ ಕಚೇರಿ ತಿಳಿಸಿದೆ.

ಹರ್ಮನ್‌ಪ್ರೀತ್ –ಸ್ಮೃತಿ ಮುಖಾಮುಖಿ

ಮಹಿಳಾ ಪ್ರೀಮಿಯರ್ ಲೀಗ್ ಇಂದಿನಿಂದ: ಮುಂಬೈ ತಂಡಕ್ಕೆ ಆರ್‌ಸಿಬಿ ಸವಾಲು

ನವಿ ಮುಂಬೈ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ಅವರಿಗೆ 2025ನೇ ಇಸವಿಯು ಅವಿಸ್ಮರಣೀಯ.

ಏಕೆಂದರೆ; ಹೋದ ವರ್ಷ ಅವರು ಮಹಿಳೆಯರ ಏಕದಿನ ವಿಶ್ವಕಪ್ ಜಯದತ್ತ ಭಾರತ ತಂಡವನ್ನು ಮುನ್ನಡೆಸಿದರು. ಅದಕ್ಕೂ ಮುನ್ನ ಮುಂಬೈ ಇಂಡಿಯನ್ಸ್ ತಂಡವು ಮಹಿಳಾ ಪ್ರೀಮಿಯರ್ ಲೀಗ್ ಕಿರೀಟ ಧರಿಸಲೂ ಅವರ ನಾಯಕತ್ವ ಕಾರಣವಾಗಿತ್ತು.

ಇದೀಗ ಅವರು ಆ ಪ್ರಶಸ್ತಿಯನ್ನು ಉಳಿಸಿಕೊಳ್ಳುವ ಛಲದೊಂದಿಗೆ ಕಣಕ್ಕಿಳಿಯುತ್ತಿದ್ದಾರೆ. ವಿಶ್ವಕಪ್ ಫೈನಲ್ ಪಂದ್ಯ ನಡೆದ ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿಯೇ ಡಬ್ಲ್ಯುಪಿಎಲ್ ಆರಂಭವಾಗಲಿದೆ.

ಶುಕ್ರವಾರ ಆರಂಭವಾಗಲಿರುವ ಡಬ್ಲ್ಯುಪಿಎಲ್ ನಾಲ್ಕನೇ ಆವೃತ್ತಿಯಲ್ಲಿ ಹರ್ಮನ್ ನಾಯಕತ್ವದ ಮುಂಬೈ ಇಂಡಿಯನ್ಸ್ ತಂಡವು ಸ್ಮೃತಿ ಮಂದಾನ ಸಾರಥ್ಯದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಬಳಗವನ್ನು ಎದುರಿಸಲು ಸಿದ್ಧವಾಗಿದೆ.

ವಿಶ್ವಕಪ್ ವಿಜೇತ ತಂಡದ ಉಪ ನಾಯಕಿಯಾಗಿದ್ದ ಸ್ಮೃತಿ ಬ್ಯಾಟಿಂಗ್‌ನಲ್ಲಿಯೂ ಉತ್ತಮ ಲಯದಲ್ಲಿದ್ದಾರೆ. ಪ್ರಮುಖ ಆಟಗಾರ್ತಿ ಎಲಿಸ್ ಪೆರಿ ಅವರ ಗೈರಿನಲ್ಲಿ ತಂಡವು ಆಡಲಿದೆ. ನದೀನ್ ಡಿ ಕ್ಲರ್ಕ್, ಆಲ್‌ರೌಂಡರ್ ಪೂಜಾ ವಸ್ತ್ರಕರ್, ಜಾರ್ಜಿಯಾ ವೋಲ್, ಶ್ರೇಯಾಂಕಾ ಪಾಟೀಲ, ವಿಕೆಟ್‌ಕೀಪರ್ ರಿಚಾ ಘೋಷ್ ಮತ್ತು ಮಧ್ಯಮವೇಗಿ ರಾಧಾ ಯಾದವ್ ಅವರ ಮೇಲೆ ನಿರೀಕ್ಷೆಯ ಭಾರ ಇದೆ. ವೇಗಿ ಅರುಂಧತಿ ರೆಡ್ಡಿ ಮತ್ತು ಇಂಗ್ಲೆಂಡ್‌ನ ಲಾರೆನ್ ಬೆಲ್ ಅವರ ಪಾತ್ರವೂ ಮಹತ್ವದ್ದಾಗಿದೆ.

ಕರ್ನಾಟಕದ ಆಲ್‌ರೌಂಡರ್ ಶ್ರೇಯಾಂಕಾ ಅವರು 13 ತಿಂಗಳುಗಳ ವಿಶ್ರಾಂತಿ ನಂತರ ಕಣಕ್ಕೆ ಮರಳುತ್ತಿದ್ದಾರೆ. ಗಾಯದ ಸಮಸ್ಯೆಯಿಂದ ಅವರು ದೀರ್ಘ ಸಮಯದಿಂದ ಕ್ರಿಕೆಟ್‌ನಿಂದ ದೂರ ಇದ್ದರು. ಅದರಿಂದಾಗಿ ಹೋದ ವರ್ಷ ಅವರಿಗೆ ವಿಶ್ವಕಪ್ ಟೂರ್ನಿಯಲ್ಲಿಯೂ ಆಡುವ ಅವಕಾಶ ಕೈತಪ್ಪಿತ್ತು.

ಆದರೆ ಮುಂಬೈ ತಂಡವು ಎಲ್ಲ ರೀತಿಯಿಂದಲೂ ಬಲಾಢ್ಯವಾಗಿದೆ. ಹರ್ಮನ್ ಅವರಿಗೆ ಆಲ್‌ರೌಂಡರ್‌ಗಳಾದ ನಟಾಲಿಯಾ ಶಿವರ್ ಬ್ರಂಟ್, ಹೆಯಲಿ ಮ್ಯಾಥ್ಯೂಸ್, ಅಮೆಲಿಯಾ ಕೆರ್ ಮತ್ತು ಶಬ್ನಿಮ್ ಇಸ್ಮಾಯಿಲ್ ಅವರ ಬಲ ಇದೆ. ಉಳಿದ ಆಟಗಾರ್ತಿಯರು ತಮ್ಮ ಸಾಮರ್ಥ್ಯ ಮೆರೆಯುವ ಹುಮ್ಮಸ್ಸಿನಲ್ಲಿದ್ದಾರೆ.

ಜೂನ್-ಜುಲೈನಲ್ಲಿ ಮಹಿಳೆಯರ ಟಿ20 ಕ್ರಿಕೆಟ್ ಟೂರ್ನಿ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಎಲ್ಲ ಆಟಗಾರ್ತಿಯರಿಗೂ ಈ ಡಬ್ಲ್ಯುಪಿಎಲ್ ಟೂರ್ನಿಯು ಪೂರ್ವಭಾವಿ ಸಿದ್ಧತೆಗೆ ವೇದಿಕೆಯಾಗಲಿದೆ.

ಕಳೆದ ಮೂರು ಆವೃತ್ತಿಗಳಲ್ಲಿ ಮುಂಬೈ ಎರಡು, ಆರ್‌ಸಿಬಿ ಒಂದು ಬಾರಿ ಪ್ರಶಸ್ತಿ ಗೆದ್ದಿದೆ. ಡೆಲ್ಲಿ ಕ್ಯಾಪಿಟಲ್ಸ್ ತಂಡವು ಮೂರು ಬಾರಿಯೂ ರನ್ನರ್ಸ್‌ಅಪ್ ಆಗಿತ್ತು.

ತಂಡಗಳು: ರಾಯಲ್ ಚಾಲೆಂಜರ್ಸ್ ಬೆಂಗಳೂರು: ಸ್ಮೃತಿ ಮಂದಾನ (ನಾಯಕಿ), ಜಾರ್ಜಿಯಾ ವೋಲ್, ಅರುಂಧತಿ ರೆಡ್ಡಿ, ಹೇಮಲತಾ ದಯಾಳನ್, ಗೌತಮಿ ನಾಯಕ್, ಗ್ರೇಸ್ ಹ್ಯಾರಿಸ್, ನದೀನ್ ಡಿ ಕ್ಲರ್ಕ್, ಪೂಜಾ ವಸ್ತ್ರಕರ್, ಪ್ರೇಮಾ ರಾವತ್, ರಾಧಾ ಯಾದವ್, ಸಯಾಲಿ ಸತಘರೆ, ಶ್ರೇಯಾಂಕಾ ಪಾಟೀಲ, ಪ್ರತ್ಯೂಷ್ ಕುಮಾರ್, ರಿಚಾ ಘೋಷ್ (ಇಬ್ಬರೂ ವಿಕೆಟ್‌ಕೀಪರ್), ಲಾರೆನ್ ಬೆಲ್, ಲಿನ್ಸೆ ಸ್ಮಿತ್.

ಮುಂಬೈ ಇಂಡಿಯನ್ಸ್: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಅಮನ್ಜೋತ್ ಕೌರ್, ಅಮೆಲಿಯಾ ಕೆರ್, ಹೆಯಲಿ ಮ್ಯಾಥ್ಯೂಸ್, ನಲ್ಲಾ ರೆಡ್ಡಿ, ನಟಾಲಿಯಾ ಶಿವರ್ ಬ್ರಂಟ್, ನಿಕೊಲಾ ಕ್ಯಾರಿ, ಪೂನಮ್ ಖೆಮ್ನರ್, ಸಜೀವನ್ ಸಜನಾ, ಸಂಸ್ಕೃತಿ ಗುಪ್ತಾ, ತ್ರಿವೇಣಿ ವಸಿಷ್ಠ, ಜಿ. ಕಮಲಿನಿ, ರಾಹಿಲಾ ಫಿರ್ದೋಸ್, ಮಿಲಿ ಇಲಿಂಗ್‌ವರ್ಥ್, ಸೈಕಾ ಇಸಾಕ್, ಶಬ್ನಿಮ್ ಇಸ್ಮಾಯಿಲ್.

ಪಂದ್ಯ ಆರಂಭ: ರಾತ್ರಿ 7.30

ಕರ್ನಾಟಕದ ಆಟಗಾರ್ತಿಯರು	
ಆಟಗಾರ್ತಿ	ತಂಡ
ಶ್ರೇಯಾಂಕಾ ಪಾಟೀಲ	ಆರ್‌ಸಿಬಿ
ನಿಕಿ ಪ್ರಸಾದ್	ಡೆಲ್ಲಿ ಕ್ಯಾಪಿಟಲ್ಸ್
ಪ್ರತ್ಯೂಷಾ ಕುಮಾರ್	ಆರ್‌ಸಿಬಿ
ಮಮತಾ ಮಡಿವಾಳ	ಡೆಲ್ಲಿ ಕ್ಯಾಪಿಟಲ್ಸ್

ಛಲಗಾತಿಯರ ಸಾಧನೆಗಳು

ಮಹಿಳಾ ಪ್ರೀಮಿಯರ್ ಲೀಗ್

₹6 ಕೋಟಿ ಚಾಂಪಿಯನ್ ತಂಡಕ್ಕೆ ಸಿಗುವ ಬಹುಮಾನ ಮೊತ್ತ

₹3 ಕೋಟಿ ರನ್ನರ್ಸ್‌ಅಪ್ ತಂಡಕ್ಕೆ ಸಿಗುವ ಬಹುಮಾನ ಮೊತ್ತ

ಹರ್ಮನ್‌ಪ್ರೀತ್ ಕೌರ್

1027 ನ್ಯಾಟ್ ಶಿವರ್ ಬ್ರಂಟ್ ಇದುವರೆಗೆ ಗಳಿಸಿರುವ ಒಟ್ಟು ರನ್‌ಗಳು. ಅತ್ಯಧಿಕ ಗಳಿಕೆ ಇದಾಗಿದೆ

5 ಡಬ್ಲ್ಯುಪಿಎಲ್‌ನಲ್ಲಿ ಆಡುವ ಒಟ್ಟು ತಂಡಗಳು

99* ಟೂರ್ನಿಯಲ್ಲಿ ದಾಖಲಾದ ಅತ್ಯಧಿಕ (ಅಜೇಯ) ವೈಯಕ್ತಿಕ ಸ್ಕೋರ್. ಜಾರ್ಜಿಯಾ ವೋಲ್ ಅವರ ಹೆಸರಲ್ಲಿದೆ ಸೋಫಿ ಡಿವೈನ್ 2023ರಲ್ಲಿ 99 ರನ್ ಗಳಿಸಿ ಔಟಾಗಿದ್ದರು

30 ಅತ್ಯಧಿಕ ಬಲಿ ಪಡೆದ ವಿಕೆಟ್‌ಕೀಪರ್ ರಿಚಾ ಘೋಷ್ ದಾಖಲೆ

ವಿಜೇತರು ಮತ್ತು ರನ್ನರ್ಸ್ ಅಪ್ ತಂಡಗಳು		
ವರ್ಷ	ವಿಜೇತ	ರನ್ನರ್
2023	ಮುಂಬೈ ಇಂಡಿಯನ್ಸ್	ಡೆಲ್ಲಿ ಕ್ಯಾಪಿಟಲ್ಸ್
2024	ರಾಯಲ್ ಚಾಲೆಂಜರ್ಸ್ ಬೆಂಗಳೂರು	ಡೆಲ್ಲಿ ಕ್ಯಾಪಿಟಲ್ಸ್
2025	ಮುಂಬೈ ಇಂಡಿಯನ್ಸ್	ಡೆಲ್ಲಿ ಕ್ಯಾಪಿಟಲ್ಸ್

41 ಟೂರ್ನಿಯಲ್ಲಿ ಅತ್ಯಧಿಕ ವಿಕೆಟ್ ಗಳಿಸಿರುವ ಹೆಯಲಿ ಮ್ಯಾಥ್ಯೂಸ್ ಅವರ ದಾಖಲೆ

49 ಅತ್ಯಧಿಕ ಸಿಕ್ಸರ್ ಗಳಿಸಿರುವ ದಾಖಲೆ ಶಫಾಲಿ ವರ್ಮಾ ಅವರ ಹೆಸರಿನಲ್ಲಿದೆ

15 ಅತಿ ಹೆಚ್ಚು ಕ್ಯಾಚ್‌ಗಳನ್ನು ಪಡೆದ ಫೀಲ್ಡರ್ ಜೆಮಿಮಾ ರಾಡ್ರಿಗಸ್

5ಕ್ಕೆ 225 ಟೂರ್ನಿಯ ಇತಿಹಾಸದಲ್ಲಿ ದಾಖಲಾದ ಅತಿ ದೊಡ್ಡ ಮೊತ್ತ. 2025ರಲ್ಲಿ ಯುಪಿ ವಾರಿಯರ್ಸ್ ಆರ್‌ಸಿಬಿ ಎದುರು ಗಳಿಸಿತ್ತು.

64 ಟೂರ್ನಿಯಲ್ಲಿ ದಾಖಲಾದ ಅತಿ ಕಡಿಮೆ ಮೊತ್ತ. ಗುಜರಾತ್ ಜೈಂಟ್ಸ್ ತಂಡವು ಮುಂಬೈ ಎದುರು ಗಳಿಸಿತ್ತು.

ಸ್ಮೃತಿ ಮಂದಾನ

ಲಾರಾ ವೋಲ್ವಾರ್ಟ್

ಜೆಮಿಮಾ ರಾಡ್ರಿಗಸ್

ಶ್ರೇಯಾಂಕಾ ಪಾಟೀಲ

ಮಾಹಿತಿ: ಡಬ್ಲ್ಯುಪಿಎಲ್‌ಟಿ20 ಡಾಟ್ ಕಾಮ್

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಹಾಟ್‌ಸ್ಟಾರ್ ಆ್ಯಪ್

ಅಂತಿಮ ಟೆಸ್ಟ್ ಗೆದ್ದ ಆಸ್ಟ್ರೇಲಿಯಾ

ಆ್ಯಷಸ್ ಟ್ರೋಫಿಯೊಂದಿಗೆ ಸ್ಟೀವ್ ಸ್ಮಿತ್

ಸಿಡ್ನಿ (ಎಎಫ್‌ಪಿ): ಆಸ್ಟ್ರೇಲಿಯಾ ತಂಡ, ಆ್ಯಷಸ್ ಸರಣಿಯ ಐದನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ಗುರುವಾರ ಐದು ವಿಕೆಟ್‌ಗಳಿಂದ ಸೋಲಿಸಿತು. ಸರಣಿಯನ್ನು 4–1 ರಿಂದ ಗೆದ್ದುಕೊಂಡಿತು.

ಆರಂಭ ಆಟಗಾರ ಉಸ್ಮಾನ್ ಖ್ವಾಜಾ ಗೆಲುವಿನೊಡನೆ ಅಂತಿಮ ಟೆಸ್ಟ್ ಸ್ಮರಣೀಯವಾಗಿಸಿದರು.

ಗೆಲುವಿಗಾಗಿ ನಿಗದಿಯಾಗಿದ್ದ 160 ರನ್ ಗಳಿಸುವ ಹಾದಿಯಲ್ಲಿ ಆತಿಥೇಯರು ಸ್ವಲ್ಪ ಪರದಾಡಿದರು. 121 ರನ್‌ಗಳಿಗೆ ಐದು ವಿಕೆಟ್‌ಗಳು ಉರುಳಿದ್ದವು. ಲಂಚ್ ನಂತರ ಕ್ಯಾಮೆರಾನ್ ಗ್ರೀನ್ (ಅಜೇಯ 22) ಮತ್ತು ಅಲೆಕ್ಸ್ ಕ್ಯಾರಿ (ಅಜೇಯ 16) ಅವರು ಮುರಿಯದ ಆರನೇ ವಿಕೆಟ್‌ಗೆ 40 ರನ್ ಸೇರಿಸಿ ತಂಡದ ಗೆಲುವನ್ನು ಪೂರೈಸಿದರು.

88ನೇ ಹಾಗೂ ಕೊನೆಯ ಟೆಸ್ಟ್ ಇನಿಂಗ್ಸ್‌ನಲ್ಲಿ ಖ್ವಾಜಾ ಆರು ರನ್ ಗಳಿಸಿ ಜೋಶ್ ಟಂಗ್ (42ಕ್ಕೆ3) ಬೌಲಿಂಗ್‌ನಲ್ಲಿ ಬೌಲ್ಡ್ ಆದರು.

ಬುಧವಾರ 8 ವಿಕೆಟ್‌ಗೆ 302 ರನ್ ಗಳಿಸಿದ್ದ ಇಂಗ್ಲೆಂಡ್ ಕೊನೆಯ ದಿನ ಆ ಮೊತ್ತಕ್ಕೆ 40 ರನ್ ಸೇರಿಸಿ ಆಲೌಟ್ ಆಯಿತು. ಐದು ಟೆಸ್ಟ್‌ಗಳಲ್ಲಿ 31 ವಿಕೆಟ್ ಪಡೆದ ಮಿಚೆಲ್ ಸ್ಟಾರ್ಕ್ 'ಸರಣಿಯ ಸರ್ವೋತ್ತಮ' ಎನಿಸಿದರು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 384 ಮತ್ತು 88.2 ಓವರುಗಳಲ್ಲಿ 342 (ಜೇಕಬ್ ಬೆಥೆಲ್ 154, ಸ್ಟಾರ್ಕ್ 72ಕ್ಕೆ3, ಬ್ಯೂ ವೆಬ್‌ಸ್ಟರ್ 64ಕ್ಕೆ3); ಆಸ್ಟ್ರೇಲಿಯಾ: 567 ಮತ್ತು 31.2 ಓವರುಗಳಲ್ಲಿ 5 ವಿಕೆಟ್‌ಗೆ 161 (ಜೇಕ್ ವಿಥೆರಾಲ್ಡ್ 34, ಮಾರ್ನಸ್ ಲಾಬುಷೇನ್ 37; ಜೋಶ್ ಟಂಗ್ 42ಕ್ಕೆ3). ಪಂದ್ಯದ ಆಟಗಾರ: ಟ್ರಾವಿಸ್ ಹೆಡ್ (163, 29).

ಸೈಕ್ಲಿಂಗ್ ವೆಲೋಡ್ರೋಮ್ ಉದ್ಘಾಟನೆ ಇಂದು

ವಿಜಯಪುರ: ವಿಜಯಪುರದಲ್ಲಿ ಮೂರು ದಶಕಗಳ ಕನಸಾದ ಸೈಕಲ್ ವೆಲೋಡ್ರೋಮ್‌ನ್ನು ಶುಕ್ರವಾರ (ಜನವರಿ 9) ಬೆಳಿಗ್ಗೆ 11.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆ ಮಾಡಲಿದ್ದಾರೆ. ವೆಲೋಡ್ರೋಮ್ ನಿರ್ಮಾಣಕ್ಕೆ 2015ರಲ್ಲಿ ಆಗಿನ ಕ್ರೀಡಾ ಸಚಿವ ಅಭಯಚಂದ್ರ ಜೈನ್ ವಿಜಯಪುರ ನಗರದ ಹೊರವಲಯದ ಭೂತನಾಳ ಕೆರೆ ಬಳಿ ಶಂಕುಸ್ಥಾಪನೆ ನೆರವೇರಿಸಿದ್ದರು. 8.10 ಎಕರೆ ಜಾಗದಲ್ಲಿ ₹10 ಕೋಟಿ ವೆಚ್ಚದಲ್ಲಿ ಅಂತರರಾಷ್ಟ್ರೀಯ ಮಟ್ಟದ 300.33 ಮೀ. ಸುತ್ತಳತೆಯ ಸೈಕ್ಲಿಂಗ್ ವೆಲೋಡ್ರೋಮ್ ಈಗ ನಿರ್ಮಾಣಗೊಂಡಿದೆ.

ಕ್ವಾರ್ಟರ್‌ಫೈನಲ್‌ಗೆ ಮಧ್ಯಪ್ರದೇಶ

ವಿಜಯ್ ಹಜಾರೆ ಟ್ರೋಫಿ: ಎಂಟರ ಘಟ್ಟದಲ್ಲಿ ಕರ್ನಾಟಕ– ಮುಂಬೈ ಸೆಣಸು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಹಾಲಿ ಚಾಂಪಿಯನ್ ಕರ್ನಾಟಕ ತಂಡವು ಈ ಸಲದ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ 'ಬದ್ಧ ಎದುರಾಳಿ' ಮುಂಬೈ ತಂಡದ ವಿರುದ್ಧ ಇದೇ 12ರಂದು ಆಡಲಿದೆ.

ಕ್ವಾರ್ಟರ್‌ಫೈನಲ್, ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳು ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಕ್ರೀಡಾಂಗಣದಲ್ಲಿ ನಡೆಯಲಿವೆ.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಎ ಗುಂಪಿನ ಕೊನೆಯ ಸುತ್ತಿನ ಪಂದ್ಯದಲ್ಲಿ ಮಧ್ಯಪ್ರದೇಶ ತಂಡವು 7 ವಿಕೆಟ್‌ಗಳಿಂದ ಕರ್ನಾಟಕದ ಎದುರು ಗೆದ್ದಿತು. ಒಟ್ಟು 20 ಅಂಕ ಗಳಿಸಿ ಎಂಟರ ಘಟ್ಟ ಪ್ರವೇಶಿಸಿತು. 24 ಅಂಕ ಗಳಿಸಿದ್ದ ಕರ್ನಾಟಕ ಅಗ್ರಸ್ಥಾನದಲ್ಲಿ ಉಳಿಯಿತು. ಆದರೆ ಗುಂಪು ಹಂತದಲ್ಲಿ ಕರ್ನಾಟಕದ ಅಜೇಯ ಓಟಕ್ಕೆ ಮಧ್ಯಪ್ರದೇಶ ತಡೆಯೊಡ್ಡಿತು.

ಶಿವಾಂಗ್-ಅಯ್ಯರ್ ಮಿಂಚು: ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದ್ದ ಮಧ್ಯಪ್ರದೇಶ ತಂಡಕ್ಕೆ ಎರಡನೇ ಸ್ಥಾನಕ್ಕೇರಲು ಕರ್ನಾಟಕದ ಎದುರಿನ ಜಯ ಅನಿವಾರ್ಯವಾಗಿತ್ತು. ತಂಡದ ಶಿವಾಂಗ್ ಕುಮಾರ್ (45ಕ್ಕೆ5) ಮತ್ತು ನಾಯಕ ವೆಂಕಟೇಶ್ ಅಯ್ಯರ್ (ಔಟಾಗದೇ 65; 33ಎ, 4x4, 6x5) ಅವರ ಅಜೇಯ ಅರ್ಧಶತಕದ ಬಲದಿಂದ ಮಧ್ಯಪ್ರದೇಶ ಗೆದ್ದಿತು.

ಟಾಸ್ ಗೆದ್ದ ಮಧ್ಯಪ್ರದೇಶ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕರ್ನಾಟಕತಂಡದ ಆರಂಭಿಕ ಜೋಡಿ ಮಯಂಕ್ ಅಗರವಾಲ್ (49; 59ಎ, 4x5, 6x1) ಮತ್ತು ದೇವದತ್ತ ಪಡಿಕ್ಕಲ್ (35; 39ಎ, 4x2, 6x2) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 77 ರನ್ ಸೇರಿಸಿದರು. ಟೂರ್ನಿಯಲ್ಲಿ ನಾಲ್ಕು ಶತಕ ಗಳಿಸಿರುವ ದೇವದತ್ತ ಉತ್ತಮ ಲಯದಲ್ಲಿದ್ದರು. ಆದರೆ 14ನೇ ಓವರ್‌ನಲ್ಲಿ ದೇವದತ್ತ ವಿಕೆಟ್ ಉರುಳಿಸಿದ ತ್ರಿಪುರೇಶ್ ಸಿಂಗ್ ಮಧ್ಯಪ್ರದೇಶಕ್ಕೆ ಮೊದಲ ಯಶಸ್ಸು ತಂದುಕೊಟ್ಟರು.

ಇದಾಗಿ ನಾಲ್ಕು ಓವರ್‌ಗಳ ನಂತರ ಕರುಣ್ ನಾಯರ್ ರನ್‌ಔಟ್ ಆದರು. ಕುಮಾರ್ ಕಾರ್ತಿಕೇಯ ಅವರು ಮಯಂಕ್ ವಿಕೆಟ್ ಗಳಿಸಿದರು.

ಇಲ್ಲಿಂದ ಮುಂದೆ ಎಡಗೈ ಸ್ಪಿನ್ನರ್ ಶಿವಾಂಗ್ ತಮ್ಮ ಕೈಚಳಕ ಮೆರೆದರು. ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ದೊಡ್ಡ ಜೊತೆಯಾಟವಾಡದಂತೆ ನೋಡಿಕೊಂಡರು. ಈ ಪರಿಸ್ಥಿತಿಯಲ್ಲಿಯೂ ವಿದ್ಯಾಧರ್ ಪಾಟೀಲ ಅಜೇಯ 34 ರನ್ (37ಎ, 4x2, 6x2) ಗಳಿಸಿದರು. ಇದರಿಂದಾಗಿ ಕರ್ನಾಟಕ ತಂಡವು 47.4 ಓವರ್‌ಗಳಲ್ಲಿ 207 ರನ್ ಗಳಿಸಿತು.

ಈ ಗುರಿ ಬೆನ್ನಟ್ಟಿದ ಮಧ್ಯಪ್ರದೇಶವು 23.2 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 208 ರನ್ ಗಳಿಸಿ ಗೆದ್ದಿತು. ತಂಡದ ಆರಂಭಿಕ ಬ್ಯಾಟರ್ ಯಶ್ ದುಬೆ (40; 43ಎ) ಮತ್ತು ಹಿಮಾಂಶು ಮಂತ್ರಿ (34; 35ಎ) ಮೊದಲ ವಿಕೆಟ್‌ಗೆ 78 ರನ್ ಸೇರಿಸಿದರು. ಈ ಅಡಿಪಾಯದ ಮೇಲೆ ಅಯ್ಯರ್ ಅವರು ತಂಡವನ್ನು ಗೆಲುವಿನ ದಡ ಸೇರಿಸಿದರು. ಅಕ್ಷತ್ ರಘುವಂಶಿ (26ರನ್) ಮತ್ತು ತ್ರಿಪುರೇಶ್ ಸಿಂಗ್ (ಔಟಾಗದೇ 36) ಉಪಯುಕ್ತ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 47.4 ಓವರ್‌ಗಳಲ್ಲಿ 207(ಮಯಂಕ್ ಅಗರವಾಲ್ 49, ದೇವದತ್ತ ಪಡಿಕ್ಕಲ್ 35, ವಿದ್ಯಾಧರ್ ಪಾಟೀಲ ಔಟಾಗದೇ 34, ಶಿವಾಂಗ್ ಕುಮಾರ್ 45ಕ್ಕೆ5) ಮಧ್ಯಪ್ರದೇಶ: 23.2 ಓವರ್‌ಗಳಲ್ಲಿ 3ಕ್ಕೆ208 (ಯಶ್ ದುಬೆ 40, ಹಿಮಾಂಶು ಮಂತ್ರಿ 34, ವೆಂಕಟೇಶ್ ಅಯ್ಯರ್ ಔಟಾಗದೇ 65, ಅಕ್ಷತ್ ರಘುವಂಶಿ 26, ತ್ರಿಪುರೇಶ್ ಸಿಂಗ್ ಔಟಾಗದೇ 36, ವಿದ್ಯಾಧರ್ ಪಾಟೀಲ 24ಕ್ಕೆ1, ಶ್ರೀಶ ಆಚಾರ್ 42ಕ್ಕೆ1, ಶ್ರೇಯಸ್ ಗೋಪಾಲ್ 36ಕ್ಕೆ1) ಫಲಿತಾಂಶ: ಮಧ್ಯಪ್ರದೇಶ ತಂಡಕ್ಕೆ 7 ವಿಕೆಟ್‌ಗಳ ಜಯ.

ಕ್ವಾರ್ಟರ್‌ಫೈನಲ್ ಪಂದ್ಯಗಳು	
ಜ.12	ಕರ್ನಾಟಕ–ಮುಂಬೈ
	ಉತ್ತರಪ್ರದೇಶ–ಸೌರಾಷ್ಟ್ರ
ಜ.13	ಪಂಜಾಬ್–ಮಧ್ಯಪ್ರದೇಶ
	ದೆಹಲಿ–ವಿದರ್ಭ
ಸ್ಥಳ: ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಕ್ರೀಡಾಂಗಣ, ಬೆಂಗಳೂರು	

ಖೇಲೊ ಇಂಡಿಯಾ ಬೀಚ್ ಗೇಮ್ಸ್: ಕರ್ನಾಟಕಕ್ಕೆ ಮತ್ತೊಂದು ಕಂಚು

ಪೆಂಕಾಕ್ ಸಿಲಾಟ್: ಪುರುಷರ ತಂಡಕ್ಕೆ ಪದಕ

• ಪ್ರದೀಶ್ ಎಚ್.ಮರೋಡಿ

ದಿಯು: ಛಲಬಿಡದೇ ಹೋರಾಟ ಪ್ರದರ್ಶಿಸಿದ ಕರ್ನಾಟಕದ ಪುರುಷರ ತಂಡವು ಗುರುವಾರ ಎರಡನೇ ಆವೃತ್ತಿಯ ಖೇಲೊ ಇಂಡಿಯಾ ಬೀಚ್ ಗೇಮ್ಸ್‌ನ ಪೆಂಕಾಕ್ ಸಿಲಾಟ್‌ನಲ್ಲಿ ಕಂಚಿನ ಪದಕದೊಂದಿಗೆ ಅಭಿಯಾನ ಮುಗಿಸಿತು. ಬೀಚ್ ಸಾಕರ್‌ನಲ್ಲಿ ರಾಜ್ಯದ ಪುರುಷರು ಸೆಮಿಫೈನಲ್ ಪ್ರವೇಶಿಸುವ ಮೂಲಕ ಪದಕವನ್ನು ಖಚಿತಪಡಿಸಿಕೊಂಡರು.

ಇಲ್ಲಿನ ಘೋಘ್ಲಾ ಕಡಲ ತೀರದಲ್ಲಿ ನಡೆಯುತ್ತಿರುವ ಕೂಟದಲ್ಲಿ ಕರ್ನಾಟಕ ಎರಡನೇ ಪದಕ ಗೆದ್ದುಕೊಂಡಿತು. ಇದರೊಂದಿಗೆ ಪದಕ ಪಟ್ಟಿಯಲ್ಲಿ 17ನೇ ಸ್ಥಾನದಲ್ಲಿದೆ. ತಮಿಳುನಾಡು (2 ಚಿನ್ನ, 2 ಬೆಳ್ಳಿ, 3 ಕಂಚು), ಆತಿಥೇಯ ದಿಯು ದಮನ್ (ತಲಾ 2 ಚಿನ್ನ, ಬೆಳ್ಳಿ, ಕಂಚು) ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿವೆ.

ಕೊಪ್ಪಳ ಜಿಲ್ಲೆಯ ಆಕಾಶ್ ದೊಡ್ಡವಾಳ, ಮನೋಜ್ ಕುಮಾರ್ ಎ.ಪಿ. ಮತ್ತು ಬೆಂಗಳೂರಿನ ಹರ್ಷಿತ್ ಎ. ಅವರನ್ನು ಒಳಗೊಂಡ ರೆಗು (ಮೂವರು ಆರ್ಟಿಸ್ಟಿಕ್) ತಂಡವು ಸೆಮಿಫೈನಲ್‌ನಲ್ಲಿ ಕೇವಲ ಒಂದು (570–571) ಅಂಕದಿಂದ ಸೋತು, ಫೈನಲ್‌ಗೇರುವ ಅವಕಾಶವನ್ನು ತಪ್ಪಿಸಿಕೊಂಡಿತು. ಈ ವಿಭಾಗದ ಸ್ಪರ್ಧೆಯಲ್ಲಿ ಸೆಮಿಫೈನಲ್ ಸೋತ ಎರಡೂ ತಂಡಗಳಿಗೆ ಕಂಚಿನ ಪದಕ ಲಭಿಸುತ್ತದೆ. ತಮಿಳುನಾಡು ಚಿನ್ನ ಗೆದ್ದರೆ, ಮಹಾರಾಷ್ಟ್ರ ಬೆಳ್ಳಿ ಪದಕ ತನ್ನದಾಗಿಸಿಕೊಂಡಿತು. ಮತ್ತೊಂದು ಕಂಚು ಒಡಿಶಾ ತಂಡದ ಪಾಲಾಯಿತು.

ಕಂಚಿನ ಪದಕ ಗೆದ್ದ ಕರ್ನಾಟಕದ ಪೆಂಕಾಕ್ ಸಿಲಾಟ್‌ನ ರೆಗು ತಂಡ. ಮನೋಜ್ ಕುಮಾರ್, ಹರ್ಷಿತ್ ಮತ್ತು ಆಕಾಶ್ ದೊಡ್ಡವಾಳ ಪ್ರಜಾವಾಣಿ ಚಿತ್ರ

27 ವರ್ಷದ ಆಕಾಶ್ ಎಂಬಿಎ ಪದವೀಧರನಾಗಿದ್ದು, ಪ್ರಸ್ತುತ ಇದೇ ಕ್ರೀಡೆಯ ಕೋಚಿಂಗ್‌ನಲ್ಲಿ ತೊಡಗಿಸಿಕೊಂಡಿದ್ದಾರೆ. ಅಖಿಲ ಭಾರತ ವಿ.ವಿ ಕ್ರೀಡಾಕೂಟದಲ್ಲಿ ಏಳು ಪದಕ, ಫೆಡರೇಷನ್ ಕಪ್‌ನಲ್ಲಿ ಚಿನ್ನ ಗೆದ್ದಿರುವ ಅವರು 2022ರಲ್ಲಿ ಮಲೇಷ್ಯಾದಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

26 ವರ್ಷದ ಮನೋಜ್ ಅವರೂ ಎಂಬಿಎ ಪದವೀಧರನಾಗಿದ್ದು, ಅವರೂ ಇದೇ ಕ್ರೀಡೆಯ ಕೋಚಿಂಗ್‌ನಲ್ಲಿ ನಿರತರಾಗಿದ್ದಾರೆ. ಫೆಡರೇಷನ್ ಕಪ್‌ನಲ್ಲಿ ಚಿನ್ನ ಗೆದ್ದಿರುವ ಅವರು ಅಖಿಲ ಭಾರತ ವಿ.ವಿ ಗೇಮ್ಸ್‌ನಲ್ಲಿ ಮೂರು ಪದಕ ಜಯಿಸಿದ್ದಾರೆ. 27 ವರ್ಷದ ಹರ್ಷಿತ್ ಬಿ.ಟೆಕ್ ಪದವೀಧರನಾಗಿದ್ದು, ಸ್ವಾಫ್ಟ್‌ವೇರ್ ಉದ್ಯೋಗ ಬಿಟ್ಟು ಪ್ರಸ್ತುತ ಮಾರ್ಷಲ್ ಆರ್ಟ್ಸ್ ಕೋಚಿಂಗ್ ನೀಡುತ್ತಿದ್ದಾರೆ. ಅವರು ಫೆಡರೇಷನ್ ಕಪ್‌ನಲ್ಲಿ ಕಂಚು ಮತ್ತು ಅಖಿಲ ಭಾರತ ವಿ.ವಿ ಗೇಮ್ಸ್‌ನಲ್ಲಿ ಬೆಳ್ಳಿ ಗೆದ್ದಿದ್ದಾರೆ.

ಸೆಮಿಗೆ ಕರ್ನಾಟಕ: ರಾಜ್ಯ ಪುರುಷರ ತಂಡವು ಬೀಚ್ ಸಾಕರ್‌ನ (ಬೀಚ್ ಫುಟ್‌ಬಾಲ್) ಗುಂಪು ಹಂತದ ತನ್ನ ಕೊನೆಯ ಪಂದ್ಯದಲ್ಲಿ ಪೆನಾಲ್ಟಿ ಶೂಟೌಟ್ ಮೂಲಕ 3–1ರಿಂದ ದಿಯು ದಮನ್ ತಂಡವನ್ನು ಮಣಿಸಿ ನಾಲ್ಕರ ಘಟ್ಟ ಪ್ರವೇಶಿಸಿತು. ನಿಗದಿತ ಅವಧಿಯ ಪಂದ್ಯವು 4–4 ಗೋಲುಗಳಿಂದ ಸಮಬಲಗೊಂಡಿತ್ತು. ಶುಕ್ರವಾರ ನಡೆಯುವ ಸೆಮಿಫೈನಲ್‌ನಲ್ಲಿ ಕರ್ನಾಟಕ ತಂಡವು ಗೋವಾ ತಂಡವನ್ನು ಎದುರಿಸಲಿದೆ.

ಸಿಂಗಲ್ಸ್‌ನಲ್ಲಿ ಭಾರತದ ಸವಾಲು ಅಂತ್ಯ

ಬೆಂಗಳೂರು ಓಪನ್ ಟೆನಿಸ್: ಎಂಟರ ಘಟ್ಟದಲ್ಲಿ ಧಾಮ್ನೆ, ದಕ್ಷಿಣೇಶ್ವರಗೆ ನಿರಾಸೆ

ಚೆಂಡನ್ನು ಹಿಂತಿರುಗಿಸಲು ಯತ್ನಿಸಿದ ಹೆರಾಲ್ಡ್ ಮಯೊಟ್
ಚಿತ್ರ: ಕೃಷ್ಣಕುಮಾರ್ ಪಿ.ಎಸ್.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಮಾನಸ್ ಧಾಮ್ನೆ ಮತ್ತು ದಕ್ಷಿಣೇಶ್ವರ ಸುರೇಶ್ ಅವರು ಗುರುವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ನೇರ ಸೆಟ್‌ಗಳಲ್ಲಿ ಎದುರಾಳಿಗಳಿಗೆ ಸೋಲುವುದರೊಂದಿಗೆ, ಬೆಂಗಳೂರು ಓಪನ್ ಟೆನಿಸ್ ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಗೊಂಡಿತು.

ಕಬ್ಬನ್‌ಪಾರ್ಕ್‌ನ ಕರ್ನಾಟಕ ರಾಜ್ಯ ಟೆನಿಸ್ ಸಂಸ್ಥೆಯ ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆದ ಪುರುಷರ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಧಾಮ್ನೆ 4–6, 6–7 (5–7) ರಲ್ಲಿ ಫ್ರಾನ್ಸ್‌ನ ಮಾಟೆ ಮಾರ್ಟಿನೊ ಎದುರು ಸೋತರು. ಆ ಮೂಲಕ ಟೂರ್ನಿಯಲ್ಲಿ 18 ವರ್ಷ ವಯಸ್ಸಿನ ಭಾರತದ ಆಟಗಾರನ ಯಶಸ್ಸಿನ ಓಟ ಕೊನೆಗೊಂಡಿತು.

ಇನ್ನೊಂದು ಪಂದ್ಯದಲ್ಲಿ ದಕ್ಷಿಣೇಶ್ವರ ಅವರು ಎರಡನೇ ಶ್ರೇಯಾಂಕದ ಹೆರಾಲ್ಡ್ ಮಯೊಟ್ ಎದುರು 6–7 (5), 2–6 ರಿಂದ ಮಣಿದರು. ದಕ್ಷಿಣೇಶ್ವರ್ ಮೊದಲ ಸೆಟ್‌ನಲ್ಲಿ ಹೋರಾಟ ತೋರಿ ಟೈಬ್ರೇಕರ್‌ಗೆ ವಿಸ್ತರಿಸಿದರು. ಆದರೆ ಎರಡನೇ ಸೆಟ್‌ನಲ್ಲಿ ಪ್ರತಿರೋಧ ತೋರಲಿಲ್ಲ.

ಅಗ್ರ ಶ್ರೇಯಾಂಕದ ಪೆಡ್ರೊ ಮಾರ್ಟಿನೆಝ್ (ಸ್ಪೇನ್) 6–2, 6–0 ಯಿಂದ ಜರ್ಮನಿಯ ಸೆಡ್ರಿಕ್ ಮಾರ್ಸೆಲ್ ಸ್ಟೆಬ್ ಅವರನ್ನು ಸೋಲಿಸಿ ಸೆಮಿಫೈನಲ್ ತಲುಪಿದರು. ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಆರನೇ ಶ್ರೇಯಾಂಕದ ಟಿಮೊಫಿ ಸ್ಕಟೋವ್ (ಕಜಾಕಸ್ತಾನ) 6–4, 6–2 ರಿಂದ ಯೋನಾಸ್ ಫೋರೆಜ್‌ಟೆಕ್ (ಝೆಕ್ ರಿಪಬ್ಲಿಕ್) ಅವರನ್ನು ಸೋಲಿಸಿದರು.

ಶುಕ್ರವಾರ ಮೊದಲ ಸೆಮಿಫೈನಲ್ ನಲ್ಲಿ ಮಾರ್ಟಿನೆಜ್ ಅವರು ಫ್ರಾನ್ಸ್‌ನ ಮಾರ್ಟಿನೊ ಅವರನ್ನು, ಎರಡನೇ ಸೆಮಿಫೈನಲ್‌ನಲ್ಲಿ ಸ್ಕಟೋವ್ ಅವರು ಇನ್ನೊಬ್ಬ ಫ್ರೆಂಚ್ ಆಟಗಾರ ಮಯೊಟ್ ಅವರನ್ನು ಎದುರಿಸಲಿದ್ದಾರೆ.

ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು – 560 011.
ದೂ: 080–26564516, 26562500, ಗ್ರಾಮ್ಸ್:SITO ಫ್ಯಾಕ್ಸ್:26565222
ಇ–ಮೇಲ್: sitodirector@gmail.com
ಸಂಖ್ಯೆ:ಸಂಗಾಂಟ್ರಾಅಚಿ/ಇ-ಟೆಂಡರ್/ಪುಸ್ತಕಗಳು(01)/ಬಸ್(48)/2025–26 ದಿನಾಂಕ:06-01-2026
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)
ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು–11 ಇವರು ಅರ್ಹ ಟೆಂಡರುದಾರರಿಂದ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಈ ಕೆಳಕಂಡ ಸೇವೆಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದೆ.
(1) Supply of Medical Books and Journals
(2) Procurement of College bus
(1) ಟೆಂಡರ್ ದಾಖಲೆಗಳನ್ನು https://kppp.karnataka.gov.in ನಿಂದ ದಿನಾಂಕ 09-01-2026ರಿಂದ ಅಥವಾ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ದಿನಾಂಕ 27–01–2026ರ ಸಂಜೆ 4:00 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು. (2) ಟೆಂಡರನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ/ತಿರಸ್ಕರಿಸುವ ಅಥವಾ ರದ್ದುಪಡಿಸುವ ಅಧಿಕಾರದ ಹಕ್ಕನ್ನು ಟೆಂಡರ್ ಅಂಗೀಕಾರ ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ.
ಸಹಿ/–
ನಿರ್ದೇಶಕರು
ಟೆಂಡರ್ ಆಹ್ವಾನ ಪ್ರಾಧಿಕಾರ
ಡಿಐಪಿಆರ್/ಎಸ್‌ಐ/4933/2025–26

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ಬೆಂಗಳೂರು ದಕ್ಷಿಣ ಜಿಲ್ಲಾ ಪಂಚಾಯತ್,
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ,
ಬೆಂಗಳೂರು ದಕ್ಷಿಣ ಜಿಲ್ಲೆ
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ : 31/1603–1610/2025–26 ದಿನಾಂಕ : 08–01–2026
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾವಣೆ ಮಾಡಿಸಿಕೊಂಡಿರುವ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಸರ್ಕಾರ ಇಲ್ಲಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮುಖಾಂತರ ಈ ಕಛೇರಿ ವ್ಯಾಪ್ತಿಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ಮತ್ತು ಕನಕಪುರ ತಾಲ್ಲೂಕಿನಲ್ಲಿ ವಿವಿಧ ಯೋಜನೆಯಡಿಯಲ್ಲಿ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
1) ಕನಿಷ್ಠ ಅಂದಾಜು ಮೊತ್ತ ರೂ. 16.00 ಲಕ್ಷಗಳು, ಗರಿಷ್ಠ ಅಂದಾಜು ಮೊತ್ತ ರೂ. 100.00 ಲಕ್ಷಗಳು, 2) ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ : 16–01–2026 ರ ಸಂಜೆ 4.00 ಗಂಟೆಯವರೆಗೆ. 3) ಟೆಂಡರ್ ತೆರೆಯುವ ದಿನಾಂಕ : 17–01–2026 ರ ಸಂಜೆ 4.30 ಗಂಟೆ, (ಕೆ.ಡಬ್ಲ್ಯೂ–2, ಕೆ.ಡಬ್ಲ್ಯೂ–3, ಕೆ.ಜಿ.–2). 4) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : 19–01–2026 ರ ಸಂಜೆ 4.30 ಗಂಟೆ (ಕೆ.ಡಬ್ಲ್ಯೂ–2, ಕೆ.ಜಿ.–2). 5) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : 30–01–2026 ರ ಸಂಜೆ 4.30 ಗಂಟೆ (ಕೆ.ಡಬ್ಲ್ಯೂ–3) ನಂತರ.
ಇತರೆ ಮಾಹಿತಿಗಳನ್ನು ಈ ಕಛೇರಿಯಿಂದ ಅಥವಾ https://kppp.karnataka.gov.in ವೆಬ್‌ಸೈಟ್ ಮೂಲಕ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ.
ಡಿಐಪಿಆರ್/ರಾಮನಗರ/552/ಮಣಿಪಾಲ್/2025–26

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು– 570 005.
ಸಂ.: ಮೈಅಪ್ರಾ:ನಯೋಶಾ:ಭೂಉಬ:ನಯೋ–1/2509/2025–26 ದಿನಾಂಕ: 31.12.2025
ಸಾರ್ವಜನಿಕ ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 69(2)(3)&(4)ರನ್ವಯ
ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಭುಗತಗಳ್ಳಿ ಗ್ರಾಮದ ಸ.ನಂ.43/1 ರಲ್ಲಿ 01 ಎಕರೆ 22.08 ಗುಂಟೆ ಪೈಕಿ 01 ಎಕರೆ 04 ಗುಂಟೆ ಮತ್ತು 43/24ರಲ್ಲಿ 01 ಎಕರೆ 10.08 ಗುಂಟೆ ಪೈಕಿ 00 ಎಕರೆ 02.12 ಗುಂಟೆ ವಿಸ್ತೀರ್ಣದ ಜಮೀನುಗಳನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 69(2)(3) &(4) ರನ್ವಯ ಸಾರ್ವಜನಿಕ/ ಅರೆಸಾರ್ವಜನಿಕ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ನಿಗದಿಪಡಿಸುವಂತೆ ಶ್ರೀಮತಿ ಎಂ.ಧರಣೇಶ್ ಕುಮಾರಿ ರವರ ಜಿಪಿಎ ದಾರರಾದ ಶ್ರೀ ಪ್ರದೀಪ್‌ಕುಮಾರ್.ಎಂ ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ನಿಗದಿಪಡಿಸುವುದರಿಂದ "ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ" ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ನಿಗದಿಪಡಿಸುವ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ಅಭಿವೃದ್ಧಿ ಪ್ರಾಧಿಕಾರ, ಮೈಸೂರು –570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.
KEY PLAN


LAND IN QUESTION
ಸಹಿ/– ನಗರ ಯೋಜಕ ಸದಸ್ಯರು
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.
DIPR/MYS/1485/SA/2025-26

ಕರ್ನಾಟಕ ಸರ್ಕಾರ
ಕಾರ್ಯದರ್ಶಿ ಮತ್ತು ಉಪಆಯುಕ್ತರ ಕಛೇರಿ, ಶ್ರೀಘಾಟಿ ಸುಬ್ರಹ್ಮಣ್ಯ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಎಸ್.ಎಸ್.ಘಾಟಿ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಫೋನ್: 08029550091, 08029500191
ಇ–ಮೇಲ್: shrighatisubrahmanyatempleeo@gmail.com
ಸಂಖ್ಯೆ:ಎಸ್‌ಜಿಎಸ್/ಅಪ್ರಾ/ಸಿಆರ್:14/2024–25 ದಿನಾಂಕ: 04/01/2026
ಪತ್ರಿಕಾ ಪ್ರಕಟಣೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಶ್ರೀಘಾಟಿಸುಬ್ರಹ್ಮಣ್ಯಸ್ವಾಮಿ ದೇವಾಲಯದ ಅನ್ನದಾಸೋಹದಲ್ಲಿ ಹೆಚ್ಚುವರಿಯಾಗಿ ಸಂಗ್ರಹವಾಗಿರುವ ಅಕ್ಕಿ ಮತ್ತು ಬೆಲ್ಲವನ್ನು ದಿನಾಂಕ: 14/01/2026 ರಂದು ಬುಧವಾರ ಬೆಳಗ್ಗೆ 11.30 ಘಂಟೆಗೆ ದೇವಾಲಯದ ಅನ್ನದಾಸೋಹ ಭವನದಲ್ಲಿ ಬಹಿರಂಗ ಹರಾಜು ಮೂಲಕ ವಿಲೇ ಮಾಡಲಾಗುವುದು. ಆಸಕ್ತಿಯುಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ದೇವಾಲಯದ ಕಛೇರಿಯಲ್ಲಿ ಸಂಪರ್ಕಿಸುವುದು.
ಸಹಿ/– ಕಾರ್ಯದರ್ಶಿ ಮತ್ತು ಉಪಆಯುಕ್ತರು.
ಶ್ರೀಘಾಟಿಸುಬ್ರಹ್ಮಣ್ಯಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಎಸ್.ಎಸ್. ಘಾಟಿ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೋಲಾರ
ಕೆಪಿಪಿಪಿ ಟೆಂಡರ್ ಪ್ರಕಟಣೆ ಸಂಖ್ಯೆ: 11/2025–26, ದಿನಾಂಕ: 02.01.2026
2022–23ನೇ ಸಾಲಿನಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಕೋಲಾರ ಜಿಲ್ಲಾ ವ್ಯಾಪ್ತಿಗೆ ಅನುಮೋದನೆಯಾದ (ಮನೆಮನೆಗೆ ನಳ ಸಂಪರ್ಕಕಲ್ಪಿಸುವ) ಕುಡಿಯುವ ನೀರು ಸರಬರಾಜು ಯೋಜನೆಯ ಒಂದು ಕಾಮಗಾರಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೊಂದಾಯಿತ ಅರ್ಹ ಹಾಗೂ ಕೆಪಿಪಿಪಿನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೆಯ ದಿನಾಂಕ: 19.01.2026ರಂದು 17.30 ಗಂಟೆಯವರೆಗೆ ಇರುತ್ತದೆ. ಹೆಚ್ಚಿನ ವಿವರಗಳಿಗೆ ಕೆಪಿಪಿಪಿ ವೆಬ್‌ಸೈಟ್–https://kppp.karnataka.gov.inವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/–
ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ. ಮತ್ತು ನೈ ವಿಭಾಗ, ಕೋಲಾರ.
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:437/ಕೆಎಸ್‌ಎಂಸಿಎ/2025–26

ಕರ್ನಾಟಕ ಗ್ರಾಮೀಣ ಬ್ಯಾಂಕ್
KARNATAKA GRAMEENA BANK
ಸರ್ಕಾರಿ ಸ್ವಾಮ್ಯದ ಶೆಡ್ಯೂಲ್ಡ್ ಬ್ಯಾಂಕ್ Scheduled Bank Owned by Government
ಪ್ರಧಾನ ಕಛೇರಿ : ನಂ. 32, ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ - 583103. ಕರ್ನಾಟಕ.
ಸಾರ್ವಜನಿಕ ಸೂಚನೆ
ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಎಲ್ಲಾ ಗ್ರಾಹಕರಿಗೆ
ಭಾರತ ಸರ್ಕಾರದ ಅಧಿಸೂಚನೆ ಸಂಖ್ಯೆ 1064, ಎಫ್ ಸಂಖ್ಯೆ 7/6/2024(5)–ಆರ್.ಆರ್.ಬಿ. ದಿನಾಂಕ 5–4–2025ರ ಪ್ರಕಾರ ಕರ್ನಾಟಕ ರಾಜ್ಯದಲ್ಲಿನ "ಕರ್ನಾಟಕ ಗ್ರಾಮೀಣ ಬ್ಯಾಂಕ್" ಮತ್ತು "ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್"ಗಳನ್ನು ವಿಲೀನಗೊಳಿಸಿ, "ಕರ್ನಾಟಕ ಗ್ರಾಮೀಣ ಬ್ಯಾಂಕ್" ಎಂಬ ಹೊಸ ಹೆಸರಿನಲ್ಲಿ ಕೆನರಾ ಬ್ಯಾಂಕಿನ ಪ್ರಾಯೋಜಕತ್ವದಲ್ಲಿ 1–5–2025 ರಿಂದ ಜಾರಿಗೆ ಬರುವಂತೆ ಸ್ಥಾಪಿಸಲಾಗಿದೆ. ಈ ಬ್ಯಾಂಕಿನ ಪ್ರಧಾನ ಕಛೇರಿ ಬಳ್ಳಾರಿಯಲ್ಲಿ ಇದೆ.
ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನದ ಪ್ರಕಾರ, ಹಳೆಯ MICR ಕೋಡ್‌ಗಳನ್ನು ಹೊಂದಿರುವ ಚೆಕ್ ಪುಸ್ತಕಗಳ ಮಾನ್ಯತೆ 31–01–2026ರವರೆಗೆ ಮಾತ್ರ ಇರುತ್ತದೆ. ಈ ಕುರಿತು ಗ್ರಾಹಕರಿಗೆ ಸಾರ್ವಜನಿಕ ಪ್ರಕಟಣೆ ಮೂಲಕ ಈಗಾಗಲೇ ತಿಳಿಸಲಾಗಿದೆ. ನಿಗದಿತ ದಿನಾಂಕದೊಳಗೆ, ಗ್ರಾಹಕರು ತಮ್ಮ ಹಳೆಯ ಚೆಕ್ ಪುಸ್ತಕಗಳನ್ನು ನವೀಕರಿಸಿದ ಬ್ಯಾಂಕ್ ಹೆಸರು, MICR ಮತ್ತು IFSC ಕೋಡ್‌ಗಳನ್ನು ಹೊಂದಿರುವ ಹೊಸ ಚೆಕ್ ಪುಸ್ತಕಗಳೊಂದಿಗೆ ಬದಲಾಯಿಸಿಕೊಳ್ಳಬೇಕೆಂದು ಈ ಮೂಲಕ ಮತ್ತೊಮ್ಮೆ ವಿನಂತಿಸಿಕೊಳ್ಳುತ್ತೇವೆ.
: ಪ್ರಮುಖ ಸೂಚನೆ :
- ಹೊಸ ಚೆಕ್ ಪುಸ್ತಕಗಳು ಹೊಸ ಬ್ಯಾಂಕ್ IFSC ಕೋಡ್ (PKGBXXXXXXX) ಮತ್ತು MICR ಕೋಡ್ (XXX697XX) ಹೊಂದಿರುತ್ತವೆ.
- ಹಳೆಯ MICR ಕೋಡ್ ಮತ್ತು ಹಿಂದಿನ ಬ್ಯಾಂಕ್ ಹೆಸರಿನಲ್ಲಿ ನೀಡಲಾದ ಚೆಕ್ ಪುಸ್ತಕಗಳು ಜನವರಿ 2026 ರ ನಂತರ ಮಾನ್ಯವಾಗಿರುವುದಿಲ್ಲ.
ನವೀಕರಿಸಿದ ಚೆಕ್ ಪುಸ್ತಕಗಳನ್ನು ಪಡೆಯಲು ಹಾಗೂ ಯಾವುದೇ ಅನಾನುಕೂಲತೆಯನ್ನು ತಪ್ಪಿಸಲು ದಯವಿಟ್ಟು ನಿಮ್ಮ ಶಾಖೆಗೆ ಭೇಟಿ ನೀಡಿ.
31-01-2026 ರ ನಂತರ ಚೆಕ್ ತಿರಸ್ಕಾರದಿಂದ ಉಂಟಾಗುವ ಯಾವುದೇ ತೊಂದರೆಗಳಿಗೆ ಬ್ಯಾಂಕ್ ಯಾವುದೇ ಜವಾಬ್ದಾರಿಯನ್ನು ಹೊಂದಿರುವುದಿಲ್ಲ.
ದಿನಾಂಕ : 8–1–2026 ಸ್ಥಳ : ಬಳ್ಳಾರಿ
ಯಾವಾಗಲೂ ನಮ್ಮ ಅತ್ಯುತ್ತಮ ಸೇವೆಗಳ ಭರವಸೆ ನೀಡುತ್ತೇವೆ
ಸಹಿ/– ಜನರಲ್ ಮ್ಯಾನೇಜರ್ ಕರ್ನಾಟಕ ಗ್ರಾಮೀಣ ಬ್ಯಾಂಕ್

ಕಾರ್ಯನಿರ್ವಾಹಕ ನಿರ್ದೇಶಕರು,
ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಛೇರಿ.
ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್,
ಕಮಲಾಪುರ ಹೊಸಪೇಟೆ ತಾಲ್ಲೂಕು ವಿಜಯನಗರ ಜಿಲ್ಲೆ.
ಸಂಖ್ಯೆ: ಅಬಿವಾಮೃ/ಟೆಂಡರ್/ಆಹಾರ/1&2/2025–26 ದಿನಾಂಕ: 06.01.2026
ಇ–ಟೆಂಡರ್ ಪ್ರಕಟಣೆ
ಶ್ರೀ ಅಟಲ್ ಬಿಹಾರಿ ವಾಜಪೇಯಿಜೂಲಾಜಿಕಲ್ ಪಾರ್ಕ್, ಕಮಲಾಪುರ, ಮೃಗಾಲಯದ ಪ್ರಾಣಿ–ಪಕ್ಷಿಗಳಿಗೆ ಒಂದು ವರ್ಷದಅವಧಿಗೆಅಗತ್ಯವಿರುವ ಈ ಕೆಳಕಂಡ 2 ಘಟಕವಾರು ಆಹಾರಧಾನ್ಯಗಳು, ಹಣ್ಣು, ಹಂಪಲೂ ಮತ್ತುಸೊಪ್ಪು ಹಾಗೂ ತರಕಾರಿಗಳನ್ನು ಸರಬರಾಜು ಮಾಡಲು ಕರ್ನಾಟಕ ಮೃಗಾಲಯ ಪ್ರಾಧಿಕಾರದ ನಿಯಮಾವಳಿಗಳ ಪ್ರಕಾರಕ ನಾರ್ಟಕದ ಮೃಗಾಲಯ ಪ್ರಾಧಿಕಾರದ ಯಾವುದೇ ಮೃಗಾಲಯದಲ್ಲಿ ಗುತ್ತಿಗೆದಾರರಾಗಿ ನೋಂದಾಯಿಸಿರುವ ಗುತ್ತಿಗೆದಾರರುಗಳಿಂದ ಕರ್ನಾಟಕ ಸರ್ಕಾರದ ಇ–ಪೋರ್ಟಾಲ್ https://kppp. Karnataka.gov.in (Dept.selection: Zoo Authority) ಮೂಲಕ ಘಟಕವಾರು ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಇಂಡೆಂಟ್ ಸಂಖ್ಯೆ:1.ZAK/2024-25/IND0035. ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ: ರೂ.56,50,000.00 ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ): ರೂ.5,65,000.00
ಇಂಡೆಂಟ್ ಸಂಖ್ಯೆ:2.ZAK/2025-26/IND0080. ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ: ರೂ.65,00,000.00 ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ): ರೂ.6,50,000.00
1. ಈ ಟೆಂಡರ್ ಪ್ರಕಟಣೆ ಪ್ರತಿಯು https://kppp.karnataka.gov.in ಇಲ್ಲಿ ಲಭ್ಯವಿರುತ್ತದೆ. ಟೆಂಡರ್ ವಿವರಗಳು ಇ–ಪ್ರಕ್ಯೂರಮೆಂಟ್‌ನಲ್ಲಿ ಲಭ್ಯವಾಗುವ ದಿನಾಂಕ: 06.01.2026ಕೊನೆಯ ದಿನಾಂಕ: 23.01.2026 ಸಂಜೆ 4.00 ಗಂಟೆವರೆಗೆತಾಂತ್ರಿಕ ಬಿಡ್‌ಟೆಂಡರ್‌ತೆರೆಯುವ ದಿನಾಂಕ: 27.01.2026 ಸಂಜೆ: 4.00 ಗಂಟೆಗೆ ಮತ್ತುಆರ್ಥಿಕ ಬಿಡ್‌ಟೆಂಡರ್‌ತೆರೆಯುವ ದಿನಾಂಕ: 29.01.2026 ಸಂಜೆ: 4.30 ಗಂಟೆಯ ನಂತರ. ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಹಾಕಿರುವ ಸವಿವರಟೆಂಡರ್ ಪ್ರಕಟಣೆಯಿಂದ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಶ್ರೀ ಅಟಲ್ ಬಿಹಾರಿ ವಾಜಪೇಯಿಜೂಲಾಜಿಕಲ್ ಪಾರ್ಕ್,
ಕಮಲಾಪುರ ಹೊಸಪೇಟೆತಾಲ್ಲೂಕು ವಿಜಯನಗರಜಿಲ್ಲೆ
ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/450

ಕ್ವಾರ್ಟರ್‌ಗೆ ಸಿಂಧು, ಸಾತ್ವಿಕ್–ಚಿರಾಗ್

ಕ್ವಾಲಾಲಂಪುರ (ಪಿಟಿಐ): ಒಲಿಂಪಿಯನ್ ಪಿ.ವಿ. ಸಿಂಧು ಹಾಗೂ ಚಿರಾಗ್ ಶೆಟ್ಟಿ–ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಅವರು ಮಲೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳೆಯರ ಸಿಂಗಲ್ಸ್ ಹಾಗೂ ಪುರುಷರ ಡಬಲ್ಸ್‌ನಲ್ಲಿ ಗುರುವಾರ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಆದರೆ, ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಹೋರಾಟ ಅಂತ್ಯಗೊಂಡಿತು.

30 ವರ್ಷ ವಯಸ್ಸಿನ ಸಿಂಧು, 21–8, 21–13ರಿಂದ ನೇರ ಗೇಮ್‌ಗಳಲ್ಲಿ ಎಂಟನೇ ಶ್ರೇಯಾಂಕದ ಆಟಗಾರ್ತಿ ಟೊಮೊಕಾ ಮಿಯಾಝಾಕಿ (ಜಪಾನ್) ಅವರನ್ನು ಮಣಿಸಿದರು. ಸಿಂಧು ಅವರು ಎಂಟರ ಘಟ್ಟದಲ್ಲಿ 3ನೇ ಶ್ರೇಯಾಂಕದ ಆಟಗಾರ್ತಿ, ಜಪಾನ್‌ನ ಅಕಾನೆ ಯಮಗುಚಿ ಅವರನ್ನು ಎದುರಿಸಲಿದ್ದಾರೆ.

ಟೂರ್ನಿಯಲ್ಲಿ ಭಾರತಕ್ಕೆ ಪದಕದ ಭರವಸೆಯಾಗಿರುವ ಸಾತ್ವಿಕ್–ಚಿರಾಗ್ ಜೋಡಿಯು ಪುರುಷರ ಡಬಲ್ಸ್‌ನ ಎರಡನೇ ಸುತ್ತಿನ ಪಂದ್ಯದಲ್ಲಿ 21–18, 21–12ರಿಂದ ಆತಿಥೇಯ ರಾಷ್ಟ್ರದ ಜುನೈದಿ ಆರೀಫ್ ಹಾಗೂ ರಾಯ್ ಕಿಂಗ್ ಯಪ್ ಅವರನ್ನು ಸೋಲಿಸಿದರು.

ವಿಶ್ವದ ಮಾಜಿ ನಂ.1 ಜೋಡಿ ಸಾತ್ವಿಕ್–ಚಿರಾಗ್ ಅವರು ಶುಕ್ರವಾರ ನಡೆಯಲಿರುವ ಕ್ವಾರ್ಟರ್‌ಫೈನಲ್‌ನಲ್ಲಿ ಇಂಡೊನೇಷ್ಯಾದ ಫಿಕ್ರಿ ಮುಹಮ್ಮದ್–ಫಜರ್ ಅಲ್ಫಿಯಾನ್ ಜೋಡಿಯನ್ನು ಎದುರಿಸಲಿದ್ದಾರೆ.

ಲಕ್ಷ್ಯ, ಆಯುಷ್ ನಿರ್ಗಮನ: ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಲಕ್ಷ್ಯ ಸೇನ್ ಹಾಗೂ ಉದಯೋನ್ಮುಖ ಆಟಗಾರ ಆಯುಷ್ ಶೆಟ್ಟಿ ಅವರು ಪ್ರಿಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಸೋತು ಟೂರ್ನಿಯಿಂದ ಹೊರಬಿದ್ದರು.

ಅನುಭವಿ ಲಕ್ಷ್ಯ ಅವರು 20–22, 15–21ರಿಂದ ಹಾಂಗ್‌ಕಾಂಗ್‌ನ ಲೀ ಷ್ಯೂಕ್ ಯೂ ವಿರುದ್ಧ ಸೋತರು. ಕನ್ನಡಿಗ ಆಯುಷ್ ಅವರು 70 ನಿಮಿಷ ಹೋರಾಡಿ 18–21, 21–18, 12–21ರಿಂದ ಅಗ್ರ ಶ್ರೇಯಾಂಕದ ಆಟಗಾರ, ಚೀನಾದ ಶಿ ಯು ಕೀ ಅವರಿಗೆ ಮಣಿದರು.

ಶೂಟಿಂಗ್ ಕೋಚ್ ವಿರುದ್ಧ ಪೋಕ್ಸೊ ಕೇಸ್

ನವದೆಹಲಿ (ಪಿಟಿಐ): ಅಪ್ರಾಪ್ತ ವಯಸ್ಸಿನ ಸ್ಪರ್ಧಿಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದ ಮೇಲೆ ಭಾರತ ಶೂಟಿಂಗ್ ತರಬೇತುದಾರರಲ್ಲಿ ಒಬ್ಬರಾದ ಅಂಕುಶ್ ಭಾರದ್ವಾಜ್ ಅವರನ್ನು ಭಾರತ ರಾಷ್ಟ್ರೀಯ ರೈಫಲ್ಸ್ ಸಂಸ್ಥೆ (ಎನ್‌ಆರ್‌ಎಐ) ಅಮಾನತು ಮಾಡಿದೆ.

ಡಿಸೆಂಬರ್‌ನಲ್ಲಿ ನವದೆಹಲಿಯ ಕರ್ಣಿಸಿಂಗ್ ರೇಂಜ್‌ನಲ್ಲಿ ನಡೆದ ರಾಷ್ಟ್ರೀಯ ಚಾಂಪಿಯನ್‌ಷಿಪ್ ವೇಳೆ ಅವರು ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಸಂತ್ರಸ್ತೆ ದೂರು ನೀಡಿದ್ದರು. ಪ್ರಕರಣ ಫರೀದಾಬಾದ್ ಹೋಟೆಲ್ ಒಂದರಲ್ಲಿ ನಡೆದಿರುವ ಕಾರಣ ಅಂಕುಶ್ ವಿರುದ್ಧ ಅಲ್ಲಿನ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿರುವುದನ್ನು ಎನ್‌ಆರ್‌ಎಐ ದೃಢಪಡಿಸಿದೆ.

2025ರ ಆಗಸ್ಟ್‌ನಿಂದ 17 ವರ್ಷ ವಯಸ್ಸಿನ ಸಂತ್ರಸ್ತೆ, ಅಂಕುಶ್ ಅವರಿಂದ ತರಬೇತಿ ಪಡೆಯುತ್ತಿದ್ದಳು. ಕೋಚ್ ವಿರುದ್ಧ ಪೋಕ್ಸೊ ಕಾಯಿದೆಯ ಆರನೇ ಸೆಕ್ಷನ್ (ಲೈಂಗಿಕ ದೌರ್ಜನ್ಯ) ಮತ್ತು ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 351 (2) (ಬೆದರಿಕೆ) ಅಡಿ ಪ್ರಕರಣ ದಾಖಲಾಗಿದೆ.

ಕಶ್ವಿ ಮತ್ತೊಂದು ಶತಕ; ರಾಜ್ಯ ತಂಡಕ್ಕೆ ಗೆಲುವು

ಕೋಲ್ಕತ್ತ: ಉತ್ತಮ ಲಯದಲ್ಲಿರುವ ನಾಯಕಿ ಕಶ್ವಿ ಕಂಡಿಕೊಪ್ಪ ಅವರ ಮತ್ತೊಂದು ಶತಕದ ನೆರವಿನಿಂದ ಕರ್ನಾಟಕ ತಂಡ ಬಿಸಿಸಿಐ ಮಹಿಳಾ (15 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಗುರುವಾರ ರಾಜಸ್ಥಾನ ತಂಡವನ್ನು 122 ರನ್‌ಗಳಿಂದ ಸೋಲಿಸಿತು.

ಮೂರನೇ ಕ್ರಮಾಂಕದ ಆಟಗಾರ್ತಿ ಕಶ್ವಿ 84 ಎಸೆತಗಳಲ್ಲಿ 121 ರನ್ ಬಾರಿಸಿದರು. ಯಾಶಿಕಾ ಗೌಡ (55), ಶೀತಲ್ ಸಂತೋಷ್ (45) ಅವರೂ ಉಪಯುಕ್ತ ಆಟವಾಡಿ ಕರ್ನಾಟಕ ತಂಡ 35 ಓವರುಗಳಲ್ಲಿ 7 ವಿಕೆಟ್‌ಗೆ 233 ರನ್ ಗಳಿಸಲು ನೆರವಾದರು. ಹರ್ಷಿತಾ ಕೆ (10ಕ್ಕೆ4) ಅವರ ದಾಳಿಗೆ ಸಿಲುಕಿ ರಾಜಸ್ಥಾನ 35 ಓವರುಗಳಲ್ಲಿ 8 ವಿಕೆಟ್‌ಗೆ 111 ರನ್ ಗಳಿಸಿ ಹೋರಾಟ ಮುಗಿಸಿತು. ಸತತ ನಾಲ್ಕನೇ ಗೆಲುವಿನೊಡನೆ ಕರ್ನಾಟಕ ಆರು ತಂಡಗಳ ಡಿ ಗುಂಪಿನಲ್ಲಿ 16 ಅಂಕಗಳೊಡನೆ ಅಗ್ರಸ್ಥಾನದಲ್ಲಿದೆ.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 35 ಓವರುಗಳಲ್ಲಿ 7ಕ್ಕೆ 233 (ಶೀತಲ್ ಸಂತೋಷ್ 45, ಕಶ್ವಿ ಕಂಡಿಕೊಪ್ಪ 121, ಯಾಶಿಕಾ ಕೆ.ಗೌಡ 55; ಆರತಿ 31ಕ್ಕೆ2); ರಾಜಸ್ಥಾನ: 35 ಓವರುಗಳಲ್ಲಿ 8 ವಿಕೆಟ್‌ಗೆ 111 (ಸಾರಿಕಾ ಸೋನಿ 34, ಹರ್ಷಿತಾ 10ಕ್ಕೆ4, ನೇಸರಾ ಸಪ್ತಾ ಗಿರೀಶ 13ಕ್ಕೆ2).

ಜೈನ್ ವಿ.ವಿಗೆ ಪ್ರಶಸ್ತಿ

ಬೆಂಗಳೂರು: ಜೈನ್ ವಿಶ್ವವಿದ್ಯಾಲಯದ ಪುರುಷರ ಬ್ಯಾಡ್ಮಿಂಟನ್ ತಂಡವು ಆಂಧ್ರಪ್ರದೇಶದ ಗುಂಟೂರಿನಲ್ಲಿ ಬುಧವಾರ ಮುಕ್ತಾಯಗೊಂಡ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿತು.

ಜೈನ್ ವಿ.ವಿ ತಂಡವು ಫೈನಲ್ ಹಣಾಹಣಿಯಲ್ಲಿ 3–1ರಿಂದ ಆತಿಥೇಯ ಕೆಎಲ್‌ಇಎಫ್ ವಿಶ್ವವಿದ್ಯಾಲಯ ತಂಡವನ್ನು ಮಣಿಸಿತು. ‘ಖೇಲೊ ಇಂಡಿಯಾ’ ವಿಶ್ವವಿದ್ಯಾಲಯ ಗೇಮ್ಸ್‌ಗೆ ಅರ್ಹತೆ ಪಡೆದುಕೊಂಡಿತು.

ಬ್ಯಾಸ್ಕೆಟ್‌ಬಾಲ್: ಕ್ವಾರ್ಟರ್‌ಗೆ ಕರ್ನಾಟಕ

ಬೆಂಗಳೂರು: ಕರ್ನಾಟಕ ಮಹಿಳೆಯರ ತಂಡವು, ‘ಎ’ ಗುಂಪಿನ ಅಂತಿಮ ಲೀಗ್ ಪಂದ್ಯದಲ್ಲಿ ಗುರುವಾರ ದೆಹಲಿ ವಿರುದ್ಧ 88–52 ರಲ್ಲಿ ಸುಲಭವಾಗಿ ಜಯಗಳಿಸಿ 75ನೇ ಸೀನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್‌ಫೈನಲ್ ತಲುಪಿತು.

ಚೆನ್ನೈನಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ ಕರ್ನಾಟಕ ತಂಡ ಮೂರು ಪಂದ್ಯ ಗೆದ್ದು, ಒಂದು ಸೋತಿದೆ. ಸಂಜನಾ ರಮೇಶ್ ನೇತೃತ್ವದ ಕರ್ನಾಟಕ ತಂಡವು ಎಂಟರ ಘಟ್ಟದ ಪಂದ್ಯದಲ್ಲಿ ಮಧ್ಯಪ್ರದೇಶ ತಂಡವನ್ನು ಎದುರಿಸಲಿದೆ.

ಕರ್ನಾಟಕ ತಂಡದ ಪರ ಶ್ರುತಿ ಅರವಿಂದ್ ಅಮೋಘವಾಗಿ ಆಡಿ 26 ಅಂಕ ಕಲೆಹಾಕಿದರು. ಸಹ ಆಟಗಾರ್ತಿಯರಾದ ಬಾಂಧವ್ಯಾ ಎಂ. ಮತ್ತು ನಿಧಿ ಉಮೇಶ್ ಕ್ರಮವಾಗಿ 13 ಮತ್ತು 12 ಅಂಕ ಗಳಿಸಿದರು. ದೆಹಲಿ ಪರ ಸುಮನ್ (12) ಮತ್ತು ನೇಹಾ ಹೂಡಾ (11) ಉತ್ತಮವಾಗಿ ಆಡಿದರು.

ಕರ್ನಾಟಕದ ಪುರುಷರ ತಂಡ ‘ಎ’ ಗುಂಪಿನಿಂದ ಈಗಾಗಲೇ ಎಂಟರ ಘಟ್ಟ ತಲುಪಿದ್ದು, ದೆಹಲಿ ವಿರುದ್ಧ ಆಡಲಿದೆ.